ಮಂಗಳೂರು
ರಾಷ್ಟ್ರ ಜಾಗೃತಿಯ ದೈನಿಕ
ಸೋಮವಾರ, 6 ಏಪ್ರಿಲ್ 2026
ಸಂಪುಟ 48, ಸಂಚಿಕೆ 18, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಎಐ ಸಂಶೋಧಕರಿಗೆ ಆನೆ ಬಲ | ೦೫
ಇರಾನ್‌ನಲ್ಲಿ ಸಿಲುಕಿದ್ದ ಮೀನುಗಾರರು ಸ್ವದೇಶಕ್ಕೆ | ೦೨
ಸಮಸ್ತರ ಕಲ್ಯಾಣ ಬಿಜೆಪಿ ನೀತಿ | ೦೨

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಅನುರಾಧೆ

ದಿನದ ಮಾತು

ಮನುಷ್ಯನಿಗೆ ಕಷ್ಟಗಳೂ ಬರಬೇಕು. ಯಶಸ್ಸನ್ನು ಆನಂದಿಸಲು ಅದು ಅವಶ್ಯ.

▲ ಅಬ್ದುಲ್ ಕಲಾಂ

ಪವಾಡ ಪುರುಷನಾದ ಸಾಮಾನ್ಯ ಸೈನಿಕ

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಕೊಡಗಿನಲ್ಲಿ ಕಾಣೆಯಾಗಿದ್ದ ಕೇರಳ ಟೆಕ್ಕಿ ಶರಣ್ಯ ಪತ್ತೆ

• **ಬೆಂಗಳೂರು:** ಕೊಡಗು ಜಿಲ್ಲೆಯ ತಡಿಯಾಂಡಮೋಲ್ ಶಿಖರಕ್ಕೆ ಕೇರಳದಿಂದ ಚಾರಣಕ್ಕಾಗಿ ಬಂದು ಏ.2ರಂದು ನಾಪತ್ತೆಯಾಗಿದ್ದ ಸಾಫ್ಟ್‌ವೇರ್ ಉದ್ಯೋಗಿ ಜಿ.ಎಸ್. ಶರಣ್ಯ ಪತ್ತೆಯಾಗಿದ್ದಾರೆ ಮತ್ತು ಆರೋಗ್ಯವಾಗಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

• ಪುಟ ೫

ಬಂಗಾಳದಲ್ಲಿ ಅವ್ಯವಸ್ಥೆ: 4 ಪೊಲೀಸರ ಅಮಾನತು

• ಪುಟ ೨

ದೇಶದಲ್ಲಿ 6.6 ಲಕ್ಷ ಸಣ್ಣ ಸಿಲಿಂಡರ್‌ಗಳ ಮಾರಾಟ

• ಪುಟ ೨

ಬಿಜೆಪಿ ಕಚೇರಿ ಬಳಿ ಸ್ಫೋಟ: ಇಬ್ಬರು ಆರೋಪಿಗಳ ಸೆರೆ


• ಪುಟ ೨

ಹೆಚ್ಚಿದ ಸಾಮಾಜಿಕ ಜಾಲತಾಣ ಬಳಕೆ

• ಪುಟ ೫


ಸಿ-130 ವಿಮಾನ ಹೊಡೆದ ಇರಾನ್ | ಸಂಘರ್ಷದ ತೀವ್ರತೆ ಹೆಚ್ಚಳ

ಅಮೆರಿಕಕ್ಕೆ ಭಾರೀ ಹಿನ್ನಡೆ



• **ವಾಷಿಂಗ್ಟನ್/ಟೆಹ್ರಾನ್:** ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆ ದಿನೇದಿನೇ ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇತ್ತೀಚಿನ ಬೆಳವಣಿಗೆಗಳು ಜಾಗತಿಕ ಮಟ್ಟದಲ್ಲಿ ಆತಂಕ ಮೂಡಿಸಿವೆ. ಇರಾನ್ ವಿರುದ್ಧ ನಡೆಯುತ್ತಿರುವ ಯುದ್ಧದಲ್ಲಿ ಅಮೆರಿಕ ಮತ್ತೊಂದು ಪ್ರಮುಖ ಹಿನ್ನಡೆಯನ್ನು ಅನುಭವಿಸಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಅತ್ಯಾಧುನಿಕ ಯುದ್ಧ ವಿಮಾನಗಳ ಬಳಕೆಯ ನಡುವೆಯೇ ಈ ಘಟನೆಗಳು ಸಂಭವಿಸಿರುವುದು ಗಮನಾರ್ಹವಾಗಿದೆ.

ಇತ್ತೀಚೆಗೆ ಪತನಗೊಂಡ ಅಮೆರಿಕದ ಎಫ್-15ಇ ಯುದ್ಧ ವಿಮಾನದ ಘಟನೆಗೆ ಸಂಬಂಧಿಸಿದಂತೆ, ಅದರ ಪೈಲಟ್ ರಕ್ಷಣೆಯ ಬಗ್ಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಹಿತಿ ನೀಡಿರುವುದು ಗಮನ ಸೆಳೆದಿದೆ. ಅವರ ಪ್ರಕಾರ, ಪತನಗೊಂಡ ವಿಮಾನದ ಪೈಲಟ್‌ಗಾಗಿ ಅಮೆರಿಕ ಸೇನೆ ವಿಶೇಷ ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದು, ಕೊನೆಗೆ ಪೈಲಟ್‌ನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ 12ಕ್ಕೂ ಹೆಚ್ಚು ಯುದ್ಧ ವಿಮಾನಗಳನ್ನು ಬಳಸಲಾಗಿದೆ ಎಂದು ಹೇಳಲಾಗಿದೆ. ಪ್ರಸ್ತುತ ಪೈಲಟ್ ಸುರಕ್ಷಿತವಾಗಿದ್ದು, ತನ್ನ ಪಡೆಗಳೊಂದಿಗೆ ಇದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.



ಮತ್ತೊಂದು ವಿಮಾನ ನಾಶ: ಈ ನಡುವೆಯೇ, ಅಮೆರಿಕದ ಮತ್ತೊಂದು ವಿಮಾನವನ್ನು ಹೊಡೆದುರುಳಿಸಿದ್ದಾಗಿ ಇರಾನ್ ಘೋಷಿಸಿದೆ.

➡ ಪುಟ ೪

36 ಗಂಟೆ ಪರ್ವತದಲ್ಲಿ ಅವಿತಿದ್ದ ಪೈಲಟ್!



ಅಮೆರಿಕದ ಎಫ್-15ಇ ಯುದ್ಧ ವಿಮಾನವನ್ನು ಇರಾನ್ ಸೇನೆ ಕಳೆದ ಶುಕ್ರವಾರ ಹೊಡೆದುರುಳಿಸಿದ್ದು, ಇರಾನ್ ನೊಳಗೆ ವಿಶೇಷ ಕಾರ್ಯಾಚರಣೆ ನಡೆಸಿ, ನಾಪತ್ತೆಯಾಗಿದ್ದ ಪೈಲಟ್ ರಕ್ಷಿಸಿರುವುದಾಗಿ ಅಮೆರಿಕ ಘೋಷಿಸಿದೆ. ಅಂದಹಾಗೆ ಈ ರಕ್ಷಣಾ ಕಾರ್ಯಕ್ಕೆ ಅಮೆರಿಕ ನೂರಾರು ಸೈನಿಕರು, ಯುದ್ಧ ವಿಮಾನ, ಹೆಲಿಕಾಪ್ಟರ್‌ಗಳನ್ನು ಬಳಕೆ ಮಾಡಿದೆ. ನಾಪತ್ತೆಯಾಗಿದ್ದ ಪೈಲಟ್ ಪರ್ವತ ಪ್ರದೇಶದಲ್ಲಿ 36 ಗಂಟೆಗಳ ಕಾಲ ಸಿಲುಕಿಕೊಂಡಿದ್ದರು.

• ವಿವರ ಪುಟ ೨

ಹಾರ್ಮುಜ್ ತೆರೆಯಲು ವಿಳಂಬ ಮಾಡಿದರೆ ದಾಳಿ



ಈ ಬೆಳವಣಿಗೆಗಳ ನಡುವೆ, ಅಮೆರಿಕ ಮತ್ತು ಇರಾನ್ ನಡುವಿನ ರಾಜಕೀಯ ಮತ್ತು ಸೈನಿಕ ತೀವ್ರತೆ ಮತ್ತಷ್ಟು ಹೆಚ್ಚಾಗಿದೆ. ವಿಶೇಷವಾಗಿ ಹಾರ್ಮುಜ್ ಜಲಸಂಧಿ ವಿಷಯವು ಮತ್ತೆ ಚರ್ಚೆಗೆ ಬಂದಿದ್ದು, ಈ ಜಲಸಂಧಿಯನ್ನು ತೆರೆಯಲು ಇರಾನ್ ವಿಳಂಬ ಮಾಡಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಸಾಮಾಜಿಕ ಮಾಧ್ಯಮದ ಮೂಲಕ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿರುವ ಟ್ರಂಪ್, ಬೆದರಿಕೆಯಷ್ಟೇ ಅಲ್ಲ, ಅವರು ಬಳಸಿದ ಭಾಷೆಯೂ ಹೆಚ್ಚು ಗಮನ ಸೆಳೆದಿದೆ. ಏಕೆಂದರೆ ಅವರು ಇರಾನ್‌ಗೆ ಅವಮಾನಿಸುವ ಪದಗಳನ್ನು ಬಳಸುತ್ತಾ ಹಾರ್ಮುಜ್ ಜಲಸಂಧಿ ಮರು ತೆರೆಯುವಂತೆ ಒತ್ತಾಯಿಸಿದ್ದಾರೆ. ಇದೇ ವೇಳೆ ಇರಾನ್ ವಿರುದ್ಧ ಗಂಭೀರ ಕ್ರಮಗಳನ್ನು ಕೈಗೊಳ್ಳುವ ಸೂಚನೆ ನೀಡಿದ್ದಾರೆ. ವಿದ್ಯುತ್ ಸ್ಥಾವರಗಳು ಮತ್ತು ಸೇತುವೆಗಳು ಮೊದಲಾದ ಪ್ರಮುಖ ಮೂಲಸೌಕರ್ಯಗಳನ್ನು ನಾಶಪಡಿಸುವ ಬಗ್ಗೆ ಅವರು ಉಲ್ಲೇಖಿಸಿರುವುದು ಪರಿಸ್ಥಿತಿಯ ಗಂಭೀರತೆ ತೋರಿಸುತ್ತದೆ.

ಹಿಂಜರಿಯದ ಇರಾನ್ ಧೋರಣೆ




ಇರಾನ್ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ತೋರಿಸದೆ, ಮಧ್ಯಪ್ರಾಚ್ಯದ ಕೆಲ ಅರಬ್ ದೇಶಗಳ ಮೇಲೆ ದಾಳಿಗಳನ್ನು ಮುಂದುವರಿಸುತ್ತಿದೆ. ಇದರಿಂದ ಪ್ರದೇಶದಲ್ಲಿ ಭದ್ರತಾ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುತ್ತಿದೆ. ಈ ನಡುವೆ, ಇರಾನ್ ಸೈನ್ಯವು ಅಮೆರಿಕದ ಎಚ್ಚರಿಕೆಗಳಿಗೆ ಪ್ರತಿಯಾಗಿ ತೀವ್ರ ಪ್ರತಿಕ್ರಿಯೆ ನೀಡಿದೆ. ನಮ್ಮ ಮೂಲಸೌಕರ್ಯ ಹಾನಿಗೊಳಿಸಿದರೆ ಪರಿಣಾಮಗಳು ಭೀಕರವಾಗಿರುತ್ತವೆ ಎಂದು ಇರಾನ್‌ನ ಉನ್ನತ ಸೈನಿಕ ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿ ಮುಫೀಜ್ ಮಿಯಾನವರ ಸೆರೆ

ಹುಬ್ಬಳ್ಳೀಲಿ ಮತ್ತೊಂದು ಲವ್ ಜಿಹಾದ್ ಪ್ರಕರಣ

ಪ್ರೀತಿಯ ನಾಟಕವಾಡಿ ಲೈಂಗಿಕ ದೌರ್ಜನ್ಯ, ಜೀವ ಬೆದರಿಕೆ



• **ಹುಬ್ಬಳ್ಳಿ:** ಜಿಮ್‌ನಲ್ಲಿ ಲವ್ ಜಿಹಾದ್‌ಗೆ ಯತ್ನಿಸಿದ್ದಾರೆಂಬ ಆರೋಪದ ಮಾದರಿಯಲ್ಲೇ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ.

ಮತ್ತೋರ್ವ ಮುಸ್ಲಿಂ ಯುವಕ ಹಿಂದು ಯುವತಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಬೆದರಿಕೆ ಹಾಕಿದ ದೂರೊಂದು ಭಾನುವಾರ ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಕೇಶ್ವಾಪುರ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಇಲ್ಲಿಯ ಕಮರಿಪೇಟ ನಿವಾಸಿ ಮುಫೀಜ್ ಮಿಯಾನವರ(23) ಬಂಧಿತ ಆರೋಪಿ. ಆರೋಪಿ ಮುಫೀಜ್ ಕಳೆದ ಐದು ವರ್ಷದ ಹಿಂದೆ ಕಾರ್ಯಕ್ರಮವೊಂದರಲ್ಲಿ ಯುವತಿಗೆ ಪರಿಚಯವಾಗಿದ್ದಾನೆ. ನಂತರ ಅವಳೊಂದಿಗೆ ಸಲುಗೆ ಬೆಳೆಸಿ ಅವಳೊಂದಿಗೆ ಸುತ್ತಾಡಿದ್ದಾನೆ. ಒಮ್ಮೆ ಅವಳನ್ನು ಗದಗ ರಸ್ತೆ ಮೇಲ್ಸೇತುವೆ ಹತ್ತಿರ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ್ದಲ್ಲದೆ ಹಲವು ಫೋಟೋ ಹಾಗೂ ವಿಡಿಯೋಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾನೆ. ಅವುಗಳನ್ನು ಇಟ್ಟುಕೊಂಡು ಬೆದರಿಕೆ ಹಾಕಿ 2025 ನವೆಂಬರ್‌ನಲ್ಲಿ ಮನೆಗೆ ಕರೆದು ಮತ್ತೆ ಲೈಂಗಿಕ ದೌರ್ಜನ್ಯವೆಸಗಿದ್ದಾನೆ. ಈ ವಿಚಾರ ಯಾರ ಬಳಿಯಾದರೂ ಹೇಳಿದರೆ ನಿಮ್ಮ ಪಾಲಕರನ್ನು ಜೀವಸಹಿತ ಬಿಡಲ್ಲ ಎಂದು ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ಯುವತಿ ತಿಳಿಸಿದ್ದಾಳೆ.

ಹೈದರಾಬಾದ್‌ನಲ್ಲೂ ಲವ್ ಜಿಹಾದ್

• **ಹೈದರಾಬಾದ್:** ಪತಿ ನವಾಜ್ (ನವದುರ್ಗ ಎಂದು ತನ್ನನ್ನು ಪರಿಚಯಿಸಿಕೊಂಡಿದ್ದ) ತಾನು ಹಿಂದು ಧರ್ಮಕ್ಕೆ ಮತಾಂತರವಾಗಿದ್ದೇನೆ ಎಂದು ನಂಬಿಸಿ, ನಂತರ ಮದುವೆಯಾದ ಬಳಿಕ ಬಲವಂತವಾಗಿ ಇಸ್ಲಾಂಗೆ ಮತಾಂತರ ಮಾಡಿದ್ದಾನೆ ಎಂದು ತನ್ನ ಪತಿ ಹಾಗೂ ಅವರ ಕುಟುಂಬದವರ ವಿರುದ್ಧ ಮಹಿಳೆಯೊಬ್ಬರು ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಮಹಿಳೆಯ ಹೇಳಿಕೆಯ ಪ್ರಕಾರ, 2021ರ ಮೇನಲ್ಲಿ ಅಂಗಡಿ ಬಾಡಿಗೆ ವಿಚಾರವಾಗಿ ನವಾಜ್ ಅವರನ್ನು ಭೇಟಿಯಾದಳು. ಆತ ತನ್ನ ಹೆಸರನ್ನು ನವದುರ್ಗ ಎಂದು ಹೇಳಿ ನಂಬಿಕೆ ಗಳಿಸಿದ್ದ. ನಂತರ ಮದುವೆಯ ಹೆಸರಿನಲ್ಲಿ ಆಕೆಯನ್ನು ಮೋಸಗೊಳಿಸಿದ್ದಾನೆ. ಮೇ 24ರಂದು ಕುಟುಂಬವನ್ನು ಪರಿಚಯಿಸುವ ನೆಪದಲ್ಲಿ ರೆಸಾರ್ಟ್‌ಗೆ ಕರೆದೊಯ್ದು, ಆಹಾರ ಅಥವಾ ಪಾನೀಯದಲ್ಲಿ ಮದ್ದು ಬೆರೆಸಿ ಪ್ರಜ್ಞಾಹೀನಳಾದ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ ಎಂದು ಆರೋಪಿಸಲಾಗಿದೆ.

➡ ಪುಟ ೪

ಗುರುತು ಮುಚ್ಚಿಟ್ಟು ಪ್ರೇಮದ ಹೆಸರಲ್ಲಿ ಮೋಸ

• **ಭೋಪಾಲ್:** ಮಧ್ಯ ಪ್ರದೇಶದ ಗ್ವಾಲಿಯರ್ ನಗರದಲ್ಲಿ ಪ್ರೇಮ ಸಂಬಂಧದ ಹೆಸರಿನಲ್ಲಿ ಮೋಸದ ಗಂಭೀರ ಪ್ರಕರಣ ಬೆಳಕಿಗೆ ಬಂದಿದೆ. ಆರೋಪಿಯು ತನ್ನ ನಿಜವಾದ ಗುರುತನ್ನು ಮರೆಮಾಚಿ ಯುವತಿಯನ್ನು ಪ್ರೀತಿಯ ಜಾಲಕ್ಕೆ ಸೆಳೆದಿದ್ದಾನೆ ಎಂಬ ಆರೋಪ ಕೇಳಿಬಂದಿದೆ.

➡ ಪುಟ ೪

ಟಿಎಂಸಿ ಸರ್ಕಾರದ ವಿರುದ್ಧ ಪ್ರಧಾನಿ ಮೋದಿ ವಾಗ್ದಾಳಿ

ಪ.ಬಂಗಾಳದಲ್ಲಿ ಜಂಗಲ್‌ರಾಜ್

ಬೃಹತ್ ಚುನಾವಣಾ ರ್‍ಯಾಲಿ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಅರಾಜಕತೆ ಮೇರೆ ಮೀರಿದೆಯೆಂಬ ಬಿಜೆಪಿ ಆರೋಪವು, ಮಾಲ್ದಾದಲ್ಲಿ ನ್ಯಾಯಾಂಗ ಅಧಿಕಾರಿಗಳನ್ನು ಘೇರಾವ್ ಮಾಡಿ ಒತ್ತೆಸೆರೆಯಲ್ಲಿಟ್ಟ ಘಟನೆಯಿಂದ ಸ್ಪಷ್ಟ ಸಾಬೀತಾಗಿದೆ. ಟಿಎಂಸಿ ಸರಕಾರ ರಾಜ್ಯದಲ್ಲಿ ಮಹಾ ಜಂಗಲ್‌ರಾಜ್ ನಡೆಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಟಿಎಂಸಿ ಸರಕಾರವನ್ನು ತೀಕ್ಷ್ಣವಾಗಿ ತರಾಟೆಗೆತ್ತಿಕೊಂಡಿದ್ದಾರೆ.



2026ರ ವಿಧಾನಸಭಾ ಚುನಾವಣೆ ಆಳುವ ಟಿಎಂಸಿ ಹರಡಿರುವ ಭಯ ಮತ್ತು ಬಿಜೆಪಿಯ ಭರೋಸಾ (ಭರವಸೆ) ನಡುವಣ ಹಣಾಹಣಿಯಾಗಿದೆ ಎಂದು ವಿಶ್ಲೇಷಿಸಿದರು.

ಎಂತಹ ಸರಕಾರವಿದು?: ಮಾಲ್ದಾದಲ್ಲಿ ಕೆಲ ದಿನಗಳ ಹಿಂದೆ ನ್ಯಾಯಾಂಗ ಅಧಿಕಾರಿಗಳನ್ನು ಒತ್ತೆಯಲ್ಲಿಟ್ಟ ಅಮಾನವೀಯ ಘಟನೆಗೆ ಇಡೀ ದೇಶ ಸಾಕ್ಷಿಯಾಗಿದೆ. ನ್ಯಾಯಾಧೀಶರುಗಳು, ಸಾಂವಿಧಾನಿಕ ನಿಯಮಾವಳಿಗೇ ಸುರಕ್ಷೆ ನೀಡಲಾಗದ ಎಂತಹ ಸರಕಾರವಿದು?

➡ ಪುಟ ೪



ಪ್ರತಿ ಅನ್ಯಾಯ ಕೃತ್ಯಗಳ ವಿಚಾರಣೆ

ಮತದಾನ ದಿನ ಟಿಎಂಸಿ ಗೂಂಡಾಗಳು ಎಷ್ಟೇ ಸಂಖ್ಯೆಯಲ್ಲಿ ನಿಮ್ಮನ್ನು ಭಯಪಡಿಸಲು ಯತ್ನಿಸಿದರೂ ಹೆದರದಿರಿ, ನೀವು ಕಾನೂನಲ್ಲಿ ವಿಶ್ವಾಸವಿಡಿ.

➡ ಪುಟ ೪

ಜಗಜೀವನರಾಂ ಜಯಂತಿ ಕಾರ್ಯಕ್ರಮದಲ್ಲಿ ಮಹದೇವಪ್ಪ

ದೇಶದ ಪ್ರಗತಿಗೆ ಬಾಬೂಜಿ ಕೊಡುಗೆ

• **ಬೆಂಗಳೂರು:** ಡಾ. ಬಾಬು ಜಗಜೀವನರಾಂ ಅವರು 1946ರಲ್ಲಿ ಸಚಿವರಾಗಿ 1980ರವರೆಗೆ ಉಪಪ್ರಧಾನಿ ಆಗುವವರೆಗೆ ದೇಶದ ಎಲ್ಲಾ ಪ್ರಮುಖ ಇಲಾಖೆಯ ಹುದ್ದೆಗಳನ್ನು ಅಲಂಕರಿಸಿದ್ದ ಅವರು ಜನಪರ ನಿಲುವು, ತುಳಿತಕ್ಕೆ ಒಳಗಾದ ಜನರ ಮೇಲೆತ್ತುವ ಕಾಳಜಿಯುಳ್ಳವರಾಗಿದ್ದರು. ಅವರು ಭಾರತ ಇತಿಹಾಸದಲ್ಲಿ ಸುದೀರ್ಘ ಅವಧಿವರೆಗೆ ಸಚಿವರಾಗಿ ಕೆಲಸ ಮಾಡಿದರು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಸ್ಮರಿಸಿದರು.

ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಭಾನುವಾರ ನಡೆದ ಡಾ. ಬಾಬು ಜಗಜೀವನರಾಂ ಅವರ ಜನ್ಮ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೇಶದ ಸಂವಿಧಾನಿಕ ಹುದ್ದೆಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುವಂತ ಶಕ್ತಿ ಸಾಮರ್ಥ್ಯ ಡಾ. ಬಾಬು ಜಗಜೀವನರಾಮ್ ಅವರಲ್ಲಿತ್ತು. ಅವರು ಕೈಗೊಂಡ ಅನೇಕ ತೀರ್ಮಾನಗಳಿಂದ ದೇಶದಲ್ಲಿ ಬದಲಾವಣೆ, ಸುಧಾರಣೆ ದಾಖಲಿಸಿದ್ದಾರೆ ಎಂದರು.

➡ ಪುಟ ೪



ಪ್ರತಿಮೆಗೆ ಮಾಲಾರ್ಪಣೆ

ಚುನಾವಣೆ ಪ್ರಚಾರದಿಂದ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಆವರಣದಲ್ಲಿರುವ ಡಾ. ಬಾಬು ಜಗಜೀವನ ರಾಂ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಮಿಸಿದರು.

ಕೇಂದ್ರದ ಜತೆ ಸಹಕಾರವಿರಲಿ

• **ಬಾಗಲಕೋಟೆ:** ರಾಜ್ಯದ ನೀರಾವರಿ ಯೋಜನೆ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೇಂದ್ರದ ಜತೆಗೆ ಸಹಕಾರದ ಭಾವನೆ ಹೊಂದಬೇಕು. ನಿತ್ಯ ಸಂಘರ್ಷಕ್ಕೆ ಇಳಿದು ಮಾತನಾಡಿದರೆ ಯಾವ ಕೆಲಸವೂ ಆಗುವುದಿಲ್ಲ. ಪಕ್ಕದ ಆಂಧ್ರಪ್ರದೇಶದ ಸರ್ಕಾರವನ್ನು ನೋಡಿ ರಾಜ್ಯ ಸರ್ಕಾರ ಕಲಿಯಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರಕ್ಕೆ ಆಗಮಿಸಿದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.



➡ ಪುಟ ೪

ದಕ್ಷಿಣ ರಾಜ್ಯಗಳು ಲೋಕಸಭೆ ಕ್ಷೇತ್ರ ಕಳೆದುಕೊಳ್ಳಲ್ಲ

• **ತಿರುವನಂತಪುರ:** ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳು ಲೋಕಸಭೆ ಕ್ಷೇತ್ರಗಳನ್ನು ಕಳೆದುಕೊಳ್ಳುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿಯವರು ಭರವಸೆ ನೀಡಿದ್ದಾರೆ. ಇಲ್ಲಿ ಶನಿವಾರ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, ಜನಸಂಖ್ಯೆ ನಿಯಂತ್ರಣದಲ್ಲಿ ಸಾಧನೆ ಮಾಡಿದ ರಾಜ್ಯಗಳ ಲೋಕಸಭಾ ಕ್ಷೇತ್ರಗಳನ್ನು ಕಡಿತಗೊಳಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.



➡ ಪುಟ ೪

36 ಗಂಟೆ ಪರ್ವತದಲ್ಲಿ ಅವಿತಿದ್ದ ಪೈಲಟ್!



ಅಮೆರಿಕದ ಎಫ್–15ಇ ಯುದ್ಧ ವಿಮಾನವನ್ನು ಇರಾನ್ ಸೇನೆ ಕಳೆದ ಶುಕ್ರವಾರ ಹೊಡೆದುರುಳಿಸಿದ್ದು, ಇರಾನ್‌ನೊಳಗೆ ವಿಶೇಷ ಕಾರ್ಯಾಚರಣೆ ನಡೆಸಿ ನಾಪತ್ತೆಯಾಗಿದ್ದ ಪೈಲಟ್ ರಕ್ಷಿಸಿರುವುದಾಗಿ ಅಮೆರಿಕ ಘೋಷಿಸಿದೆ. ಅಂದಹಾಗೆ ಈ ರಕ್ಷಣಾ ಕಾರ್ಯಕ್ಕೆ ಅಮೆರಿಕ ನೂರಾರು ಸೈನಿಕರು, ಯುದ್ಧ ವಿಮಾನ, ಹೆಲಿಕಾಪ್ಟರ್‌ಗಳನ್ನು ಬಳಕೆ ಮಾಡಿದೆ. ಪೈಲೆಟ್ ಹೆಸರನ್ನು ಅಮೆರಿಕ ಬಹಿರಂಗಗೊಳಿಸಿಲ್ಲ. ಇರಾನ್ ಹೊಡೆದುರುಳಿಸಿದ್ದ ಎಫ್–15ಇ ಯುದ್ಧ ವಿಮಾನದ ಪೈಲಟ್ ಅನ್ನು ಅಮೆರಿಕ ಸೇನಾ ಪಡೆ ತಂಡವೊಂದು ಅದೇ ದಿನ ರಕ್ಷಿಸಿತ್ತು. ಆದರೆ, ಎರಡನೇ ಪೈಲಟ್ ಕಾಣೆಯಾಗಿದ್ದರು. ನಾಪತ್ತೆಯಾಗಿದ್ದ ಪೈಲಟ್ ಪರ್ವತ ಪ್ರದೇಶದಲ್ಲಿ 36 ಗಂಟೆಗಳ ಕಾಲ ಸಿಲುಕಿಕೊಂಡಿದ್ದರು. ಪೈಲಟ್ ರಕ್ಷಣೆಗಾಗಿ ಅಮೆರಿಕ ವಿಶೇಷ ಕಾರ್ಯಾಚರಣೆ ನಡೆಸಿತು.



- ಇರಾನ್‌ನೊಳಗೆ ನುಗ್ಗಿ ದುರ್ಗಮ ಪ್ರದೇಶದಲ್ಲಿ ಅಮೆರಿಕ ರಕ್ಷಣಾ ಕಾರ್ಯಾಚರಣೆ
- ಎಫ್–15ಇ ಪೈಲಟ್ ರಕ್ಷಿಸಿದ ಟ್ರಂಪ್ ಪಡೆ

ಪೈಲಟ್ ರಕ್ಷಣೆಗಾಗಿ ವಿಶೇಷ ಕಾರ್ಯಾಚರಣೆ|: ನಾಪತ್ತೆಯಾಗಿದ್ದ ಎಫ್–15 ಪೈಲಟ್ ಪತ್ತೆಯಾಗುವ ಮುನ್ನವೇ, ಅವರನ್ನು ಪತ್ತೆಹಚ್ಚಿ ಭೂಮಾರ್ಗವಾಗಿ ಇರಾನ್‌ನಿಂದ ಹೊರಕ್ಕೆ ಸುರಕ್ಷಿತ ಸ್ಥಳಾಂತರಿಸಿದ್ದೇವೆ ಎಂಬ ಸುಳ್ಳು ಸುದ್ದಿಯನ್ನು ಅಮೆರಿಕ ಹರಡಿತು. ಸುಳ್ಳು ಸುದ್ದಿ ಹಬ್ಬಿದ್ದರಿಂದ ಇರಾನ್ ಸೇನೆ ಮತ್ತು ನಾಯಕತ್ವ ಗೊಂದಲಕ್ಕೀಡಾಗಿದೆ.



ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ಸ್ಥಳವನ್ನು ಪತ್ತೆಹಚ್ಚಲು ಸೇನೆಗೆ ನೆರವಾಗಿದೆ. ಇದು ಬೈಹುಲ್ಲಿನ ರಾಶಿಯಲ್ಲಿ ಸೂಜಿ ಹುಡುಕುವಂತಹ ಪರಿಸ್ಥಿತಿ ಎಂದು ಅಮೆರಿಕದ ಒಬ್ಬ ಅಧಿಕಾರಿ ಹೇಳಿದ್ದಾರೆ. ಸುಲಭದಲ್ಲಿ ಪತ್ತೆಯಾಗದಂತಹ ಪರ್ವತವೊಂದರ ಬಿರುಕುಗಳಲ್ಲಿ ಅಡಗಿದ್ದ ಅಮೆರಿಕದ ವೀರ ಸೇನಾನಿಯನ್ನು ಸಿಐಎ ಗುಪ್ತಚರ ಮಾಹಿತಿ ಆಧಾರದಲ್ಲಿ ಪತ್ತೆಹಚ್ಚಲಾಯಿತು ಎಂದಿದ್ದಾರೆ.

ಸಿಐಎ ಗುಪ್ತಚರ ಕಾರ್ಯಾಚರಣೆ ಜತೆ ರಕ್ಷಣಾ ಕಾರ್ಯಾಚರಣೆಯಲ್ಲಿ ನೂರಾರು ವಿಶೇಷ ಪಡೆಗಳ ಸೈನಿಕರು, ಡಜನ್‌ಗಟ್ಟಲೆ ಅಮೆರಿಕದ ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು ಭಾಗವಹಿಸಿದ್ದವು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಇರಾನ್ ಭೂಭಾಗದಲ್ಲಿ ಎರಡು ದಿನಗಳ ಕಾಲ ಅಮೆರಿಕದ ವಿಶೇಷ ಪಡೆಗಳು ಶೋಧ ಕಾರ್ಯಾಚರಣೆ ನಡೆಸಿವೆ. ಅಮೆರಿಕ ಹುಡುಕಾಟ ನಡೆಸುತ್ತಿದ್ದಾಗ, ಇರಾನ್ ಸೇನೆಯೂ ನಾಪತ್ತೆಯಾಗಿದ್ದ ಪೈಲೆಟ್ ಪತ್ತೆಹಚ್ಚಲು ತಂಡಗಳನ್ನು ಕಳುಹಿಸಿತ್ತು. ಈ ಪ್ರಯತ್ನಗಳನ್ನು ತಡೆಯಲು, ಅಮೆರಿಕದ ವಾಯುಪಡೆ ಜೆಟ್‌ಗಳು ಇರಾನ್ ಪಡೆಗಳ ಮೇಲೆ ದಾಳಿಗಳನ್ನು ನಡೆಸಿ ಅವುಗಳನ್ನು ಆ ಪ್ರದೇಶಕ್ಕೆ ತಲುಪುವುದನ್ನು ತಡೆಯುವ ಕೆಲಸ ಮಾಡಿವೆ ಎಂದು ಮೂಲಗಳು ತಿಳಿಸಿವೆ.

ಇರಾನ್-ಅಮೆರಿಕ ಗುಂಡಿನ ಚಕಮಕಿ : ಸೇನಾ ಕಾರ್ಯಾಚರಣೆಯ ಮಾಹಿತಿಯಿದ್ದ ಇಬ್ಬರು ಅಧಿಕಾರಿಗಳು ನ್ಯೂಯಾರ್ಕ್ ಟೈಮ್ಸ್ ಜತೆ ಮಾತನಾಡಿದ್ದು, ಎರಡನೇ ಪೈಲೆಟ್ ಪತ್ತೆಹಚ್ಚಿ ರಕ್ಷಣೆಗೆ ಮುಂದಾದಾಗ ಅಮೆರಿಕ ಮತ್ತು ಇರಾನ್ ಸೈನಿಕರ ಮಧ್ಯೆ ಗುಂಡಿನ ಚಕಮಕಿ ನಡೆದಿದೆ. ಅಮೆರಿಕದ ವಿಶೇಷ ಕಾರ್ಯಾಚರಣೆಗಳ ಇತಿಹಾಸದಲ್ಲೇ ಇದು ಅತ್ಯಂತ ಸವಾಲಿನ ಮತ್ತು ಬಹಳ ಸಂಕೀರ್ಣ ಕಾರ್ಯಾಚರಣೆಯಾಗಿತ್ತು ಎಂದು ಹೇಳಿದ್ದಾರೆ.

ಇರಾನ್‌ನೊಳಗೆ ಸಿಲುಕಿದ್ದ ಎರಡು ಎಂಸಿ-130ಜೆ: ಶತ್ರು ರಾಷ್ಟ್ರದೊಳಗೆ ರಹಸ್ಯ ಕಾರ್ಯಾಚರಣೆ ವೇಳೆ ಸೈನಿಕರನ್ನು ಒಳನುಗ್ಗಿಸುವ ಮತ್ತು ಹೊರಸಾಗಿಸುವ ಎರಡು ಎಂಸಿ–130ಜೆ ವಿಮಾನಗಳು ಪೈಲೆಟ್ ಹುಡುಕಾಟದ ವೇಳೆ ಇರಾನ್‌ನೊಳಗೆ ಸಿಲುಕಿಕೊಂಡಿದ್ದವು.

ತಮ್ಮ ವೀರನಿಗಾಗಿ ಅಮೆರಿಕ ಕಾರ್ಯಾಚರಣೆ ನಡೆಸುವುದಕ್ಕಾಗಿ ತಾತ್ಕಾಲಿಕ ವಾಯುನೆಲೆಯನ್ನು ಸ್ಥಾಪಿಸಿತ್ತು. ಎರಡು ವಿಮಾನಗಳು ಸಂಚರಿಸಲಾಗದ ಕಾರಣ ಇನ್ನೂ ಮೂರು ವಿಮಾನಗಳನ್ನು ಅಮೆರಿಕ ಕಳುಹಿಸಿಕೊಟ್ಟು ಕಾರ್ಯಾಚರಣೆ ಪೂರ್ಣಗೊಳಿಸಿದೆ.

ಇರಾನ್‌ನಿಂದ ತೆರಳುವ ಮೊದಲು ಆ ಎರಡೂ ವಿಮಾನಗಳನ್ನು ಸ್ಫೋಟಿಸಲು ಅಮೆರಿಕ ನಿರ್ಧರಿಸಿತ್ತು. ಅಮೆರಿಕ ಕಾರ್ಯಾಚರಣೆ ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಎರಡು ಎಂಸಿ–130 ವಿಮಾನಗಳ ಅವಶೇಷಗಳನ್ನು ಪತ್ತೆಹಚ್ಚಿದ ಇರಾನ್ ಸೇನೆ ತಮ್ಮ ದಾಳಿಗೆ ಅಮೆರಿಕದ ವಿಮಾನಗಳು ಧ್ವಂಸಗೊಂಡಿವೆ ಎಂದು ತಪ್ಪಾಗಿ ತಿಳಿದುಕೊಂಡಿವೆ ಎನ್ನಲಾಗಿದೆ.


ಪಾಳುಬಿದ್ದ ನಿಲ್ದಾಣ ಬಳಸಿದ ಅಮೆರಿಕ: ದಕ್ಷಿಣ ಇಸ್ಫಹಾನ್ ಪ್ರದೇಶದಲ್ಲಿ ಪಾಳುಬಿದ್ದಿರುವ ವಿಮಾನ ನಿಲ್ದಾಣವನ್ನು ಅಮೆರಿಕ ಸೇನೆ ತನ್ನ ಕಾರ್ಯಾಚರಣೆಯಲ್ಲಿ ಬಳಸಿಕೊಂಡಿದೆ. ಪಾಳುಬಿದ್ದ ವಿಮಾನ ನಿಲ್ದಾಣ ಬಳಸಿಕೊಂಡು ಮೋಸದಿಂದ ತಪ್ಪಿಸಿಕೊಂಡಿದೆ. ಆದರೆ ಅಮೆರಿಕದ ಪೈಲೆಟ್ ರಕ್ಷಣಾ ಕಾರ್ಯಾಚರಣೆ ಸಂಪೂರ್ಣ ವಿಫಲಗೊಂಡಿದೆ ಎಂದು ಇರಾನ್ ಸೇನಾ ವಕ್ತಾರ ಇಬ್ರಾಹಿಂ ಜೊಲ್ಫಾಘಾರಿ ಭಾನುವಾರ ಆರೋಪಿಸಿದ್ದಾರೆ. ಈ ಕಾರ್ಯಾಚರಣೆಯ ವೇಳೆ ಅಮೆರಿಕದ ಎರಡು ಸಿ–130 ಹರ್ಕ್ಯುಲ್ಸ್ ಸಾರಿಗೆ ವಿಮಾನಗಳು ಹಾಗೂ ಎರಡು ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್‌ಗಳನ್ನು ನಾಶ ಮಾಡಿದ್ದೇವೆ. ಐವರು ಅಮೆರಿಕ ಸೈನಿಕರನ್ನು ಹೊಡೆದುರುಳಿಸಿದ್ದೇವೆ ಎಂದು ಇಬ್ರಾಹಿಂ ತಿಳಿಸಿದ್ದಾರೆ.

ಪೈಲಟ್ ಸಿಕ್ಕಿದ್ದಾರೆ: ಟ್ರಂಪ್

ಎಫ್–15 ಸ್ಟ್ರೈಕ್ ಈಗಲ್ ಯುದ್ಧ ವಿಮಾನದ ಎರಡನೇ ಪೈಲಟ್‌ನ ರಕ್ಷಣಾ ಕಾರ್ಯಾಚರಣೆ ಯಶಸ್ವಿ ಆಗಿರುವುದನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಘೋಷಿಸಿದ್ದಾರೆ. ನನ್ನ ಮಾರ್ಗದರ್ಶನದೊಂದಿಗೆ ಅಮೆರಿಕ ಸೇನೆ ಡಜನ್‌ಗಟ್ಟಲೆ ಯುದ್ಧ ವಿಮಾನಗಳನ್ನು, ಅತ್ಯಂತ ವಿಧ್ವಂಸಕ ಶಸ್ತ್ರಾಸ್ತ್ರಗಳನ್ನು ಕಳುಹಿಸಿದೆ. ಪೈಲಟ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ. ಆದರೆ ಆತ ಬೇಗನೆ ಗುಣಮುಖರಾಗಲಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ. ನಮ್ಮ ಅತ್ಯಂತ ಅಸಾಮಾನ್ಯ ಪೈಲಟ್‌ಗಳಲ್ಲೊಬ್ಬರಿಗಾಗಿ ನಡೆಸಿದ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾಗಿದೆ. ನಾವು ನಮ್ಮ ಸೇನಾನಿಗಳನ್ನು ಎಂದೂ ಕೈಬಿಡೆವು. ಈಸ್ಟರ್ ಶುಭಾಶಯಗಳು ಎಂದಿದ್ದಾರೆ.

ಇರಾನ್‌ನಲ್ಲಿ ಸಿಲುಕಿದ್ದ ಭಾರತದ 345 ಮೀನುಗಾರರು ಸ್ವದೇಶಕ್ಕೆ


ಚೆನ್ನೈ: ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿಗಳ ನಡುವೆ ಇರಾನಿನಲ್ಲಿ ಸಿಲುಕಿಕೊಂಡಿದ್ದ ಭಾರತೀಯ ಮೀನುಗಾರರ ರಕ್ಷಣಾ ಕಾರ್ಯ ಯಶಸ್ವಿಯಾಗಿ ನಡೆದಿದೆ. ಸುಮಾರು 345 ಭಾರತೀಯ ಮೀನುಗಾರರನ್ನು ಅರ್ಮೇನಿಯಾ ಮಾರ್ಗವಾಗಿ ಸ್ಥಳಾಂತರಿಸಿ ವಿಶೇಷ ವಿಮಾನದ ಮೂಲಕ ಶನಿವಾರ ಸಂಜೆ ಚೆನ್ನೈಗೆ ಸುರಕ್ಷಿತವಾಗಿ ಕರೆತರಲಾಗಿದೆ. ಚೆನ್ನೈ ವಿಮಾನ ನಿಲ್ದಾಣದಲ್ಲಿ ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರು ಮೀನುಗಾರರನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಅವರನ್ನು ತಮ್ಮ ತಮ್ಮ ಊರುಗಳಿಗೆ ತೆರಳಲು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಯಿತು. ಸಚಿವರು ಮಾತನಾಡುತ್ತಾ, ಯುದ್ಧಪೀಡಿತ ಪ್ರದೇಶದಲ್ಲಿ ಸಿಲುಕಿದ್ದ ಮೀನುಗಾರರು ಕಠಿಣ ಪರಿಸ್ಥಿತಿಗಳನ್ನು ಎದುರಿಸಿದ್ದರೂ, ಸರ್ಕಾರದ ಸಮನ್ವಯಿತ ಪ್ರಯತ್ನಗಳಿಂದ ಅವರನ್ನು ಸುರಕ್ಷಿತವಾಗಿ ವಾಪಸ್ ಕರೆತರಲಾಗಿದೆ ಎಂದು ತಿಳಿಸಿದರು. ಈ ಕಾರ್ಯಾಚರಣೆ ವಿದೇಶಾಂಗ ಸಚಿವಾಲಯದ ನಿರಂತರ ಪ್ರಯತ್ನಗಳ ಭಾಗವಾಗಿದ್ದು, ಸಂಘರ್ಷದ ಹಿನ್ನೆಲೆ ವಿಮಾನ ಸೇವೆಗಳು ಸ್ಥಗಿತಗೊಂಡಿದ್ದರಿಂದ ರಕ್ಷಣಾ ಕಾರ್ಯಾಚರಣೆಗೆ ವಿಳಂಬ ಉಂಟಾಗಿತ್ತು. ಮೊದಲ ಹಂತದಲ್ಲಿ ಮೀನುಗಾರರನ್ನು ಇರಾನಿನಿಂದ ಅರ್ಮೇನಿಯಾಗೆ ಸ್ಥಳಾಂತರಿಸಿ, ಅಲ್ಲಿಂದ ವಿಶೇಷ ವಿಮಾನದ ಮೂಲಕ ಭಾರತಕ್ಕೆ ಕರೆತರಲಾಯಿತು. ಈ 345 ಮಂದಿಯಲ್ಲಿ ಬಹುತೇಕರು ತಮಿಳುನಾಡಿನವರು(327 ಜನರು) ಆಗಿದ್ದು, ಉಳಿದವರು ಕೇರಳ, ಪುದುಚೇರಿ, ಗುಜರಾತ್ ಮತ್ತು ಒಡಿಶಾ ರಾಜ್ಯಗಳಿಗೆ ಸೇರಿದವರು. ತಮಿಳುನಾಡಿನ ಮೀನುಗಾರರನ್ನು ವಿವಿಧ ಜಿಲ್ಲೆಗಳಾದ ಕನ್ಯಾಕುಮಾರಿ, ತಿರುನಲ್ವೇಲಿ ಸೇರಿದಂತೆ ಹಲವು ಪ್ರದೇಶಗಳಿಗೆ ವಿಶೇಷ ಬಸ್ಸುಗಳಲ್ಲಿ ಕಳುಹಿಸಲಾಯಿತು. ಮೀನುಗಾರರು ತಮ್ಮ ಸಂಕಷ್ಟವನ್ನು ಹಂಚಿಕೊಂಡು, ತಕ್ಷಣ ಕ್ರಮ ಕೈಗೊಂಡ ಕೇಂದ್ರ ಸರ್ಕಾರ ಮತ್ತು ಪ್ರಧಾನ ಮಂತ್ರಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ಇನ್ನು ಉಳಿದ ಭಾರತೀಯರನ್ನು ಕೂಡ ಶೀಘ್ರದಲ್ಲೇ ಸುರಕ್ಷಿತವಾಗಿ ಮರಳಿ ತರಲು ಸರ್ಕಾರ ಕ್ರಮಗಳನ್ನು ಮುಂದುವರಿಸುತ್ತಿದೆ.



ಇರಾನ್ ಪ್ರತೀಕಾರದ ದಾಳಿ

ಕಳೆದ ವಾರ ಡೊನಾಲ್ಡ್ ಟ್ರಂಪ್ ಇರಾನ್ ಅನ್ನು ಅಮೆರಿಕ ಸಂಪೂರ್ಣವಾಗಿ ಧ್ವಂಸಗೊಳಿಸಿದೆ ಮತ್ತು ಯುದ್ಧವನ್ನು ತ್ವರಿತವಾಗಿ ಮುಗಿಸುತ್ತೇವೆ ಎಂದು ಹೇಳಿದ ನಂತರ ಇರಾನ್ ತನ್ನ ಪ್ರತೀಕಾರದ ದಾಳಿ ತೀವ್ರಗೊಳಿಸಿದ್ದು, ಅಮೆರಿಕದ ಎರಡು ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದೆ. ಇದು ಬಾಂಬ್ ದಾಳಿಗಳ ನಡುವೆಯೂ ದುರ್ಬಲಗೊಂಡಿದ್ದ ಇರಾನ್ ಸೇನೆ ಇನ್ನೂ ಪ್ರತಿದಾಳಿ ಮಾಡಲು ಸಾಧ್ಯವಿದೆ ಎಂಬುದನ್ನು ತೋರಿಸುತ್ತದೆ. ಕುಸಿದ ಮತ್ತೊಂದು ವಿಮಾನವು ಅಮೆರಿಕದ ಎಫ್–10 ದಾಳಿ ವಿಮಾನವಾಗಿತ್ತು. ಅದರ ಸಿಬ್ಬಂದಿಯ ಸ್ಥಿತಿ ಅಥವಾ ಅದು ಎಲ್ಲಿ ಕುಸಿದಿತು ಎಂಬುದು ತಕ್ಷಣ ಸ್ಪಷ್ಟವಾಗಿಲ್ಲ. ಭಾನುವಾರ, ಇರಾನ್ ಸರ್ಕಾರದ ಟಿವಿ ಅಮೆರಿಕದ ವಿಮಾನಗಳ ಅವಶೇಷಗಳು ಎಂದು ಹೇಳಲಾದ ವಿಡಿಯೋವನ್ನು ಪ್ರಸಾರ ಮಾಡಿದೆ. ಜತೆಗೆ ದಟ್ಟವಾದ ಕಪ್ಪು ಹೊಗೆ ಏರುತ್ತಿರುವ ಚಿತ್ರವನ್ನೂ ತೋರಿಸಲಾಯಿತು. ಪ್ರಸಾರ ಸಂಸ್ಥೆಯ ಪ್ರಕಾರ, ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಒಂದು ಅಮೆರಿಕದ ಸಾರಿಗೆ ವಿಮಾನ ಮತ್ತು ಎರಡು ಹೆಲಿಕಾಪ್ಟರ್‌ಗಳನ್ನು ಇರಾನ್ ಹೊಡೆದುರುಳಿಸಿದೆ.

ಆದರೆ, ಮಿಷನ್ ಬಗ್ಗೆ ಮಾಹಿತಿ ಹೊಂದಿದ್ದ ಪ್ರಾದೇಶಿಕ ಗುಪ್ತಚರ ಅಧಿಕಾರಿ ಒಬ್ಬರು, ತಾಂತ್ರಿಕ ದೋಷದಿಂದ ಅಮೆರಿಕ ಸೇನೆ ಸ್ವತಃ ಎರಡು ಸಾರಿಗೆ ವಿಮಾನಗಳನ್ನು ಸ್ಫೋಟಗೊಳಿಸಬೇಕಾಯಿತು ಎಂದು ಹೇಳಿದ್ದಾರೆ. ಇದರಿಂದ ರಕ್ಷಣಾ ಕಾರ್ಯವನ್ನು ಪೂರ್ಣಗೊಳಿಸಲು ಹೆಚ್ಚುವರಿ ವಿಮಾನಗಳನ್ನು ಬಳಸಬೇಕಾಯಿತು. ಇರಾನ್ ಜಂಟಿ ಸೇನಾ ಕಮಾಂಡ್ ಭಾನುವಾರ ನಾಲ್ಕು ಅಮೆರಿಕದ ವಿಮಾನಗಳು ನಾಶವಾಗಿವೆ ಎಂದು ಹೇಳಿ, ಅಮೆರಿಕ ಮತ್ತು ಇಸ್ರೇಲ್ ಇರಾನ್‌ನ ನಾಗರಿಕ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಿದರೆ, ತಾವು ಹೆಚ್ಚಿನ ತೀವ್ರ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಸಿದೆ.





ಮೂರು ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ದಾಳಿ

ಕುವೈತ್‌ನಲ್ಲಿ ಇರಾನ್ ಡ್ರೋನ್ ದಾಳಿಯಿಂದ ವಿದ್ಯುತ್ ಘಟಕಗಳು ಮತ್ತು ಪೆಟ್ರೋಕೆಮಿಕಲ್ ಘಟಕಗಳಿಗೆ ಭಾರೀ ಹಾನಿಯಾಗಿದೆ. ಜತೆಗೆ ನೀರಿನ ಉಪ್ಪು ತೆಗೆಯುವ ಘಟಕವೂ ಕಾರ್ಯನಿರ್ವಹಣೆ ಸ್ಥಗಿತಗೊಳಿಸಿದೆ. ಬಹ್ರೇನ್‌ನಲ್ಲಿ ಡ್ರೋನ್ ದಾಳಿಯಿಂದ ರಾಷ್ಟ್ರೀಯ ತೈಲ ಕಂಪನಿಯ ಸಂಗ್ರಹ ಕೇಂದ್ರ ಮತ್ತು ಸರ್ಕಾರಿ ಪೆಟ್ರೋಕೆಮಿಕಲ್ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ, ರುವೈಸ್‌ನ ಪೆಟ್ರೋಕೆಮಿಕಲ್ ಘಟಕದಲ್ಲಿ ತಡೆಗಟ್ಟಲಾದ ಡ್ರೋನ್ ಅವಶೇಷಗಳಿಂದ ಬೆಂಕಿ ಕಾಣಿಸಿಕೊಂಡು ಕಾರ್ಯಾಚರಣೆ ಸ್ಥಗಿತಗೊಂಡಿತು. ಈ ದಾಳಿಗಳು ಇಸ್ರೇಲ್ ಇರಾನ್‌ನ ಪೆಟ್ರೋಕೆಮಿಕಲ್ ಘಟಕದ ಮೇಲೆ ನಡೆಸಿದ ದಾಳಿಯ ನಂತರ ನಡೆದಿವೆ. ಪ್ರಧಾನಿ ಬೆಂಜಮಿನ್ ನೆತನ್ಯಾಹು ಆ ಘಟಕವು ಯುದ್ಧಕ್ಕೆ ಹಣ ಒದಗಿಸುತ್ತಿದೆ ಎಂದು ಹೇಳಿದ್ದಾರೆ. ಪೆಟ್ರೋಕೆಮಿಕಲ್ ಉದ್ಯಮವು ಗಲ್ಫ್ ರಾಷ್ಟ್ರಗಳ ಪ್ರಮುಖ ಆರ್ಥಿಕ ಕ್ಷೇತ್ರವಾಗಿದೆ. ಇವು ಪ್ಲಾಸ್ಟಿಕ್, ಪಾಲಿಮರ್, ರಸಗೊಬ್ಬರ ಉತ್ಪಾದನೆಗೆ ಬಳಸಲಾಗುತ್ತವೆ ಮತ್ತು ಬಿಲಿಯನ್ ಡಾಲರ್‌ಗಳಷ್ಟು ಆದಾಯ ತರುತ್ತವೆ.

ಮುಂದುವರಿದ ಸಂಧಾನ ಯತ್ನ

ಪಾಕಿಸ್ತಾನ ವಿದೇಶಾಂಗ ಸಚಿವಾಲಯದ ವಕ್ತಾರ ತಾಹಿರ್ ಅಂದ್ರಾಬಿ, ಯುದ್ಧ ವಿರಾಮದ ಮಾತುಕತೆಗಳು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿವೆ ಎಂದು ಹೇಳಿದ್ದಾರೆ. ಪಾಕಿಸ್ತಾನ, ಟರ್ಕಿ ಮತ್ತು ಈಜಿಪ್ಟ್ ದೇಶಗಳು ಮಧ್ಯಸ್ಥಿಕೆ ನಡೆಸಿ ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆ ನಡೆಸಲು ಪ್ರಯತ್ನಿಸುತ್ತಿವೆ.ಈ ಪ್ರಸ್ತಾಪದಲ್ಲಿ ಯುದ್ಧ ವಿರಾಮದ ಮೂಲಕ ರಾಜತಾಂತ್ರಿಕ ಪರಿಹಾರ ಕಂಡುಕೊಳ್ಳುವುದು ಉದ್ದೇಶವಾಗಿದೆ.

ಸಾವು-ನೋವು ಹೆಚ್ಚಳ

ಯುದ್ಧ ಪ್ರಾರಂಭವಾದ ನಂತರ ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಗಲ್ಫ್ ರಾಷ್ಟ್ರಗಳು ಮತ್ತು ಪಶ್ಚಿಮ ತೀರ ಪ್ರದೇಶದಲ್ಲಿ ಎರಡು ಡಜನ್ ಜನರು ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 19 ಜನರು ಮತ್ತು 13 ಅಮೆರಿಕ ಸೈನಿಕರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ 1,400ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಅಲ್ಲದೆ 10 ಇಸ್ರೇಲ್ ಸೈನಿಕರೂ ಮೃತರಾಗಿದ್ದಾರೆ.

ಕಿರುಸುದ್ದಿ

ಬಂಗಾಳದಲ್ಲಿ ಅವ್ಯವಸ್ಥೆ: 4 ಪೊಲೀಸರ ಅಮಾನತು

ಕೋಲ್ಕತ್ತಾ: ಪಶ್ಚಿಮ ಬಂಗಾಳ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರ ನಾಮ ನಿರ್ದೇಶನ ಸಲ್ಲಿಕೆಯ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾದ ನಾಲ್ವರು ಕೋಲ್ಕತ್ತಾ ಪೊಲೀಸ್ ಸಿಬ್ಬಂದಿಯನ್ನು ಚುನಾವಣಾ ಆಯೋಗ ಅಮಾನತುಗೊಳಿಸಿದೆ. ಏ.2ರಂದು ಸುವೇಂದು ಅಧಿಕಾರಿಯವರ ನಾಮ ನಿರ್ದೇಶನ ಸಂದರ್ಭ ಬಿಜೆಪಿ ಆಯೋಜಿಸಿದ್ದ ಬೃಹತ್ ರೋಡ್‌ಶೋ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ನಿವಾಸದ ಸಮೀಪ ಕಾಳಿಘಾಟ್ ತಲುಪಿದ್ದಾಗ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಧ್ವಜವನ್ನು ತೋರಿಸಿ ಜಯ್ ಬಾಂಗ್ಲಾ ಮತ್ತು ಮಮತಾ ಬ್ಯಾನರ್ಜಿ ಜಿಂದಾಬಾದ್ ಎಂಬ ಘೋಷಣೆಗಳನ್ನು ಕೂಗುತ್ತಾ ಸುವೇಂದು ರೋಡ್‌ಶೋ ತಡೆದಿದ್ದರು. ಈ ವೇಳೆ ಎರಡೂ ಬಣಗಳು ಎದುರೆದುರು ನಿಂತು ಘೋಷಣೆಗಳನ್ನು ಕೂಗುತ್ತಾ ನಿಂತಿದ್ದವು. ಇದಾದ ಬಳಿಕ ಪೊಲೀಸ್ ಗುಂಪುಗಳು ಹೊಡೆದಾಡುವುದನ್ನು ತಡೆದಿದ್ದಾರೆ.

ತರೂರ್ ಮೇಲೆ ದಾಳಿ ಯತ್ನ: ಕೇರಳದ ಮಲಪ್ಪುರಂ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲು ತೆರಳಿದ್ದ ಕಾಂಗ್ರೆಸ್ ಸಂಸದ ಶಶಿ ತರೂರ್ ಮೇಲೆ ದಾಳಿ ಯತ್ನ ನಡೆದಿದ್ದು, ತರೂರ್ ಭದ್ರತಾ ಸಿಬ್ಬಂದಿ ಮತ್ತು ಅವರ ಕಾರು ಚಾಲಕನ ಮೇಲೆ ಐವರ ಗುಂಪೊಂದು ಹಲ್ಲೆ ನಡೆಸಿತ್ತು. ಒಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಐಸಿಸ್ ಉಗ್ರರ ಸಂಚು ಭೇದಿಸಿದ ಪೊಲೀಸರು

ಅಮರಾವತಿ: ಆಂಧ್ರ ಪ್ರದೇಶದಲ್ಲಿ ಇಸ್ಲಾಮಿಕ್ ಸ್ಟೇಟ್ ಸಂಬಂಧಿತ ಉಗ್ರ ಸಂಚೊಂದನ್ನು ಪೊಲೀಸರು ಭೇದಿಸಿದ್ದಾರೆಂದು ಗುಪ್ತಚರ ಇಲಾಖೆಯ ಮೂಲಗಳು ಭಾನುವಾರ ತಿಳಿಸಿವೆ. ಪ್ರಕರಣದಲ್ಲಿ ವಿದೇಶಿ ಹ್ಯಾಂಡ್ಲರ್‌ಗಳು, ಇಸ್ಲಾಮಿಕ್ ಸ್ಟೇಟ್ (ಐಸಿಸ್) ಸೇರಿದಂತೆ ಇಸ್ಲಾಮಿಕ್ ಮೂಲಭೂತವಾದಿ ಸಂಘಟನೆಗಳು ಒಳಗೊಂಡಿದ್ದು, ದಕ್ಷಿಣ ಭಾರತದಲ್ಲಿ ಮುಸ್ಲಿಂ ಯುವಕರಲ್ಲಿ ಇಸ್ಲಾಮಿಕ್ ಉಗ್ರವಾದ ಪ್ರಚರಿಸಲು ಸಂಚು ರೂಪಿಸಿದ್ದರೆಂದು ಮೂಲಗಳು ತಿಳಿಸಿವೆ. ಈ ಹಿಂದೆಯೇ ಬಿಹಾರ, ದಿಲ್ಲಿ, ಕರ್ನಾಟಕ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ರಾಜಸ್ತಾನಕ್ಕೆ ಆಂಧ್ರಪ್ರದೇಶ ಪೊಲೀಸ್ ವಿವಿಧ ತಂಡಗಳನ್ನು ಕಳುಹಿಸಿತ್ತು. ಆಂಧ್ರಪ್ರದೇಶದಲ್ಲಿ ಮೂವರು ಮತ್ತು ಇತರ ರಾಜ್ಯಗಳಿಂದ ಅಂದಾಜು 12 ಶಂಕಿತರನ್ನು ಪೊಲೀಸರು ಬಂಧಿಸಿದ್ದಾರೆ. ರಹಮತ್ತುಲ್ಲಾ ಶರೀಫ್ ಮುಖ್ಯ ಆರೋಪಿ ಎಂದು ಪ್ರಾಥಮಿಕ ತನಿಖೆ ವೇಳೆ ತಿಳಿದುಬಂದಿದೆ. ಜಿಹಾದಿ ಮುಸ್ಲಿಂ ಮಹಿಳೆಯರಿಗಾಗಿ ಖವಾತೀನ್ ಎಂಬ ಪ್ರತ್ಯೇಕ ಮಹಿಳಾ ಘಟಕ ನಿರ್ಮಾಣ ಮಾಡಲಾಗಿತ್ತು. ಜಿಹಾದಿ ಸಂಚಿನ ಹಿಂದೆ ವಿದೇಶಿ ಹ್ಯಾಂಡ್ಲರ್‌ಗಳು, ಇರಾಕ್ ಮತ್ತು ಸಿರಿಯಾದಲ್ಲಿನ ಐಸಿಸ್, ಭಾರತೀಯ ಉಪಖಂಡದ ಅಲ್–ಖೈದಾ ಉಗ್ರ ಸಂಘಟನೆಗಳು ಒಳಗೊಂಡಿವೆ. ಕುಖ್ಯಾತ ಉಗ್ರರ ವಿಡಿಯೋ ಬಳಕೆ: ಒಸಮಾ ಬಿನ್ ಲಾಡೆನ್, ಇಸ್ರಾರ್ ಅಹ್ಮದ್ ಶೇಖ್, ಝಾಕಿರ್ ನಾಯ್ಕ್ ಮತ್ತು ಅನ್ವರ್ ಅಲ್–ಅವ್ಲಾಕಿ ಮೊದಲಾದ ಕುಖ್ಯಾತ ಉಗ್ರರ ವಿಡಿಯೋ ತೋರಿಸಿ ಭಾರತೀ ಮುಸ್ಲಿಂ ಯುವಕರನ್ನು ಭಯೋತ್ಪಾದನೆಯತ್ತ ಸೆಳೆಯುತ್ತಿದ್ದರೆಂದು ತಿಳಿದುಬಂದಿದೆ.

ದೇಶದಲ್ಲಿ 6.6 ಲಕ್ಷ ಸಣ್ಣ ಸಿಲಿಂಡರ್‌ಗಳ ಮಾರಾಟ

ಹೊಸದಿಲ್ಲಿ: ಸಣ್ಣ 5 ಕೆ.ಜಿ. ಎಲ್‌ಪಿಜಿ ಸಿಲಿಂಡರ್‌ಗಳು ದೇಶದೆಲ್ಲೆಡೆ ಎಲ್‌ಪಿಜಿ ಪೂರೈಕೆದಾರರ ಬಳಿ ಮಾರಾಟಕ್ಕೆ ಲಭ್ಯವಿದೆ. ಶನಿವಾರ ಒಟ್ಟು 90,000 ಇಂಥಾ ಸಿಲಿಂಡರ್‌ಗಳ ಮಾರಾಟವಾಗಿವೆ. ಮಾ.23ರಿಂದ ಇಲ್ಲಿಯವರೆಗೆ ಒಟ್ಟು 6.6 ಲಕ್ಷ ಸಣ್ಣ ಅಡುಗೆ ಅನಿಲ ಸಿಲಿಂಡರ್‌ಗಳ ಮಾರಾಟವಾಗಿವೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಭಾನುವಾರ ಹೇಳಿಕೆ ನೀಡಿದೆ. ಮಾ.23ರಿಂದ ಎಲ್‌ಪಿಜಿ ಪೂರೈಕೆದಾರರು ಅಥವಾ ಡೀಲರ್‌ಗಳ ಬಳಿ ಮಾನ್ಯ ಗುರುತಿನ ಚೀಟಿಗಳನ್ನು ತೋರಿಸಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳನ್ನು ಪಡೆದುಕೊಳ್ಳಲು ಅನುವು ಮಾಡಿಕೊಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಸಬ್ಸಿಡಿ ಇರುವ ಗೃಹಬಳಕೆಯ 14.2 ಕೆ.ಜಿ ಸಿಲಿಂಡರ್‌ಗಳನ್ನು ಹೊರತುಪಡಿಸಿ, 5 ಕೆ.ಜಿ ಸಿಲಿಂಡರ್‌ಗಳು (ಎಫ್‌ಟಿಎಲ್) ಮಾರುಕಟ್ಟೆ ಬೆಲೆಗೆ ಲಭ್ಯವಿರಲಿವೆ ಎಂದು ತೈಲ ಸಚಿವಾಲಯ ತಿಳಿಸಿದೆ. ದಿನವೊಂದರಲ್ಲಿ 51 ಲಕ್ಷ ಗೃಹಬಳಕೆಯ ಸಿಲಿಂಡರ್‌ಗಳ ಮಾರಾಟವಾಗುತ್ತವೆ. ಒಟ್ಟು ಬೇಡಿಕೆಯ ಶೇ.95 ಬುಕ್ಕಿಂಗ್ ಆನ್ ಲೈನ್ ಮುಖೇನ ನಡೆಯುತ್ತವೆ. ಬ್ಲ್ಯಾಕ್ ಮಾರ್ಕೆಟ್ ಮೂಲಕ ಗ್ಯಾಸ್ ಸಿಲಿಂಡರ್‌ಗಳ ಅಕ್ರಮ ಮಾರಾಟದ ವಿರುದ್ಧ ಅಧಿಕಾರಿಗಳು ಕಠಿಣ ಕ್ರಮ ತೆಗೆದುಕೊಳ್ಳಲು ಸಚಿವಾಲಯ ಸೂಚನೆ ನೀಡಿದೆ. ಮಾರ್ಚ್‌ನಿಂದ ಇಲ್ಲಿಯವರೆಗೆ ಬ್ಲ್ಯಾಕ್ ಮಾರ್ಕೆಟ್‌ನಲ್ಲಿ ಅಕ್ರಮ ಮಾರಾಟವಾಗುತ್ತಿದ್ದ 50,000 ಸಿಲಿಂಡರ್‌ಗಳನ್ನು ವಶಪಡಿಸಿದ್ದು, ಸುಮಾರು 1,400 ಎಲ್‌ಪಿಜಿ ಪೂರೈಕೆದಾರರಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ. ಇಲ್ಲಿಯವರೆಗೆ 36 ಪೂರೈಕೆದಾರರ ಡೀಲರ್‌ಶಿಪ್ (ಪೂರೈಕೆ ಪರವಾನಗಿ) ಅಮಾನತುಗೊಳಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

650 ಕೋಟಿ ರೂ. ಅಕ್ರಮ ನಗದು, ಮಾದಕವಸ್ತು ವಶ

ಹೊಸದಿಲ್ಲಿ : ಚುನಾವಣೆ ಎದುರಿಸಲಿರುವ ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಮತದಾರರನ್ನು ಓಲೈಸಲು ಬಳಕೆಯಾಗಲಿದ್ದ ಸುಮಾರು 650 ಕೋಟಿ ರೂ.ಅಕ್ರಮ ನಗದು, ಮಾದಕವಸ್ತುಗಳು ಮತ್ತು ಮದ್ಯವನ್ನು ಅನುಷ್ಠಾನ ನಿರ್ದೇಶನಾಲಯ ಅಧಿಕಾರಿಗಳು ಮುಟ್ಟುಗೋಲು ಹಾಕಿದ್ದಾರೆಂದು ಚುನಾವಣಾ ಆಯೋಗ ಭಾನುವಾರ ಮಾಹಿತಿ ನೀಡಿದೆ. ರೂ.319 ಕೋಟಿ ಅಕ್ರಮ ನಗದು, ಮಾದಕ ವಸ್ತುಗಳು, ಅಕ್ರಮ ಮದ್ಯ ಮತ್ತಿತರ ಬೆಲೆಬಾಳುವ ವಸ್ತುಗಳನ್ನು ಪ.ಬಂಗಾಳದಲ್ಲಿ ಮುಟ್ಟುಗೋಲು ಹಾಕಿದ್ದು, 170ಕೋಟಿ ರೂ.ಮೊತ್ತದ ವಸ್ತುಗಳನ್ನು ತಮಿಳ್ನಾಡಿನಿಂದ ವಶಪಡಿಸಲಾಗಿದೆ ಎಂದು ಆಯೋಗ ವಿವರಿಸಿದೆ.

ಜನರಿಂದ ಬರುವ ದೂರುಗಳನ್ನು 100 ನಿಮಿಷಗಳೊಳಗೆ ಇತ್ಯರ್ಥಪಡಿಸಲು 5,173 ಫ್ಲೆಯಿಂಗ್ ಸ್ಕ್ವಾಡ್‌ಗಳನ್ನು ನಿಯೋಜಿಸಲಾಗಿದೆ. ವಿವಿಧ ಕೇಂದ್ರಗಳಲ್ಲಿ ದಿಢೀರ್ ನಾಕಾಬಂಧಿ ರಚಿಸಲು 5,200 ಸ್ಟಾಟಿಕ್ ಸರ್ವೆಲೆನ್ಸ್ ಟೀಮ್(ಎಸ್‌ಎಸ್‌ಟಿ)ಗಳನ್ನು ನಿಯೋಜಿಸಲಾಗಿದೆ ಎಂದು ಆಯೋಗ ಮಾಹಿತಿ ನೀಡಿದೆ. ಕೇರಳ , ಅಸ್ಸಾಂ ಮತ್ತು ಪುದುಚೇರಿಗಳಲ್ಲಿ ಏ.9ರಂದು ಚುನಾವಣೆ ನಡೆಯಲಿದೆ. ಪ.ಬಂಗಾಳದಲ್ಲಿ ಎರಡು ಹಂತಗಳಲ್ಲಾಗಿ ಏ.23, 29ರಂದು ಚುನಾವಣೆಯಿದೆ. ತಮಿಳ್ನಾಡಲ್ಲಿ ಒಂದೇ ಹಂತದಲ್ಲಿ ಏ. 23ರಂದು ಮತದಾನ ನಡೆಯಲಿದೆ. ಆರು ರಾಜ್ಯಗಳಲ್ಲಿ ಎಂಟು ಸೀಟುಗಳಿಗೆ ಏ.9, 23ರಂದು ವಿಧಾನಸಭಾ ಉಪ ಚುನಾವಣೆ ನಡೆಯಲಿದೆ. ಇಲೆಕ್ಟ್ರಾನಿಕ್ ಸೀಝುರ್ ಮೆನೇಜ್‌ಮೆಂಟ್ ಸಿಸ್ಟಮ್‌ನಿಂದ(ಇಎಸ್‌ಎಂಎಸ್) ಡೇಟಾ ಸಂಗ್ರಹಿಸಲಾಗಿದೆ ಎಂದು ಆಯೋಗ ತಿಳಿಸಿದೆ. ವಿಧಾನಸಭಾ ಚುನಾವಣೆ ಮತ್ತು ಉಪ ಚುನಾವಣೆಗಳನ್ನು ಮಾರ್ಚ್ 15ರಂದು ಘೋಷಿಸಲಾಗಿತ್ತು.

ಬಿಜೆಪಿ ಕಚೇರಿ ಬಳಿ ಸ್ಫೋಟ: ಇಬ್ಬರು ಆರೋಪಿಗಳ ಸೆರೆ

ಚಂಡೀಗಢ: ಇಲ್ಲಿನ ಬಿಜೆಪಿ ಮುಖ್ಯ ಕಚೇರಿಯ ಹೊರಗೆ ಸಂಭವಿಸಿದ ಸ್ಫೋಟ ಪ್ರಕರಣದಲ್ಲಿ ಇಬ್ಬರು ಪ್ರಮುಖ ಆರೋಪಿಗಳನ್ನು ಪಂಜಾಬ್ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆ 7ಕ್ಕೇರಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಭಾನುವಾರ ತಿಳಿಸಿದ್ದಾರೆ. ಆರೋಪಿಗಳು ಪಾಕಿಸ್ತಾನದ ಇಂಟರ್–ಸರ್ವಿಸಸ್ ಇಂಟೆಲಿಜೆನ್ಸ್(ಐಎಸ್‌ಐ) ಬೆಂಬಲಿತ ಜಾಲದ ಭಾಗವಾಗಿದ್ದು, ಜರ್ಮನಿ ಮತ್ತು ಪೋರ್ಚುಗಲ್‌ನಲ್ಲಿರುವ ತಮ್ಮ ಹ್ಯಾಂಡ್ಲರ್‌ಗಳಿಂದ ಸೂಚನೆಗಳನ್ನು ಪಡೆಯುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಹರ್ಯಾಣದ ರೇವಾರಿ ಪಟ್ಟಣದಲ್ಲಿ ಶನಿವಾರ ರಾತ್ರಿ ಹರಿಯಾಣ ಪೊಲೀಸ್ ವಿಶೇಷ ಕಾರ್ಯಪಡೆ(ಎಸ್‌ಟಿಎಫ್) ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಈ ಬಂಧನಗಳು ನಡೆದಿವೆ ಎಂದು ಪಂಜಾಬ್ ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ. ಬಂಧಿತ ಇಬ್ಬರನ್ನು ಗುರುತೇಜ್ ಸಿಂಗ್ ಮತ್ತು ಅಮನ್‌ಪ್ರೀತ್ ಸಿಂಗ್ ಎಂದು ಗುರುತಿಸಲಾಗಿದ್ದು, ಇವರು ಪಂಜಾಬ್‌ನ ರೂಪನಗರ ಜಿಲ್ಲೆಯ ರತನ್‌ಗಢ ನಿವಾಸಿಗಳು. ಇವರು ರೈಡ್–ಹೈಲಿಂಗ್ ಸೇವೆ ರಾಪಿಡೊಗಾಗಿ ಬೈಕ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಐಎಸ್‌ಐ ಹ್ಯಾಂಡ್ಲರ್‌ಗಳು ಆರೋಪಿಗಳಿಗೆ 2 ಲಕ್ಷ ಹಣದ ಆಮಿಷವೊಡ್ಡಿದ್ದರು ಎಂದು ಡಿಜಿಪಿ ತಿಳಿಸಿದ್ದಾರೆ.

ಒಳನುಸುಳುಕೋರರರನ್ನು ವಿರೋಧಿಸುತ್ತೇವೆ ವಿನಾ ಮುಸ್ಲಿಮರನ್ನಲ್ಲ

ಸಮಸ್ತರ ಕಲ್ಯಾಣ ಬಿಜೆಪಿ ನೀತಿ: ಗಡ್ಕರಿ

ಹೊಸದಿಲ್ಲಿ: ಯಾವುದೇ ಜಾತಿ ಮತ ಭೇದವಿಲ್ಲದೆ ಎಲ್ಲರನ್ನೂ ಜತೆಯಾಗಿ ಮುಂದಕ್ಕೊಯ್ಯೋದು, ಎಲ್ಲರ ಒಳಗೊಳ್ಳುವಿಕೆಗೆ ಅವಕಾಶ ನೀಡುವ ಅಭಿವೃದ್ಧಿ ಯೋಜನೆಗಳ ಸಾಕಾರ, ಸಮಸ್ತರ ಕಲ್ಯಾಣ ಬಿಜೆಪಿ ನೀತಿ. ನಾವು ಅಕ್ರಮ ನುಸುಳುಕೋರರನ್ನು ವಿರೋಧಿಸುತ್ತೇವೆ ವಿನಾ ಮುಸಲ್ಮಾನರನ್ನಲ್ಲ ಎಂದು ಬಿಜೆಪಿ ಹಿರಿಯ ನಾಯಕ, ಕೇಂದ್ರ ಸಚಿವ ನಿತಿನ್ ಗಡ್ಕರಿ ನುಡಿದರು.

ಅಸ್ಸಾಂ ಮತ್ತು ಪಶ್ಚಿಮ ಬಂಗಾಳಗಳಲ್ಲಿ ನಾವು ಖಂಡಿತ ಜಯಿಸುತ್ತೇವೆಂಬ ನಂಬಿಕೆ ತನ್ನದು ಎಂದವರು ಪಿಟಿಐಗೆ ಸಂದರ್ಶನದಲ್ಲಿ ತಿಳಿಸಿದ್ದಾರೆ. ಮೂಲಸೌಕರ್ಯ ರಂಗಗಳಿಗೆ ಬೃಹತ್ ಪ್ರಮಾಣದಲ್ಲಿ ಹೂಡಿಕೆಗಳು ಮತ್ತು ಆಡಳಿತ ಕೇಂದ್ರಿತ ಪ್ರಯತ್ನಗಳು ಬಿಜೆಪಿಯ ಪ್ರಚಾರ ಕಾರ್ಯತಂತ್ರದ ಪ್ರಧಾನ ಸ್ತಂಭಗಳಾಗಿವೆ ಎಂದು ಪಕ್ಷದ ಅಭಿವೃದ್ಧಿ ಸಾಧನೆಗಳತ್ತ ಗಮನ ಸೆಳೆದರು.

ಅಸ್ಸಾಂ ಸಹಿತ ಈಶಾನ್ಯ ವಲಯದಲ್ಲಿ 5 ಲಕ್ಷ ಕೋಟಿ ರೂ. ಮೊತ್ತದ ಯೋಜನೆಗಳನ್ನು ಅನುಷ್ಠಾನಿಸಲಾಗುತ್ತಿದೆ. 1.5 ಲಕ್ಷ ಕೋಟಿ ರೂ. ಮೊತ್ತದ ಮೂಲಸೌಕರ್ಯ ಯೋಜನೆಗಳು ಈಗಾಗಲೆ ಪೂರ್ತಿಯಾಗಿವೆ, 1.5 ಲಕ್ಷ ಕೋಟಿಗಳಿಂದ 2 ಲಕ್ಷ ಕೋಟಿ ರೂ. ಮೊತ್ತದ ಯೋಜನೆಗಳು ಅನುಷ್ಠಾನ ಹಂತದಲ್ಲಿವೆ. 2 ಲಕ್ಷ ಕೋಟಿ ರೂ. ಮೊತ್ತದ ಯೋಜನೆಗಳು ಸಿದ್ಧತಾ ಹಂತದಲ್ಲಿವೆ. ಸಂಪರ್ಕ ವ್ಯವಸ್ಥೆಯಲ್ಲಿ ಪರಿವರ್ತನೆ, ವ್ಯಾಪಾರ ವ್ಯವಹಾರಗಳಿಗೆ ಉತ್ತೇಜನ, ಆರ್ಥಿಕ ಬೆಳವಣಿಗೆಯನ್ನು ವಿಸ್ತೃತಗೊಳಿಸುವುದು ರಸ್ತೆ ಸಾರಿಗೆ, ಹೆದ್ದಾರಿಗಳು ಹಾಗೂ ಲಾಜಿಸ್ಟಿಕ್ ರಂಗಗಳಲ್ಲಿನ ಪ್ರಸ್ತುತ ಉಪಕ್ರಮಗಳ ಹಿಂದಿನ ಮೂಲೋದ್ದೇಶವಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.



ಈ ರೀತಿಯ ನಿರಂತರ ಉತ್ತೇಜನಗಳು, ಇತಿಹಾಸ ಕಾಲದಿಂದಲೇ ಸಂಪರ್ಕ ವ್ಯವಸ್ಥೆಯ ಸವಾಲುಗಳಿಂದ ತತ್ತರಿಸಿರುವ ಅಸ್ಸಾಂ ಮತ್ತು ಈಶಾನ್ಯ ವಲಯದಲ್ಲಿ ಮೂಲಸೌಕರ್ಯಗಳ ಸ್ವರೂಪವನ್ನೇ ಬದಲಿಸಿಬಿಡಲಿವೆ ಎಂದು ಗಡ್ಕರಿ ಹೇಳಿದ್ದಾರೆ. ಹಿಮಂತ್ ಬಿಸ್ವಾ ಶರ್ಮಾ ನೇತೃತ್ವದ ಸರಕಾರ ತನ್ನ ಅಭಿವೃದ್ಧಿ ದಾಖಲೆ, ಕಲ್ಯಾಣ ಉಪಕ್ರಮಗಳ ಬಲದಿಂದ ಈ ಬಾರಿಯೂ ಅಧಿಕಾರದಲ್ಲಿ ಮುಂದುವರೆಯುವ ಖಾತರಿ ಹಿನ್ನೆಲೆಯಲ್ಲಿ , ಗಡ್ಕರಿ ಅವರ ಪ್ರಸ್ತುತ ಹೇಳಿಕೆಗಳು ಮಹತ್ತ್ವಪೂರ್ಣವೆನಿಸಿವೆ.

ವಿವಿಧತೆಯಲ್ಲಿ ಏಕತೆ ನಮ್ಮ ಪ್ರಧಾನ ಅಸ್ತಿತ್ವ: ವಿವಿಧತೆಯಲ್ಲಿ ಏಕತೆ ನಮ್ಮ ಪ್ರಧಾನ ಅಸ್ತಿತ್ವವಾಗಿದೆ. ಬಿಜೆಪಿ ಯಾವುದೇ ಜಾತಿ ,ಧರ್ಮ ಅಥವಾ ಭಾಷಾ ವಿರೋಧಿಯಲ್ಲ. ಸಂವಿಧಾನಕ್ಕನುಸಾರ ಸಮಸ್ತರಿಗೂ ಹಕ್ಕುಗಳ ಕೊಡಮಾಡುವುದನ್ನು ಬಿಜೆಪಿ ಬೆಂಬಲಿಸುತ್ತದೆ. ಕಿರುಕುಳಕ್ಕೀಡಾದ ಅಲ್ಪಸಂಖ್ಯಾತರಿಗೆ ಪೌರತ್ವ(ತಿದ್ದುಪಡಿ) ಕಾಯ್ದೆಯಲ್ಲಿ ಪೌರತ್ವ ನೀಡಿದ್ದನ್ನು ಪರೋಕ್ಷವಾಗಿ ಉಲ್ಲೇಖಿಸಿ ಸಚಿವರು ಪ್ರಸ್ತುತ ಹೇಳಿಕೆ ನೀಡಿದರು. ಪ.ಬಂಗಾಳದಲ್ಲಿ ರಾಜಕೀಯ ಬದಲಾವಣೆಯಾಗಬೇಕೆಂದು ಮತದಾರರು ಆಗ್ರಹಪಟ್ಟಿದ್ದಾರೆ. ಅಲ್ಲಿನ ಜನರು ಬದಲಾವಣೆ ಬಯಸಿದ್ದಾರೆ. ಈ ನಿಟ್ಟಿನಲ್ಲಿ ಪ.ಬಂಗಾಳದಲ್ಲೂ ಬಿಜೆಪಿಗೆ ಜಯ ನಿಶ್ಚಯವೆಂದು ವಿಶ್ವಾಸ ವ್ಯಕ್ತಪಡಿಸಿದರು. ಅನಗತ್ಯ ರಾಜಕೀಯ ಸಂಘರ್ಷ ಬದಲು ದಕ್ಷ ಆಡಳಿತ ಮತ್ತು ಅಭಿವೃದ್ಧಿಗೆ ಪಕ್ಷವು ಆದ್ಯತೆ ನೀಡಲಿದೆ ಎಂದು ಹೇಳಿದರು.

ಈಸ್ಟರ್ ಹಬ್ಬದ ಶುಭಹಾರೈಸಿ ಕೇಂದ್ರ ಸಚಿವ ಅಮಿತ್ ಶಾ ಮನವಿ

ಕೇರಳದಲ್ಲಿ ಎನ್‌ಡಿಎಗೆ ಅವಕಾಶ ಕೊಡಿ

ಕೊಚ್ಚಿ /ತಿರುವನಂತಪುರಂ: ಸಂಪನ್ನ ಕೇರಳದ ಸಾಕಾರಕ್ಕಾಗಿ ಕೇರಳದಲ್ಲಿ ಸರಕಾರ ರಚಿಸಲು ಎನ್‌ಡಿಎಗೆ ಅವಕಾಶ ಕೊಡಿ, ಬಿಜೆಪಿ ನೇತೃತ್ವದ ಎನ್‌ಡಿಎಯನ್ನು ಬೆಂಬಲಿಸಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕ್ರೈಸ್ತ ಬಾಂಧವರಿಗೆ ಈಸ್ಟರ್ ಹಬ್ಬದ ಶುಭಹಾರೈಸಿ ವಿನಂತಿಸಿದ್ದಾರೆ. ಕೇರಳದಲ್ಲಿ ಎನ್‌ಡಿಎ ಸರಕಾರ ರಚಿಸಿದಲ್ಲಿ, ಬರೇ ಎರಡು ತಿಂಗಳೊಳಗೆ ಶಬರಿಮಲೆ ಸನ್ನಿಧಾನದ ಬಂಗಾರ ದುರ್ಬಳಕೆ ಆರೋಪಿಗಳನ್ನು ಜೈಲಿಗೆ ಕಳುಹಿಸಲಿದೆ ಎಂದು ಸಚಿವರು ಭರವಸೆ ನೀಡಿದರು. ಎರ್ನಾಕುಳಂನ ಕುನ್ನತುನಾಡು ಕ್ಷೇತ್ರದಲ್ಲಿ ಸಚಿವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಈ ರೀತಿ ಆಶ್ವಾಸನೆಯಿತ್ತರು. ಕೇರಳಕ್ಕೆ ಪ್ರಪ್ರಥಮ ಎಐಐಎಂಎಸ್ ಆಸ್ಪತ್ರೆ ಮಂಜೂರು ಮಾಡಲಾಗುವುದು. ಎನ್‌ಡಿಎ ಸರಕಾರ ಅಧಿಕಾರ ಸೂತ್ರ ಹಿಡಿದ ನಂತರ ಎರಡು ವರ್ಷಗಳೊಳಗೆ ಆಸ್ಪತ್ರೆ ಕಾರ್ಯಾರಂಭಿಸಲಿದೆ ಎಂದು ಹೇಳಿದರು.



ಸುಳ್ಳುಗಾರ ರಾಹುಲ್: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಓರ್ವ ಸುಳ್ಳುಗಾರ. ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇಮ್ ಚೇಂಜ್ ಸ್ಟಾರ್ಟ್‌ಅಪ್ ಶುರು ಮಾಡಿದ್ದಾರೆ. ಇದರಡಿ ಕೇಂದ್ರ ಪ್ರಾಯೋಜಿತ ಯೋಜನೆಗಳ ಹೆಸರು ಬದಲಿಸಿ ದುರ್ಲಾಭವೆತ್ತುವುದು ಸಿಎಂ ಪಿಣರಾಯಿ ತಂತ್ರವಾಗಿದೆ ಎಂದು ಟೀಕಿಸಿದರು. ಸಂಜೆ ತಿರುವನಂತಪುರ ಜಿಲ್ಲೆಯ ಕಟ್ಟಕಡದಲ್ಲಿನ ಸಾರ್ವಜನಿಕ ಸಭೆಯಲ್ಲೂ ಸಚಿವ ಶಾ ಇದೇ ಆರೋಪಗಳ ಜನರ ಮುಂದಿಟ್ಟರು.


ಎಲ್ಲರಿಗೂ ಸಮಾನ ನ್ಯಾಯ: ಎಲ್ಲರಿಗೂ ಸಮಾನ ನ್ಯಾಯ ಮತ್ತು ಯಾರ ತುಷ್ಟೀಕರಣ ಇಲ್ಲ ಎಂಬುದು ಎನ್‌ಡಿಎ ಧೋರಣೆ .ಇದು ದೇಶಾದ್ಯಂತ ಎನ್‌ಡಿಎಯ ಕಾರ್ಯವೈಖರಿಯಿಂದಲೇ ವೇದ್ಯವಾಗಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಭಾರತ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾಗ, ಬರೇ ಒಂದು ದಿನದಲ್ಲಿ ಅದರ ನಾಯಕರು, ಸದಸ್ಯರೆಲ್ಲರನ್ನು ಸೆರೆಹಿಡಿದು ಜೈಲಿಗೆ ಹಾಕಿದ್ದೆವು . ಪಿಎಫ್‌ಐ ನಿಷೇಧವನ್ನು ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ಬಲವಾಗಿ ವಿರೋಧಿಸಿದ್ದವು. ಯಾಕೆಂದರೆ ಈ ಪೈಕಿ ಒಂದು ರಂಗ ಪಿಎಫ್‌ಐನ ರಾಜಕೀಯ ಘಟಕ ಎಸ್‌ಡಿಪಿಐ ಜತೆ ಕೈಜೋಡಿಸಿದ್ದರೆ, ಇನ್ನೊಂದು ಫ್ರಂಟ್ ಜಮಾತ್ –ಇ–ಇಸ್ಲಾಮಿ ಶಕ್ತಿಗಳ ಜತೆ ಕೈಜೋಡಿಸಿದೆಯೆಂದು ಆರೋಪಿಸಿದ ಶಾ, ಇವೆರಡೂ ರಂಗಗಳ ಆಡಳಿತದಲ್ಲಿ ಕೇರಳ ಸುರಕ್ಷಿತವಾಗಿಲ್ಲ ಎಂದು ಆರೋಪಿಸಿದರು.

ವಕ್ಫ್ ಮಂಡಳಿ ಎರ್ನಾಕುಳಂ ಜಿಲ್ಲೆಯಲ್ಲಿ 600 ಮೂನಾಂಬಮ್ ನಿವಾಸಿಗಳ ಜಾಗದ ಮೇಲೆ ಹಿಡಿತ ಸಾಧಿಸಲು ಮುಂದಾಗಿದ್ದಾಗ ಎರಡೂ ರಂಗಗಳು ಬಹಳ ಮೌನ ಕಾಯ್ದಿದ್ದವು. ಆ ಸಂದರ್ಭ ಎನ್‌ಡಿಎ ಸರಕಾರ ವಕ್ಫ್‌ಕಾಯಿದೆಗೆ ತಿದ್ದುಪಡಿ ಮಾಡಿ ಸಂತ್ರಸ್ತರ ಸೊತ್ತನ್ನು ರಕ್ಷಿಸಿತ್ತು. ಎಲ್‌ಡಿಎಫ್ ,ಯುಡಿಎಫ್ ದ್ವಿಮುಖದ ರಂಗಗಳು , ಕೇರಳದಲ್ಲಿ ಪರಸ್ಪರ ವಿರೋಧಿಗಳಾಗಿರುವ ಈ ರಂಗಗಳು ರಾಜ್ಯದ ಹೊರಗಡೆ ಜತೆಯಾಗಿ ಚುನಾವಣೆ ಎದುರಿಸುವುದು ತೀರಾ ನಾಚಿಕೆಗೇಡು ಎಂದು ಸಚಿವ ಶಾ ಟೀಕಿಸಿದರು.

ಕಿರುಸುದ್ದಿ

ವಿಲಾಸ್ ಕುಮಾರ್ ನಿಟ್ಟೆ ಅವರಿಗೆ ಧರ್ಮಸ್ಥಳ ರತ್ನವರ್ಮ ಹೆಗ್ಡೆ ಪ್ರಶಸ್ತಿ

ಕಾರ್ಕಳ: ವಿಲಾಸ್ ಕುಮಾರ್ ನಿಟ್ಟೆ ಅವರ "ಆಯೆ ಆನ್‌ಮಗೆ" ತುಳು ನಾಟಕಕ್ಕೆ ಧರ್ಮಸ್ಥಳ ರತ್ನವರ್ಮ ಹೆಗ್ಗಡೆ ಪ್ರಶಸ್ತಿ ಲಭಿಸಿದೆ. ತುಳುಕೂಟ ಕುಡ್ಲದ ವತಿಯಿಂದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಪ್ರಾಯೋಜಕತ್ವದಲ್ಲಿ ಕೊಡಮಾಡುವ ಈ ನಾಟಕ ಪ್ರಶಸ್ತಿ ಸ್ಪರ್ಧೆಯಲ್ಲಿ "ಆಯೆ ಆನ್ ಮಗೆ" ಎಂಬ ತುಳು ನಾಟಕ ಪ್ರತಿಯು ದ್ವಿತೀಯ ಪ್ರಶಸ್ತಿ ಮತ್ತು ನಗದು ಬಹುಮಾನವನ್ನು ಗೆದ್ದುಕೊಂಡಿದೆ.



ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿರುವ ವಿಲಾಸ್ ಕುಮಾರ್ ನಿಟ್ಟೆ ಅವರು, ಗುತ್ತುದ ಗುರ್ಕಾರೆ, ಮುತ್ತೈಸಿ ಮದ್ಮಲ್, ತೆಲಿಕೆದ ನಲಿಕೆ, ಗಗ್ಗರ, ಆಲಿಗೇಪ ಮದ್ಮೆ , ಮಾತೆರ್ಲ ಬರೋಡು, ಕಂಬುಳದ ನಡುಟೊಂಜಿ ಕಥೆ, ತಮ್ಮನ, ಪನರೆ ಧೈರ್ಯಜ್ಜಿ, ಪನಂದೆ ಪೋಯೆರ್, ಬರೆಪು ನಾಯೆ ಬರೆತ್‌ಜೆ ಮುಂತಾದ ಒಟ್ಟು 20ಕ್ಕೂ ಹೆಚ್ಚು ತುಳು ನಾಟಕ ಕೃತಿಗಳನ್ನು ರಚಿಸಿದ್ದಾರೆ. ಈಗಾಗಲೇ ಅವರ ಒಟ್ಟು ನಾಲ್ಕು ತುಳು ನಾಟಕಗಳು ಈ ಧರ್ಮಸ್ಥಳ ರತ್ನವರ್ಮ ಹೆಗ್ಗಡೆ ಪ್ರಶಸ್ತಿಗೆ ಬಾಜನವಾಗಿದೆ. ನಿಟ್ಟೆ ಗ್ರಾಮದ ಆತ್ತೂರು ಬಲಿಪಗುತ್ತು ಪ್ರೇಮ ಶೆಟ್ಟಿ ಮತ್ತು ಜಗನ್ನಾಥ ಶೆಟ್ಟಿ ದಂಪತಿಯ ಪುತ್ರರಾಗಿದ್ದಾರೆ.

ಗೇಮಿಂಗ್ ಆ್ಯಪ್‌ನಲ್ಲಿ ಠೇವಣಿಯಿರಿಸಿ ಹಣ ನಷ್ಟಗೊಂಡ ವ್ಯಥೆ: ಯುವಕ ಇಲಿವಿಷ ಸೇವಿಸಿ ಆತ್ಮಹತ್ಯೆಗೆತ್ನ

ಕಾಸರಗೋಡು: ಗೇಮಿಂಗ್ ಆ್ಯಪ್ ಮೂಲಕ ಠೇವಣಿಯಿರಿಸಿದ ಹಣ ನಷ್ಟಗೊಂಡಿರುವುದರಿಂದ ಮನನೊಂದು ಯುವಕನೋರ್ವ ಇಲಿವಿಷ ಸೇವಿಸಿ ಆತ್ಮಹತ್ಯೆಗೆತ್ನಿಸಿದ ಘಟನೆ ಅಂಬಲತ್ತರೆಯಲ್ಲಿ ನಡೆದಿದೆ. ಅಂಬಲತ್ತರೆ ಪೊಲೀಸ್ ಠಾಣೆ ವ್ಯಾಪ್ತಿಯ ಗುರುಪುರ ನಿವಾಸಿಯಾದ 25ರ ಹರೆಯದ ಯುವಕ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದು, ಆತನನ್ನು ಚೆಂಗಳದ ಸಹಕಾರಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಯುವಕನ ದೂರಿನಂತೆ ಕಾಸರಗೋಡು ನಿವಾಸಿಯಾದ ಅನ್ಸಾರ್ ಎಂಬಾತನ ವಿರುದ್ಧ ಕಾಸರಗೋಡು ನಗರ ಠಾಣೆ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಜಿಲ್ಲಾ ಮೆಡಿಕಲ್ ಆಫೀಸರ್ ಹಾಗೂ ಕಾಸರಗೋಡು ಪ್ರಥಮ ದರ್ಜೆ ಮೆಜಿಸ್ಟ್ರೇಟ್ ಯುವಕನಿಂದ ಹೇಳಿಕೆ ದಾಖಲಿಸಿಕೊಂಡ ಬಳಿಕ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. 2026 ಫೆಬ್ರವರಿ 28ರಿಂದ ಮಾ.3ರ ವರೆಗಿನ ದಿನಗಳಲ್ಲಿ ಗೇಮಿಂಗ್ ಆ್ಯಪ್‌ನಲ್ಲಿ ಹಣ ಠೇವಣಿಯಿರಿಸಿದರೆ ಲಾಭ ಪಡೆಯಬಹುದೆಂದು ನಂಬಿಸಿ ಗೂಗಲ್ ಪೇ ಮೂಲಕ 1,16,000 ರೂಪಾಯಿ ಹಾಗೂ19,000 ರೂಪಾಯಿಯನ್ನು ಸ್ನೇಹಿತನ ಮೂಲಕ ನೇರವಾಗಿ ನೀಡಿರುವುದಾಗಿ ಯುವಕ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. 15,000 ರೂ. ಮೌಲ್ಯದ ಮೊಬೈಲ್ ಫೋನ್‌ನ್ನು ವ್ಯಕ್ತಿ ವಶಕ್ಕೆ ಪಡೆದುಕೊಂಡಿರುವುದಾಗಿಯೂ ಆರೋಪಿಸಲಾಗಿದೆ. ಹಣ ಹಾಗೂ ಮೊಬೈಲ್ ಫೋನ್ ನಷ್ಟಗೊಂಡಿರುವುದರಿಂದ ಮನನೊಂದು ಯುವಕ ಇಲಿವಿಷ ಸೇವಿಸಿ ಆತ್ಮಹತ್ಯೆಗೆತ್ತಿಸಿರುವುದಾಗಿ ಪೊಲೀಸರು ತಿಳಿಸಿದರು.



ಮಂಗಳೂರು ಕುದ್ರೋಳಿ ಶ್ರೀ ಭಗವತೀ ಕ್ಷೇತ್ರದಲ್ಲಿ ನಡಾವಳಿ ಉತ್ಸವದ ಪ್ರಯುಕ್ತ ಭಾನುವಾರ ಶ್ರೀ ಪುಲ್ಲೂರಾಳಿ ಭಗವತೀ ಮಾತೆಯ ಸನ್ನಿಧಿಯಲ್ಲಿ ವಿಶೇಷ ಪೂಜೆಗಳು ನೆರವೇರಿತು. ಕ್ಷೇತ್ರದ ಆಚಾರಪಟ್ಟವರು, ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಈ ಪುಣ್ಯಕಾರ್ಯದಲ್ಲಿ ಭಾಗವಹಿಸಿ ಸಂಭ್ರಮವನ್ನು ಕಣ್ತುಂಬಿಕೊಂಡರು.

ವಿದೇಶಿ ದೇಣಿಗೆ ಸ್ವೀಕರಿಸಿದ್ದಲ್ಲಿ ಮಸೂದೆ ರದ್ದಾಗದು: ರಾಜೀವ್ ಚಂದ್ರಶೇಖರ್

ತಿರುವನಂತಪುರ: ವಿದೇಶ ದೇಣಿಗೆ (ನಿಯಂತ್ರಣ) ತಿದ್ದುಪಡಿ ಮಸೂದೆ (ಎಫ್‌ಸಿಆರ್‌ಎ)ಯು ವಿದೇಶದಿಂದ ಪಡೆಯುವ ಹಣವನ್ನು ದುರುಪಯೋಗಪಡಿಸುವುದನ್ನು ಮಾತ್ರವೇ ಉದ್ದೇಶಿಸಲಾಗಿದೆ. ವಿದೇಶದಿಂದ ದೇಣಿಗೆ ಪಡೆದಲ್ಲಿ ಎಫ್‌ಸಿಆರ್‌ಎ ರದ್ದಾಗದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಸ್ಪಷ್ಟಪಡಿಸಿದ್ದಾರೆ.



ಎಫ್‌ಸಿಆರ್‌ಎ ಕ್ರೈಸ್ತ ವಿಭಾಗದವರ ಮೇಲೆ ಪ್ರತಿಕೂಲಕರ ಪರಿಣಾಮ ಬೀರಲಿದೆ ಎಂಬ ರೀತಿಯಲ್ಲಿ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ಪ್ರಚಾರ ನಡೆಸುತ್ತಿವೆ. ಎಫ್‌ಐಆರ್‌ಎ ಮೂಲಕ ಕೇವಲ ಒಂದು ಸಮುದಾಯ ಮಾತ್ರವಲ್ಲ ಹಿಂದೂ, ಕ್ರೈಸ್ತ , ಮುಸ್ಲಿಂ ಸಂಘಟನೆಗಳೂ ವಿದೇಶಗಳಿಂದ ದೇಣಿಗೆ ರೂಪದಲ್ಲಿ ಹಣ ಪಡೆಯುತ್ತಿವೆ. ಹೀಗೆ ಎಫ್ ಸಿಆರ್‌ಎ ಮರೆಯಲ್ಲಿ ಕಾಳಧನವನ್ನು ಬಿಳುಪುಗೊಳಿಸುವ ಯತ್ನಗಳನ್ನು ಕೆಲವರು ನಡೆಸುತ್ತಿದ್ದಾರೆ. ಅದನ್ನು ತಡೆಯುವ ಉದ್ದೇಶದಿಂದ ಮಾತ್ರವೇ ಎಫ್‌ಸಿಆರ್‌ಎ ಕಾನೂನು ತಿದ್ದುಪಡಿ ಮಸೂದೆ ತರಲು ಕೇಂದ್ರ ಸರಕಾರ ಉದ್ದೇಶಿಸಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷರು ಸ್ಪಷ್ಟಪಡಿಸಿದ್ದಾರೆ. ವಿದೇಶದಿಂದ ಭಾರತಕ್ಕೆ ಪ್ರವಹಿಸುವ ಹಣದ ಮೂಲವನ್ನು ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಎಫ್‌ಸಿಆರ್‌ಎ ಪ್ರಕಾರ ವಿದೇಶದಿಂದ ದೇಣಿಗೆ ಪಡೆದು ಅದನ್ನು ಕಾನೂನು ಪ್ರಕಾರ ಉಪಯೋಗಿಸದಿದ್ದಲ್ಲಿ ಅಂತಹ ಎಫ್‌ಸಿಆರ್‌ಎ ರದ್ದಾಗಲಿದೆ. ಹೀಗೆ ರದ್ದಾದಲ್ಲಿ ಅಂತಹ ಎಫ್‌ಸಿಆರ್‌ಎ ಮೂಲಕ ಲಭಿಸಿದ ಹಣದಿಂದ ಸಂಪಾದಿಸಿದ ಆಸ್ತಿಗಳು ಹಾಗೂ ಕಾಳಧನ ತಡೆ ಕಾನೂನಿನ ವ್ಯಾಪ್ತಿಯೊಳಗೆ ಬರಲಿದೆ. ಕಾಳಧನವನ್ನು ಬಿಳುಪುಗೊಳಿಸುವಿಕೆ ಮತ್ತು ಭಯೋತ್ಪಾದನೆ ಪರಸ್ಪರ ನಂಟು ಹೊಂದಿದೆ. ಅದನ್ನು ತಡೆಗಟ್ಟುವುದು ತಿದ್ದುಪಡಿ ಕಾನೂನಿನ ಪ್ರಧಾನ ಉದ್ದೇಶವಾಗಿದೆ. ಎಫ್‌ಸಿಆರ್‌ಎ ಮೂಲಕ ದೇವಸ್ಥಾನಗಳು, ಮಸೀದಿಗಳು ಹಾಗೂ ಕ್ರೈಸ್ತ ಸಂಘಟನೆಗಳೂ ವಿದೇಶಗಳಿಂದ ದೇಣಿಗೆ ರೂಪದಲ್ಲಿ ಹಣ ಪಡೆಯುತ್ತಿವೆ. ಹೀಗೆ ಪಡೆಯುವ ಹಣವನ್ನು ಅವುಗಳು ಕಾನೂನು ಪರವಾಗಿಯೇ ಉಪಯೋಗಿಸಲಾಗುತ್ತಿದೆ. ಇದೆಲ್ಲವನ್ನು ತಿಳಿದಿದ್ದರೂ ಕಾಂಗ್ರೆಸ್ಸಿಗರು ಎಫ್ ಸಿಆರ್‌ಎ ವಿಷಯದಲ್ಲಿ ಜನರಲ್ಲಿ ತಪ್ಪು ಭಾವನೆ ಮೂಡಿಸುತ್ತಿದ್ದಾರೆಂದು ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

ನಾಳೆ ಹಿರಿಯಡ್ಕದಲ್ಲಿ ಅತ್ಯಾಧುನಿಕ ಶ್ಯಾಮಿಲಿ ಸ್ಪಿಂಗ್ಸ್ ಲೋಕಾರ್ಪಣೆ

ಇಲ್ಲಿದೆ 'ರಾಯಲ್' ಸೌಲಭ್ಯ!

ಉಡುಪಿ: ಹಿರಿಯಡ್ಕ ರಾಷ್ಟ್ರೀಯ ಹೆದ್ದಾರಿ ಸನಿಹದಲ್ಲಿ, ಸುಮಾರು 5 ಎಕರೆ ವಿಶಾಲ ಪ್ರದೇಶದಲ್ಲಿ ತಲೆ ಎತ್ತಿರುವ ಅತ್ಯಾಧುನಿಕ ಸೌಕರ್ಯಗಳನ್ನೊಳಗೊಂಡ ಸುಸಜ್ಜಿತ ಹಾಗೂ ಸಂಪೂರ್ಣ ಹವಾನಿಯಂತ್ರಿತ ಕೋಸ್ಟಲ್ ವುಡ್ ರೆಸಾರ್ಟ್ಸ್ ಉಡುಪಿಯ ಸಹಸಂಸ್ಥೆ 'ಶ್ಯಾಮಿಲಿ ಸ್ಪ್ರಿಂಗ್ಸ್' ಏ.7ರಂದು ಲೋಕಾರ್ಪಣೆಯಾಗಲಿದೆ.

ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ಕನ್ವೆನ್ಷನ್ ಸೆಂಟರ್‌ಗಳು ಸಾಮಾನ್ಯ ಜನರಿಗೂ ಕೈಗೆಟುಕುವ ದರದಲ್ಲಿ ಲಭ್ಯವಾಗಬೇಕೆನ್ನುವ ನಿಟ್ಟಿನಲ್ಲಿ ನಾಡೋಜ ಡಾ. ಜಿ. ಶಂಕರ್ ಅವರ ಕನಸಿನ ಯೋಜನೆಯಾಗಿ ಈ ಶ್ಯಾಮಿಲಿ ಸ್ಪ್ರಿಂಗ್ಸ್ ನಿರ್ಮಾಣಗೊಂಡಿದೆ. ಮದುವೆ, ಸೀಮಂತ, ಸಭೆ-ಸಮಾರಂಭಗಳು ಮಾತ್ರವಲ್ಲದೆ ಕಾರ್ಪೋರೇಟ್ ವಲಯದ ಮೀಟಿಂಗ್ ಹಾಗೂ ಪಾರ್ಟಿಗಳಿಗೂ ಅತ್ಯಂತ ಅನುಕೂಲವಾಗುವ ನಿಟ್ಟಿನಲ್ಲಿ ಈ ಬೃಹತ್ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗಿದೆ.

ವಿಶಾಲ ಭೂ ಪ್ರದೇಶದಲ್ಲಿ ಪಾರ್ಕಿಂಗ್, ಮಕ್ಕಳ ಆಟದ ಮೈದಾನ ಹಾಗೂ ತೆರೆದ ಸಭಾಂಗಣಗಳನ್ನು ಒಳಗೊಂಡಿರುವ ಶ್ಯಾಮಿಲಿ ಸ್ಪ್ರಿಂಗ್ಸ್ ನೋಡುಗರಿಗೆ ರಾಯಲ್ ಲುಕ್ ನೀಡುತ್ತಿದ್ದು, ಆಕರ್ಷಣೀಯ ಸ್ಥಳವಾಗಿ ಮೂಡಿಬಂದಿದೆ. ಸಂಪೂರ್ಣ ಹವಾನಿಯಂತ್ರಿತ ಹಾಗೂ ಸುಮಾರು 1,000 ಮಂದಿ ಆಸೀನರಾಗುವುದಕ್ಕೆ ಬೇಕಾದ ವ್ಯವಸ್ಥೆವುಳ್ಳ 'ಶಾಶ್ವಿಕ ಕನ್ವೆನ್ಷನ್ ಸೆಂಟರ್' ಮತ್ತು ಊಟಕ್ಕೆ ಪ್ರತ್ಯೇಕವಾಗಿರುವ 'ಶನಾಯ ಗ್ರಾಂಡ್ ಹಾಲ್'ಗಳು ಇಲ್ಲಿನ ಪ್ರಮುಖ ಆಕರ್ಷಣೆಯಾಗಿದೆ.

ವಿಶೇಷವಾಗಿ ಸಸ್ಯಾಹಾರಿ ಹಾಗೂ ಮಾಂಸಾಹಾರಿಗಳಿಗೆ ಪ್ರತ್ಯೇಕ ಅಡುಗೆ ಕೋಣೆಗಳ ಸೌಲಭ್ಯವನ್ನು ಇಲ್ಲಿ ಕಲ್ಪಿಸಲಾಗಿದೆ. ಸಭಾಂಗಣದ ಸನಿಹದಲ್ಲೇ ಅನುಗ್ರಹದಾತ ಶ್ರೀ ಪ್ರಸನ್ನ ಗಣಪತಿ ಮಂದಿರವಿರುವುದು ಭಕ್ತಾದಿಗಳಿಗೆ ಮತ್ತಷ್ಟು ಅನುಕೂಲಕರವಾಗಿದೆ.



ಸಭೆ ಸಮಾರಂಭಗಳಿಗೆ ಪೂರಕ ವಾತಾವರಣ

ಮೆಹಂದಿ, ಹಳದಿ ಹಾಗೂ ಸೈಟ್ ಪಾರ್ಟಿಗಳಿಗೆ ಗ್ರಾಂಡ್ ಲುಕ್ ನೀಡುವ ಉದ್ದೇಶದಿಂದ 'ಶ್ಯಾಮಿಲಿ ಗ್ರೀನ್ಸ್ ಓಪನ್ ಗಾರ್ಡನ್' ಸಭಾಂಗಣವನ್ನು ಇಲ್ಲಿ ನಿರ್ಮಿಸಲಾಗಿದೆ. ಈ ಓಪನ್ ಗಾರ್ಡನ್ ಅತ್ಯಂತ ವಿಶಾಲವಾಗಿದ್ದು, ಗ್ರಾಹಕರು ಇಚ್ಛಿಸುವ ಮಾದರಿಯಲ್ಲಿ ಸಮಾರಂಭಗಳನ್ನು ನಡೆಸಲು ಪೂರಕವಾಗಿದೆ. ಕೇವಲ ಸಭಾಂಗಣಕ್ಕಷ್ಟೇ ಸೀಮಿತವಾಗದೆ, ಇಲ್ಲಿ 30 ಎಸಿ ಡಿಲಕ್ಸ್ ರೂಮ್‌ಗಳು ಹಾಗೂ 2 ಪ್ರತ್ಯೇಕ ವಿಲ್ಲಾಗಳ ವ್ಯವಸ್ಥೆ ಇರುವುದರಿಂದ ದೂರದ ಊರಿನಿಂದ ಆಗಮಿಸುವ ಅತಿಥಿಗಳು ಮದುವೆ ಸಮಾರಂಭ ಮುಗಿಸಿ ಉಳಿದುಕೊಳ್ಳಲು ಅತ್ಯಂತ ಸುಲಭವಾಗಲಿದೆ. 300ಕ್ಕೂ ಅಧಿಕ ಕಾರುಗಳ ನಿಲುಗಡೆಗೆ ವಿಶಾಲ ಪಾರ್ಕಿಂಗ್ ವ್ಯವಸ್ಥೆ, ಸ್ವಿಮ್ಮಿಂಗ್ ಪೂಲ್, ರಿಕ್ರಿಯೇಶನ್ ಕ್ಲಬ್, ಜಿಮ್ ಹಾಗೂ ಫ್ಯಾಮಿಲಿ ರೆಸ್ಟೋರೆಂಟ್ ಸೌಲಭ್ಯಗಳನ್ನು ಇದು ಒಳಗೊಂಡಿದೆ. ಗತವೈಭವವನ್ನು ನೆನಪಿಸುವಂತೆ ಕರಕುಶಲ ಕರ್ಮಿಗಳಿಂದ ಕೆತ್ತಲ್ಪಟ್ಟ ಆತ್ಯಾಕರ್ಷಕ ಪ್ರವೇಶ ದ್ವಾರವು ಈ ರೆಸಾರ್ಟ್‌ನ ಮೆರುಗನ್ನು ಹೆಚ್ಚಿಸಿದೆ. ಜನಸಾಮಾನ್ಯರ ಬಜೆಟ್‌ಗೆ ತಕ್ಕಂತೆ ಬಾಡಿಗೆ ದರವನ್ನು ನಿಗದಿಪಡಿಸಲಾಗಿದ್ದು, ಈಗಾಗಲೇ ಬುಕ್ಕಿಂಗ್ ಆರಂಭಗೊಂಡಿದೆ.

ಕಾಡಿನಲ್ಲೇ ಪತ್ತೆಯಾದರು ಶರಣ್ಯ ನಾಲ್ಕು ದಿನಗಳ ಚಾರಣ ಪ್ರಕರಣ ಈಗ ಸುಖಾಂತ್ಯ

ಮಡಿಕೇರಿ: ಕಕ್ಕಬ್ಬೆಯ ತಡಿಯಂಡಮೋಳ್ ಬೆಟ್ಟಕ್ಕೆ ಚಾರಣಕ್ಕೆ ತೆರಳಿದ್ದ ಕೇರಳದ ಕೊಯಿಕ್ಕೋಡು ನಾದಾಪುರಂ ನಿವಾಸಿ ಶರಣ್ಯ (36) ನಾಪತ್ತೆ ಪ್ರಕರಣ ಇದೀಗ ಸುಖಾಂತ್ಯ ಕಂಡಿದೆ.

ಭಾನುವಾರ ಸ್ಥಳೀಯ ಕುಡಿಯ ಸಮುದಾಯದ ತಂಡ ನಡೆಸಿದ ಶೋಧ ಕಾರ್ಯ ಸಂದರ್ಭ ಆಕೆ ಪತ್ತೆಯಾಗಿದ್ದು, ಸತತ ನಾಲ್ಕು ದಿನಗಳ ಶೋಧ ಕಾರ್ಯ ಫಲ ನೀಡಿದೆ. ಕೊಡಗಿಗೆ ಒಂಟಿಯಾಗಿ ಆಗಮಿಸಿ ಕಕ್ಕಬ್ಬೆಯ ಹೋಂಸ್ಟೇ ಯೊಂದರಲ್ಲಿ ವಾಸ್ತವ್ಯ ಹೂಡಿದ್ದ ಶರಣ್ಯ, ಏ.2ರಂದು ಅಲ್ಲಿನ ತಡಿಯಂಡಮೋಳ್ ಬೆಟ್ಟಕ್ಕೆ ಚಾರಣ ತೆರಳಿ ಬಳಿಕ ನಾಪತ್ತೆಯಾಗಿದ್ದರು.



ಆಕೆಯ ಪತ್ತೆಗಾಗಿ ಕಳೆದ ಮೂರು ದಿನಗಳಿಂದ ಸ್ಥಳೀಯರು, ಪೊಲೀಸ್, ಅರಣ್ಯ ಇಲಾಖೆ, ಶ್ವಾನದಳ, ಥರ್ಮಲ್ ಹಾಗೂ ಸಾಮಾನ್ಯ ಡ್ರೋಣ್ ಬಳಸಿ ಶೋಧ ಕಾರ್ಯಾಚರಣೆ ನಡೆಸಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಭಾನುವಾರ ನಕ್ಸಲ್ ನಿಗ್ರಹ ಪಡೆಯ ಎರಡು ತಂಡ, ವಿವಿಧ ವಲಯಗಳ ಐದು ಅರಣ್ಯ ಇಲಾಖೆ ಸಿಬ್ಬಂದಿಗಳ ತಂಡ, ಸ್ಥಳೀಯ ಆದಿವಾಸಿ ಜನಾಂಗದ 15 ಮಂದಿಯ ತಂಡ ಶೋಧ ನಡೆಸಿದ್ದು, ಸಂಜೆ ವೇಳೆಗೆ ಅಲ್ಲಿನ ಕುಡಿಯ ಸಮುದಾಯದ ತಂಡಕ್ಕೆ ಕಾಡಿನೊಳಗೆ ಶರಣ್ಯ ಕಂಡು ಬಂದಿದ್ದಾಳೆ. ಶನಿವಾರ ಕುಡಿಯ ಸಮುದಾಯದ ಹಿರಿಯರು ಶರಣ್ಯ ಜೀವಂತವಾಗಿ, ಸುರಕ್ಷಿತವಾಗಿ ಪತ್ತೆಯಾಗುವಂತಾಗಲಿ ಎಂದು ತಮ್ಮ ಕುಲ ದೇವರಿಗೆ ವಿಶೇಷ ಪೂಜೆ ಸಲ್ಲಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಶರಣ್ಯ ಪತ್ತೆಗಾಗಿ 4 ದಿನಗಳಿಂದ ಅವಿರತ ಶ್ರಮಿಸಿದ ಪೊಲೀಸ್, ಅರಣ್ಯ ಇಲಾಖೆ, ಗ್ರಾಮಸ್ಥರು ಮತ್ತು ಆಧುನಿಕ ಉಪಕರಣ ನೀಡಿದ ರಾಜ್ಯ ಸರ್ಕಾರಕ್ಕೆ ವೀರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಕೃತಜ್ಞತೆ ಸಲ್ಲಿಸುವುದರೊಂದಿಗೆ ಆಕೆಯ ಆರೋಗ್ಯ ವಿಚಾರಿಸಿದ್ದಾರೆ.

ಸುಸ್ತಾಗಿಲ್ಲ!?

ಕಾಡಿನಲ್ಲಿ ದಾರಿ ತಪ್ಪಿದ ಪರಿಣಾಮ ಹಾಗೂ ಮೊಬೈಲ್ ಬ್ಯಾಟರಿ ಚಾರ್ಜ್ ಇಲ್ಲದ್ದರಿಂದ ಮೊಬೈಲ್ ಸಂಪರ್ಕ ಸಾಧ್ಯವಾಗದೆ ಆಕೆ ಕಾಡಿನಲ್ಲೇ ಸಿಲುಕುವಂತಾಗಿತ್ತು ಎನ್ನಲಾಗಿದೆ. ಆಕೆಯನ್ನು ಪೊಲೀಸರು ಹಾಗೂ ಸ್ಥಳೀಯರು ಕಾಡಿನೊಳಗಿಂದ ಕರೆತರುತ್ತಿರುವುದಾಗಿ ಮಾಹಿತಿ ಲಭ್ಯವಾಗಿದೆ. ಕಳೆದ ನಾಲ್ಕು ದಿನಗಳಿಂದ ಕಾಡಿನೊಳಗೆ ಸಿಲುಕಿಕೊಂಡಿದ್ದರೂ, ಆಕೆ ನಿತ್ರಾಣಗೊಳ್ಳದೆ ಪತ್ತೆಯಾಗಿರುವುದು ಸಂಶಯಗಳಿಗೆ ಎಡೆ ಮಾಡಿದೆ.

ಬಿಜೈ ವಾರ್ಡ್‌ನಲ್ಲಿ ನೀರಿನ ಕೊರತೆ ಇಲ್ಲ | ರಾಜಕಾಲುವೆಯಲ್ಲಿ ಒಳಚರಂಡಿ ನೀರು

ಡ್ರೈನೇಜ್ ಸಮಸ್ಯೆಯ ಜೊತೆಗೆ ಇಲ್ಲಿದೆ ಕೃತಕ ನೆರೆ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಬೇಸಿಗೆಯಲ್ಲಿ ರಾಜಕಾಲುವೆಯಲ್ಲಿ ಹರಿಯುವ ಒಳಚರಂಡಿ ನೀರಿನ ಸಮಸ್ಯೆ... ಮಳೆಗಾಲದಲ್ಲಿ ಕೃತಕ ನೆರೆಯ ಬರೆ... ಇದು ಬಿಜೈ ವಾರ್ಡ್‌ನ ಜನತೆಯ ಗೋಳು.

ಬಿಜೈ ವಾರ್ಡ್‌ನಲ್ಲಿ ನೀರಿನ ಕೊರತೆ ಅಷ್ಟಾಗಿ ಇಲ್ಲ. ಆದರೆ, ಡ್ರೈನೇಜ್ ಸಮಸ್ಯೆ ಹಾಗೂ ಮಳೆಗಾಲದಲ್ಲಿ ಕೃತಕ ನೆರೆಯಿಂದ ಇಲ್ಲಿನ ನಾಗರಿಕರು ಭಾರಿ ತೊಂದರೆ ಅನುಭವಿಸುತ್ತಿದ್ದಾರೆ. ಕೃತಕ ನೆರೆ ಬಗ್ಗೆ ಮಂಗಳೂರು ಮಹಾನಗರ ಪಾಲಿಕೆಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪರಿಣಾಮ ಶೂನ್ಯ ಎಂಬುದು ಇಲ್ಲಿನ ಜನತೆಯ ನೋವು.

ಬಿಜೈ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮುಂಭಾಗದಿಂದ ಕುಂಟಿಕಾನ ಜಂಕ್ಷನ್, ಸಿಸ್ಟರ್ಸ್ ಕಾನ್ವೆಂಟ್, ಎಜೆ ಆಸ್ಪತ್ರೆ, ಬಿಜೈ, ಬಿಜೈ ನ್ಯೂರೋಡ್, ಆನೆಗುಂಡಿ ಪ್ರದೇಶಗಳನ್ನು ಒಳಗೊಂಡಿರುವ ಬಿಜೈ ವಾರ್ಡ್ ಅತ್ಯಂತ ಹೆಚ್ಚು ಜನವಸತಿ ಪ್ರದೇಶಗಳನ್ನು ಒಳಗೊಂಡಿದೆ.

ಈ ವಾರ್ಡ್‌ಗೆ ಸರ್ಕೀಟ್ ಹೌಸ್ ಬಳಿಯ ಟ್ಯಾಂಕ್‌ನಿಂದ ನೀರು ಪೂರೈಕೆ ಆಗುತ್ತಿದೆ. ಬೆಳಗ್ಗೆ 7ರಿಂದ 9 ಹಾಗೂ ಸಂಜೆ ವೇಳೆ ನೀರು ಸರಬರಾಜು ಮಾಡಲಾಗುತ್ತಿದೆ. ಪ್ರತಿದಿನ ನೀರು ಬರುತ್ತಿದೆ. ಆದರೆ, ಬಿಜೈ ಮ್ಯೂಸಿಯಂ, ಬಟ್ಟಗುಡ್ಡ ಪ್ರದೇಶಗಳು ಎತ್ತರದ ಸ್ಥಳಗಳಾಗಿರುವ ಕಾರಣ ಇಲ್ಲಿ ಕೆಲವೊಮ್ಮೆ ನೀರಿನ ಕೊರತೆ ಕಾಣಿಸಿಕೊಳ್ಳುತ್ತವೆ. ನೀರು ಪೂರೈಕೆಯಲ್ಲಿಪ್ರೆಶರ್ ಕೊರತೆಯಿಂದ ಇಲ್ಲಿಗೆಸಮರ್ಪಕವಾಗಿ ನೀರು ತಲುಪುತ್ತಿಲ್ಲ ಎಂಬ ದೂರುಗಳಿವೆ. ಬಿಜೈನ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ500ಕ್ಕೂಅಧಿಕಮನೆಗಳಿದ್ದು, ಇಲ್ಲಿನ ಪಾಲಿಕೆ ನೀರು ಸಾಕಾಗುತ್ತಿಲ್ಲ. ಇಲ್ಲಿ ಖಾಸಗಿ ಟ್ಯಾಂಕರ್‌ಗಳ ಮೂಲಕ ನೀರು ಪಡೆಯಲಾಗುತ್ತಿದೆ.

ಜಲಸಿರಿ ಯೋಜನೆ ಅರೆಬರೆ

ಜಲಸಿರಿ ಯೋಜನೆ ಕಾಮಗಾರಿ ಈ ವಾರ್ಡ್‌ನಲ್ಲೂ ಅರೆಬರೆ ಮಾತ್ರ ಆಗಿದೆ. ಅಲ್ಲಲ್ಲಿ ಅಗೆದು ಬಿಡಲಾಗಿದೆ. ಪೈಪ್‌ಲೈನ್ ಕೆಲಸ ಪೂರ್ಣಗೊಳಿಸಿಲ್ಲ. ಒಂದು ಕಡೆ ಅಗೆದು ಕಾಮಗಾರಿ ಪೂರ್ಣಗೊಳಿಸದೇ ಇನ್ನೊಂದು ಕಡೆಯಲ್ಲಿ ಕೆಲಸ ಪ್ರಾರಂಭಿಸಲಾಗುತ್ತಿದೆ ಎನ್ನುತ್ತಾರೆ ಇಲ್ಲಿನ ನಿವಾಸಿಗಳು.

ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್



ಬಿಜೈ ನ್ಯೂರೋಡ್‌ನ ಐದನೇ ಕ್ರಾಸ್‌ನಲ್ಲಿ ಒಳಚರಂಡಿ ಕಾಮಗಾರಿ ನಡೆಸಲಾಗುತ್ತಿದೆ

ಕೃತಕ ನೆರೆ ಅವಾಂತರ

ಬಿಜೈ ಆನೆಗುಂಡಿ, ಬಿಜೈ ನ್ಯೂರೋಡ್ 7ನೇ ಕ್ರಾಸ್ ಸುತ್ತಲಿನ ಪ್ರದೇಶದಲ್ಲಿ ಮಳೆಗಾಲದಲ್ಲಿ ಕೃತಕ ನೆರೆ ಬಾಧಿಸುತ್ತದೆ. ಒಂದೆರಡು ಗಂಟೆ ಜೋರಾಗಿ ಮಳೆ ಬಂದರೆ ತೋಡು ಉಕ್ಕೇರಿ ಮನೆಗಳ ಸುತ್ತಲೂ ನೀರು ನಿಲ್ಲುತ್ತದೆ. ಕೆಲವಡೆ ಮನೆಯೊಳಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗುತ್ತದೆ. ತೋಡು, ರಾಜಕಾಲುವೆಗಳ ಹೂಳನ್ನು ಸಮರ್ಪಕವಾಗಿ ತೆಗೆಯುವ ಮೂಲಕ ಕೃತಕ ನೆರೆ ಬಾರದಂತೆ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಬಾವಿ ನೀರು ಕಲುಷಿತ

ಮಂಗಳೂರು ಮಹಾನಗರ ಪಾಲಿಕೆಯ ಟ್ಯಾಂಕರ್ ಮೂಲಕ ನೀರು ಒದಗಿಸುವ ಅವಶ್ಯಕತೆ ಈ ವಾರ್ಡ್‌ನಲ್ಲಿ ಕಾಣಿಸಿಕೊಂಡಿಲ್ಲ. ಈ ವಾರ್ಡ್‌ನಲ್ಲಿ ಸರಕಾರಿ ಬಾವಿಗಳಿಲ್ಲ. ಬೋರ್‌ವೆಲ್ ಮೂಲಕವೂ ನೀರು ಪೂರೈಕೆ ಇಲ್ಲ. ಆನೆಗುಂಡಿ, ಬಿಜೈ ಪರಿಸರದ ಕೆಲ ಮನೆಗಳಲ್ಲಿ ಬಾವಿಗಳಿದ್ದು, ನೀರಿನ ಕೊರತೆ ಉಂಟಾದರೆ ಜನರು ಬಾವಿ ನೀರು ಆಶ್ರಯಿಸುತ್ತಿದ್ದಾರೆ. ಆದರೆ, ಕೆಲವೆಡೆ ಒಳಚರಂಡಿ ಸೋರಿಕೆಯಿಂದ ಬಾವಿ ನೀರು ಕಲುಷಿತಗೊಂಡಿದೆ. ಆನೆಗುಂಡಿ ಪ್ರದೇಶ ಸಹಿತ ಇಲ್ಲಿನ ಸ್ಥಳಗಳು ಹಿಂದೆ ಗದ್ದೆಗಳಾಗಿದ್ದವು. ಗದ್ದೆ ಇದ್ದಲ್ಲಿ ಮನೆ ನಿರ್ಮಿಸಿದ ಕಾರಣ ಡ್ರೈನೇಜ್ ನೀರು ಸೋರಿಕೆಯಾಗಿ ಬಾವಿ ನೀರು ಹಾಳಾಗಿದೆ ಎನ್ನುತ್ತಾರೆ ಸ್ಥಳೀಯರು.

ರಾಜಕಾಲುವೆಯಲ್ಲಿ ಡ್ರೈನೇಜ್ ನೀರು

ಬಿಜೈ ವಾರ್ಡ್‌ನ ಆನೆಗುಂಡಿ, ಪಾಯಸ್ ಕಂಪೌಂಡ್ ಪ್ರದೇಶಗಳಲ್ಲಿ ಡ್ರೈನೇಜ್ ಸಮಸ್ಯೆಯಿದ್ದು, ಜನರು ಸಮಸ್ಯೆ ಅನುಭವಿಸುತ್ತಿದ್ದಾರೆ. ಮಳೆ ನೀರು ಹರಿಯುವ ತೋಡುಗಳಲ್ಲಿ ಇಲ್ಲಿ ಡ್ರೈನೇಜ್ ನೀರು ಹರಿಯುತ್ತಿದೆ. ಮಂಗಳೂರಿನಂತಹ ನಗರದ ಮಧ್ಯೆ ತೆರೆದ ಪ್ರದೇಶದಲ್ಲಿ ಒಳಚರಂಡಿ ನೀರು ಹರಿದು ಹೋಗುತ್ತಿದೆ. ಇಲ್ಲಿಂದ ಹರಿಯುವ ಒಳಚರಂಡಿ ನೀರು ಬಿಜೈ, ಭಾರತಿನಗರ ಮೂಲಕ ಹಾದುಹೋಗುವ ರಾಜಕಾಲುವೆ ಮೂಲಕ ಸಾಗುತ್ತಿದೆ. ಡ್ರೈನೇಜ್‌ನಿಂದ ಸೊಳ್ಳೆಕಾಟ ಹಾಗೂ ವಾಸನೆ ಈ ಪರಿಸರದಲ್ಲಿ ಸಾಮಾನ್ಯ ಎಂಬಂತಾಗಿದೆ. ಈ ಸಮಸ್ಯೆಗೆ ಮಂಗಳೂರು ಮಹಾನಗರ ಪಾಲಿಕೆ ಮುಕ್ತಿ ನೀಡಬೇಕು ಎಂಬುದು ಸ್ಥಳೀಯ ನಾಗರಿಕರ ಆಗ್ರಹ.

ಬೀದಿ ನಾಯಿ ಕಾಟ

ಬಿಜೈ, ಬಿಜೈ ನ್ಯೂರೋಡ್ ಪರಿಸರದಲ್ಲಿ ಬೀದಿ ನಾಯಿಗಳ ಕಾಟ ಜೋರಾಗಿದೆ. ರಸ್ತೆ ಬದಿಗಳಲ್ಲಿ ಕಸ ಎಸೆಯಲಾಗುತ್ತಿದ್ದು, ಈ ಕಸವನ್ನು ಬೀದಿನಾಯಿಗಳು ಮನೆಮುಂದೆ ತಂದು ಹಾಕುತ್ತವೆ. ಬೀದಿನಾಯಿಗಳನ್ನು ಇಲ್ಲಿಂದ ಸ್ಥಳಾಂತರ ಮಾಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.





"ಬಿಜೈ ವಾರ್ಡ್‌ನ ಒಳಚರಂಡಿ ಸಮಸ್ಯೆ ಬಗೆಹರಿಸಲು 7.5 ಕೋಟಿ ರೂ. ವೆಚ್ಚದಲ್ಲಿ ಯೋಜನೆ ಸಿದ್ಧಗೊಂಡಿದ್ದು, ಟೆಂಡರ್ ಪ್ರಕ್ರಿಯೆ ನಡೆದಿದೆ. ತಾಂತ್ರಿಕ ಕಾರಣದಿಂದ ಕಾಮಗಾರಿ ವಿಳಂಬವಾಗಿದೆ. ಕುಂಟಿಕಾನ ಜಂಕ್ಷನ್‌ನಿಂದ ಕೊಡಿಯಾಲಗುತ್ತು ವೆಟ್‌ವೆಲ್‌ವರೆಗೆ ಒಳಚರಂಡಿ ಪೈಪ್‌ಲೈನ್ ನಿರ್ಮಾಣವಾಗಲಿದೆ. ಈ ಕಾಮಗಾರಿ ಪೂರ್ಣಗೊಂಡರೆ ಇಲ್ಲಿನ ಡ್ರೈನೇಜ್ ಸಮಸ್ಯೆ ಪರಿಹಾರವಾಗಲಿದೆ. ಮಳೆಗಾಲದಲ್ಲಿ ಆನೆಗುಂಡಿ ಪರಿಸರದಲ್ಲಿ 20ಕ್ಕೂ ಅಧಿಕ ಮನೆಗಳು ಕೃತಕ ನೆರೆಯಿಂದ ಸಂಕಷ್ಟಕ್ಕೆ ಒಳಗಾಗುತ್ತಿವೆ. ಎಂಜಿ ರೋಡ್‌ನ ಬಲ್ಲಾಲ್‌ಬಾಗ್ ಬಳಿ ಹೊಸ ಸೇತುವೆ ನಿರ್ಮಾಣಗೊಂಡರೆ ರಾಜಕಾಲುವೆಯಲ್ಲಿ ನೀರು ಸರಾಗವಾಗಿ ಹರಿದು ಕೃತಕ ನೆರೆ ಸಮಸ್ಯೆ ಪರಿಹಾರಗೊಳ್ಳಲಿದೆ.

■ ಲ್ಯಾನ್ಸಲೋಟ್ ಪಿಂಟೊ, ಬಿಜೈ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್



"ಮಳೆಗಾಲ ಬಂತೆಂದರೆ ಎಲ್ಲಿ ಮನೆಯೊಳಗೆ ನೀರು ನುಗ್ಗುತ್ತದೆಯೋ ಎಂದು ನಮಗೆ ನಡುಕ ಶುರುವಾಗುತ್ತದೆ. ಕೃತಕ ನೆರೆ ನೀರಿನಿಂದ ಮನೆಯ ಅಂಗಳ ತುಂಬುತ್ತದೆ. ವಾಹನಗಳು ಕೆಟ್ಟು ಹೋಗುತ್ತವೆ. ಕಳೆದ ಹಲವಾರು ವರ್ಷಗಳಿಂದ ಈ ಸಮಸ್ಯೆಯಿದ್ದು, ಕೃತಕ ನೆರೆ ಬಾಧೆ ತಡೆಯಲು ಯಾರೊಬ್ಬರೂ ಕ್ರಮ ಕೈಗೊಳ್ಳುತ್ತಿಲ್ಲ. ಬಿಜೈ ನ್ಯೂರೋಡ್, ಸೋಡು ಲೇನ್ ಪರಿಸರದಲ್ಲಿ ಕೃತಕ ನೆರೆ ಸಾಮಾನ್ಯವಾಗಿದೆ. ಈ ಸಮಸ್ಯೆಗೆ ಬೇಸತ್ತು ಸ್ಥಳೀಯರೊಬ್ಬರು ಜಾಗ, ಮನೆ ಮಾರಿ ಬೇರೆಡೆಗೆ ತೆರಳಿದ್ದಾರೆ. ಬೇಸಗೆಯಲ್ಲಿ ಇಲ್ಲಿನ ತೋಡುಗಳಿಗೆ ಕಸ ಹಾಕಲಾಗುತ್ತಿದೆ. ಮಳೆಗಾಲಕ್ಕೆ ಮುನ್ನ ಅದನ್ನು ಕ್ಲೀನ್ ಮಾಡುವುದಿಲ್ಲ, ತೋಡುಗಳ ಹೂಳು ತೆಗೆಯುವುದಿಲ್ಲ. ಇದರಿಂದಾಗಿ ಮಳೆ ಬಂದಾಗ ತೋಡು ಬ್ಲಾಕ್ ಆಗುತ್ತಿದೆ. ಈ ಬಾರಿಯಾದರೂ ಮನಪಾ ಅಧಿಕಾರಿಗಳು ಸಮರ್ಪಕ ಕೆಲಸ ನಡೆಸಿ, ಕೃತಕ ನೆರೆ ಸೃಷ್ಟಿಯಾಗದಂತೆ ಕ್ರಮ ಕೈಗೊಳ್ಳಬೇಕು.

■ ಕಾತ್ಯಾಯಿನಿ ರಾವ್, ಬಿಜೈ ನ್ಯೂರೋಡ್ ಏಳನೇ ಕ್ರಾಸ್ ನಿವಾಸಿ

ನಾಳೆ ವಾರ್ಡ್ -32
ಕದ್ರಿ ಉತ್ತರ ಪರಿಸರದ ಸ್ಥಿತಿಗತಿ

ಪ್ರಸವಪೂರ್ವ ಲಿಂಗ ಪತ್ತೆ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ

ಮಡಿಕೇರಿ: ಪ್ರಸವ ಪೂರ್ವ ಲಿಂಗ ಪತ್ತೆ ಶಿಕ್ಷಾರ್ಹ ಅಪರಾಧವಾಗಿದ್ದು, ಈ ಸಂಬಂಧ ದೂರುಗಳು ಕೇಳಿ ಬಂದಲ್ಲಿ ನಿಯಮಾನುಸಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಂ. ಸತೀಶ್ ಕುಮಾರ್ ಅವರು ಎಚ್ಚರಿಸಿದ್ದಾರೆ.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅವರ ಕಚೇರಿಯಲ್ಲಿ ನಡೆದ ಪಿಸಿ ಮತ್ತು ಪಿಎನ್‌ಡಿಟಿ ಸಲಹಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಈ ಸಂದರ್ಭ ಮಾತನಾಡಿದ ಜಿಲ್ಲಾ ಎನ್‌ಫೋರ್ಸ್‌ಮೆಂಟ್ ಅಧಿಕಾರಿ ಡಾ.ಎನ್.ಆನಂದ್ ಅವರು ಜಿಲ್ಲೆಯಲ್ಲಿ 28 ಸ್ಕ್ಯಾನಿಂಗ್ ಕೇಂದ್ರಗಳಿದ್ದು, ಆಗಾಗ ಭೇಟಿ ನೀಡಿ ತಪಾಸಣೆ ನಡೆಸಲಾಗುತ್ತದೆ. ಹೊಸದಾಗಿ ಸ್ಕ್ಯಾನಿಂಗ್ ಕೇಂದ್ರ ಆರಂಭಿಸಲು ಎರಡು ಅರ್ಜಿಗಳು ಸಲ್ಲಿಕೆಯಾಗಿದ್ದು, ಈ ಬಗ್ಗೆ ಖುದ್ದು ಭೇಟಿ ನೀಡಿ ಪರಿಶೀಲಿಸಲಾಗಿದೆ ಎಂದು ಹೇಳಿದರು. ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞ ಡಾ. ಸೋಮಶೇಖರ್ ಮಾತನಾಡಿ, ಸ್ಕ್ಯಾನಿಂಗ್ ಕೇಂದ್ರಗಳಿಗೆ ಆಗಾಗ ದಿಢೀರ್ ಭೇಟಿ ನೀಡಿ ತಪಾಸಣೆ ಕೈಗೊಳ್ಳಬೇಕು. ತಾಯಿ ಆರೋಗ್ಯ ಮತ್ತು ಶಿಶುವಿನ ಬೆಳವಣಿಗೆ ಸಂಬಂಧ ತಜ್ಞ ವೈದ್ಯರೇ ಸ್ಕ್ಯಾನಿಂಗ್ ಮಾಡಬೇಕು. ಈ ಬಗ್ಗೆ ಸಾರ್ವಜನಿಕರು ಎಚ್ಚರವಹಿಸಬೇಕು ಎಂದು ಸಲಹೆ ಮಾಡಿದರು. ಸ್ಕ್ಯಾನಿಂಗ್ ಕೇಂದ್ರಕ್ಕೆ ಬರುವವರ ಹೆಸರು, ವಿಳಾಸ ಮತ್ತು ಸಮಯ ಎಲ್ಲವನ್ನೂ ನಿಖರವಾಗಿ ದಾಖಲಿಸಬೇಕು. ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಂಡಿದ್ದಾರೆಯೇ ಎಂಬ ಬಗ್ಗೆ ಖಾತರಿ ಪಡಿಸಿಕೊಳ್ಳಬೇಕು ಎಂದು ಡಾ.ಸೋಮಶೇಖರ್ ಅವರು ತಿಳಿಸಿದರು.



ಸಮಿತಿ ಸದಸ್ಯೆ ಕೆ.ಎನ್.ನಳಿನಿ ಕುಮಾರ್ ಅವರು ಮಾತನಾಡಿ, ಸ್ಕ್ಯಾನಿಂಗ್ ಕೇಂದ್ರಗಳಿಗೆ ಆಗಾಗ ದಿಢೀರ್ ಭೇಟಿ ನೀಡುವುದರ ಜೊತೆಗೆ ಹೊಸ ಸ್ಕ್ಯಾನಿಂಗ್ ಕೇಂದ್ರ ಆರಂಭಕ್ಕೆ ಅರ್ಜಿ ಸಲ್ಲಿಸಿರುವ ಕೇಂದ್ರಗಳಿಗೂ ಭೇಟಿ ನೀಡಿ ಪರಿಶೀಲಿಸುವಂತಾಗಬೇಕು ಎಂದು ಸಲಹೆ ಮಾಡಿದರು.

ಸಮಿತಿ ಸದಸ್ಯರಾದ ಗೌರಮ್ಮ ಮಾದಮ್ಮಯ್ಯ, ಜಾಯ್ಸ್ ಮೆನೇಜಸ್ ಅವರು ಪಿಸಿ ಮತ್ತು ಪಿಎನ್‌ಡಿಟಿ ಹಾಗೂ ಸ್ಕ್ಯಾನಿಂಗ್ ಕೇಂದ್ರಗಳು ಹಾಗೂ ಹೊಸದಾಗಿ ಆರಂಭಿಸುವ ಸ್ಕ್ಯಾನಿಂಗ್ ಕೇಂದ್ರ ಸಂಬಂಧ ಹಲವು ಮಾಹಿತಿ ನೀಡಿದರು.

ಪಶ್ಚಿಮ ಬಂಗಾಳದಲ್ಲಿ ಜಂಗಲ್‌ರಾಜ್

ಪುಟ ೧➡ ಇಂತಹ ಸರಕಾರ ರಾಜ್ಯದ ಜನರನ್ನು ಸುರಕ್ಷಿತ ಕಾಪಾಡುವುದೆಂಬ ಭರವಸೆಯೇ ಇಲ್ಲ ಎಂದು ಉತ್ತರ ಬಂಗಾಳದ ಕೂಚ್‌ಬಿಹಾರ್‌ನಲ್ಲಿ ತಮ್ಮ ಪ್ರಥಮ ಚುನಾವಣಾ ರ್‍ಯಾಲಿಯಲ್ಲಿ ಪ್ರಧಾನಿ ಮೋದಿ ಆರೋಪಿಸಿದರು. ಪ.ಬಂಗಾಳದಲ್ಲಿ ಕಾನೂನು ವ್ಯವಸ್ಥೆ ತೀರಾ ದುರ್ಬಲವಾಗಿದೆ, ಅಕ್ರಮ ನುಸುಳುಕೋರರ ಹಾವಳಿಯಿಂದಾಗಿ ರಾಜ್ಯದ ಜನಸಂಖ್ಯಾಸ್ವರೂಪದಲ್ಲಿ ವ್ಯತ್ಯಯವಾಗಿದೆ. ಮಾತೆಯರಿಗೆ ಸುರಕ್ಷೆ ಇಲ್ಲ ಎಂದು ಟಿಎಂಸಿ ಸರಕಾರವನ್ನು ತೀವ್ರವಾಗಿ ತರಾಟೆಗೆತ್ತಿಕೊಂಡರು.

ಟಿಎಂಸಿಯಿಂದ ಕಾನೂನು ವ್ಯವಸ್ಥೆ ನಾಶ: ಟಿಎಂಸಿಯ ಮಹಾ ಜಂಗಲ್‌ರಾಜ್‌ಗೆ ಮಾಲ್ಡಾ ದುರ್ಘಟನೆ ಒಂದು ನಿದರ್ಶನ. ಆಳುವ ಟಿಎಂಸಿ ಕಾನೂನು ಸುವ್ಯವಸ್ಥೆಗಳ ಅಂತಿಮಯಾತ್ರೆ ನಡೆಸುತ್ತಿದೆ ಎಂದು ಆಪಾದಿಸಿದ ಪ್ರಧಾನಿ ಮೋದಿ, ಪ.ಬಂಗಾಳದ ಮತದಾರರಿಗೆ ಒಂದೆಡೆ ಟಿಎಂಸಿ ತಾಂಡವಿಸಿರುವ ಭಯವಿದೆ. ಇನ್ನೊಂದೆಡೆ ಬಿಜೆಪಿಯಲ್ಲಿ ಭರವಸೆ ಇದೆ. ಒಂದೆಡೆ ಟಿಎಂಸಿಯ ಭ್ರಷ್ಟಾಚಾರ, ಹಣ ಕಡಿತಗಳ ಹೆದರಿಕೆಯಾದರೆ, ಇನ್ನೊಂದೆಡೆ ಅಭಿವೃದ್ಧಿ ಚಟುವಟಿಕೆಗಳ ವಿಸ್ತೃತಗೊಳಿಸಬಲ್ಲ ಬಿಜೆಪಿಯಲ್ಲಿ ಆತ್ಮವಿಶ್ವಾಸವಿದೆ. ಅಕ್ರಮ ನುಸುಳುಕೋರರ ಹಾವಳಿ, ಬಂಗಾಳದಲ್ಲಿ ವಿದೇಶಿಯರ ಅಕ್ರಮ ನೆಲೆಸುವಿಕೆಯ ಭೀತಿ ಕೂಡ ಜನರನ್ನು ಕಾಡಿದೆ. ಅಕ್ರಮ ನುಸುಳುಕೋರರ ಹಾವಳಿಗೆ ಬಿಜೆಪಿ ಸಂಪೂರ್ಣ ಕಡಿವಾಣ ಹಾಕಲಿದೆ ಮತ್ತು ನುಸುಳುಕೋರರನ್ನು ಹುಡುಕಿ ಹುಡುಕಿ ಹೊರದಬ್ಬಲಿದೆ ಎಂದು ಭರವಸೆ ನೀಡಿದರು.

ಸ್ವಂತ ಭೂಮಿಯಲ್ಲಿ ಹೆಮ್ಮೆಯಿಂದ ಬದುಕು: ಒಂದೆಡೆ ಬದಲಾಗುತ್ತಿರುವ ಜನಸಂಖ್ಯಾ ಸ್ವರೂಪದಿಂದಾಗಿ ತಮ್ಮ ಸ್ವಂತ ಭೂಮಿ ಕೈತಪ್ಪಿ ಹೋಗುವುದೋ ಎಂಬ ಭೀತಿ ಜನರನ್ನು ಬಹುವಾಗಿ ಕಾಡಿದೆ. ಇನ್ನೊಂದೆಡೆ ತಮ್ಮ ಸ್ವಂತ ಭೂಮಿಯಲ್ಲೇ ತುಂಬು ಹೆಮ್ಮೆಯಿಂದ ತಲೆಎತ್ತಿ ಜೀವಿಸಲು ಅವಕಾಶ ಕೊಡುತ್ತೇವೆಂದು ಬಿಜೆಪಿ ಭರವಸೆ ನೀಡುತ್ತದೆ. ಅಕ್ರಮ ನುಸುಳುಕೋರರನ್ನು ರಕ್ಷಿಸುವನ್ನಯ ಟಿಎಂಸಿ ಎಸ್ಐಆರ್‌ನ್ನು ವಿರೋಧಿಸುತ್ತಿದೆ. ಹಿಂದು ನಿರಾಶ್ರಿತರು ಪೌರತ್ವ ಪಡೆಯುವುದು ಟಿಎಂಸಿಗೆ ಸಹ್ಯವಲ್ಲದ ವಿಚಾರ. ಹಾಗಾಗಿಯೇ ಟಿಎಂಸಿ ಸಿಎಎಯನ್ನು ವಿರೋಧಿಸುತ್ತಿದೆ ಎಂದು ಪ್ರಧಾನಿ ಮೋದಿ ಆರೋಪಿಸಿದರು.

ಬಂಗಾಳದ ಅಸ್ಮಿತೆ ಬದಲಿಸಲು ಯತ್ನಿಸುವವರ ಪದಚ್ಯುತಿ: ಟಿಎಂಸಿ ಆಳ್ವಿಕೆಯಲ್ಲಿ ಬಂಗಾಳದ ಗಡಿ ಪ್ರದೇಶಗಳಲ್ಲಿ ಜನಸಂಖ್ಯಾ ಸ್ವರೂಪದಲ್ಲಿ ಅಪಾಯಕಾರಿ ಬದಲಾವಣೆಯಾಗಿದೆ. ಅಕ್ರಮ ನುಸುಳುಕೋರರಿಗೆ ಟಿಎಂಸಿ ಸಿಂಡಿಕೇಟ್‌ನಿಂದ ನೇರ ರಕ್ಷಣೆ ಸಿಗುತ್ತಿದ್ದು, ತನ್ಮೂಲಕ ನುಸುಳುಕೋರರು ರಾಜ್ಯದ ಜನರ ಬದುಕನ್ನು ಗಂಡಾಂತರಕ್ಕೊಡ್ಡಿದ್ದಾರೆ. ತುಷ್ಟೀಕರಣ ರಾಜನೀತಿಯ ಈ ಆಟದಲ್ಲಿ ಮಹಾನ್ ಬಂಗಾಳದ ಅಸ್ಮಿತೆಯೇ ಬದಲಾಗಿದೆ ಎಂದು ಆರೋಪಿಸಿದ ಪ್ರಧಾನಿ ಮೋದಿ, ಬಂಗಾಳದ ಅಸ್ಮಿತೆ ಬದಲಿಸಲು ಪ್ರಯತ್ನಿಸುವವರನ್ನು ಈ ಬಾರಿ ಪದಚ್ಯುತಗೊಳಿಸಲಾಗುವುದು ಎಂದು ಗುಡುಗಿದರು. ಒಂದೆಡೆ, ಸಂದೇಶ್‌ಖಾಲಿಯಂತೆ ಕ್ರೂರ ದೌರ್ಜನ್ಯಗಳಿಗೀಡಾದ ಸೋದರಿಯರು, ಮಾತೆಯರ ಆಕ್ರಂದನವಾದರೆ, ಮಾತೆಯರಿಗೆ ಭದ್ರತೆ, ಘನತೆಯನ್ನು ಕಲ್ಪಿಸಿ, ಸಬಲೀಕರಣಕ್ಕೆ ಪ್ರಾಧಾನ್ಯತೆ ನೀಡಲಾಗುವುದು ಎಂದರು.

ಪ್ರತಿ ಅನ್ಯಾಯ ಕೃತ್ಯಗಳ ವಿಚಾರಣೆ

ಪುಟ ೧➡ ತನಗೆ ಚುನಾವಣಾ ಆಯೋಗದಲ್ಲಿ ಪೂರ್ಣ ಭರವಸೆಯಿದೆ. ಹಾಗಾಗಿ ಮುಕ್ತ, ನ್ಯಾಯೋಚಿತ ಮತ್ತು ಭಯಮುಕ್ತವಾಗಿ ಮತದಾನ ನಡೆಯುವುದೆಂಬ ವಿಶ್ವಾಸವಿದೆ. ಮೇ 4ರ ನಂತರ ಕಾನೂನು ವ್ಯವಸ್ಥೆ ಬಿಗಿಯಾಗುವುದು. ಟಿಎಂಸಿ ಆಳ್ವಿಕೆಯಲ್ಲಿ ನಡೆದಿರುವ ಭ್ರಷ್ಟಾಚಾರ, ಹಿಂಸಾಚಾರಗಳ ಪ್ರತಿ ಕೃತ್ಯವನ್ನೂ ತನಿಖೆಗೆ ಗುರಿಪಡಿಸಲಾಗುವುದು ಎಂದು ಪ್ರಧಾನಿ ಮೋದಿ ಜನರಲ್ಲಿ ಧೈರ್ಯ ತುಂಬಿದರು. ತಪ್ಪು ಮಾಡಿದ ಪ್ರತಿಯೊಬ್ಬರನ್ನೂ ಚುನಾವಣೆ ನಂತರ ವಿಚಾರಣೆಗೆ ಗುರಿಪಡಿಸಲಾಗುವುದು. ಚುನ್ ಚುನ್ ಕೆ ಹಿಸಾಬ್ ಹೋಗ(ಹುಡುಕಿ ಹುಡುಕಿ ಲೆಕ್ಕಾಚಾರ ತೀರಿಸುತ್ತೇವೆ). ಕ್ರಿಮಿನಲ್ ಅದೆಷ್ಟೇ ಶಕ್ತಿಶಾಲಿಯಾಗಿರಲಿ, ಈ ಬಾರಿ ನ್ಯಾಯ ತೀರ್ಮಾನ ಮಾತ್ರ ಖಚಿತ ಎಂದು ಪ್ರಧಾನಿ ಭರವಸೆ ನೀಡಿದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಆಹಾರ ಇಲಾಖೆಗೆ ಹೆಚ್ಚು ಹಣ ಕೊಟ್ಟರೆ
ಸ್ಕೂಲುಗಳು ಸಾಯ್ತ ಇವೆ ಅಂತ ಹೇಳ್ತಾರೆ
, ಸ್ಕೂಲಿಗೆ ಹೆಚ್ಚು ಕೊಟ್ಟರೆ ಆಸ್ಪತ್ರೆಗಳು
ಸರಿಯಿಲ್ಲ ಅಂತ ಅಂತಾರೆ, ರಾಮಮಂದಿರ
ಏನಾಯ್ತು ಎಂದು ಕೇಳಿದವರು ಮಂದಿರ
ಆದ ಮೇಲೆ ಅದರ ಬದಲು ಆಸ್ಪತ್ರೆಗಳನ್ನು
ಕಟ್ಟಬಹುದಿತ್ತು ಅಂತ ಹೇಳುತ್ತಾರೆ,
ಎಲ್ಲರನ್ನೂ ಮೆಚ್ಚಿಸುವ ಬಜೆಟ್ ಸಾಧ್ಯವಿಲ್ಲ
– ಟೀಕಿಸಿ ವಾಕ್ಯ
– ಭೂಮಿಗೆ ಅವತಾರವೆತ್ತಿ ಬಂದ ಶ್ರೀರಾಮ, ಶ್ರೀ ಕೃಷ್ಣರಿಗೂ ಲೋಕದ ಎಲ್ಲರನ್ನೂ ಮೆಚ್ಚಿಸಲು ಸಾಧ್ಯವಾಗಲಿಲ್ಲ!

ದಿನ ಭವಿಷ್ಯ

ಮೇಷ ವೈಯಕ್ತಿಕವಾಗಿ ಅನಿರೀಕ್ಷಿತ ಬೆಳವಣಿಗೆ ಸಂಭವ. ಆರ್ಥಿಕ ಹೊಂದಿಕೊಳ್ಳಿ. ಮನೆಯಲ್ಲಿ ಸಂಘರ್ಷದ ಸನ್ನಿವೇಶ. ಸಹನೆಯಿಂದ ವರ್ತಿಸಿ.

ವೃಷಭ ಭಾವನಾತ್ಮಕ ಪರಿಸ್ಥಿತಿ ಏರ್ಪಡಬಹುದು. ಸಂಗಾತಿ ಜತೆ ವೈಮನಸ್ಸು. ಹೊಂದಾಣಿಕೆ ಸಾಧಿಸಿ. ಧನಹಾನಿ ಉಂಟಾದೀತು. ಆರೋಗ್ಯದ ಬಗ್ಗೆ ಚಿಂತೆ.

ಮಿಥುನ ದಿನವಿಡೀ ಏನಾದರೊಂದು ಒತ್ತಡ. ಬಂಧು ಜತೆ ವೈಮನಸ್ಸು ಉಂಟಾದೀತು. ಸಮಸ್ಯೆ ತರುವ ವಿಷಯ ಬೇಗ ಇತ್ಯರ್ಥಪಡಿಸಿ.

ಕಟಕ ಪ್ರಗತಿಯ ದಿನ. ಬಯಸಿದ ಫಲ ಸಿಗಲಿದೆ. ಇತರರ ಗಮನ ಸೆಳೆಯುವ ಸಾಧನೆ ತೋರುವಿರಿ. ಆರೋಗ್ಯದ ಬಗ್ಗೆ ಕಾಳಜಿಯಿರಲಿ.

ಸಿಂಹ ಕಾರ್ಯದಲ್ಲಿ ಇಂದು ಹಿನ್ನಡೆ ಕಾಣುವಿರಿ. ಅಪೂರ್ಣ ಕೆಲಸ, ಅಸಹಕಾರ ಎದುರಿಸುವಿರಿ. ಮುಖ್ಯ ವಿಷಯದಲ್ಲಿ ಸಂವಹನದ ಕೊರತೆ.

ಕನ್ಯಾ ಇಂದು ಕಠಿಣ ನಿರ್ಧಾರ ತಾಳಬೇಕಾದ ಪ್ರಸಂಗ ಒದಗೀತು. ಯಾರಿಗೋ ನೋವು ಆದೀತೆಂದು ಮೃದು ನಿಲುವು ತಳೆಯದಿರಿ.

ತುಲಾ ಬಯಸಿದ ಕಾರ್ಯ ಪೂರ್ಣ. ಹಣ ಗಳಿಕೆಯ ಹಾದಿ ಸುಗಮ. ತುಸು ಆರೋಗ್ಯದ ಸಮಸ್ಯೆ ಕಾಡಬಹುದು. ಬಂಧು ಜತೆ ವಿರಸ ಕಟ್ಟಿಕೊಳ್ಳದಿರಿ.

ವೃಶ್ಚಿಕ ಪ್ರತಿಯೊಂದು ವ್ಯವಹಾರದಲ್ಲೂ ಇಂದು ಸಹನೆ ಕಾಯ್ದುಕೊಳ್ಳಿ. ಮಹತ್ವದ ನಿರ್ಧಾರ ತಾಳಬೇಡಿ. ಒತ್ತಡದಿಂದ ತಲೆನೋವು ಬಾಧಿಸೀತು.

ಧನು ಸಹನೆ ಕೆಡಿಸುವ ಪ್ರಸಂಗ ಎದುರಿಸುವಿರಿ. ಪೂರ್ತಿಯಾಗದ ಕೆಲಸ, ಇನ್ನಿತರ ಬೆಳವಣಿಗೆ ಇದಕ್ಕೆ ಕಾರಣ. ಮನಸ್ಸು ಇತರೆಡೆ ಹರಿಯದಿರಲಿ.

ಮಕರ ವೃತ್ತಿಯಲ್ಲಿ ಪ್ರಗತಿ. ಉತ್ಸಾಹ ಹೆಚ್ಚಿಸುವ ಸನ್ನಿವೇಶ. ನಿಮ್ಮ ಚಿಂತನೆಗೆ ಇತರರ ಮನ್ನಣೆ. ಆರ್ಥಿಕ ಗುರಿ ಸಾಧಿಸುವಿರಿ. ದೈಹಿಕ ಶ್ರಮದಿಂದ ಬಳಲಿಕೆ.

ಕುಂಭ ಗ್ರಹಗತಿ ಇಂದು ನಿಮಗೆ ಪೂರಕ. ನಿಮ್ಮ ಕಾರ್ಯದಲ್ಲಿ ತೃಪ್ತಿಕರ ಪ್ರಗತಿ. ಪ್ರೀತಿಯಲ್ಲಿ ಸಮಾಧಾನಕರ ಬೆಳವಣಿಗೆ. ಧನಪ್ರಾಪ್ತಿ.

ಮೀನ ನಿಮ್ಮ ಆಕಾಂಕ್ಷೆ ಈಡೇರುವ ದಿನ. ಆಪ್ತರ ಜತೆ ಆತ್ಮೀಯ ಸಂಬಂಧ ಕಾಯ್ದುಕೊಳ್ಳಿ. ಏಕಾಂಗಿಗಳಿಗೆ ಸಂಗಾತಿ ಸಿಗುವರು. ಧನಲಾಭ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 7,3,5,8

ಪ್ರಸ್ತಾವಿತ ಕ್ಷೇತ್ರ ವಿಂಗಡಣೆಗೆ ಜಾಲತಾಣದಲ್ಲಿ ಸಿದ್ದರಾಮಯ್ಯ ತಿರುಗೇಟು

ರಾಜಕೀಯ ಲೆಕ್ಕಾಚಾರ



• **ಬೆಂಗಳೂರು:** ಪ್ರಸ್ತಾವಿತ ಕ್ಷೇತ್ರ ವಿಂಗಡಣೆ ಪ್ರಕ್ರಿಯೆಯ ಬಗ್ಗೆ ಅಂತಿಮವಾಗಿ ಪ್ರಧಾನಿ ಮೋದಿ ಮಾತನಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಈ ಹಠಾತ್ ಕಾಳಜಿಯು ರಾಜತಾಂತ್ರಿಕತೆ ಯಂತೆ ಕಾಣುತ್ತಿಲ್ಲ, ಬದಲಾಗಿ ಚುನಾವಣಾ ಲೆಕ್ಕಾಚಾರದಂತೆ ಗೋಚರಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಜನಸಂಖ್ಯೆಯನ್ನು ಯಶಸ್ವಿಯಾಗಿ ನಿಯಂತ್ರಿಸಿರುವ ದಕ್ಷಿಣದ ರಾಜ್ಯಗಳಲ್ಲಿ ಲೋಕಸಭಾ ಕ್ಷೇತ್ರಗಳನ್ನು ಕಡಿಮೆ ಮಾಡುವುದಿಲ್ಲ ಎಂದು ಪ್ರಧಾನ ನರೇಂದ್ರ ಮೋದಿ ತಿರುವನಂತಪುರದಲ್ಲಿ ಹೇಳಿದ್ದರು. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪೋಸ್ಟ್ ಬರೆದು ತಿರುಗೇಟು ನೀಡಿದ್ದಾರೆ.

ಕೇರಳ ಮತ್ತು ತಮಿಳುನಾಡಿನಂತಹ ರಾಜ್ಯಗಳಲ್ಲಿನ ರಾಜಕೀಯ ಲೆಕ್ಕಾಚಾರಗಳೊಂದಿಗೆ ಈ ಹೇಳಿಕೆ ನೀಡಿದಂತಿದೆ. ವಾಸ್ತವದಲ್ಲಿ, ದಕ್ಷಿಣ ರಾಜ್ಯಗಳ ಲೋಕಸಭಾ ಸ್ಥಾನಗಳ ಸಂಖ್ಯೆ ಹೆಚ್ಚಾಗುತ್ತದೆಯೇ ಎಂಬುದು ವಿಷಯ ಅಸಲಿಲ್ಲ. ಆದರೆ, ಅವು ಹೇಗೆ ಹೆಚ್ಚಾಗುತ್ತವೆ ಮತ್ತು ಯಾವ ರಾಜ್ಯಗಳು ಹೆಚ್ಚು ಪ್ರಯೋಜನ ಪಡೆಯುತ್ತವೆ ಎಂಬುದೇ ವಿಷಯವಾಗಿತ್ತು ಎಂದು ಸ್ಪಷ್ಟಪಡಿಸಿದ್ದಾರೆ.

ಪ್ರಸ್ತಾವಿತ ವಿಸ್ತರಣೆಯ ಅಡಿಯಲ್ಲಿ, ಪ್ರತಿ ರಾಜ್ಯವು ಹೆಚ್ಚಳವನ್ನು ಕಾಣಬಹುದು. ಆದರೆ, ಹೆಚ್ಚಳದ ದರ ಮತ್ತು ಪ್ರಮಾಣವು ಬಿಜೆಪಿ ಪ್ರಾಬಲ್ಯದ ರಾಜ್ಯಗಳಿಗೆ ಸ್ಪಷ್ಟವಾಗಿ ಅನುಕೂಲಕರವಾಗಿದೆ. ಉತ್ತರ ಪ್ರದೇಶವು 80ರಿಂದ 120 ಸ್ಥಾನಗಳಿಗೆ (40 ಹೆಚ್ಚುವರಿ), ಮಹಾರಾಷ್ಟ್ರವು 48ರಿಂದ 72 (24 ಹೆಚ್ಚುವರಿ), ಬಿಹಾರವು 40ರಿಂದ 60 (20 ಹೆಚ್ಚುವರಿ), ಮಧ್ಯ ಪ್ರದೇಶವು 29ರಿಂದ 4344 (1415 ಹೆಚ್ಚುವರಿ), ರಾಜಸ್ಥಾನವು 25ರಿಂದ 3738 (1213 ಹೆಚ್ಚುವರಿ) ಮತ್ತು ಗುಜರಾತ್ 26ರಿಂದ 39 (13 ಹೆಚ್ಚುವರಿ) ಕ್ಕೇರುವ ನಿರೀಕ್ಷೆಯಿದೆ ಎಂದು ವಿವರಿಸಿದ್ದಾರೆ.

ಲೋಕಸಭೆಯನ್ನು 816 ಸ್ಥಾನಗಳಿಗೆ ವಿಸ್ತರಿಸಿದ ನಂತರವೂ ದಕ್ಷಿಣದ ರಾಜ್ಯಗಳ ಸಾಮೂಹಿಕ ಪಾಲು ಸುಮಾರು ಶೇ.24ರಷ್ಟಿರಲಿದೆ. ಜನಸಂಖ್ಯಾ ನಿಯಂತ್ರಣ ಮತ್ತು ಆಡಳಿತದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ರಾಜ್ಯಗಳನ್ನು ದಂಡಿಸಲಾಗುತ್ತಿದೆ. ರಾಷ್ಟ್ರೀಯ ಬೆಳವಣಿಗೆಯಲ್ಲಿ ಪ್ರಮುಖ ಸ್ಥಾನ ಪಡೆದಿರುವ ಕರ್ನಾಟಕವನ್ನು ಉದ್ದೇಶಪೂರ್ವಕವಾಗಿ ಬದಿಗಿಡುವ ಅಪಾಯ ಇದೆ. ದೊಡ್ಡ ರಾಜ್ಯಗಳ ಸಂಖ್ಯಾತ್ಮಕ ಪ್ರಾಬಲ್ಯ ಹೆಚ್ಚುತ್ತಿರುವಾಗ ನಮ್ಮ ಪಾಲು ವೃದ್ಧಿಸದೇ ಇದ್ದರೆ, ಈ ಪುನರ್‌ವಿಂಗಡಣೆಯಿಂದ ಕರ್ನಾಟಕಕ್ಕೆ ನಿಜವಾಗಿ ಏನು ಸಿಗಲಿದೆ? ಎಂದು ಪ್ರಶ್ನೆ ಮಾಡಿದ್ದಾರೆ.

ದಕ್ಷಿಣದ ಜನರ ವಿಶ್ವಾಸವನ್ನು ಗಳಿಸುವಲ್ಲಿ ವಿಫಲವಾದ ಮೋದಿ ಸರ್ಕಾರವು ಈಗ ಕ್ಷೇತ್ರ ಪುನರ್ ರಚನೆಯ ಮೂಲಕ ನಮ್ಮ ಧ್ವನಿ ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ. ಆರ್ಥಿಕ ಮತ್ತು ಜಾಗತಿಕ ಸವಾಲುಗಳ ಸಮಯದಲ್ಲಿ, ಕೇಂದ್ರ ಸರ್ಕಾರವು ರಾಷ್ಟ್ರೀಯ ಆದ್ಯತೆಗಳಿಗಿಂತ ರಾಜಕೀಯ ಲೆಕ್ಕಾಚಾರದ ಮೇಲೆ ಹೆಚ್ಚು ಗಮನಹರಿಸುತ್ತಿದೆ. ಕರ್ನಾಟಕದ ಜನರು ಮತ್ತು ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇಡುವ ಎಲ್ಲರೂ – ನ್ಯಾಯ, ಗೌರವ ಮತ್ತು ಪಾರದರ್ಶಕತೆಗೆ ಅರ್ಹರು. ನಮ್ಮ ಧ್ವನಿಯನ್ನು ದುರ್ಬಲಗೊಳಿಸುವ ಯಾವುದೇ ಪ್ರಯತ್ನವನ್ನು ನಾವು ದೃಢವಾಗಿ ವಿರೋಧಿಸುತ್ತೇವೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ದಕ್ಷಿಣದ ರಾಜ್ಯಗಳಿಗೆ ದೊಡ್ಡ ಲಾಭವಿಲ್ಲ

ದಕ್ಷಿಣದ ರಾಜ್ಯಗಳಿಗೆ ಇಷ್ಟೊಂದು ದೊಡ್ಡ ಪ್ರಮಾಣದ ಪ್ರಯೋಜನವಾಗುತ್ತಿಲ್ಲ. ಕರ್ನಾಟಕ 28ರಿಂದ 42 (14 ಹೆಚ್ಚುವರಿ), ತಮಿಳುನಾಡು 39ರಿಂದ 5859 (20 ಹೆಚ್ಚುವರಿ), ಆಂಧ್ರಪ್ರದೇಶ 25ರಿಂದ 3738 (1213 ಹೆಚ್ಚುವರಿ), ತೆಲಂಗಾಣ 17ರಿಂದ 25 26 (89 ಹೆಚ್ಚುವರಿ), ಮತ್ತು ಕೇರಳ 20ರಿಂದ 30 (10 ಹೆಚ್ಚುವರಿ)ಕ್ಕೇರಲಿದೆ. ದಕ್ಷಿಣದ ಐದು ರಾಜ್ಯಗಳು ಒಟ್ಟಾಗಿ ಕೇವಲ 6366 ಹೆಚ್ಚುವರಿ ಸ್ಥಾನಗಳನ್ನು ಪಡೆಯುತ್ತಿವೆ. ಆದರೆ, ಬಿಜೆಪಿ ಪ್ರಾಬಲ್ಯದ ಈ ಐದು ರಾಜ್ಯಗಳು ಮಾತ್ರ ಸುಮಾರು 128131 ಸ್ಥಾನಗಳನ್ನು ಗಳಿಸುತ್ತಿವೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಅಮೆರಿಕಕ್ಕೆ ಭಾರೀ ಹಿನ್ನಡೆ

ಪುಟ ೧➡ ಇರಾನ್ ಮಾಧ್ಯಮಗಳ ಪ್ರಕಾರ, ಇಸ್ಫಹಾನ್ ದಕ್ಷಿಣ ಭಾಗದಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ಅಮೆರಿಕದ ಸಿ–130 ಸಾರಿಗೆ ವಿಮಾನವನ್ನು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪಡೆಗಳು ಹೊಡೆದುರುಳಿಸಿವೆ. ಈ ಕಾರ್ಯಾಚರಣೆಯಲ್ಲಿ ಇರಾನ್‌ನ ವಿಶೇಷ ಕಮಾಂಡೋ ಘಟಕ ಭಾಗವಹಿಸಿದ್ದಾಗಿ ತಿಳಿಸಲಾಗಿದೆ.

ಸಿ–130 ವಿಮಾನವು ಸಾಮಾನ್ಯವಾಗಿ ಇತರ ಯುದ್ಧ ವಿಮಾನಗಳಿಗೆ ಇಂಧನ ತುಂಬಿಸುವುದು ಮತ್ತು ಸೈನಿಕ ಸಾಮಗ್ರಿಗಳನ್ನು ಸಾಗಿಸುವ ಕೆಲಸ ಮಾಡುತ್ತದೆ. ಈ ವಿಮಾನದಲ್ಲಿ ಇದ್ದ ಸಿಬ್ಬಂದಿ ಬಗ್ಗೆ ಇನ್ನೂ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಆದರೆ ಇರಾನ್ ಮೂಲಗಳ ಪ್ರಕಾರ, ಈ ದಾಳಿಯಲ್ಲಿ ಕನಿಷ್ಠ ಐದು ಅಮೆರಿಕದ ಸೈನಿಕರು ಮೃತಪಟ್ಟಿದ್ದಾರೆ. ಜತೆಗೆ, ಎರಡು ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್‌ಗಳನ್ನೂ ಹೊಡೆದುರುಳಿಸಲಾಗಿದೆ ಎಂಬ ಮಾಹಿತಿ ಕೂಡ ಹೊರಬಂದಿದೆ. ಆದರೆ ಈ ಎಲ್ಲ ಹೇಳಿಕೆಗಳಿಗೆ ಅಮೆರಿಕದಿಂದ ಇನ್ನೂ ಅಧಿಕೃತ ಪ್ರತಿಕ್ರಿಯೆ ಬಂದಿಲ್ಲ.

ಈ ಮಧ್ಯೆ, ಹಾರ್ಮುಜ್ ಜಲಸಂಧಿ ತೆರೆಯಲು ವಿಳಂಬ ಮಾಡಿದರೆ, ಇರಾನ್ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವುದಾಗಿ ಟ್ರಂಪ್ ಬೆದರಿಕೆ ಹಾಕಿದ್ದಾರೆ. ಈ ಎಲ್ಲಾ ಘಟನೆಗಳು ಮಧ್ಯಪ್ರಾಚ್ಯ ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸುತ್ತಿದ್ದು, ಜಾಗತಿಕ ಶಾಂತಿ ಮತ್ತು ಭದ್ರತೆಗೆ ಸವಾಲು ಎದುರಾಗುವ ಸಾಧ್ಯತೆಯಿದೆ. ಇಂತಹ ಪರಿಸ್ಥಿತಿಯಲ್ಲಿ, ಎರಡೂ ರಾಷ್ಟ್ರಗಳು ಶಾಂತಿಯುತ ಮಾತುಕತೆಗಳ ಮೂಲಕ ಸಮಸ್ಯೆ ಪರಿಹರಿಸುವತ್ತ ಗಮನಹರಿಸಬೇಕೆಂಬ ಅಭಿಪ್ರಾಯಗಳು ಜಾಗತಿಕ ಮಟ್ಟದಲ್ಲಿ ವ್ಯಕ್ತವಾಗುತ್ತಿವೆ.

ಒಟ್ಟಿನಲ್ಲಿ, ಈ ಬೆಳವಣಿಗೆಗಳು ಕೇವಲ ಎರಡು ರಾಷ್ಟ್ರಗಳ ನಡುವಿನ ಸಂಘರ್ಷವಲ್ಲದೆ, ವಿಶ್ವದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳ ಮೇಲೆಯೂ ಪರಿಣಾಮ ಬೀರುವ ಸಾಧ್ಯತೆಯಿದೆ. ಮುಂದಿನ ದಿನಗಳಲ್ಲಿ ಈ ಸಂಘರ್ಷ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂಬುದು ಎಲ್ಲರ ಗಮನ ಸೆಳೆಯುತ್ತಿದೆ.

ಅನುಕಂಪದಿಂದ ಕಾಂಗ್ರೆಸ್ ಟಿಕೆಟ್: ಪಾಟೀಲ್

• **ದಾವಣಗೆರೆ:** ರಾಷ್ಟ್ರಮಟ್ಟದಲ್ಲಿ ದಾವಣಗೆರೆಯನ್ನು ಗುರುತಿಸುವಂತಾಗಲು ದಿ. ಶಾಮನೂರು ಶಿವಶಂಕರಪ್ಪ ಕಾರಣ ಎಂದು ಸಚಿವ ಎಂ.ಬಿ.ಪಾಟೀಲ್ ಮನವಿ ಮಾಡಿದರು. ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆಯಲ್ಲಿ ಹಾಲಿ ಶಾಸಕರಾಗಿದ್ದವರು ಮೃತರಾದ ಹಿನ್ನೆಲೆಯಲ್ಲಿ ಉಭಯ ಕುಟುಂಬದ ಸಮರ್ಥ ಶಾಮನೂರು ಹಾಗೂ ಉಮೇಶ ಮೇಟಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ ಎಂದು ಸಚಿವ ಎಂ.ಬಿ. ಪಾಟೀಲ್ ತಿಳಿಸಿದರು.

ದೇಶದ ಪ್ರಗತಿಗೆ ಬಾಬೂಜಿ ಕೊಡುಗೆ



ಪುಟ ೧➡ ಜಗಜೀವನರಾಂ ಅವರು ಭಾರತ ದೇಶದ ಸಂವಿಧಾನದ ಎಲ್ಲಾ ಹುದ್ದೆಗಳನ್ನು ಅಲಂಕರಿಸಬಹುದಿತ್ತು. ಅತ್ಯಂತ ಯಶಸ್ವಿ ರಾಜಕೀಯ ಮುತ್ಸದ್ದಿ ಬಾಬೂಜಿ, ದೇಶದ ಅಭಿವೃದ್ಧಿ ಮತ್ತು ದಲಿತರ ಹಕ್ಕುಗಳಿಗೆ ಕಾನುನಾತ್ಮಕ ನಿಲುವುಗಳನ್ನು ತಮ್ಮ ಅಧಿಕಾರದಲ್ಲಿ ಬಳಸಿ ಪರಿಹಾರ ಕಂಡುಕೊಂಡರು ಎಂದು ಹೇಳಿದರು.

ಹಸಿರು ಕ್ರಾಂತಿ, ಕಾರ್ಮಿಕ ಕಾಯ್ದೆ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಸೇರಿದಂತೆ ಅನೇಕ ವಿಷಯಗಳು ಬಾಬೂಜಿ ಅವರಲ್ಲಿ ಅಡಕವಾಗಿವೆ. ಇಂತಹವರು ಸಮಾಜದ ಹೆಮ್ಮೆ. ಅವರನ್ನು ಬೇರೆ ಬೇರೆ ಗುಂಪು ಮಾಡಿದರೆ ನಾವೇ ಛಿದ್ರರಾಗುತ್ತೇವೆ. ಯಾಕೆಂದರೆ ಇದು ಶ್ರೇಣಿಕೃತ ವ್ಯವಸ್ಥೆ ನಿರ್ಮಾಣದ ದೇಶ, ವರ್ಣಾಶ್ರಮ ಇನ್ನೂ ಜೀವಂತವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸೈದ್ಧಾಂತಿಕ ನಿಲುವಿಗೆ ಬದ್ಧ: ನಮ್ಮಲ್ಲಿ ಒಡಕು ಇಲ್ಲ, ಭಿನ್ನಾಭಿಪ್ರಾಯ ಇಲ್ಲ. ಕಾಂಗ್ರೆಸ್ ಸರ್ಕಾರ, ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ದಲಿತರ ಹಕ್ಕುಗಳನ್ನು ಸಂವಿಧಾನಾತ್ಮಕವಾಗಿ ರಕ್ಷಣೆ ಮಾಡಲು ಬದ್ಧವಾಗಿದೆ. ಯಾವುದೇ ಒಂದು ನಿರ್ಧಾರದಿಂದ ಸಂಘಟನೆಗಳ ಮನಸ್ಸು ಬೇರೆ ಕಡೆ ತಿರುಗದಂತೆ ಎಚ್ಚರಿಕೆ ವಹಿಸಬೇಕು. ಯಾರ ಬಗ್ಗೆಯೂ ತಲೆಕೆಡಿಸಿಕೊಳ್ಳುವುದಿಲ್ಲ. ಸೈದ್ಧಾಂತಿಕ ನಿಲುವಿಗೆ ಬದ್ಧರಾಗಿದ್ದೇವೆ. ಸಂಪುಟ ಸಭೆಯ ನಿರ್ಧಾರದಂತೆ ಎಲ್ಲಾ ಸಮುದಾಯಗಳಿಗೆ ನ್ಯಾಯ ಕೊಡಲಾಗುವುದು. ಅನಾವಶ್ಯಕ ಮಾತು, ಗುಂಪು ಘರ್ಷಣೆ ಅವಶ್ಯಕತೆ ಇಲ್ಲ ಎಂದು ಡಾ.ಮಹದೇವಪ್ಪ ಹೇಳಿದರು.

ಪ್ರಶಸ್ತಿ ಪ್ರದಾನ ಚಂದ್ರಮ್ಮ, ಡಿಂಗ್ರಿ ನರಸಪ್ಪ, ಡಾ. ಸರಜೂ ಕಾಟ್ಕರ್, ನಾರಾಯಣ ಮತ್ತು ನರಸೀಯಪ್ಪ ಅವರಿಗೆ ಡಾ. ಬಾಬು ಜಗಜೀವನರಾಂ ಪ್ರಶಸ್ತಿ ನೀಡಿ ಗೌರವಿಸಲಾಯಿತು.

> ರಾಜ್ಯದ ಜನತೆಗೆ 5 ಗ್ಯಾರಂಟಿ ಕೊಟ್ಟಿದ್ದೇವೆ. ಈ ಯೋಜನೆಗಳು ಜನರಿಗೆ ಕಷ್ಟದ ಸಮಯದಲ್ಲಿ ಒಂದಲ್ಲ ಒಂದು ರೀತಿ ಸಹಾಯವಾಗುತ್ತಿವೆ. ನಾವೆಲ್ಲ ಒಗ್ಗಟ್ಟಾಗಿದ್ದೇವೆ. ಉಪಚುನಾವಣೆ ನಂತರ ಒಳಮೀಸಲಾತಿ ನೀಡುತ್ತೇವೆ.
>
> ■ **ಕೆ.ಎಚ್. ಮುನಿಯಪ್ಪ,** ಆಹಾರ ಸಚಿವ

ಹೈದರಾಬಾದ್‌ನಲ್ಲೂ ಲವ್ ಜಿಹಾದ್

ಪುಟ ೧➡ ಈ ಘಟನೆಯ ವಿಡಿಯೋ ಮತ್ತು ಫೋಟೋಗಳನ್ನು ತೆಗೆದು ಮದುವೆಗೆ ಬಲವಂತಪಡಿಸಿದ್ದಾನೆ ಎಂದು ಮಹಿಳೆ ಹೇಳಿದ್ದಾರೆ. ಮದುವೆಯ ಬಳಿಕ ಆಕೆಯ ಹೆಸರನ್ನು ನಜೀರಾ ಎಂದು ಹೆಸರು ಬದಲಾಯಿಸಿ, ಮತಾಂತರಗೊಳಿಸಿ, ಮಾಂಸಾಹಾರ ಸೇವಿಸಲು ಬಲವಂತ ಮಾಡಿದ್ದಾರೆ ಎನ್ನಲಾಗಿದೆ. ಜತೆಗೆ, ಶಾರೀರಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಾ, ಸುಮಾರು 25ರಿಂದ 30 ಲಕ್ಷ ರೂಪಾಯಿ ಹಣವನ್ನು ವಂಚನೆ ಮೂಲಕ ಪಡೆದುಕೊಂಡಿದ್ದಾನೆ ಎಂದು ಆರೋಪಿಸಿದ್ದಾರೆ.

ಅಲ್ಲದೆ, ಆಕೆಯ ಹೆಸರಿನಲ್ಲಿ ಸಾಲ ಪಡೆದು ಜಮೀನು ಮಾರಾಟ ಮಾಡಿದ್ದಾನೆ. ಗರ್ಭಿಣಿಯಾಗಿದ್ದಾಗ ಬಲವಂತವಾಗಿ ಗರ್ಭಪಾತ ಮಾಡಿಸಿದ್ದಾಗಿಯೂ ಆರೋಪಿಸಲಾಗಿದೆ. ಈ ಪ್ರಕರಣದಲ್ಲಿ ಪತಿ ಹಾಗೂ ಅವರ ಕುಟುಂಬದ ಹಲವರ ವಿರುದ್ಧ ಮಹಿಳೆ ದೂರು ನೀಡಿದ್ದಾರೆ. ಆದಾಗ್ಯೂ, ಪೊಲೀಸ್ ಇಲಾಖೆಯಿಂದ ಸಮರ್ಪಕ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ.

ಗುರುತು ಮುಚ್ಚಿಟ್ಟು ಪ್ರೇಮದ ಹೆಸರಲ್ಲಿ ಮೋಸ

ಪುಟ ೧➡ ಪೊಲೀಸ್ ಮಾಹಿತಿಯ ಪ್ರಕಾರ, ಸಮೀರ್ ಖಾನ್ ಎಂಬಾತ ತನ್ನನ್ನು ರವಿ ಠಾಕೂರ್ ಎಂದು ಪರಿಚಯಿಸಿಕೊಂಡು ಯುವತಿಯೊಂದಿಗೆ ಸ್ನೇಹ ಬೆಳೆಸಿಕೊಂಡಿದ್ದ. ದೀರ್ಘಕಾಲ ತನ್ನ ನಿಜಸ್ವರೂಪವನ್ನು ಮರೆಮಾಚಿ, ಅವಳ ವಿಶ್ವಾಸ ಗಳಿಸಿ ಪ್ರೇಮ ಸಂಬಂಧ ಮುಂದುವರಿಸಿದ್ದಾನೆ ಎನ್ನಲಾಗಿದೆ. ನಂತರ ಯುವತಿಗೆ ಆತನ ನಿಜವಾದ ಗುರುತು ತಿಳಿದಾಗ ಆಕೆ ಆತಂಕಗೊಂಡಿದ್ದು, ಸತ್ಯ ಬಹಿರಂಗವಾದ ನಂತರ ಆಕೆ ದೂರವಾಗಲು ಪ್ರಯತ್ನಿಸಿದಾಗ, ಆರೋಪಿ ಬೆದರಿಕೆ ಹಾಕಲು ಆರಂಭಿಸಿದ್ದಾನೆ. ಖಾಸಗಿ ವಿಡಿಯೋಗಳನ್ನು ಇಂಟರ್‌ನೆಟ್‌ನಲ್ಲಿ ಹರಡುವುದಾಗಿ ಬೆದರಿಕೆ ಹಾಕಿದ್ದು, ಆಕೆಯ ಮೇಲೆ ಹಲ್ಲೆ ಮಾಡಿದ್ದಾನೆ ಎಂಬ ಆರೋಪವೂ ಕೇಳಿಬಂದಿದೆ. ಈ ಕುರಿತು ಯುವತಿ ದೂರು ನೀಡಿದ ನಂತರ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಘಟನೆ ಸ್ಥಳೀಯವಾಗಿ ಆತಂಕ ಮೂಡಿಸಿದ್ದು, ಆರೋಪಿಯ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಗಳು ಕೇಳಿಬರುತ್ತಿವೆ.

ದಕ್ಷಿಣ ರಾಜ್ಯಗಳು ಲೋಕಸಭೆ ಕ್ಷೇತ್ರ ಕಳೆದುಕೊಳ್ಳಲ್ಲ

ಪುಟ ೧➡ ದೇಶದಾದ್ಯಂತ ಎಲ್ಲ ರಾಜ್ಯಗಳಿಗೂ ಸಮತೋಲನವಾಗುವಂತೆ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ದಕ್ಷಿಣ ಭಾರತದ ರಾಜ್ಯಗಳಿಗೆ ಭರವಸೆ ನೀಡಿದರು. ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡಣೆ ನಂತರ ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗಬಹುದು ಎಂಬ ಆತಂಕ ಇತ್ತೀಚೆಗೆ ಹೆಚ್ಚಾಗಿದೆ. ಜನಸಂಖ್ಯೆ ನಿಯಂತ್ರಣದಲ್ಲಿ ಯಶಸ್ವಿಯಾದ ಕಾರಣದಿಂದಾಗಿ ಈ ರಾಜ್ಯಗಳ ಕ್ಷೇತ್ರಗಳು ಕಡಿಮೆಯಾಗಬಹುದು ಎಂಬ ಭೀತಿ ವ್ಯಕ್ತವಾಗಿತ್ತು. ಇದೇ ಹಿನ್ನೆಲೆಯಲ್ಲಿಯೇ ಮೋದಿ ಅವರ ಸ್ಪಷ್ಟನೆ ಗಮನಾರ್ಹವಾಗಿದೆ.

ದಕ್ಷಿಣ ರಾಜ್ಯಗಳ ವಿರುದ್ಧ ತಪ್ಪು ಮಾಹಿತಿ ಹರಡಲಾಗುತ್ತಿದೆ. ಜನಸಂಖ್ಯೆ ನಿಯಂತ್ರಿಸಿದ ಕಾರಣಕ್ಕೆ ಯಾವುದೇ ರಾಜ್ಯಕ್ಕೂ ಶಿಕ್ಷೆಯಂತಾಗುವ ನಿರ್ಧಾರ ಕೈಗೊಳ್ಳುವುದಿಲ್ಲ. ಬದಲಾಗಿ, ಅವರ ಹಕ್ಕುಗಳನ್ನು ರಕ್ಷಿಸಲು ಸಂಸತ್ತಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಕೇರಳ, ಕರ್ನಾಟಕ, ಆಂಧ್ರಪ್ರದೇಶ, ಗೋವಾ, ತೆಲಂಗಾಣ, ತ.ನಾಡು ರಾಜ್ಯಗಳನ್ನು ಉಲ್ಲೇಖಿಸಿದ ಅವರು, ಈ ರಾಜ್ಯಗಳು ಜನಸಂಖ್ಯೆ ನಿಯಂತ್ರಣದಲ್ಲಿ ಉತ್ತಮ ಸಾಧನೆ ಮಾಡಿವೆ ಎಂದರು.

ಕೇಂದ್ರದ ಜತೆ ಸಹಕಾರವಿರಲಿ

ಪುಟ ೧➡ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿ, ಪ್ರಧಾನಿ ಮೋದಿಯವರನ್ನು ಭೇಟಿಯಾಗಿ ರಾಜ್ಯದ ಮುಖ್ಯಮಂತ್ರಿಗಳು, ಸಂಬಂಧಿಸಿದ ಮಂತ್ರಿಗಳು ಮಾತನಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಕೇವಲ ಸುಳ್ಳು ಹೇಳುವುದನ್ನು ಬಿಡಬೇಕು ಎಂದರು. ರಾಜ್ಯ ಸರಕಾರ ಕೇಂದ್ರದ ಜತೆಗೆ ಯುಕೆಪಿ ವಿಷಯದ ಚರ್ಚೆಗೆ ಒಮ್ಮೆಯೂ ಬಂದಿಲ್ಲ. ನೋಟಿಫಿಕೇಶನ್ ಮಾಡಿಲ್ಲ ಎಂದು ಆರೋಪಿಸುತ್ತಾರೆ. ಆದರೆ ನ್ಯಾಯಾಲಯದಲ್ಲಿ ವ್ಯಾಜ್ಯ ಇದೆ. ಕಾನೂನು ತೊಡಕುಗಳು ಮುಗಿದ ತಕ್ಷಣವೇ ನೋಟಿಫಿಕೇಶನ್ ಆಗುತ್ತದೆ ಎಂದರು. ರಾಜ್ಯದ ಜನರಿಗೆ ಶಕ್ತಿ ತುಂಬಲು ಗ್ಯಾರಂಟಿ ಕಾರ್ಯಕ್ರಮಗಳು ಯಶಸ್ಸು ಕಂಡಿದ್ದರೆ ಬಾಗಲಕೋಟೆಯಲ್ಲಿ ನಾಲ್ಕೈದು ದಿನ ಇದ್ದು, ಪ್ರಚಾರ ಮಾಡುವ ಅವಶ್ಯಕತೆ ಏನಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಕುಮಾರಸ್ವಾಮಿ ಪ್ರಶ್ನಿಸಿದರು. ಗ್ಯಾರಂಟಿ ಯೋಜನೆಗಳಿಗೆ ಹಣ ಕೊಡುತ್ತಿರುವುದಕ್ಕೆ ನಮ್ಮ ತಕರಾರು ಇಲ್ಲ. ಆದರೆ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದನ್ನು ಮಾತ್ರ ಹೇಳಿ ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಹಿಂದುಳಿದ ನಾಯಕ ಎನ್ನುತ್ತಾರೆ. ಅವರು ಹಾಗೆ ಬೆಳೆಯಲು ಯಾರ ಕೊಡುಗೆ ಇದೆ ಎಂಬುದನ್ನು ಅವರು ನೆನಪು ಮಾಡಿಕೊಳ್ಳಬೇಕು ಎಂದರು.

ದಶಕಗಳ ಹೋರಾಟಕ್ಕೆ ಸಿಕ್ಕಿಲ್ಲ ಮುಕ್ತಿ | ಜೀವಜಲಕ್ಕೆ ಇನ್ನೆಷ್ಟು ಕಾಯಬೇಕು?

ಮಹದಾಯಿ ಮುಗಿಯದ ಕಥೆ!

▶ **ಮಹಾಂತೇಶ ಕಣವಿ**

ದಿಗಂತ ವಿಶೇಷ

• **ಧಾರವಾಡ:** ಉತ್ತರ ಕರ್ನಾಟಕದ ಜನರ ಜೀವನಾಡಿ ಮಹಾದಾಯಿ, ಕಳಸಾ–ಬಂಡೂರಿ ಯೋಜನೆ ದಶಕಗಳು ಕಳೆದರೂ, ಅನುಷ್ಠಾನದ ಹಂತದಲ್ಲಿ ಇನ್ನೂ ಹಲವು ಅಡೆತಡೆ ಎದುರಿಸುತ್ತಲೇ ಇದೆ. ಕುಡಿಯುವ ನೀರಿನ ಈ ಹೋರಾಟ ತಾರ್ಕಿಕ ಅಂತ್ಯಕ್ಕೆ ಬರುವ ಲಕ್ಷಣ ಕಾಣಿಸುತ್ತಿದ್ದರೂ, ತಾಂತ್ರಿಕ ಮತ್ತು ಕಾನೂನು ಸಂಘರ್ಷಗಳು ಕಾಮಗಾರಿಗೆ ಬ್ರೇಕ್ ಹಾಕುತ್ತಿವೆ.

ಕೇಂದ್ರ ಜಲ ಆಯೋಗವು ಕಳೆದೊಂದು ವರ್ಷದ ಹಿಂದೆಯೇ ಕಳಸಾ– ಬಂಡೂರಿ ನಾಲಾ ತಿರುವು ಯೋಜನೆಯ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಒಪ್ಪಿಗೆ ನೀಡಿದೆ. ಆದರೆ, ಈ ಯೋಜನೆ ಪೂರ್ಣ ಪ್ರಮಾಣದಲ್ಲಿ ಆರಂಭದಲ್ಲಿ ಉಂಟಾದ ಅಡೆತಡೆ ಈ ಭಾಗದ ಜನರಲ್ಲಿ ನಿರಾಸೆಯ ಕಾರ್ಮೋಡ ಕವಿಸಿದೆ.



ಪರಿಸರ–ಅರಣ್ಯ ಇಲಾಖೆ ಅನುಮತಿ: ಪ್ರಸ್ತುತ ಮಹದಾಯು ಯೋಜನೆ ಅಭಯಾರಣ್ಯದ ವ್ಯಾಪ್ತಿಯಲ್ಲಿ ಬರುವುದರಿಂದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಅಂತಿಮ ಹಸಿರು ನಿಶಾನೆ ಸಿಗಬೇಕಿದೆ. ಈ ಕೆಲಸ ಪ್ರಕ್ರಿಯೆಯಲ್ಲಿದೆಂಬ ಮಾತು ಇದ್ದರೂ, ಈ ವಿಷಯದಲ್ಲಿ ಈ ಭಾಗದ ರಾಜಕೀಯ ಇಚ್ಛಾಶಕ್ತಿ ಕೊರತೆಯೂ ಎದ್ದುಕಾಣುತ್ತಿದೆ.

> ಮಹದಾಯಿ, ಕಳಸಾ–ಬಂಡೂರಿ ಯೋಜನೆ ವಿಳಂಬಕ್ಕೆ ಈ ಭಾಗದ ಸಂಸದರೇ ಕಾರಣ. ಹೀಗಾಗಿ ಧಾರವಾಡ, ಬೆಳಗಾವಿ, ಗದಗ ಮತ್ತು ಬಾಗಲಕೋಟೆ ಜಿಲ್ಲೆಯ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿ ವನ್ಯಜೀವಿ ಮಂಡಿಯಿಂದ ಕ್ಲಿಯರೆನ್ಸ್ ಕೊಡಿಸಿ, ಯೋಜನೆ ಆರಂಭಿಸಬೇಕು.
>
> ■ **ವೀರೇಶ ಸೊಬರದಮಠ,** ಅಧ್ಯಕ್ಷರು ಕರ್ನಾಟಕ ರೈತ ಸಂಘ ಹಸಿರು ಸೇನಾ

ನ್ಯಾಯಾಲಯದ ಸಂಘರ್ಷ: ಮಹದಾಯಿ ವಿಷಯದಲ್ಲಿ ನ್ಯಾಯಾಲಯದ ಸಂಘರ್ಷವೂ ಮುಗಿಯುವ ಲಕ್ಷಣ ಕಾಣುತ್ತಿಲ್ಲ. ಈ ಯೋಜನೆಯಿಂದ ಪರಿಸರಕ್ಕೆ ಹಾನಿಯಾಗುತ್ತದೆ ಎಂದು ಗೋವಾ ಸರ್ಕಾರವು ಸುಪ್ರೀಂಕೋರ್ಟ್‌ನಲ್ಲಿ ವಾದಿಸುತ್ತಿದೆ. ಕರ್ನಾಟಕ ಮತ್ತು ಗೋವಾ ನಡುವಿನ ಈ ಕಾನೂನು ಹೋರಾಟವು ಯೋಜನೆಯ ವೇಗಕ್ಕೆ ಅಡ್ಡಿಯಾಗಿದೆ.

ವನ್ಯಜೀವಿ ಮಂಡಳಿ ಅನುಮತಿ: ಕಳಸಾ–ಬಂಡೂರಿ ನಾಲಾ ಪ್ರದೇಶ ಮಲಪ್ರಭಾ ನದಿಯ ಜಲಾನಯನ ಪ್ರದೇಶಕ್ಕೆ ಸೇರಿದ ಹಿನ್ನಲೆ ವನ್ಯ ಜೀವಿಗಳ ಸಂರಕ್ಷಣಾ ನಿಯಮಗಳ ಅಡಿಯಲ್ಲಿ ಅನುಮತಿ ಪಡೆಯುವುದು ಕಡ್ಡಾಯವಾಗಿದೆ. ಈ ವಿಷಯ ಮುಂದಿಟ್ಟ ಗೋವಾ, ಕಾನೂನು ಹೋರಾಟ ಮಾಡುತ್ತಿದೆ. ಇದೇ ಕಾರಣಕ್ಕೆ ಕರ್ನಾಟಕದ ಪಾಲಿಗೆ ಈ ಯೋಜನೆ ವರದನಾಗುತ್ತಿಲ್ಲ.

ವಿಳಂಬಕ್ಕೆ ಪ್ರಮುಖ ಕಾರಣಗಳೇನು?

ಗೋವಾ ಸರ್ಕಾರದ ತಗಾದೆ: ಮಹದಾಯಿ ನದಿ ನೀರು ಹಂಚಿಕೆಯ ಕುರಿತು ನ್ಯಾಯಾಧೀಕರಣವು ಈಗಾಗಲೇ ತೀರ್ಪು ನೀಡಿದ್ದರೂ, ಗೋವಾ ಸರ್ಕಾರ ಮೇಲಿಂದ ಮೇಲೆ ತಾಂತ್ರಿಕ ಕಾರಣಗಳನ್ನು ಮುಂದಿಟ್ಟು ಆಕ್ಷೇಪಣೆ ಎತ್ತುತ್ತಿದೆ.

ಕೇಂದ್ರದ ನಿರ್ಧಾರದಲ್ಲಿ ವಿಳಂಬ: ಡಿಪಿಆರ್ ಅನುಮೋದನೆ ಸಿಕ್ಕರೂ, ವನ್ಯಜೀವಿ ಮತ್ತು ಪರಿಸರ ಇಲಾಖೆಯ ಅಂತಿಮ ಕ್ಲಿಯರೆನ್ಸ್ ನೀಡುವಲ್ಲಿ ಕೇಂದ್ರದ ಮೇಲೆ ಒತ್ತಡ ಹೇರುವಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುತ್ತಿದೆ ಎಂಬುದು ಹೋರಾಟಗಾರರ ವಾದ.

ಅಂತಾರಾಜ್ಯ ಜಲ ವಿವಾದ: ನದಿ ತಿರುವು ಮಾಡುವುದರಿಂದ ಕೆಳಭಾಗದ ಗೋವಾಕ್ಕೆ ನೀರಿನ ಹರಿವು ಕಡಿಮೆಯಾಗುತ್ತದೆ ಎಂಬ ಆತಂಕವನ್ನು ಅಲ್ಲಿನ ಪರಿಸರವಾದಿಗಳು ವ್ಯಕ್ತಪಡಿಸುತ್ತಿದ್ದಾರೆ.

ಮುಂದಿನ ಹಾದಿ ಏನು: ಕರ್ನಾಟಕ ಸರ್ಕಾರವು ಈಗಾಗಲೇ ಟೆಂಡರ್ ಪ್ರಕ್ರಿಯೆಗಳಿಗೆ ಪ್ರಾಥಮಿಕ ಸಿದ್ಧತೆ ಮಾಡಿಕೊಂಡಿದೆ. ಆದರೆ, ಅರಣ್ಯ ಭೂಮಿ ಬಳಕೆಗೆ ಅನುಮತಿ ಸಿಕ್ಕರೆ ಮಾತ್ರ ಜೆಸಿಬಿಗಳು ಮಣ್ಣಿಗೆ ಇಳಿಯಲು ಸಾಧ್ಯ. ಹುಬ್ಬಳ್ಳಿ–ಧಾರವಾಡ, ಬೆಳಗಾವಿ ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳ ಜನರಿಗೆ ಕುಡಿಯುವ ನೀರು ಪೂರೈಸುವ ಈ ಕನಸು ನನಸಾಗಲು ಕೇಂದ್ರದ ಅಂತಿಮ ಅನುಮತಿ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕದ ಪರವಾದ ಬಲವಾದ ವಾದದ ಅಗತ್ಯವಿದೆ. ರೈತರು ಮತ್ತು ಸಂಘಟನೆಗಳ ನಿರಂತರ ಪ್ರತಿಭಟನೆಯ ಫಲವಾಗಿ ಯೋಜನೆಗೆ ಒಂದಿಷ್ಟು ಚಾಲನೆ ಸಿಕ್ಕಿದ್ದರೂ, ಕಾಮಗಾರಿ ಪೂರ್ಣಗೊಂಡು ನೀರು ಹರಿಯಲು ಇನ್ನೂ ಕಾನೂನು ಮತ್ತು ಪರಿಸರ ಇಲಾಖೆಯ ಸಂಕೀರ್ಣ ಹಾದಿಗಳನ್ನು ದಾಟಬೇಕಿದೆ.

ಕಾಂಗ್ರೆಸ್ ಸೋಲು ನಿಶ್ಚಿತ: ಬಿಎಸ್‌ವೈ

ಬಾಗಲಕೋಟೆ: ಈ ಬಾರಿಯ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲು ನಿಶ್ಚಿತ ಎಂಬುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವರಿಕೆ ಆಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ತಾಂಡಾಗಳ ಮುಖಂಡರೊಂದಿಗೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರ ಸಭೆ ನಡೆಸಿದ ಮತಯಾಚಿಸಿ ಅವರು ಮಾತನಾಡಿದರು. ಸಿದ್ದರಾಮಯ್ಯ ಅವರು ಇಲ್ಲಿಗೆ ಬಂದು ವಾರಗಟ್ಟಲೆ ಉಳಿದು ಪ್ರಚಾರ ಮಾಡುತ್ತಿದ್ದಾರೆ. ಇಲ್ಲೇ ಕ್ಯಾಂಪ್ ಹೂಡಿದ್ದಾರೆ. ಅವರ ಪಕ್ಷದ ಅಭ್ಯರ್ಥಿ ಅವರದೇ ಸಮುದಾಯದವರು. ಅವರನ್ನು ಗೆಲ್ಲಿಸಲೇ ಬೇಕು ಎಂಬ ಒಂದೇ ಕಾರಣದಿಂದ ಇಲ್ಲೇ ಠಿಕಾಣಿ ಹೂಡಿದ್ದಾರೆ ಎಂದರು.

ಕಾಂಗ್ರೆಸ್‌ಗೆ ಸೋಲು ಖಂಡಿತ ಎಂಬುದು ಎಲ್ಲರಿಗೂ ತಿಳಿದಿದೆ. ಬಾಗಲಕೋಟೆಯಲ್ಲಿ ಬಿಜೆಪಿಯ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರೇ ಗೆಲುವು ಸಾಧಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ನುಡಿದರು. ಸಿದ್ದರಾಮಯ್ಯ ಅವರೇ ಜಾತಿ ವಿಷಬೀಜ ಬಿತ್ತಿ ರಾಜಕಾರಣ ಮಾಡುವುದನ್ನು ಈಗಲಾದರೂ ಬಿಡಿ. ಸರ್ಕಾರದ ಖಜಾನೆಯನ್ನು ಲೂಟಿ ಮಾಡಿ ಸದಾ ಒಂದಿಲ್ಲೊಂದು ಭ್ರಷ್ಟಾಚಾರದಲ್ಲಿ ತೊಡಗಿರುವ ಸರ್ಕಾರ ಇನ್ನಾದರೂ ಪ್ರಾಮಾಣಿಕವಾಗಿ ಜನರ ಒಳಿತಿಗಾಗಿ ಕೆಲಸ ಮಾಡಲಿ ಎಂದು ಆಗ್ರಹಿಸಿದರು.



ನಿರೀಕ್ಷೆಗೂ ಮೀರಿ ಜನಬೆಂಬಲ

ನಮ್ಮೆಲ್ಲ ಕಾರ್ಯಕರ್ತರು ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಹಳ್ಳಿ ಹಳ್ಳಿಗೆ ಹೋಗಿ ಪ್ರಚಾರದಲ್ಲಿ ತೊಡಗಿದ್ದಾರೆ. ಜನ ಬೆಂಬಲ ನಿರೀಕ್ಷೆಗೂ ಮೀರಿ ಚೆನ್ನಾಗಿದೆ. ನಮ್ಮೊಂದಿಗೆ ಕೇಂದ್ರ ಸಚಿವರಾದ ಎಚ್.ಡಿ ಕುಮಾರಸ್ವಾಮಿ ಅವರು ಜೊತೆ ಪ್ರಚಾರಕ್ಕೆ ಬಂದಿರುವುದು ಹೆಮ್ಮೆಯ ಸಂಗತಿ. ಅವರ ಶಕ್ತಿಯೂ ನಮ್ಮ ಜೊತೆ ಸೇರಿದೆ. ಕಾಂಗ್ರೆಸ್‌ನವರು ಸೂಟ್ ಕೇಸ್‌ನಲ್ಲಿ ಹಣ ತಂದು ಇಲ್ಲಿ ಹಂಚಿ ಹಣದ ಬಲದಲ್ಲಿ, ಹೆಂಡದ ಬಲದಲ್ಲಿ ಮತ್ತು ತೋಳ್ಬಲದಲ್ಲಿ ಗೆಲ್ಲುತ್ತೇವೆ ಅಂದುಕೊಂಡಿದ್ದಾರೆ. ಆದರೆ ಹಾಗೆ ಆಗದು. ನಮ್ಮ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರಂತಹ ಪ್ರಾಮಾಣಿಕರೇ ಇಲ್ಲಿ ಗೆಲ್ಲುವುದು ಎಂದರು.

ಕಲಾ ತಂಡಗಳ ಮೆರವಣಿಗೆ



ಬೆಳಗಾವಿಯಲ್ಲಿ ಭಾನುವಾರ ಬಾಬು ಜಗಜೀವನ್‌ರಾಂ ಅವರ ಜನ್ಮದಿನಾಚರಣೆ ಪ್ರಯುಕ್ತ ವಿವಿಧ ನೃತ್ಯ ಕಲಾ ತಂಡಗಳಿಂದ ಮೆರವಣಿಗೆ ನಡೆಯಿತು.

ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ವ್ಯವಸ್ಥಿತ ಪಿತೂರಿ: ಸುರ್ಜೇವಾಲ

ಬೆಂಗಳೂರು: ಕೃಷಿ, ನೀರಾವರಿ, ರಕ್ಷಣೆ ಮತ್ತು ಮೂಲಸೌಕರ್ಯ ಯೋಜನೆಗಳನ್ನು ತಡೆಯುವ ಮೂಲಕ ಕರ್ನಾಟಕದ ವಿರುದ್ಧ ಕೇಂದ್ರ ಸರ್ಕಾರವು ವ್ಯವಸ್ಥಿತ ಪಿತೂರಿ ನಡೆಸಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಆರೋಪಿಸಿದರು.



ಭಾನುವಾರ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ಬಿಜೆಪಿಯ ಷಡ್ಯಂತ್ರ ಮತ್ತು ಕನ್ನಡಿಗ ವಿರೋಧಿ ಧೋರಣೆ ಈಗ ಸಂಪೂರ್ಣವಾಗಿ ಬಯಲಾಗಿದೆ. ಮೋದಿ ಸರ್ಕಾರ ಮತ್ತು ಬಿಜೆಪಿ ಯೋಜಿತವಾಗಿ 6.5 ಕೋಟಿ ಕನ್ನಡಿಗರನ್ನು ಶಿಕ್ಷಿಸುತ್ತಿದೆ ಎಂದು ಕಿಡಿಕಾರಿದರು.

ತೆರಿಗೆ ಮತ್ತು ಅನುದಾನದಲ್ಲಿ ಕರ್ನಾಟಕದ ನ್ಯಾಯಸಮ್ಮತ ಪಾಲನ್ನು ನಿರಾಕರಿಸುವುದು ಮತ್ತು ಕನ್ನಡಿಗರ ಹಿತದೃಷ್ಟಿಯಿಂದ ನಿರ್ಮಿಸಲಾಗುತ್ತಿರುವ ಕೃಷಿ, ನೀರಾವರಿ, ರಕ್ಷಣೆ ಮತ್ತು ಮೂಲಸೌಕರ್ಯ ಯೋಜನೆಗಳಿಗೆ ಅಡ್ಡಿಪಡಿಸುವ ಮೂಲಕ ಬಿಜೆಪಿ ತನ್ನ ವಿರೋಧಿ ನೀತಿಯನ್ನು ಪ್ರದರ್ಶಿಸುತ್ತಿದೆ ಎಂದರು. 14ನೇ ಮತ್ತು 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಬರಬೇಕಿದ್ದ ಪಾಲು 79,770 ಕೋಟಿ ರೂ.ಗಳ ನಿರಾಕರಣೆ, ಅವೈಜ್ಞಾನಿಕ ಜಿಎಸ್‌ಟಿ ಜಾರಿಯಿಂದ ರಾಜ್ಯಕ್ಕೆ 59,274 ಕೋಟಿ ರೂ. ಮತ್ತು ಹೊಸ ಜಿಎಸ್‌ಟಿ ಪರಿಷ್ಕರಣೆಯಿಂದ ರಾಜ್ಯಕ್ಕೆ 9 ಸಾವಿರ ಕೋಟಿ ರೂ. ನೇರ ನಷ್ಟವಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ 5,300 ಕೋಟಿ ರೂ. ಘೋಷಿಸಿ ಬಿಡುಗಡೆ ಮಾಡಲಿಲ್ಲ ಎಂದು ಕಿಡಿಕಾರಿದರು.

ಕಿರುಸುದ್ದಿ

ಗೌರವ ಡಾಕ್ಟರೇಟ್ ನಿರಾಕರಿಸಿದ ಬೊಮ್ಮಾಯಿ

ಬೆಂಗಳೂರು: ಹಾವೇರಿ ವಿಶ್ವವಿದ್ಯಾಲಯವು ಘೋಷಿಸಿರುವ ಗೌರವ ಡಾಕ್ಟರೇಟ್ ಅನ್ನು ಸಂಸದ ಬಸವರಾಜ ಬೊಮ್ಮಾಯಿ ನಿರಾಕರಿಸಿದ್ದು, ಸಾರ್ವಜನಿಕ ಸೇವೆಗೆ ಜನರ ಪ್ರೀತಿ ಮತ್ತು ವಿಶ್ವಾಸವೇ ನನಗೆ ಅತ್ಯಂತ ದೊಡ್ಡ ಗೌರವವೆಂದು ಭಾವಿಸುತ್ತೇನೆ. ಆದ್ದರಿಂದ ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲವೆಂದು ವಿನಮ್ರವಾಗಿ ಪುನರುಚ್ಚರಿಸುತ್ತೇನೆ ಎಂದು ತಿಳಿಸಿದ್ದಾರೆ. ಡಾಕ್ಟರೇಟ್ ನಿರಾಕರಿಸಿರುವ ಕುರಿತು ಎಕ್ಸ್‌ನಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, ನನಗೆ ಗೌರವ ಡಾಕ್ಟರೇಟ್ ನೀಡಲು ತೀರ್ಮಾನಿಸಿರುವುದಕ್ಕೆ ವಿಶ್ವವಿದ್ಯಾಲಯದ ಕುಲಪತಿಗಳು, ಉಪಕುಲಪತಿಗಳು, ಕುಲಸಚಿವರು ಹಾಗೂ ಸಿಂಡಿಕೇಟ್ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಧನ್ಯವಾದಗಳು. ನಾನು ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲವೆಂದು ಈಗಾಗಲೇ ಕುಲಪತಿಗಳಿಗೆ ತಿಳಿಸಿದ್ದೇನೆ ಎಂದಿದ್ದಾರೆ. ಗೌರವ ಡಾಕ್ಟರೇಟ್ ಎಂಬುದು ದೀರ್ಘಕಾಲದಿಂದ ಯಾವುದಾದರೂ ಕ್ಷೇತ್ರದಲ್ಲಿ ವಿಶಿಷ್ಟ ಮತ್ತು ಮಹತ್ತರ ಸೇವೆ ಸಲ್ಲಿಸಿದವರಿಗೆ ನೀಡಬೇಕಾದ ಗೌರವವೆಂಬುದು ನನ್ನ ಅಭಿಪ್ರಾಯ. ಹೀಗಾಗಿ ಇದನ್ನು ಅಂಥ ಸಾಧಕರಿಗೆ ನೀಡಬೇಕು. ರಾಜಕಾರಣಿಗಳಿಗೆ ಅಥವಾ ಸ್ವಯಂ ಪ್ರೇರಣೆಯಿಂದ ಸಮಾಜ ಸೇವೆಯಲ್ಲಿ ತೊಡಗಿರುವವರಿಗೆ ಗೌರವ ಡಾಕ್ಟರೇಟ್ ನೀಡುವುದು ಸಮಂಜಸವಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ವಿಷಯದಲ್ಲಿ ಪುನರ್ ವಿಚಾರ ಮಾಡಬೇಕೆಂದು ವಿನಂತಿಸುತ್ತೇನೆ ಎಂದು ತಿಳಿಸಿದ್ದಾರೆ.



ಎರಡು ಪ್ರತ್ಯೇಕ ಅಪಘಾತ: ನಾಲ್ವರ ಸಾವು

ತುಮಕೂರು/ ಚಿತ್ರದುರ್ಗ: ಎರಡು ಪ್ರತ್ಯೇಕ ರಸ್ತೆ ಅಪಘಾತ ಪ್ರಕರಣದಲ್ಲಿ ನಾಲ್ವರು ಮೃತಪಟ್ಟಿದ್ದು ಹಲವರು ಗಾಯಗೊಂಡಿರುವ ಘಟನೆ ತುಮಕೂರು ಮತ್ತು ಚಿತ್ರದುರ್ಗದಲ್ಲಿ ನಡೆದಿದೆ. ತುಮಕೂರು ಜಿಲ್ಲೆಯ ಶಿರಾ ಹೊರವಲಯದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಸಂಭವಿಸಿದೆ. ನಿಂತಿದ್ದ ಖಾಸಗಿ ಬಸ್‌ಗೆ ಹಿಂದಿನಿಂದ ಬಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ಭೀಕರವಾಗಿ ಡಿಕ್ಕಿ ಹೊಡೆದಿದೆ. ಈ ಘಟನೆಯಲ್ಲಿ ಇಬ್ಬರು ಯುವಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಸ್‌ನಲ್ಲಿದ್ದ ಹತ್ತಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಕೆಎಸ್‌ಆರ್‌ಟಿಸಿ ಬಸ್ ಹಿಂದಿನಿಂದ ಬಂದು ಖಾಸಗಿ ಬಸ್‌ಗೆ ಡಿಕ್ಕಿ ರಭಸಕ್ಕೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿದ್ದ ಹತ್ತಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ತಕ್ಷಣ ಶಿರಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಲಾರಿ-ಕಾರು ಮುಖಾಮುಖಿ: ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ರಾಜಾಪುರ ಬಳಿ ಲಾರಿ ಮತ್ತು ಕಾರು ಮುಖಾಮುಖಿ ಡಿಕ್ಕಿಯಾಗಿ ಸ್ಥಳದಲ್ಲಿಯೇ ಇಬ್ಬರು ಮೃತಪಟ್ಟಿದ್ದಾರೆ. ಮೃತರನ್ನು ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಚಿಕ್ಕನಹಳ್ಳಿ ಗ್ರಾಮದ ಕಾರಿನ ಚಾಲಕ ಕಿರಣ್ ಗೌಡ (24) ಹಾಗೂ ಬೆಂಗಳೂರಿನ ಲಗ್ಗೆರೆಯ ಮುನೇಶ್ವರ ಲೇಔಟ್ ಸಿಬೇ ಗಾರ್ಡನ್ ನಿವಾಸಿ ಜೇಮ್ಸ್ ರವಿಚಂದ್ರ (42) ಎಂದು ಗುರುತಿಸಲಾಗಿದೆ. ಈ ಕುರಿತು ರಾಂಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಗಲಕೋಟೆಯಲ್ಲಿ ಕರಪತ್ರ ಹಂಚಿದ್ದವರ ವಿರುದ್ಧ ಕ್ರಮಕ್ಕೆ ಆಗ್ರಹ

ಗೂಂಡಾ ಸರ್ಕಾರ: ಅಶೋಕ

ಬಾಗಲಕೋಟೆ: ಕಾಂಗ್ರೆಸ್ ಕಾರ್ಯಕರ್ತರು ಕರಪತ್ರವನ್ನು ಹಂಚುವ ಮೂಲಕ ಬಿಜೆಪಿಗೆ ಮತ ಹಾಕಿದರೆ ಜೈಲಿಗೆ ಕಳುಹಿಸಲಾಗುವುದು ಎಂದು ಕರಪತ್ರ ಹಂಚಿಕೆ ಬೆದರಿಕೆ ಹಾಕುತ್ತಿರುವುದನ್ನು ನೋಡಿದರೆ ರಾಜ್ಯದಲ್ಲಿ ಗೂಂಡಾ ಸರ್ಕಾರವಿದೆಯಾ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರ ವಿರುದ್ಧ ಕರಪತ್ರ ಹಂಚಿದ್ದ ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಬಳಿಕ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು. ಚುನಾವಣೆ ನಡೆಯುತ್ತಿದ್ದರೂ ಇಲ್ಲಿಯ ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ. ಇತ್ತೀಚಿಗೆ ಬಾಗಲಕೋಟೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವುಕುಮಾರ ಭೇಟಿ ನೀಡಿದ ಸಂದರ್ಭದಲ್ಲಿ ಅಕ್ರಮ ಮತದಾನ ಮಾಡುವವರು ಹಾಗೂ ಬೇರೆ ರಾಜ್ಯದವರು ಇಲ್ಲಿ ಮತದಾನ ಮಾಡಿದರೆ ಜೈಲಿಗೆ ಕಳಿಸಲಾಗುವುದು ಇಲ್ಲಿ ಅದನ್ನು ನೋಡಿಕೊಳ್ಳಲು ನಮ್ಮ ತಂಡವಿದೆ ಎಂದು ಭಯ ಹುಟ್ಟಿಸಿ ಹೋಗಿದ್ದು, ಈಗ ಕರಪತ್ರ ಹಂಚಲು ಅವರ ಪ್ರಚೋದನೆಯೇ ಕಾರಣವಾಗಿದೆ ಎಂದು ಹೇಳಿದರು.

ಬಿಜೆಪಿ ಅಭ್ಯರ್ಥಿ ವಿರುದ್ಧ ಕರಪತ್ರ ಹಂಚಿಕೆ ಮಾಡಿದ ಎನ್‌ಎಸ್‌ಯು ಕಾರ್ಯಕರ್ತರನ್ನು ಪೊಲೀಸ್ ಠಾಣೆಗೆ ಕರೆತಂದು ಅವರಿಗೆ ರಾಜಮರ್ಯಾದೆಯನ್ನು ನೀಡಲಾಗಿದೆ. ಪೊಲೀಸ್ ಠಾಣೆಯಲ್ಲಿಯೇ ನಿಂತು ಕರ ಪತ್ರ ಹಂಚಿದವರು ಲೈವ್ ವಿಡಿಯೋ ಮಾಡು ತ್ತಾರೆಂದರೆ ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿದ್ದಾರೆಂದು ಸಾಬೀತಾಗಿದೆ. ಮುಖ್ಯಮಂತ್ರಿ, ಡಿಸಿಎಂ ಗೂಂಡಾಗಿರಿ ನೇತೃತ್ವ ವಹಿಸಿದ್ದಾರೆ. ವಿದ್ಯಾರ್ಥಿಗಳು ಧೈರ್ಯವಾಗಿ ಮತದಾನ ಮಾಡಬೇಕು. 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬರಲಿದೆ ಎಂದರು. ನೂರಾರು ಕೋಟಿ ರೂ.ಗಳನ್ನು ಚುನಾವಣೆಗೆ ಹಂಚಲು ಸರ್ಕಾರದವರು ತಂದಿದ್ದಾರೆ. ಬಾಗಲಕೋಟೆಯಲ್ಲಿ ಭಯದ ವಾತಾವರಣ ಸೃಷ್ಟಿ ಮಾಡಲಾಗುತ್ತಿದೆ. ಶಾಂತಿಯುತ ಚುನಾವಣೆಗೆ ಜಿಲ್ಲಾಡಳಿತ ಮುಂದಾಗಬೇಕು ಎಂದರು.

ಬಿಜೆಪಿಯಿಂದ ಉಚ್ಚಾಟನೆಯಾಗಿರುವ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷಕ್ಕೆ ಮರಳಿ ಸೇರ್ಪಡೆ ಮಾಡಿಕೊಳ್ಳುವ ಕುರಿತು ಪಕ್ಷದ ಹೈಕಮಾಂಡ್ ನಿರ್ಣಯ ಕೈಗೊಳ್ಳಲಿದೆ. ಯತ್ನಾಳ ಅವರು ಹಿಂದೂತ್ವದ ಬ್ರ್ಯಾಂಡ್ ಆಗಿದ್ದಾರೆ. ಯತ್ನಾಳ, ಕಾರಜೋಳ, ಬೊಮ್ಮಾಯಿ, ಹೀಗೆ ಬಿಜೆಪಿ ನಾಯಕರು ಚುನಾವಣೆ ಪ್ರಚಾರಕ್ಕೆ ಬಂದಿದ್ದರಿಂದ ಸರ್ಕಾರಕ್ಕೆ ಸೋಲಿನ ಭಯ ಹುಟ್ಟಿದೆ. ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಗೆಲ್ಲಲಿದ್ದಾರೆ ಎಂದರು.

ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಕೆಲವು ಕಾಂಗ್ರೆಸ್ ನಾಯಕರು ಬೆಂಬಲ ಕೊಡುತ್ತಿದ್ದಾರೆ ಇವರಲ್ಲಿ ಡಿ.ಕೆ.ಶಿವುಕುಮಾರ ಕೂಡ ಇದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಿಎಂ ಹುದ್ದೆಯಿಂದ ಮನೆಗೆ ಕಳುಹಿಸಲು ಬಿಜೆಪಿ ಅಭ್ಯರ್ಥಿ ಗೆಲ್ಲಬೇಕು ಎಂದು ಡಿ.ಕೆ.ಶಿವುಕುಮಾರ ಅವರ ಆಶಯವಾಗಿದೆ ಎಂದರು.



ವಿದ್ಯಾರ್ಥಿಗಳಿಗೆ ಬೆದರಿಕೆ

ಕಾಂಗ್ರೆಸ್ ಪಕ್ಷದ ಸರ್ಕಾರದಿಂದ ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ಕಾಲೇಜಿನಲ್ಲಿ ವಿದ್ಯಾರ್ಥಿಗಳ ಬಳಿ ಹೋಗಿ ಕರಪತ್ರ ಹಂಚಿಕೆ ಮಾಡಿ ವಿದ್ಯಾರ್ಥಿಗಳಿಗೆ ಬೆದರಿಕೆ ಹಾಕುವ ಕೆಲಸ ಮಾಡಲಾಗಿದೆ. ಇನ್ನೂ ಈ ಪ್ರಕರಣದ ಕುರಿತು ಚುನಾವಣಾ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ನ್ಯಾಯಸಮ್ಮತ ತನಿಖೆಯನ್ನು ನಡೆಸಲು ಹೊರಗಿನ ಅಧಿಕಾರಿಗಳನ್ನು ಇಲ್ಲಿಗೆ ನೇಮಕ ಮಾಡಬೇಕು ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಆಗ್ರಹಿಸಿದರು.

ಕೇರಳ ಟೆಕ್ಕಿ ಜಿಎಸ್ ಶರಣ್ಯ ಪತ್ತೆ

ಬೆಂಗಳೂರು: ಕೊಡಗು ಜಿಲ್ಲೆಯ ತಡಿಯಾಂಡಮೋಲ್ ಶಿಖರಕ್ಕೆ, ಕೇರಳದಿಂದ ಚಾರಣಕ್ಕಾಗಿ ಬಂದು ಏ.2ರಂದು ನಾಪತ್ತೆಯಾಗಿದ್ದ ಜಿ.ಎಸ್. ಶರಣ್ಯ ಪತ್ತೆಯಾಗಿದ್ದಾರೆ ಮತ್ತು ಆರೋಗ್ಯವಾಗಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಭಾನುವಾರ ತುರ್ತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 9 ತಂಡಗಳು ಹಗಲಿರುಳು ಕಾರ್ಯಾಚರಣೆ ನಡೆಸಿ ಯುವತಿಯನ್ನು ಕರೆತಂದಿದ್ದಾರೆ. ಅವರನ್ನು ಸುರಕ್ಷಿತವಾಗಿ ಕೇರಳದ ಅವರ ಮನೆಗೆ ತಲುಪಿಸುವಂತೆ ಸೂಚಿಸಿರುವುದಾಗಿ ತಿಳಿಸಿದರು.

ಚಾರಣಕ್ಕೆ ಬಂದಿದ್ದ ಶರಣ್ಯ ಏ.2ರಂದು ಇತರ 15 ಮಂದಿ ಚಾರಣಿಗರೊಂದಿಗೆ ಮತ್ತು ನೇಚರ್ ಗೈಡ್ ಜೊತೆಯಲ್ಲಿ ಚಾರಣಕ್ಕೆ ಹೋಗಿದ್ದರು. ಆದರೆ, ಮಧ್ಯಾಹ್ನ ಮೂಲ ನೆಲೆಗೆ ಎಲ್ಲ ಚಾರಣಿಗರು ಬಂದಾಗ ಇವರು ದಾರಿ ತಪ್ಪಿರುವುದು ತಿಳಿಯಿತು. ವಿಷಯ ತಿಳಿದ ಕೂಡಲೇ ಅಂದಿನಿಂದಲೇ 5 ತಂಡಗಳಿಂದ ಶೋಧ ಕಾರ್ಯಾಚರಣೆ ನಡೆಸಲಾಗಿತ್ತು. ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಯುವತಿ ನಾಪತ್ತೆ ಆಗಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಮುಖ್ಯಮಂತ್ರಿಗಳ ಸೂಚನೆಯ ಮೇರೆಗೆ ಇಂದು ಹೆಚ್ಚುವರಿ ಸಿಬ್ಬಂದಿಯನ್ನು ಶೋಧ ಕಾರ್ಯಕ್ಕೆ ನಿಯೋಜಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ತಾವು ದಾವಣಗೆರೆ ಉಪ ಚುನಾವಣೆ ಪ್ರಚಾರಕ್ಕೆ ತೆರಳಿದ್ದಾಗ ವಿಷಯ ತಿಳಿಯಿತು. ಕೂಡಲೇ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದೆ. ಯುವತಿ ಈಗ ಪತ್ತೆಯಾಗಿದ್ದು, ಅವರೊಂದಿಗೆ ಸಹ ಮಾತನಾಡಿದ್ದೇನೆ. ಅವರು ಆರೋಗ್ಯವಾಗಿದ್ದಾರೆ ಎಂದು ಸಚಿವರು ಹೇಳಿದರು.



9 ತಂಡಗಳಿಂದ ಕಾರ್ಯಾಚರಣೆ

ಭಾನುವಾರ ಹೆಚ್ಚುವರಿಯಾಗಿ 40 ಅರಣ್ಯ ಸಿಬ್ಬಂದಿ ನಿಯೋಜಿಸಲಾಗಿತ್ತು. ಒಟ್ಟು 9 ತಂಡಗಳು ಶೋಧ ಕಾರ್ಯಾಚರಣೆ ನಡೆಸಿದ್ದವು. ಇದರಲ್ಲಿ ಪೊಲೀಸ್ ಇಲಾಖೆ, ನಕ್ಸಲ್ ನಿಗ್ರಹ ದಳ, ಅರಣ್ಯ ಇಲಾಖೆ ಸೇರಿದಂತೆ ಬಹು ಸಂಸ್ಥೆಗಳು ಸಹಯೋಗ ನೀಡಿದ್ದವು. ಸ್ಥಳೀಯ ಬುಡಕಟ್ಟು ಜನರೂ ಶೋಧ ಕಾರ್ಯಾಚರಣೆಗೆ ನೆರವಾಗಿದ್ದರು. ಎಲ್ಲರಿಗೂ ತಾವು ಅಭಿನಂದನೆ ಮತ್ತು ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದರು.

ಹೆಚ್ಚಿದ ಸಾಮಾಜಿಕ ಜಾಲತಾಣ ಬಳಕೆ

ಬೆಂಗಳೂರು: ಇಂದಿನ ಮಕ್ಕಳು ಪುಸ್ತಕಗಳಿಗಿಂತ ಹೆಚ್ಚಾಗಿ ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳಂತಹ ಸಾಮಾಜಿಕ ಜಾಲತಾಣಗಳನ್ನು ನೋಡುವುದು ಹೆಚ್ಚಾಗಿದೆ. ಇದರಿಂದ ಮಕ್ಕಳ ಕಲಿಕೆ ಕುಂಠಿತವಾಗಿವೆ. ಈಗಿನ ಮಕ್ಕಳು, ಓದುವ ಕಲೆಯನ್ನು ಹೆಚ್ಚಿಸಿಕೊಳ್ಳಬೇಕು. ಅವರು ತಮ್ಮ ಕಲ್ಪನಾಶಕ್ತಿ, ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಪ್ರಜಾವಾಣಿ ಸಂಪಾದಕ ರವೀಂದ್ರ ಭಟ್ಟ ತಿಳಿಸಿದರು.

ಭಾನುವಾರ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಬೆರಗು ಪ್ರಕಾಶನ ವತಿಯಿಂದ ಲೇಖಕಿ ಭಾರತಿ ವಸ್ತ್ರದ ಅವರ ಚೇತನ ಭಾರತಿ, ಲೇಖಕಿ ಹಾಗೂ ಪತ್ರಕರ್ತೆ ರಶ್ಮಿ ಎಸ್. ಅವರ ಮಿದು ಮಾತು ಹಾಗೂ ಆರ್ನಿ ಸಿ. ನವೀನ್ ಅವರ ಅಚೋಸ್ ಫ್ರಂ ಮೈ ಜಾರ್ ಕೃತಿಗಳು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಇಂದಿನ ಕಾಲಘಟ್ಟದಲ್ಲಿ ಎಲ್ಲದಕ್ಕೂ ಪರ್ಯಾಯವಾಗಿ ಮೊಬೈಲ್ ಬಳಕೆ ಮಾಡುವಂತಾಗಿದೆ. ನಾವೊಂದು ಚೌಕಟ್ಟನ್ನು ಹಾಕಿಕೊಂಡಿದ್ದೇವೆ. ಅದನ್ನು ಮೀರಿ ಓದು ಹಾಗೂ ಸಾಹಿತ್ಯದ ಕಡೆ ಹೆಚ್ಚು ಒತ್ತು ನೀಡುವ ಅಗತ್ಯವಿದೆ. ತಮ್ಮ ಮಕ್ಕಳು ಕನಿಷ್ಠ ಪಕ್ಷ ಓದುವುದನ್ನು ರೂಢಿಸಿಕೊಳ್ಳಲಿ ಎಂಬುದು ಪ್ರತಿಯೊಬ್ಬ ತಂದೆ-ತಾಯಿಯ ಆಶಯವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಅಂಕಣಕಾರ ಎಸ್. ರವಿಶಂಕರ್, ಬೆರಗು ಪ್ರಕಾಶನದ ವಿಜಯಲಕ್ಷ್ಮಿ ಕತ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿಯ ಆಯೇಷಾ ಖಾನಂ, ಪ್ರಕಾಶ್ ಕಂಬತ್ತಳ್ಳಿ, ಗಿರೀಶ್ ಎಸ್. ತಿಳಿ, ಸಂತೋಷ್ ಎಸ್. ತಿಳಿ ಮತ್ತಿತರರಿದ್ದರು.



> ಗಜಲ್‌ಗಳೇ ನನ್ನ ಬರವಣಿಗೆಗೆ ಕಾರಣವಾಯಿತು. ನನ್ನ ತಾಯಿ ಕೂಡ ಉದ್ಯೋಗಸ್ಥ ಮಹಿಳೆಯಾಗಿದ್ದರು. ಅವರಿಗೆ ನಮಗಿದ್ದ ಅನುಕೂಲತೆಗಳು ಸಹ ಇರಲಿಲ್ಲ. ಕೆಲಸದ ಒತ್ತಡ ಹಾಗೂ ಮನೆಯ ಜವಾಬ್ದಾರಿಯನ್ನು ಜೊತೆ ಜೊತೆಗೆ ನಿಭಾಯಿಸಿಕೊಂಡು ಹೋಗುತ್ತಿದ್ದ ಅವರ ಜೀವನ ಸಹ ಸಾಕಷ್ಟು ಪ್ರೇರೇಪಣೆ ನೀಡಿತು.
>
> ■ ರಶ್ಮಿ ಎಸ್., ಲೇಖಕಿ

ಎಐ ಸಂಶೋಧಕರಿಗೆ ಆನೆಬಲ: ಪವನಜ

ಬೆಂಗಳೂರು: ತಂತ್ರಜ್ಞಾನವು ಕೇವಲ ಇಂಗ್ಲಿಷ್‌ಗೆ ಸೀಮಿತವಲ್ಲ. ಎಐ ತಂತ್ರಜ್ಞಾನ ಕನ್ನಡ ಮತ್ತು ಕನ್ನಡದ ಸಂಶೋಧಕರಿಗೂ ಆನೆಬಲ ನೀಡುತ್ತಿವೆ ಎಂದು ತಂತ್ರಜ್ಞ ಡಾ.ಪವನಜ ಯು.ಬಿ. ಹೇಳಿದರು.

ಮಿಥಿಕ್ ಸೊಸೈಟಿಯ ಸಭಾಂಗಣದಲ್ಲಿ ನಡೆದ ಸಿರಿಭೂವಲಯ ವಿಶ್ವಕೋಶ ಮತ್ತು ಕನ್ನಡ ಸಂಶೋಧನೆಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆಯ ಕುರಿತು ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಕೃತಕ ಬುದ್ಧಿಮತ್ತೆಯು ಲಭ್ಯವಿರುವ ದತ್ತಾಂಶಗಳ ಆಧಾರದ ಮೇಲೆ ನಿರಂತರವಾಗಿ ಕಲಿಯುತ್ತಾ ಸಾಗುತ್ತದೆ. ಇದರಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ. ಪ್ರೆಡಿಕ್ಟಿವ್ ಎಐ ಭವಿಷ್ಯದ ಮುನ್ಸೂಚನೆಗಳನ್ನು ನೀಡಲು ಬಳಕೆಯಾದರೆ, ಜನರೇಟಿವ್ ಎಐ ಹೊಸ ಲೇಖನ, ಕವನ ಅಥವಾ ಚಿತ್ರಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ ಎಂದರು.

ಸಂಶೋಧನಾ ಕ್ಷೇತ್ರಕ್ಕೆ ವರದಾನ: ಸಂಶೋಧನಾ ಕ್ಷೇತ್ರದಲ್ಲಿ ಎಐ ಕ್ರಾಂತಿಕಾರಿ ಬದಲಾವಣೆ ತರುತ್ತಿದೆ. ಸಾವಿರಾರು ಪುಟಗಳ ಮಾಹಿತಿ ಅಥವಾ ಹಳೆಯ ಹಸ್ತಪ್ರತಿಗಳನ್ನು ವಿಶ್ಲೇಷಿಸಿ ಕೆಲವೇ ನಿಮಿಷಗಳಲ್ಲಿ ಸಾರಾಂಶ ನೀಡುವುದು ಇದರಿಂದ ಸಾಧ್ಯ. ಭಾಷಾ ಅನುವಾದದಲ್ಲೂ ಇದು ಮಹತ್ತರ ಪಾತ್ರ ವಹಿಸುತ್ತಿದೆ. ಲೇಖಕರ ಬರವಣಿಗೆಯ ಶೈಲಿಯನ್ನು ಗುರುತಿಸಲು ಮತ್ತು ಕೃತಿಚೌರ್ಯವನ್ನು ಸುಲಭವಾಗಿ ಪತ್ತೆ ಹಚ್ಚಲು ಈ ತಂತ್ರಜ್ಞಾನ ಪೂರಕವಾಗಿದೆ ಎಂದು ಮಾಹಿತಿ ನೀಡಿದರು.



ಗಣಿತ ಸೂತ್ರಗಳಲ್ಲಿ ಜಗತ್ತಿನ ಜ್ಞಾನ


40 ವರ್ಷಗಳಿಂದ ಈ ಕೃತಿಯ ಸಂಶೋಧನೆಯಲ್ಲಿ ತೊಡಗಿರುವ ಹಿರಿಯ ಸಂಶೋಧಕ ಸುಧಾರ್ಥಿ ಹಾಸನ ಅವರು, ಕುಮುದೇಂದು ಮುನಿ ವಿರಚಿತ ಸಿರಿಭೂವಲಯ ಕಾವ್ಯ ವಿಸ್ಮಯವಾಗಿದೆ. ಸಿರಿಭೂವಲಯವು ಕೇವಲ ಒಂದು ಕಾವ್ಯವಲ್ಲ, ಅದು 718 ಭಾಷೆಗಳ ಸಾರವನ್ನು ಹೊಂದಿರುವ ಜಗತ್ತಿನ ಏಕೈಕ ಅಂಕ ಕಾವ್ಯ. ನವಮಾಂಕ ಪದ್ಧತಿಯನ್ನು ಬಳಸಿ ರಚಿಸಲಾದ ಈ ಕೃತಿಯಲ್ಲಿ ವಿಮಾನಯಾನ, ವೈದ್ಯಕೀಯ ಹಾಗೂ ಗಣಕ ವಿಜ್ಞಾನದಂತಹ ಆಧುನಿಕ ವಿಷಯಗಳೂ ಅಡಗಿವೆ. ಕ್ರಿಸ್ತ ಶಕ 800ರ ಸುಮಾರಿಗೆ ಗಂಗರ ಕಾಲದಲ್ಲಿ ಜೀವಿಸಿದ್ದ ಕುಮುದೇಂದು ಮುನಿಯು 16,000 ಪುಟಗಳ ಕೃತಿಯಲ್ಲಿ 6,000 ಗಣಿತ ಸೂತ್ರ ಬಳಸಿದ್ದಾರೆ ಎಂದರು.

ಎಚ್ಚರಿಕೆಯ ಹೆಜ್ಜೆ ಅಗತ್ಯ: ಎಐ ತಂತ್ರಜ್ಞಾನವು ವರವಾಗಿದ್ದರೂ ಅದನ್ನು ಬಳಸುವಾಗ ಎಚ್ಚರಿಕೆ ಅಗತ್ಯ ಎಂದು ತಿಳಿಸಿದರು.

ಪರೋಪಕಾರಾರ್ಥಮಿದಂ ಶರೀರಮ್

▸ ಗಿರಿಧರ್ ಉದ್ಯಾವರ

ಸೇವಾಗಾಥ ಕಥೆ-2



ಮನೆಯ ಹೊರಗೆ ಶವವಾಹನ ಮತ್ತು ಅಂಗಳದಲ್ಲಿ ಮೃತ ಪತಿಯ ದೇಹ! ಒಂದೆಡೆ, ವರ್ಷಗಳ ಹಿಂದೆ ಪತಿ ಕೈಗೊಂಡ ನಿರ್ಣಯವನ್ನು ಈಡೇರಿಸಲು ಕಾಯುತ್ತಿದ್ದ ಪತ್ನಿ. ಮತ್ತೊಂದೆಡೆ, ಅಮ್ಮನ ವಿರುದ್ಧ ಕೂಗಾಡುತ್ತಿರುವ ಮಕ್ಕಳು! ನಾವು ಅಪ್ಪನ ದೇಹವನ್ನು ಹಿಂಸಿಸಲು ಬಿಡುವುದಿಲ್ಲ, ಈ ಪದ್ಧತಿ ಸರಿಯಿಲ್ಲ. ಶಾಸ್ತ್ರೋಕ್ತವಾಗಿ ಅಂತ್ಯಕ್ರಿಯೆ ಮುಗಿಸುತ್ತೇವೆ. ಆಗ ಮೌನ ಮುರಿದ ಮೃತನ ಹೆಂಡತಿ ಉಮ್ಮಳಿಸುತ್ತಿದ್ದ ದುಃಖದಿಂದ ಆಡಿದ ಒಂದೇ ಮಾತಿನಿಂದ ಎಲ್ಲರೂ ಸುಮ್ಮನಾದರು. ನನ್ನ ಪತಿ ದೇಹದಾನದ ಸಂಕಲ್ಪ ಮಾಡಿದ್ದಾರೆ, ಅಷ್ಟೇ! ಯಾರನ್ನೂ ಇದಕ್ಕೆ ಅಡ್ಡಿಯಾಗಲು ನಾನು ಬಿಡುವುದಿಲ್ಲ. 'ದಧೀಚಿ ದೇಹದಾನ ಸಮಿತಿಯ' ಪರವಾಗಿ ತಮ್ಮ ಕರ್ತವ್ಯ ನಿರ್ವಹಿಸಲು ತೆರಳಿದ್ದ ಸಮಿತಿಯ ಜಂಟಿ ಪ್ರಧಾನ ಕಾರ್ಯದರ್ಶಿ ಡಾ. ವಿಶಾಲ್ ಚಡ್ಡಾ ಹೇಳುವಂತೆ- ಅಂತಹ ಭಾವುಕ ಕ್ಷಣದಲ್ಲಿ, ಅಗಲಿರುವ ಗಂಡನ ನಿರ್ಧಾರವನ್ನು ಪೂರೈಸಲು ಹೊರಟ ಪತ್ನಿ ತನ್ನ ಸ್ವಂತ ಮಕ್ಕಳ ವಿರುದ್ಧ ನಿಂತಿದ್ದಳು. ಈ ಭಾವನೆ ಸಾಮಾನ್ಯವಲ್ಲ, ಆಧ್ಯಾತ್ಮಿಕವಾದದ್ದು ಮತ್ತು ಈ ರೀತಿಯ ಅನೇಕ ನೆನಪುಗಳು ದಧೀಚಿ ಪರಿವಾರದಲ್ಲಿವೆ. ಈ ಸತ್ಯ ಘಟನೆ ಶ್ರೀಮತಿ ಸಂಪೂರ್ಣ ಜೀತ್ ಕೌರ್ ಮತ್ತು ಡಾಕ್ಟರರಾಗಿದ್ದ ಅವರ ದಿವಂಗತ ಪತಿಗೆ ಸಂಬಂಧಿಸಿದ್ದು.

ದೇಹದಾನದ ಸಂಕಲ್ಪ ಎನ್ನುವುದು ಜೀವನದ ನಂತರವೂ ಬದುಕುವ ಒಂದು ವಿಶಿಷ್ಟ ಪ್ರಯಾಣ. ಈ ಸಂಕಲ್ಪವನ್ನು ಮಾಡಿಸುವವರೂ ಈ ಯಾತ್ರೆಯ ಭಾಗಿಗಳೇ. ಇಂಥ ಪುಣ್ಯಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪ ನೀಡಲು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಖ್ಯಾತ ಪ್ರಚಾರಕರಾದ ದಿವಂಗತ ನಾನಾಜಿ ದೇಶಮುಖರು, ಮಹರ್ಷಿ ದಧೀಚಿ ಅವರಿಂದ ಪ್ರೇರಿತರಾಗಿ, ಅಕ್ಟೋಬರ್ 11, 1997ರಂದು ದಧೀಚಿ ದೇಹದಾನ/ಅಂಗದಾನ ಸಮಿತಿಯನ್ನು ರಚಿಸಿದ್ದಲ್ಲದೆ, ಮೊದಲ ದೇಹದಾನ ನಿರ್ಣಯಪತ್ರವನ್ನು ತಾವೇ ತುಂಬಿದ್ದರು. ಈ ಸಮಿತಿಯು ದೆಹಲಿಯ ಎನ್.ಸಿ. ಆರ್, ಬುಲಂದ್ಶಹರ್ ಸೇರಿದಂತೆ ಸುಮಾರು 9 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸುಮಾರು 300 ಕಾರ್ಯಕರ್ತರ ಕಠಿಣ ಪರಿಶ್ರಮದ ಫಲವಾಗಿ, ಕಳೆದ 13 ವರ್ಷಗಳಲ್ಲಿ ಸುಮಾರು 1300 ಮೃತ ವ್ಯಕ್ತಿಗಳ ವಿವಿಧ ಅಂಗಗಳು ಇತರರ ದೇಹಗಳಲ್ಲಿ ಇನ್ನೂ ಜೀವಂತವಾಗಿವೆ. ಇದರಲ್ಲಿ 375 ಮಂದಿಯ ಸಂಪೂರ್ಣ ದೇಹ ಹಾಗೂ 925ಕ್ಕೂ ಹೆಚ್ಚು ಜನರ ಕಣ್ಣುಗಳನ್ನು ದಾನ ಮಾಡಲಾಗಿದೆ. ಸಮಿತಿಯ ಸ್ವಯಂಸೇವಕರು ಈವರೆಗೆ 18000ಕ್ಕೂ ಹೆಚ್ಚು ಸಂಕಲ್ಪಪತ್ರಗಳನ್ನು ಭರ್ತಿ ಮಾಡಿದ್ದಾರೆ.

ಇಷ್ಟೇ ಅಲ್ಲ, ದಧೀಚಿ ದೇಹದಾನ ಸಮಿತಿಯಿಂದ ಸ್ಫೂರ್ತಿ ಪಡೆದ ಇತರ 46 ಸಮಿತಿಗಳು ಈಗ ಸ್ವತಂತ್ರವಾಗಿ ದೇಶಾದ್ಯಂತ ಇದೇ ಕೆಲಸ ನಿರ್ವಹಿಸುತ್ತಿವೆ. ಅವೆಲ್ಲವುಗಳ ಮಾರ್ಗದರ್ಶನ ಮತ್ತು ನಾಯಕತ್ವವನ್ನು ದಧೀಚಿ ದೇಹದಾನ ಸಮಿತಿಯ ಸಂಸ್ಥಾಪಕ, ಪೋಷಕ ಮತ್ತು ವಿಶ್ವ ಹಿಂದೂ ಪರಿಷತ್ತಿನ ಪ್ರಸ್ತುತ ಕಾರ್ಯಾಧ್ಯಕ್ಷರಾದ ಶ್ರೀಮಾನ್ ಆಲೋಕ್ ಜೀಯವರೇ ವಹಿಸಿದ್ದಾರೆ.

ಸಮಿತಿಯ ಉಪಾಧ್ಯಕ್ಷೆ 'ಂಜು ಪ್ರಭಾ ಮಾತನಾಡಿ, ದೇಹದಾನ ಮಾಡಲು ಆರಂಭದಲ್ಲಿ ಹಲವು ತೊಂದರೆಗಳು ಎದುರಾದವು. ಕೆಲವೊಮ್ಮೆ ಮೃತದೇಹ ಸಾಗಿಸಲು ವಾಹನಗಳು ಇರುತ್ತಿರಲಿಲ್ಲ, ಕೆಲವೊಮ್ಮೆ ಡ್ರೈವರ್ ಇರುತ್ತಿರಲಿಲ್ಲ, ಕೆಲವೊಮ್ಮೆ ಕುಟುಂಬದವರು ನಿರ್ಣಯ ತೆಗೆದುಕೊಳ್ಳುವಷ್ಟರಲ್ಲಿ ಕಾಲ ಮಿಂಚಿರುತ್ತಿತ್ತು. ಕೆಲವೊಮ್ಮೆ ಮೃತದೇಹ ಸ್ವೀಕರಿಸಬೇಕಾದ ವೈದ್ಯಕೀಯ ಕಾಲೇಜುಗಳಿಗೆ ಕರೆ ಮಾಡಿದರೂ ಉತ್ತರವಿಲ್ಲ, ಅಥವಾ ಉತ್ತರಿಸಿದರೂ ಮೃತದೇಹವನ್ನಿಡುವ ಟಬ್ ಇರುತ್ತಿರಲಿಲ್ಲ. ಸುಮಾರು 3-4 ವರ್ಷಗಳ ಅವಿರತ ಪ್ರಯತ್ನದ ಬಳಿಕ ದೆಹಲಿಯ ಯಾವುದೇ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ದೇಹದಾನದ ಪ್ರಕ್ರಿಯೆ 24/7 ಸುಗಮವಾಗುವ ಪರಿಸ್ಥಿತಿ ನಿರ್ಮಾಣವಾಯಿತು. ಓಆಖನಲ್ಲಿ ತೆರೆಯಲಾಗುತ್ತಿರುವ ಕಾಲೇಜುಗಳ ಮೃತದೇಹದ ಬೇಡಿಕೆಯೂ ಈಗ ಪೂರೈಕೆಯಾಗುತ್ತಿದೆ.

ದೇಹದಾನದ ನಿರ್ಣಯವು ಒಂದೆಡೆ ನಮ್ಮ ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ನಾನು ಈ ದೇಹವಲ್ಲ, ಆತ್ಮ ಮತ್ತು ಈ ದೇಹವು ಇಹಲೋಕದ ಪ್ರಯಾಣಕ್ಕೆ ಕೇವಲ ಸಾಧನವಷ್ಟೇ ಎಂಬ ಭಾವನೆಯನ್ನು ಉದ್ದೀಪಿಸುತ್ತದೆ. ಇನ್ನೊಂದೆಡೆ, ಈ ದೇಹದ ಆರೋಗ್ಯ ಕಾಪಾಡಲು ಮತ್ತು ಇದನ್ನು ಗಟ್ಟಿಮುಟ್ಟಾಗಿರಿಸಲು ಪ್ರೇರಣೆ ನೀಡುತ್ತದೆ. ಏಕೆಂದರೆ ಉತ್ತಮ ದೇಹದ ಅಂಗಗಳು ಮಾತ್ರ ಇತರರ ಒಳಿತಿಗೆ ಬಳಕೆಯಾಗುತ್ತವೆ. ಕೊನೆಗಾಲದಲ್ಲಿರುವ ವ್ಯಕ್ತಿಗೆ, ತನ್ನ ಪಾರ್ಥಿವ ಶರೀರವೂ ಮತ್ತೊಬ್ಬರ ನೀರಸ, ದಣಿದ, ಹತಾಶ ಜೀವನಕ್ಕೆ ಹೊಸ ಭರವಸೆ, ಹೊಸ ಬೆಳಕು ಮತ್ತು ಹೊಸ ಜೀವವನ್ನು ತುಂಬಬಲ್ಲದೆಂಬ ಯೋಚನೆಯೇ, ಅದೆಷ್ಟು ತೃಪ್ತಿ ನೀಡಬಹುದಲ್ಲವೇ?? ಈ ಕುರಿತಾಗಿ ಬರೆಯುವುದು ಮತ್ತು ಹೇಳುವುದು ಎಷ್ಟು ಸರಳವೋ, ಈ ಕೆಲಸವನ್ನು ಸಕಾಲದಲ್ಲಿ ಮಾಡಿ ಮುಗಿಸುವುದು ಅಷ್ಟೇ ಕಷ್ಟಕರ.

ದಾನ ಬಯಸುವ ಕುಟುಂಬದವರು ಸಮಿತಿಗೆ ಒಂದು ಕರೆ ಮಾಡಿದರೆ ಸಾಕು, ಬಳಿಕ ಅಂತಿಮ ಘಟ್ಟದವರೆಗೆ ನಮ್ಮ 300 ಸ್ವಯಂಸೇವಕರು ನಿಸ್ವಾರ್ಥವಾಗಿ ಹಗಲಿರುಳೂ ಖುದ್ದಾಗಿ ಸಹಾಯ ಮಾಡುತ್ತಾರೆ ಎಂದು ಸಮಿತಿಯ ಅಧ್ಯಕ್ಷ ಹರ್ಷದೀಪ್ ಜೀ ಹೇಳುತ್ತಾರೆ. ದಾನಿಗಳು ಮತ್ತು ಫಲಾನುಭವಿಗಳೆಲ್ಲರೂ ದಧೀಚಿ ಕುಟುಂಬದ ಸದಸ್ಯರಾಗುವ ಮೂಲಕ ಸಮಾಜದಲ್ಲಿ ದೇಹದಾನ ಮತ್ತು ಅಂಗದಾನದ ಜಾಗೃತಿಯನ್ನು ಪ್ರೇರೇಪಿಸುತ್ತಾರೆ. ಸಮಿತಿಯಿಂದ ನಡೆಯುವ ನೈಮಿಷಾರಣ್ಯ ತೀರ್ಥಯಾತ್ರೆ ಹಾಗೂ ಮಹರ್ಷಿ ದಧೀಚಿಯ ದೇಹದಾನದ ಕಥಾನಕವು ಇಂದು ಸಮಾಜದಲ್ಲಿ ದೇಹದಾನದ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದೆ.

ಸಿದ್ದರಾಮಯ್ಯ ವಿರುದ್ಧ ಛಲವಾದಿ ವಾಗ್ದಾಳಿ

ದಾವಣಗೆರೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅನ್ನರಾಮಯ್ಯ ಅಲ್ಲ. ಅವರೊಬ್ಬ ಡೋಂಗಿ ರಾಜಕಾರಣಿ. ಕನ್ನರಾಮಯ್ಯ. ಎನ್ನುವುದು ಇನ್ನೂ ಸೂಕ್ತ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದರು.



▸▸ 42 ಸಾವಿರ ಕೋಟಿ ರೂ. ಗ್ಯಾರಂಟಿ ಬಳಕೆ

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅನ್ನಭಾಗ್ಯ ಹೆಸರಿನಲ್ಲಿ ಪ್ರಧಾನಿ ಮೋದಿಯವರು ಕೊಟ್ಟ ಅಕ್ಕಿ ಬಿಟ್ಟು ಬೇರೇನನ್ನೂ ರಾಜ್ಯದ ಕಾಂಗ್ರೆಸ್ ಸರ್ಕಾರ ಜನರಿಗೆ ನೀಡಿಲ್ಲ. ಎಲ್ಲದಕ್ಕೂ ಕನ್ನ ಹಾಕುತ್ತಿದ್ದಾರೆ. ದಲಿತರ ಹಣವನ್ನೂ ಕೊಳ್ಳೆ ಹೊಡೆದರು. ಸಿದ್ದರಾಮಯ್ಯ ಹೇಳು ವುದೊಂದು, ಮಾಡುವುದೊಂದು. ಒಂದು ಕಡೆ ಘೋಷಣೆ, ಮತ್ತೊಂದು ಕಡೆ ಶೋಷಣೆ, ಇದೇ ಅವರ ನೀತಿ ಎಂದು ಟೀಕಿಸಿದರು.

ದಲಿತರಿಗೆ 42 ಸಾವಿರ ಕೋಟಿ ರೂ. ಇಟ್ಟಿದ್ದೇನೆ ಎಂದು ಹೇಳಿದರು. ಅದರ ಹಣವನ್ನು ಗ್ಯಾರಂಟಿಗಳಿಗೆ ಬಳಸಿದರು. ಎಲ್ಲಾ ಕಡೆ ಸುಳ್ಳು ಹೇಳಿದರು. ಇಷ್ಟೊಂದು ಹಣ ದಲಿತರಿಗೆ ಕೊಡ್ತಾರೆ ಅಂತಾ ಜನ ಅಂದುಕೊಂಡಿದ್ದರು. ಆದರೆ ಅವರ ಹಣ ಬೇರೆ ಕಡೆ ಬಳಸಿ ದಲಿತರಿಗೆ ಮೋಸ ಮಾಡಿದರು.

56 ಸಾವಿರ ಖಾಲಿ ಹುದ್ದೆ ತುಂಬುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದರು. ಆದರೆ ರಾಜ್ಯದಲ್ಲಿ ನಾಲ್ಕು ಲಕ್ಷ ಹುದ್ದೆ ಖಾಲಿ ಇವೆ. ಅವನ್ನು ಯಾಕೆ ತುಂಬಿಲ್ಲ. ಅದಕ್ಕೆ ಯಾರ ಅನುಮತಿ ಬೇಕು. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅಥವಾ ಪ್ರಿಯಾಂಕಾ ಗಾಂಧಿ ಅವರ ಅನುಮತಿ ಬೇಕೇ? ಎಂದು ಅವರು ಪ್ರಶ್ನಿಸಿದರು.

ಸಿದ್ದರಾಮಯ್ಯ ಸಮಾಜವಾದಿ ಅಲ್ಲ, ಅವರೊಬ್ಬ ಮಜಾವಾದಿ. ಅವರು ಕಾಂಗ್ರೆಸ್ ಹೊಸ್ತಿಲು ತುಳಿಯುವವರೆಗೆ ನಾನೂ ಅವರ ಅಭಿಮಾನಿಯಾಗಿದ್ದೆ. ಜನತಾ ದಳದಲ್ಲಿ ಇದ್ದಾಗ ಚೆನ್ನಾಗಿದ್ದರು. ಆನಂತರ ಬದಲಾದರು. ಅಪ್ಪಟ ಕಾಂಗ್ರೆಸ್ಸಿನವರು ಹೇಳುವ ಸುಳ್ಳಿಗಿಂತ ಹೆಚ್ಚು ಸುಳ್ಳನ್ನು ಸಿದ್ದರಾಮಯ್ಯ ಹೇಳುತ್ತಾರೆ. ಸುಳ್ಳು ಹೇಳದಿದ್ದರೆ ಹಾಗೂ ವಂಚನೆ ಮಾಡದಿದ್ದರೆ ಕಾಂಗ್ರೆಸ್ಸಿನಲ್ಲಿ ಬದುಕಲು ಆಗಲ್ಲ ಎಂದರು.

ಸಂಪಾದಕೀಯ

ಪಿಒಕೆ: ದೇಶ ಮಾತಾಡಬೇಕಾಗಿದೆ

ಭಾರತದ ಹಿಡಿತದಲ್ಲಿಲ್ಲದ ಕಾಶ್ಮೀರದ ಉತ್ತರ ಭಾಗದ (ಪಾಕ್ ಆಕ್ರಮಿತ ಕಾಶ್ಮೀರ) ಸಮೇತ ಭೂಪಟವನ್ನು ಬಿಡಿಸಿದರಷ್ಟೇ ಅದು ಸಂಪೂರ್ಣ ಭಾರತ! ಸ್ವಾತಂತ್ರ್ಯಾನಂತರದಿಂದಲೂ ಇದು ಭಾರತೀಯರಿಗೆ ಅದೆಷ್ಟು ಒಗ್ಗಿಹೋಗಿದೆಯೆಂದರೆ ಭೂಪಟವನ್ನು ಬಿಡಿಸುತ್ತಲೇ ಬೃಹತ್ತಾದ ಸಮಸ್ಯೆಯನ್ನು ಮೂಲೆಗೆ ಮಾಡಿಬಿಟ್ಟೆವು. ಆದರೆ ಕಳೆದೊಂದು ದಶಕದಿಂದ ಜನರಲ್ಲಿ ಹೊಸ ಅಭಿಪ್ರಾಯವೊಂದು ರೂಪುಗೊಂಡಿದೆ. ಹಿಂದೆಲ್ಲಾ ಪಾಕ್ ಆಕ್ರಮಿತ ಕಾಶ್ಮೀರವೆಂದರೆ ಅದೆಲ್ಲಿದೆ ಎನ್ನುತ್ತಿದ್ದವರಿಗೆ ಇಂದು ಅದರ ನಿಜಸ್ವರೂಪದ ಅರಿವಾಗಿದೆ. ಪಾಕಿಸ್ಥಾನದ ದುರುಳತನ ಮತ್ತು ಮೋಸದಾಟ ಇಂದು ದೇಶಕ್ಕೆ ತಿಳಿದಿದೆ. ಹಿಂದಿನಿಂದಲೂ ಆ ಭಾಗವನ್ನು ದೇಶದ ಅವಿಭಾಜ್ಯ ಅಂಗ ಎನ್ನುತ್ತಾ ಬಂದ ಏಕೈಕ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘ. ಪಾಕ್ ಆಕ್ರಮಿತ ಕಾಶ್ಮೀರವನ್ನು ಎಲ್ಲರೂ ಅಂತಾರಾಷ್ಟ್ರೀಯ ಸಮಸ್ಯೆಯನಾಗಿ ಪರಿಗಣಿಸಿ ಸ್ವಾಭಿಮಾನವನ್ನು ಒತ್ತೆ ಇಡುವ ಕೆಲಸವನ್ನು ಮಾತ್ರ ಮಾಡಿತು. ಮುಂದೆ ಭಾರತೀಯ ಜನಸಂಘ ಮತ್ತು ಭಾರತೀಯ ಜನತಾ ಪಾರ್ಟಿ ಸತ್ಯಾಸತ್ಯತೆಯನ್ನು ದೇಶದ ಮುಂದಿಡುವ ಕಾರ್ಯವನ್ನು ಮಾಡಿದಾಗ ಸೆಕ್ಯುಲರ್ ಪಕ್ಷಗಳು ಅವುಗಳಿಗೆ ಉಗ್ರ ರಾಷ್ಟ್ರೀಯತೆಯ ಪಟ್ಟವನ್ನು ಕಟ್ಟುತ್ತಿದ್ದರು. ಕಾಶ್ಮೀರವನ್ನು ಭಾರತ ಮಾತೆಯ ಸಿಂದೂರ ಎಂದು ಘೋಷಣೆ ಹಾಕಿದ್ದವರೇ ಅಲ್ಲಿ ಅಸ್ತಿತ್ವದಲ್ಲಿದ್ದ 370ನೇ ವಿಧಿಯನ್ನು ರದ್ದು ಪಡಿಸಿದ್ದೆಲ್ಲವೂ ಇಂದು ಇತಿಹಾಸ.



ಆದರೆ ಇಂದು ಪಾಕ್ ಆಕ್ರಮಿತ ಕಾಶ್ಮೀರದ ಬಗ್ಗೆ ದೇಶ ಮಾತಾಡುತ್ತಿದೆ. ಅದರಲ್ಲೂ ಬಾಲಾಕೋಟ್ ಭಯೋತ್ಪಾದಕ ಕೇಂದ್ರದ ಮೇಲೆ ಭಾರತ ದಾಳಿ ಮಾಡಿದ ಅನಂತರ ಆ ಭಾಗದ ಬಗ್ಗೆ ಜನರ ಗಮನ ಹೆಚ್ಚಾಗಿದೆ. ಪಾಕ್ ಆಜಾದಿ ಕಾಶ್ಮೀರ ಎಂದು ಹೇಳಿಕೊಳ್ಳುವ ಈ ಭಾಗ ಜಮ್ಮು ಮತ್ತು ಕಾಶ್ಮೀರದ ಎಲ್ಲಾ ಭಯೋತ್ಪಾದಕ ಶಕ್ತಿಗಳ ಕೇಂದ್ರ. ಭಾರತದ ವಿರುದ್ಧ ಪಾಕಿಸ್ಥಾನ ಅಕ್ರಮ ಶಸ್ತ್ರಾಸ್ತ್ರ ಮತ್ತು ಫಿದಾಯಿನ್‌ಗಳನ್ನು ರವಾನಿಸುವ ಹೆಬ್ಬಾಗಿಲಾಗಿ ಈ ಪ್ರದೇಶ ಕಾರ್ಯಾಚರಿಸುತ್ತಿತ್ತು. ಪಾಕ್ ಆಕ್ರಮಿತ ಕಾಶ್ಮೀರದ ಗಿಲ್ಗಿಟ್–ಬಾಲ್ಟಿಸ್ಥಾನ್, ಮುಜಫರಾಬಾದಿನಲ್ಲಿ ನಾಗರಿಕ ಹಕ್ಕುಗಳನ್ನು ಕಿತ್ತುಕೊಂಡ ಪಾಕ್ ಅಲ್ಲಿನ ಜನರನ್ನು ಭಾರತದ ವಿರುದ್ಧ ದಾಳವಾಗಿ ಬಳಸುತ್ತಿದ್ದರು. ಅಲ್ಲಿನ ಸಂಪನ್ಮೂಲಗಳ ಬಹುಪಾಲನ್ನು ಪಂಜಾಬಿಗಳು ಮತ್ತು ಪಠಾಣರು ಅನುಭವಿಸುತ್ತಾ ಬಂದರು. ಹೇಗೆ ಬಲೂಚ್ ಮತ್ತು ಸಿಂಧ್ ಭಾಗಗಳಲ್ಲಿ ಪಾಕ್ ಆಡಳಿತ ತಾರತಮ್ಯವನ್ನು ಎಸಗುತ್ತದೋ ಹಾಗೆಯೇ ಮುಜಫರಾಬಾದ್ ಮತ್ತು ಗಿಲ್ಗಿಟ್–ಬಾಲ್ಟಿಸ್ಥಾನ್‌ಗಳಲ್ಲೂ ಎಸಗಲಾಯಿತು. ಪರಿಣಾಮ ಅಲ್ಲಿನ ಪರಿಸ್ಥಿತಿ ಹೀನಾಯವಾಯಿತು. ಇಂದು ಇವೆಲ್ಲದರ ಬಗ್ಗೆ ಸ್ಥಳೀಯರು ಆಕ್ರೋಶಿತರಾಗಿದ್ದಾರೆ. ಸಾಮೂಹಿಕ ನರಮೇಧಗಳು ಸಾಮಾನ್ಯವೆಂಬಂತೆ ನಡೆಯುತ್ತಿವೆ. ಇದರ ಸುದ್ದಿಗಳು ಭಾರತಕ್ಕೂ ಮುಟ್ಟುತ್ತಿವೆ. ಇಂಥದ್ದರ ನಡುವೆ ಭಾರತದಲ್ಲಿ ಆ ಭಾಗವನ್ನು ಭಾರತದೊಳಗೆ ಸೇರಿಸಿಕೊಳ್ಳುವ ಮಾತುಗಳನ್ನು ವಿವಿಧ ಕ್ಷೇತ್ರಗಳ ಜನರು ಆಡುತ್ತಿರುವುದು ಸ್ವಾಗತಾರ್ಹ. ಭಾರತದ ಪ್ರಮುಖ ಇಸ್ಲಾಂ ನಾಯಕರಾದ ಇಮಾಮ್ ಉಮರ್ ಅಹ್ಮದ್ ಇಲ್ಯಾಸಿಯವರು ಕೂಡ ಈಗ ಅದರ ಬಗ್ಗೆ ಮಾತಾಡಿದ್ದಾರೆ. ದೇಶದ ಭೂಭಾಗ ಪರರ ವಶದಲ್ಲಿದೆ ಎನ್ನುವ ಜಾಗೃತಿ ಆಗಬೇಕಾಗಿದೆ. ಇಂಥ ಬೆಳವಣಿಗೆಗಳು ಮುಂದೊಂದು ದಿನ ಆಕ್ರಮಿತ ಪ್ರದೇಶ ಭಾರತದ ಆಡಳಿತಕ್ಕೊಳಪಡುವ ದಿನಗಳು ದೂರವಿಲ್ಲ ಎಂಬುದನ್ನು ಹೇಳುತ್ತವೆ.

ಪವಾಡ ಪುರುಷನಾದ ಸಾಮಾನ್ಯ ಸೈನಿಕ

ತಾನು ಮಡಿದ ಮೇಲೂ ಭಾರತದ ಗಡಿಯನ್ನು ಕಾಯುತ್ತಿರುವ ಹರಭಜನ್ ಸಿಂಗ್ ಆತ್ಮದ ಕತೆಯಿದು.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಸೈನಿಕನೊಬ್ಬ ನಿವೃತ್ತಿಯಾಗುವವರೆಗೆ ಅಥವಾ ತನ್ನ ವೀರಮರಣದವರೆಗೆ ದೇಶಸೇವೆಯಲ್ಲಿ ನಿರತನಾಗುವ ಸಂಗತಿ ನಮಗೆ ಗೊತ್ತು. ಆದರೆ ತನ್ನ ಮರಣದ ನಂತರವೂ ದೇಶದ ರಕ್ಷಣೆಗಾಗಿ ಗಡಿಯಲ್ಲಿ ಕರ್ತವ್ಯನಿರತನಾಗಿರುತ್ತಾನೆ ಎಂದರೆ ನೀವು ಖಂಡಿತ ನಂಬುವುದಿಲ್ಲ. 'ಏನು ತಮಾಷೆ ಮಾಡ್ತಿದೀರಾ?' ಎಂದು ನೀವು ಕಾಲೆಳೆಯ ಬಹುದು. ಆದರಿದು ತಮಾಷೆಯಲ್ಲ. ನಿಜದ ತಲೆಗೆ ಹೊಡೆಯುವಂತಹ ನಿಜ. ಭಾರತೀಯ ಸೈನ್ಯಪಡೆಯಲ್ಲಿ ಜರುಗಿದ ವಾಸ್ತವ ಘಟನೆ.

ಪಂಜಾಬ್ ಪ್ರಾಂತದ ಕಪೂರ್ತಲ ಜಿಲ್ಲೆಯಲ್ಲಿ 1946ರ ಆಗಸ್ಟ್ 30ರಂದು ಜನಿಸಿದ ಹರ್‌ಭಜನ್‌ಸಿಂಗ್ ಚಿಕ್ಕಂದಿನಿಂದಲೇ ದೇಶಪ್ರೇಮ, ಪರೋಪಕಾರ, ಧರ್ಮ ರಕ್ಷಣೆಯ ಸ್ವಭಾವಗಳನ್ನು ಮೈಗೂಡಿಸಿಕೊಂಡಿದ್ದ. ಹತ್ತನೇ ತರಗತಿ ಓದಿದ ಬಳಿಕ ಭಾರತೀಯ ಸೇನೆಗೆ 1966ರಲ್ಲಿ ಒಬ್ಬ ಸಾಮಾನ್ಯ ಸಿಪಾಯಿಯಾಗಿ ಆತ ಸೇರ್ಪಡೆಗೊಂಡ. ಸಾಮಾನ್ಯ ಸಿಪಾಯಿಯಾಗಿದ್ದರೂ ಆತನ ಧೈರ್ಯ, ಕರ್ತವ್ಯನಿಷ್ಠೆ, ದೇಶಪ್ರೇಮ ಸೈನ್ಯಾಧಿಕಾರಿಗಳ ಗಮನಕ್ಕೆ ಬಿದ್ದಿತ್ತು. ಭಾರತದ ವಿರುದ್ಧ ಚೀನೀ ಸೈನಿಕರು ಗಡಿಯಲ್ಲಿ ಕಿರುಕುಳ ನೀಡತೊಡಗಿದ್ದರು. ಸಿಕ್ಕಿಂನ ನಾಥುಲಾ ಪಾಸ್‌ಗೆ ಭಾರತೀಯ ಸೈನಿಕರನ್ನು ಕಳಿಸುವ ಪ್ರಕ್ರಿಯೆ ನಡೆದಿತ್ತು. ಪಂಜಾಬ್ 23ನೇ ರೆಜಿಮೆಂಟ್ ಸೈನಿಕರನ್ನೂ ಕರ್ತವ್ಯ ನಿರ್ವಹಣೆಗಾಗಿ ನಾಥುಲಾ ಗಡಿಗೆ ಕಳಿಸಲಾಗಿತ್ತು. ಆ ರೆಜಿಮೆಂಟ್‌ನಲ್ಲಿದ್ದವನೇ ಸಿಪಾಯಿ ಹರ್ ಭಜನ್ ಸಿಂಗ್.

ನಾಥುಲಾ ಗಡಿಯೆಂದರೆ ಎಂತಹ ಎಂಟೆದೆಯ ಸೈನಿಕನಿಗೂ ಹೆದರಿಕೆ ಹುಟ್ಟಿಸುವ ಪ್ರದೇಶ. ಸಮುದ್ರಮಟ್ಟದಿಂದ 13 ಸಾವಿರ ಅಡಿ ಎತ್ತರ, ಭಯಾನಕ ಕೊರೆಯುವ ಹಿಮಚಳಿ. ಮೈನಸ್ 20–22 ಡಿಗ್ರಿ ಉಷ್ಣತೆಯ ಕೊರೆಯುವ ಚಳಿಯಲ್ಲಿ ಎತ್ತರೆತ್ತರದ ಚೂಪಾದ ಹಿಮಶಿಖರ, ಕೆಳಗೆ ಭೀಕರ ಪ್ರಪಾತದ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಬೇಕಾದ ಸ್ಥಿತಿ. 13 ಸಾವಿರ ಅಡಿ ಎತ್ತರದ ಹಿಮ ಶಿಖರದ ಮೇಲೆ ಸೈನ್ಯದ ಬಂಕರ್. ಅಷ್ಟೆತ್ತರಕ್ಕೆ ಕೆಳಗಿನಿಂದ ಮದ್ದುಗುಂಡು, ಇನ್ನಿತರ ಅಗತ್ಯ ವಸ್ತುಗಳನ್ನು ಸಾಗಿಸುವ ಕಾರ್ಯ ಅತ್ಯಂತ ಪ್ರಯಾಸಕರ. ಹರ್‌ಭಜನ್ ಸಿಂಗ್ ಒಂದು ದಿನ ಹೀಗೆ ಯುದ್ಧೋಪಕರಣಗಳನ್ನು ಕಾಲ್ನಡಿಗೆ ಮೂಲಕ ಸಾಗಿಸುತ್ತಿರುವಾಗ ಕಾಲುಜಾರಿ ಹಿಮನದಿಯಲ್ಲಿ ಕೊಚ್ಚಿಹೋದ. ರಾತ್ರಿಯಾದರೂ ಆತನ ಪತ್ತೆಯಾಗಲಿಲ್ಲ. ಈ ಕಠಿಣ ವಾತಾವರಣ ಹಾಗೂ ಮುಂದೆ ಬರಲಿರುವ ಯುದ್ಧಕ್ಕೆ ಹೆದರಿ ಆತ ಪಲಾಯನ ಮಾಡಿರಬೇಕೆಂದೇ ಎಲ್ಲರ ಊಹೆಯಾಗಿತ್ತು. ಏಕೆಂದರೆ ಆಗಿನ್ನೂ ಹರ್‌ಭಜನ್‌ಸಿಂಗ್‌ನಿಗೆ 22ರ ಹರೆಯ.

ಆದರೆ ಆತ ನಾಪತ್ತೆಯಾದ ಐದನೇ ದಿನ ರಾತ್ರಿ ಹರ್‌ಭಜನ್‌ಸಿಂಗ್‌ನ ಇನ್ನೊಬ್ಬ ಸ್ನೇಹಿತ ಪ್ರೀತಂ ಸಿಂಗ್‌ನ ಕನಸಿನಲ್ಲಿ ಕಾಣಿಸಿಕೊಂಡು, ತಾನು ಹಿಮನದಿಯಲ್ಲಿ ಜಾರಿ ಸಾವನ್ನಪ್ಪಿರುವೆ. ನನ್ನ ಶವವನ್ನು ನೀವು ಇಂಥ ಕಡೆ ಹುಡುಕಿದರೆ ಸಿಗುತ್ತದೆ ಎಂದು ಹೇಳಿದಂತಾಯಿತು. ಕನಸನ್ನು ನಂಬುವುದು ಹೇಗೆ? ಆದರೂ ಕನಸಿನಲ್ಲಿ ಹರ್‌ಭಜನ್ ಸಿಂಗ್ ತಿಳಿಸಿದ ನಿರ್ದಿಷ್ಟ ಜಾಗಕ್ಕೆ ಸೈನಿಕರು ತೆರಳಿ ಹುಡುಕಿದಾಗ ಆತನ ಶವ ಪತ್ತೆಯಾಯಿತು. ಅನಂತರ ಶವದ ಅಂತ್ಯಸಂಸ್ಕಾರವೂ ನೆರವೇರಿತು.

ಇಲ್ಲಿಗೆ ಹರ್‌ಭಜನ್ ಸಿಂಗ್ ಎಂಬ ಸಿಪಾಯಿಯೊಬ್ಬನ ಕಥೆ ಅಂತ್ಯಗೊಳ್ಳಬೇಕಿತ್ತು. ಆದರೆ ಹಾಗಾಗಲಿಲ್ಲ. ಆತನ ಕಥೆ ಶುರುವಾಗಿದ್ದೇ ಅಲ್ಲಿಂದ. ನಾಥುಲಾ ಗಡಿಯಲ್ಲಿ ಚೀನಿ ಶತ್ರು ಸೈನಿಕರು ಎಲ್ಲೆಲ್ಲಿ ಅಡಗಿದ್ದಾರೆ, ಅವರನ್ನು ಹೇಗೆ ಸದೆಬಡಿಯಬೇಕು ಇತ್ಯಾದಿ ಮಾಹಿತಿಗಳನ್ನು ಹರ್‌ಭಜನ್ ಸಿಂಗ್‌ನ ಆತ್ಮ ಸಹಪಾಠಿ ಸೈನಿಕರ ಕನಸಿನಲ್ಲಿ ಬಂದು ಹೇಳುತ್ತಿತ್ತು. ಆ ಆತ್ಮ ಹೇಳಿದ್ದೆಲ್ಲವೂ ನಿಖರವಾಗಿರುತ್ತಿತ್ತು. ಆ ಆತ್ಮ ಹೇಳಿದ ಮಾಹಿತಿಗಳಿಂದ ಭಾರತೀಯ ಸೈನ್ಯಕ್ಕೆ ಶತ್ರುಗಳನ್ನು ಗಡಿಯೊಳಗೆ ನುಗ್ಗಿ ಬರದಂತೆ ಹದ್ದುಬಸ್ತಿನಲ್ಲಿಡಲು ತುಂಬಾ ನೆರವಾಗುತ್ತಿತ್ತು. ಚೀನಿ ಸೈನಿಕರು ಕೂಡ ತಾವು ಭಾರತದ ಗಡಿಯೊಳಗೆ ನುಗ್ಗದಂತೆ ಬಿಳಿಕುದುರೆ ಏರಿದ ಸೈನಿಕನೊಬ್ಬ ತಡೆಯುತ್ತಿರುವ ದೃಶ್ಯ ಕಂಡು ಹಿಂದೆ ಸರಿದರು.

ಈ ಎಲ್ಲ ಅನೂಹ್ಯ ವಿದ್ಯಮಾನಗಳು ಪಂಜಾಬ್ ರೆಜಿಮೆಂಟ್ ಸೈನಿಕರ ಪಾಲಿಗೆ ಪವಾಡಸದೃಶ ಎನಿಸತೊಡಗಿತು. ಅವರೆಲ್ಲರೂ ಹರ್‌ಭಜನ್ ಸಿಂಗ್ ಎಂಬ ಮೃತ ಸೈನಿಕನನ್ನು ಒಬ್ಬ ಬಾಬಾನಂತೆ ಭಕ್ತಿಭಾವದಿಂದ ಆರಾಧಿಸತೊಡಗಿದರು. ಗಡಿಪ್ರದೇಶದಲ್ಲಿ ಕರ್ತವ್ಯ ನಿರ್ವಹಣೆಗೆ ಮುಂಚೆ ಭಾರತೀಯ ಸೈನಿಕರು ಹರ್‌ಭಜನ್ ಸಿಂಗ್‌ನನ್ನು ಸ್ಮರಿಸುತ್ತಿದ್ದರು. ಸೈನಿಕರ ಮೀಟಿಂಗ್ ಸಂದರ್ಭದಲ್ಲಿ ಹರ್‌ಭಜನ್ ಸಿಂಗ್‌ಗೆ ಕುಳಿತುಕೊಳ್ಳಲು ಒಂದು ಕುರ್ಚಿ ಹಾಕಲಾಗುತ್ತಿತ್ತು. ಆ ಕುರ್ಚಿ ಮಾತ್ರ ಸದಾ ಖಾಲಿಯಾಗಿಯೇ ಇರುತ್ತಿತ್ತು. ಚೀನೀ ಸೈನಿಕರಂತೂ ಹರ್‌ಭಜನ್ ಸಿಂಗ್‌ನ ಆತ್ಮ ನಾಥುಲಾ ಕಣಿವೆಯ ಸುತ್ತ ಹಗಲುರಾತ್ರಿ ಗಸ್ತು ತಿರುಗುತ್ತಿದೆ ಎಂದೇ ಭಾವಿಸಿ ಹೆದರಿದ್ದರು. ತಾವೆಷ್ಟೇ ಗುಪ್ತ ತಯಾರಿ ಮಾಡಿಕೊಂಡರೂ ಅದು ಭಾರತೀಯ ಸೈನ್ಯಪಡೆಗೆ ಕ್ಷಣಮಾತ್ರದಲ್ಲಿ ತಿಳಿಯುತ್ತಿದ್ದುದರ ಹಿನ್ನೆಲೆ ಇದೇ ಹರ್‌ಭಜನ್ ಸಿಂಗ್‌ನ ಆತ್ಮ ಎಂದು ಭೀತರಾದರು. ತಮ್ಮ ಮೀಟಿಂಗ್ ವೇಳೆ ಆತನಿಗೊಂದು ಖಾಲಿ ಕುರ್ಚಿ ಇಟ್ಟು ಗೌರವಿಸತೊಡಗಿದರು.



ಇತ್ತ ಭಾರತೀಯ ಸೈನ್ಯಪಡೆಯಲ್ಲಿ ದಿನೇದಿನೇ ಹರ್‌ಭಜನ್ ಸಿಂಗ್ ಬಗ್ಗೆ ಗೌರವಾದರ ಹೆಚ್ಚತೊಡಗಿತು. ನಾಥುಲಾ ಗಡಿಗೆ ಕೊಂಚ ದೂರದಲ್ಲಿ ಬಂಕರ್ ನಿರ್ಮಿಸಿ, ಅಲ್ಲಿ ಹರ್‌ಭಜನ್ ಸಿಂಗ್ ಧರಿಸುತ್ತಿದ್ದ ಸೈನಿಕ ಸಮವಸ್ತ್ರ, ಬೂಟು, ಗನ್ ಜೋಡಿಸಿಡಲಾಯಿತು. ಪ್ರತಿನಿತ್ಯ ಆ ಸಮವಸ್ತ್ರಕ್ಕೆ ಇಸ್ತ್ರಿ ಮಾಡಿ, ಬೂಟು ಒರೆಸಿ ಇಡಲಾಗುತ್ತಿತ್ತು. ಆತನಿಗೆ ವಿಶ್ರಾಂತಿ ಪಡೆಯಲು ಒಂದು ಹಾಸಿಗೆಯನ್ನೂ ಇಡಲಾಗಿತ್ತು. ಆಶ್ಚರ್ಯವೆಂದರೆ ರಾತ್ರಿ ಜೋಡಿಸಿಟ್ಟ ಸಮವಸ್ತ್ರ, ಬೂಟು ಮರುದಿನ ಬೆಳಿಗ್ಗೆ ಬಳಸಿದಂತಿರುತ್ತಿತ್ತು. ಹಾಸಿಗೆ ಮುದುಡಿರುತ್ತಿತ್ತು. ಬೂಟಿಗೆ ಮಣ್ಣು ಮೆತ್ತಿರುತ್ತಿತ್ತು. ಸಮವಸ್ತ್ರ ಅಲ್ಲಲ್ಲಿ ಸುಕ್ಕಾಗಿ ಕೊಳೆ ಅಂಟಿಕೊಂಡಿರುತ್ತಿತ್ತು. ಹರ್‌ಭಜನ್ ಸಿಂಗ್ ಆತ್ಮ ರಾತ್ರಿಯಿಡೀ ಕರ್ತವ್ಯ ನಿರ್ವಹಿಸಿದೆ ಎಂಬುದರ ಸಂಕೇತ ಇದು ಎಂದು ಎಲ್ಲರೂ ಭಾವಿಸಿದರು.

ಹರ್‌ಭಜನ್‌ಸಿಂಗ್ ಸೈನಿಕನಾಗಿದ್ದಾಗ ಪ್ರತಿ ಸೆಪ್ಟೆಂಬರ್ 15ರಿಂದ ನವೆಂಬರ್ 15 ರವರೆಗೆ ಎರಡು ತಿಂಗಳು ರಜೆಯಲ್ಲಿ ಊರಿಗೆ ತೆರಳಿ ತಾಯಿಯೊಂದಿಗೆ ಇರುತ್ತಿದ್ದ. ಹಾಗಾಗಿ ಆತ ಸತ್ತ ಮೇಲೂ ಪ್ರತಿ ವರ್ಷ ಆತನ ಸಮವಸ್ತ್ರ ಲಗೇಜ್ ಪ್ಯಾಕ್ ಮಾಡಿ ಇಬ್ಬರು ಸೈನಿಕರು ಕಪೂರ್ತಲದ ಆತನ ಮನೆಗೆ ಒಯ್ಯುತ್ತಿದ್ದರು. ಊರಿನ ಜನರೆಲ್ಲ ಅಲ್ಲಿಗಾಗಮಿಸಿ ಸಮವಸ್ತ್ರ, ಭಾವಚಿತ್ರಕ್ಕೆ ವಂದಿಸಿ ಹೋಗುತ್ತಿದ್ದರು. ರಜೆ ಮುಗಿದ ಬಳಿಕ ಮತ್ತೆ ಆತನ ಸಮವಸ್ತ್ರ, ಲಗೇಜ್‌ನ್ನು ಪ್ಯಾಕ್ ಮಾಡಿ ನಾಥುಲದ ಬಂಕರಿಗೆ ಸೈನಿಕರು ತರುತ್ತಿದ್ದರು.

ಈ ನಡುವೆ ಸೈನ್ಯದಲ್ಲಿ ಆತನಿಗೆ (ಆತನ ಆತ್ಮಕ್ಕೆ) ಪದೋನ್ನತಿಯನ್ನು ನೀಡಲಾಯಿತು. ಸಿಪಾಯಿ ಆಗಿದ್ದ ಹರ್‌ಭಜನ್‌ಸಿಂಗ್ ಈಗ ಕ್ಯಾಪ್ಟನ್ ಹುದ್ದೆಗೇರಿದ್ದ. ಆತನ ವೇತನವನ್ನು ತಪ್ಪದೆ ಊರಿಗೆ ಕಳಿಸಲಾಗುತ್ತಿತ್ತು. ಕೊನೆಗೂ ಆತನಿಗೆ 60 ವರ್ಷವಾದಾಗ ನಿವೃತ್ತಿಗೊಳಿಸಲಾಯಿತು. ಆದರೆ ಅಷ್ಟರೊಳಗೆ ನಾಥುಲಾ ಸಮೀಪ ಹರ್ ಭಜನ್ ಸಿಂಗ್‌ಗೊಂದು ದೇಗುಲವನ್ನು ಸೈನಿಕರು ನಿರ್ಮಿಸಿದ್ದರು. ಹರ್‌ಭಜನ್‌ಸಿಂಗ್ ಭಾವಚಿತ್ರಕ್ಕೆ ಹಾರ ಹಾಕಿ ಪ್ರತಿನಿತ್ಯ ಧೂಪ, ದೀಪ ಸೇವೆ ಅಲ್ಲಿ ನಡೆಯುತ್ತಿತ್ತು. ಮಂದಿರ ಪ್ರವೇಶಿಸುವ ಮುನ್ನ ಸೈನಿಕರು ಬೂಟು ಕಳಚಿ ಒಳಗೆ ಬರುತ್ತಿದ್ದರು. ಬಾಬಾ ಹರ್‌ಭಜನ್ ಸಿಂಗ್ ಮಂದಿರವೆಂದೇ ಅದು ಪ್ರಖ್ಯಾತವಾಯಿತು. ಮಂದಿರಕ್ಕೆ ಸೈನಿಕರಲ್ಲದೆ ಸ್ಥಳೀಯ ನಿವಾಸಿಗಳೂ ಬಂದು ಗೌರವ ಸಲ್ಲಿಸ ತೊಡಗಿದರು.

1987ರ ಒಂದು ರಾತ್ರಿ ಚೀನಿ ಸೈನಿಕರು ಭಾರತದ ಗಡಿಯೊಳಗೆ ನುಗ್ಗಿ ಕಿರುಕುಳ ನೀಡಲು ಹೊಂಚು ಹಾಕಿದ್ದರು. ಆದರೆ ಆ ರಾತ್ರಿ ವಿಪರೀತ ಹಿಮಗಾಳಿ. ಹಿಮ ಪರ್ವತದಿಂದ ಹಿಮದ ಬಂಡೆಗಳು, ಜೊತೆಗೆ ತಲವಾರ್ ಹಿಡಿದ ಬಿಳಿ ಕುದುರೆ ಏರಿ ಬರುತ್ತಿದ್ದ ಸಿಖ್ ಯೋಧ. ಈ ದೃಶ್ಯ ನೋಡಿದ ಚೀನಿ ಸೈನಿಕರು ಹೆದರಿ, ಕಂಗಾಲಾಗಿ ಓಡಿ ಹೋಗಿದ್ದರು.

1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಇಡೀ ದೇಶದ ಎಲ್ಲಾ ಗಡಿಗಳಲ್ಲಿ ಮುನ್ನೆಚ್ಚರಿಕೆ ವಹಿಸಲಾಗಿತ್ತು. ಸೈನಿಕರು ಎಲ್ಲೆಡೆ ಗಡಿ ಕಾಯುತ್ತಿದ್ದರು. ಆದರೆ ನಾಥುಲಾ ಸೆಕ್ಟರ್ ಮಾತ್ರ ಶಾಂತವಾಗಿತ್ತು. ಒಂದೇ ಒಂದು ಗುಂಡಿನ ಸದ್ದು ಅಲ್ಲಿ ಕೇಳಿ ಬರಲಿಲ್ಲ. ಆಗ ಒಬ್ಬ ಭಾರತೀಯ ಸೈನ್ಯಾಧಿಕಾರಿ ಹೇಳಿದ್ದರಂತೆ "ಬಾಬಾನೇ ಪಹಲೇ ಹಿ ಡಾಂಟ್ ದಿಯಾ ಹೋಗಾ" (ಬಾಬಾ ಹರ್‌ಭಜನ್‌ಸಿಂಗ್ ಮೊದಲೇ ಇಲ್ಲಿ ಶತ್ರುಗಳಿಗೆ ಹೆದರಿಕೆ ಹುಟ್ಟಿಸಿದ್ದಿರಬಹುದು.)

ಚೀನಾದ ಕಾಮ್ರೇಡ್ ದೊರೆಗಳು ಬಾಬಾ ಹರ್ ಭಜನ್‌ಸಿಂಗ್‌ನ ಆತ್ಮ ಭಾರತದ ಗಡಿಯನ್ನು ಸುರಕ್ಷಿತವಾಗಿಟ್ಟಿದೆ ಎಂಬುದನ್ನು ಸುತರಾಂ ನಂಬುವುದಿಲ್ಲ. ಆದರೆ ಗಡಿ ಕಾಯುವ ಚೀನಿ ಸೈನಿಕರು ಮಾತ್ರ ಬಾಂಬ್, ಕ್ಷಿಪಣಿಗಳಿಗಿಂತ ಬಾಬಾನ ಆಧ್ಯಾತ್ಮಿಕ ಶಕ್ತಿ ಹೆಚ್ಚು ಪ್ರಭಾವಶಾಲಿ. ಬಾಬಾನ ಆತ್ಮ ಶಕ್ತಿಯು ಸಕ್ರಿಯವಾಗಿರುವ ವರೆಗೆ ಭಾರತದ ಗಡಿಯೊಳಗೆ ನಮ್ಮ ಕಿತಾಪತಿ ಸಾಧ್ಯವಾಗದೆಂದು ನಂಬಿದ್ದಾರೆ.

ನಾಥುಲಾದಲ್ಲಿ ಈಗ ಬಾಬಾ ಹರ್‌ಭಜನ್‌ಸಿಂಗ್ ಹೆಸರಿನಲ್ಲಿ ಎರಡು ಮಂದಿರಗಳಿವೆ. ಒಂದು ಸಿಲ್ಕ್‌ರೋಡಿನಲ್ಲಿರುವ ಹಳೆಯ ಮಂದಿರ. ಇನ್ನೊಂದು ಡೋಕ್ಲಮ್‌ಗೆ ಸಮೀಪವಿರುವ ಹೊಸ ಮಂದಿರ. ಈ ಎರಡು ಮಂದಿರಗಳಿಗೆ ವರ್ಷವಿಡಿ ಅನೇಕ ಭಕ್ತರು, ಅಭಿಮಾನಿಗಳು ಆಗಮಿಸಿ ಗೌರವ ಸಲ್ಲಿಸುತ್ತಾರೆ. ಸಮವಸ್ತ್ರ ಧರಿಸಿದ ಸೈನಿಕರು ದಿನದ 24 ಗಂಟೆ ಈ ಮಂದಿರಗಳ ಕಾವಲು ಕಾಯುತ್ತಾರೆ. ಬಾಬಾ ಹರ್‌ಭಜನ್‌ಸಿಂಗ್ ಬಗ್ಗೆ ಅಂತಹ ಶ್ರದ್ಧೆ, ನಿಷ್ಠೆ ಅವರದು.

ಭಾರತೀಯ ಭೂಸೇನೆ ಹರ್‌ಭಜನ್‌ಸಿಂಗ್‌ಗೆ ಮರಣೋತ್ತರ ಮಹಾವೀರ ಚಕ್ರ ಬಿರುದು ನೀಡಿ ಗೌರವಿಸಿದೆ. ತಾನು ಮಡಿದ ಮೇಲೂ ಭಾರತದ ಗಡಿಯನ್ನು ಕಟ್ಟೆಚ್ಚರ ವಹಿಸಿ ಕಾಯುತ್ತಿರುವ ಹರಭಜನ್ ಸಿಂಗ್ ಆತ್ಮದ ಕಥೆಯನ್ನು ಕೆಲವು ವಿಚಾರವಾದಿಗಳು ಒಪ್ಪದಿರಬಹುದು. ಇದೆಲ್ಲ ಭ್ರಮೆ ಎಂದು ಲೇವಡಿ ಮಾಡಬಹುದು. ಆದರೆ ಪ್ರತ್ಯಕ್ಷ ಗಡಿ ಕಾಯುತ್ತಿರುವ ಭಾರತೀಯ ಸೈನಿಕರು ಮಾತ್ರ ಇದನ್ನು ಈಗಲೂ ನಂಬುತ್ತಾರೆ. ಬಾಬಾ ಹರ್‌ಭಜನ್ ಸಿಂಗ್ ಮಂದಿರಕ್ಕೆ ಬೂಟು ಕಳಚಿ, ಬರಿಗಾಲದಲ್ಲಿ ತೆರಳಿ ಪೂಜೆ ಸಲ್ಲಿಸುತ್ತಾರೆ. ತಮಗೂ ಅಂತಹುದೇ ದೇಶ ಪ್ರೇಮ, ಪರಾಕ್ರಮ, ಸಾಹಸ ಪ್ರಾಪ್ತವಾಗಲೆಂದು ಮೌನವಾಗಿ ಪ್ರಾರ್ಥಿಸುತ್ತಾರೆ. ಸಿಕ್ಕಿಂನ ಡೋಕ್ಲಮ್, ನಾಥುಲಾಕ್ಕೆ ನೀವೇನಾದರೂ ಹೋದರೆ ತಪ್ಪದೇ ಬಾಬಾ ಹರ್ ಭಜನ್ ಸಿಂಗ್ ಮಂದಿರದ ದರ್ಶನ ಮಾಡಿ ಬನ್ನಿ.

ಹರೆಯದವರಲ್ಲಿ ಮಾನಸಿಕ ಕಾಯಿಲೆಗಳು

ಅಧ್ಯಯನಗಳ ಪ್ರಕಾರ ಸುಮಾರು ಶೇಕಡಾ ಅರವತ್ತು ಭಾಗದ ಮನೋರೋಗಗಳು ಪ್ರಾರಂಭವಾಗುವುದು ಹದಿನಾರರಿಂದ ಇಪ್ಪತ್ತನೇ ವಯಸ್ಸಿನ ಅವಧಿಯಲ್ಲಿ.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



'ಅರವತ್ತಕ್ಕೆ ಅರುಳೋ ಮರುಳೋ' ಎಂಬ ಗಾದೆಯಂತೆ ಮಕ್ಕಳು ಮತ್ತು ಹರೆಯದವರು ಮಾನಸಿಕವಾಗಿ ಕಾಯಿಲೆಗೆ ತುತ್ತಾಗುವುದಿಲ್ಲ ಎಂಬ ಕಾಲವೊಂದಿತ್ತು. ಹರೆಯದ ಹುಡುಗನೊಬ್ಬನಿಗೆ ಮಾನಸಿಕ ಕಾಯಿಲೆ ಇದೆಯೇ ಎಂದು ಯಾರಾದರೂ ಕೇಳಿದರೆ, ಅಯ್ಯೋ ಅವನು ಇನ್ನೂ ಹುಡುಗ. ಅವನಿಗೆ ಯಾವ ಜವಾಬ್ದಾರಿಯೂ ಇಲ್ಲ. ಹಾಗಾಗಿ ಅವನಿಗೆ ಮನೋರೋಗ ಎಲ್ಲಿಂದ ಬರಬೇಕು? ಎನ್ನುತ್ತಿದ್ದರು. ಈಗಲೂ ಈ ತಪ್ಪು ಕಲ್ಪನೆ ಸಮಾಜದಲ್ಲಿ ವ್ಯಾಪಕವಾಗಿದೆ.

ಹರೆಯದವರಲ್ಲಿ ನಾವು ನೋಡುವ ಆತಂಕ, ಗಾಬರಿ, ಬೇಸರ, ತುಂಟಾಟ, ಕೋಪ, ದುಃಖ ಇವುಗಳನ್ನು ಮನೋರೋಗ ಎನ್ನಬಹುದೇ ಎಂದು ಕೇಳುವವರಿದ್ದಾರೆ. ಹರೆಯದವರು ಎದುರಿಸಬೇಕಾದ ಒತ್ತಡಗಳು ಮತ್ತು ಸವಾಲುಗಳು ಅವರ ಮನಸ್ಸನ್ನು ಅಲ್ಲೋಲ ಕಲ್ಲೋಲಗೊಳಿಸುತ್ತವೆ. ಒತ್ತಡಗಳು ಮತ್ತು ಸವಾಲುಗಳಿಂದ ಅಪಕ್ವವಾದ ಹರೆಯದ ಮನಸ್ಸು ವಿಚಲಿತಗೊಳ್ಳುತ್ತದೆ. ಹರೆಯದಲ್ಲಿ ಸ್ರವಿಸುವ ಲೈಂಗಿಕ ಮತ್ತು ನರಚೋದನಿಕೆಗಳು ಮನಸ್ಸನ್ನು ಆತಂಕಕ್ಕೀಡು ಮಾಡುತ್ತವೆ. ಈ ವಿಧದ ಏರಿಳಿತಗಳು ಹರೆಯದವರಲ್ಲಿ ಸಾಮಾನ್ಯ. ಒಮ್ಮೆ ಸವಾಲುಗಳನ್ನು ಮತ್ತು ಒತ್ತಡಗಳನ್ನು ಯಶಸ್ವಿಯಾಗಿ ನಿಭಾಯಿಸಿ, ಪರಿಹಾರ ಕಂಡುಕೊಂಡಾಗ ಮನಸ್ಸು ನಿರಾಳವಾಗಿ ಎಂದಿನಂತೆ ಸಾಧನೆಗೈಯ್ಯಲು ತಯಾರಾಗುತ್ತದೆ. ಇವು ಮನೋರೋಗಗಳು ಎನಿಸಿಕೊಳ್ಳುವುದಿಲ್ಲ. ಇದಕ್ಕೆ ಬಾಲ್ಯದಿಂದಲೂ ಜೀವನ ಕೌಶಲಗಳನ್ನು ರೂಢಿಸಿಕೊಳ್ಳುವುದು ಅವಶ್ಯ. ಒತ್ತಡಗಳನ್ನು ಆತ್ಮೀಯರೊಂದಿಗೆ ಹಂಚಿಕೊಂಡಾಗ, ಪರಿಹಾರ ದೊರೆತು ಮನಸ್ಸು ನಿರಾಳಗೊಳ್ಳುತ್ತದೆ. ಸವಾಲುಗಳನ್ನು ಸಮಾಧಾನ ಮತ್ತು ಧೈರ್ಯದಿಂದ ಎದುರಿಸಬಹುದು. ಅವು ಕಷ್ಟವೆನಿಸಿದಾಗ ಹಿರಿಯರು, ಪೋಷಕರು, ಉಪಾಧ್ಯಾಯರು ಮತ್ತು ಆತ್ಮೀಯ ಸ್ನೇಹಿತರೊಂದಿಗೆ ಹಂಚಿಕೊಂಡು, ಪರಿಹಾರ ಕಂಡುಕೊಳ್ಳಬೇಕು.



ಮೇಲಿನದನ್ನು ಅವಲೋಕಿಸಿದಾಗ ಹರೆಯದವರಲ್ಲಿ ಮನೋರೋಗಗಳು ಬರುವುದಿಲ್ಲವೇ? ಎಂಬ ಪ್ರಶ್ನೆ ಏಳುತ್ತದೆ. ಮೊದಲೇ ತಿಳಿಸಿದಂತೆ ಹರೆಯದ ಒತ್ತಡ ಮತ್ತು ಸವಾಲುಗಳನ್ನು ಎದುರಿಸಿಯೂ ಕೆಲವು ವೇಳೆ ಮನೋರೋಗಕ್ಕೆ ತುತ್ತಾಗಬಹುದು. ಅಧ್ಯಯನಗಳ ಪ್ರಕಾರ ಪ್ರತಿಶತ ಅರವತ್ತು ಭಾಗದ ಮಾನಸಿಕ ಕಾಯಿಲೆಗಳು ಪ್ರಾರಂಭವಾಗುವುದು ಹರೆಯದ ಅವಧಿಯಲ್ಲಿ. ಅದರ ಅರ್ಥ ಸೌಮ್ಯತರದ ಮನೋರೋಗ ಲಕ್ಷಣಗಳು ಪ್ರಾರಂಭವಾಗಿ ಅವು ಯಾರ ಗಮನಕ್ಕೂ ಬರುವುದಿಲ್ಲ. ತಮ್ಮ ಮಗುವಿನ ನಡವಳಿಕೆಯಲ್ಲಿ ಏನೋ ವ್ಯತ್ಯಾಸವಾಗಿದೆ ಎಂದು ಕಂಡುಬಂದರೂ ಅದು ತೀವ್ರವಾಗುವವರೆಗೆ ಗಮನ ನೀಡುವುದಿಲ್ಲ. ಗಮನ ನೀಡಿದರೂ ಅದು ಯಾವುದೋ ದೆವ್ವ, ಭೂತಚೇಷ್ಟೆ, ಗ್ರಹಚಾರ ಎಂದು ಭಾವಿಸಿ, ಅವುಗಳ ಮೊರೆ ಹೋಗುತ್ತಾರೆ. ಅದು ಮನೋರೋಗ ಎಂದು ಭಾವಿಸುವುದಿಲ್ಲ. ಒಮ್ಮೆ ತಮ್ಮ ಮಗುವಿಗೆ ಮನೋರೋಗ ಇದೆ ಎಂದು ಅನಿಸಿದರೂ, ಅದಕ್ಕೆ ಮನೋವೈದ್ಯರನ್ನು ಸಂಪರ್ಕಿಸುವುದಿಲ್ಲ. ಅದಕ್ಕೆ ಕಾರಣ, ಅದು ಇತರರಿಗೆ ತಿಳಿದು ಎಲ್ಲಿ ತಮ್ಮ ಸಾಮಾಜಿಕ ಪ್ರತಿಷ್ಠೆಗೆ ಅಡ್ಡಗಾಲಾಗುವುದೋ ಎಂಬ ಪೋಷಕರ ಭಾವನೆ.

ಮನೋರೋಗಕ್ಕೆ ಕೌನ್ಸೆಲಿಂಗ್ ಉತ್ತಮವಾದ ಮದ್ದೆಂದು ನಂಬುವವರು ವ್ಯಾಪಕವಾಗಿದ್ದಾರೆ. ತೀವ್ರತರದ ಮನೋರೋಗಕ್ಕೆ ಕೌನ್ಸೆಲಿಂಗ್ ಚಿಕಿತ್ಸೆಯು ಒಂದು ಭಾಗವೇ ವಿನಃ, ಅದೇ ಮುಖ್ಯವಾದ ಚಿಕಿತ್ಸೆಯಲ್ಲ. ಔಷಧ ಚಿಕಿತ್ಸೆ ಅನಿವಾರ್ಯ. ಕೆಲವು ಪೋಷಕರು ತಮ್ಮ ಮಕ್ಕಳನ್ನು ತಿಂಗಳುಗಟ್ಟಲೆ ಅಥವಾ ವರ್ಷಗಟ್ಟಲೇ ಕೌನ್ಸೆಲಿಂಗ್ ಮಾಡಿಸಿ ಕೊನೆಗೆ ಮನೋವೈದ್ಯರ ಹತ್ತಿರ ಚಿಕಿತ್ಸೆಗಾಗಿ ಕರೆತರುತ್ತಾರೆ.

ಹರೆಯದವರಲ್ಲಿ ಮಾನಸಿಕ ಕಾಯಿಲೆಗಳನ್ನು ಗುರುತಿಸುವಾಗ ಇನ್ನೂ ಕೆಲವು ಅಂಶಗಳನ್ನು ಗಮನಿಸಬೇಕಾಗುತ್ತದೆ. ಅವುಗಳನ್ನು ಎರಡು ವಿಧಗಳಾಗಿ ಗುರುತಿಸಬಹುದು. ಮೊದಲನೆಯದು ಗುರುತಿಸಲು ಇರುವ ಅಡೆತಡೆಗಳು (Barriers). ಎರಡನೆಯದು ಸಹಾಯಕವಾಗುವ (Facililators) ಅಂಶಗಳು. ಹರೆಯದವರ ಸಮಸ್ಯೆಗಳನ್ನು ನಿಭಾಯಿಸುವುದು (Intervention) ಮೂರನೆಯ ಅಂಶ.

ಅಧ್ಯಯನಗಳ ಪ್ರಕಾರ ಸುಮಾರು ಶೇಕಡಾ ಅರವತ್ತು ಭಾಗದ ಮನೋರೋಗಗಳು ಪ್ರಾರಂಭವಾಗುವುದು ಹದಿನಾರರಿಂದ ಇಪ್ಪತ್ತನೇ ವಯಸ್ಸಿನ ಅವಧಿಯಲ್ಲಿ. ಅದರಲ್ಲಿಯೂ ಹೆಚ್ಚಾಗಿ ಕಂಡುಬರುವುದು ಖಿನ್ನತೆ, ಆತಂಕ ಮತ್ತು ಭಯ. ಇದನ್ನು ಗುರುತಿಸಿ ಚಿಕಿತ್ಸೆ ಕೊಡಿಸಲು, ಅದರ ಕುರಿತು ಪೋಷಕರಿಗೆ ಇರುವ ಕಳಂಕ ಮತ್ತು ತಪ್ಪು ಕಲ್ಪನೆಗಳು ಒಂದು ಅಡ್ಡಗೋಡೆ. ಎಲ್ಲಿ ತಮ್ಮ ಸಾಮಾಜಿಕ ಪ್ರತಿಷ್ಠೆಗೆ ಕುಂದು ಬರುತ್ತದೋ ಎಂಬ ಅನಿಸಿಕೆ. ಇದಕ್ಕೆ ಕಾರಣ ಮನೋರೋಗವು ಒಂದು ಕಳಂಕ ಮತ್ತು ಮನೋರೋಗಕ್ಕೆ ಮದ್ದಿಲ್ಲ ಎಂಬ ತಪ್ಪು ಕಲ್ಪನೆಗಳು. ಚಿಕಿತ್ಸೆ ಕೊಡಿಸಿದರೆ, ಮನೋವೈದ್ಯರು ನಿದ್ದೆ ಗುಳಿಗೆಗಳನ್ನು ಕೊಡುತ್ತಾರೆ. ಆಜೀವ ಪರ್ಯಂತ ಔಷಧಗಳನ್ನು ಸೇವಿಸಬೇಕಾಗುತ್ತದೆ ಎಂಬ ಭಯ. ಆದರಿಂದ ಅಡಿಕ್ಷನ್ ಆಗಿ ಮಕ್ಕಳ ಭವಿಷ್ಯ ಹಾಳಾಗುತ್ತದೆ ಎಂದು ಪೋಷಕರು ತಪ್ಪಾಗಿ ಭಾವಿಸುತ್ತಾರೆ. ಹರೆಯದ ಮಕ್ಕಳು ಬೇಸರ ಪಟ್ಟುಕೊಳ್ಳುವುದು, ಮಂಕಾಗಿರುವುದು ಅಥವಾ ತಮಗೆ ಓದುವುದಕ್ಕೆ ಆಸಕ್ತಿ ಇಲ್ಲ ಎಂದು ಹೇಳುವುದು ಸಾಮಾನ್ಯ ಎಂದು ಭಾವಿಸಿ, ತಿಂಗಳು–ವರ್ಷಗಟ್ಟಲೇ ಅವರ ಕುರಿತು ಗಮನವೀಯುವುದೇ ಇಲ್ಲ. ಮಗು ಏನಾದರೂ ಅಮ್ಮ ನನಗೆ ಸುಸ್ತಾಗುತ್ತದೆ, ಜೀವವೇ ಬೇಡ ಅನ್ನಿಸುತ್ತೆ ಎಂದರೆ, ಹಾಗೆಲ್ಲಾ ಹೇಳಬಾರದು. ಅದು ಅಪಶಕುನ. ಅಂಥಾದ್ದು ನಿನಗೇನಾಗಿದೆ. ಸುಮ್ಮನೆ ಓದು ಹೋಗು ಎಂದು ಪೋಷಕರು ಹೇಳುತ್ತಾರೆ.

ಮಾನಸಿಕ ಕಾಯಿಲೆಗಳನ್ನು ಗುರುತಿಸಲು ಸಹಾಯಕವಾಗುವ ಕೆಲವು ಅಂಶಗಳನ್ನು ತಿಳಿಯೋಣ. "ಕೆಲವಂ ಬಲ್ಲವರಿಂದೆ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ ಕೆಲವಂ ಮಾಳ್ಪವರಿಂದೆ ಕಂಡು, ಕೆಲವಂ ಸುಜ್ಞಾನದಿಂದ ನೋಡುತಂ ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಾ ಕೇಳ್ವುವಂ ಪಳ್ಳಸಮಧವೇ ಹರಹರಾ ಶ್ರೀ ಚೆನ್ನಸೋಮೇಶ್ವರಾ" ಎಂಬ ಹಾಗೆ ಆಕಾಶವಾಣಿ, ದೃಶ್ಯ ಮಾಧ್ಯಮಗಳು, ಚಲನ ಚಿತ್ರಗಳ ಮೂಲಕ ತಿಳಿಯುವ ಮಾಹಿತಿಗಳು, ಮುದ್ರಣ ಮಾಧ್ಯಮಗಳಲ್ಲಿ ಬರುವ ಲೇಖನಗಳು, ಅಕ್ಕ ಪಕ್ಕದವರು, ಆತ್ಮೀಯರು ತಮ್ಮ ಅನುಭವಗಳಿಂದ ತಿಳಿಸಿ ಹೇಳುವ ಮಾಹಿತಿಗಳು ಇವು ಹರೆಯದವರಲ್ಲಿ ಮಾನಸಿಕ ಕಾಯಿಲೆಗಳನ್ನು ಗುರುತಿಸಿ ಚಿಕಿತ್ಸೆ ಕೊಡಿಸಲು ಪೂರಕವಾಗುತ್ತವೆ.

ಮೇಲಿನ ಅಂಶಗಳು ಹರೆಯದವರಲ್ಲಿ ಮಾನಸಿಕ ಸಮಸ್ಯೆ ಅಥವಾ ಕಾಯಿಲೆಗಳನ್ನು ಪ್ರಾರಂಭದಲ್ಲೇ ಗುರುತಿಸಿ ಚಿಕಿತ್ಸೆ ಕೊಡಿಸಿದರೆ, ಅವರ ಮನೋರೋಗವನ್ನು ಪ್ರಾರಂಭದಲ್ಲೆ ಗುಣಪಡಿಸಬಹುದು.

ಕೆಲವು ಹರೆಯದವರು ತಮ್ಮ ಸಮಸ್ಯೆಗಳನ್ನು ತಾವೇ ನಿಭಾಯಿಸಬಲ್ಲರು. ಇದಕ್ಕೆ ಕಾರಣ ತಮಗೆ ಉಂಟಾಗುವ ವಿಫಲತೆ ಮತ್ತು ಸವಾಲುಗಳನ್ನು ನಿಭಾಯಿಸುವುದು ಹೇಗೆ ಎಂಬುದನ್ನು ತಾಳ್ಮೆಯಿಂದ ಯೋಚಿಸುತ್ತಾರೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗದಿದ್ದರೆ, ಪೋಷಕರು, ಆತ್ಮೀಯ ಗೆಳೆಯರು ಅಥವಾ ಹಿರಿಯರ ಹತ್ತಿರ ಕೇಳಿ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಸವಾಲಿನಲ್ಲಿ ವಿಫಲರಾದರೆ, ವಿಚಲಿತಗೊಳ್ಳದೇ ತಾಳ್ಮೆಯಿಂದ ಸಮಸ್ಯೆಯನ್ನು ಕುರಿತು ಬೇರೆ ಬೇರೆ ದೃಷ್ಟಿಕೋನಗಳಿಂದ ಚಿಂತನೆ ನಡೆಸಿ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಪೋಷಕರು ಮತ್ತು ಸದಸ್ಯರು ಸದಾ ಇವರ ಬೆಂಬಲಕ್ಕಿರುತ್ತಾರೆ. ಬಾಲ್ಯದಿಂದಲೂ ಸಕಾರಾತ್ಮಕವಾಗಿ ಮಾರ್ಗದರ್ಶನ ಮಾಡುವ ಪೋಷಕರು ಅಥವಾ ಹಿರಿಯರ ಸಹಾಯದಿಂದ ಅವಶ್ಯವಾದ ಜೀವನ ಕೌಶಲಗಳನ್ನು ತಮ್ಮಲ್ಲಿ ಅಳವಡಿಸಿಕೊಂಡಿರುತ್ತಾರೆ.

ವಿಶ್ವ ಆರೋಗ್ಯ ಸಂಸ್ಥೆಯು ಹತ್ತು ಜೀವನ ಕೌಶಲಗಳನ್ನು ಮಕ್ಕಳು ಮತ್ತು ಹರೆಯದವರಲ್ಲಿ ರೂಢಿಸಬೇಕೆಂಬ ಸಂದೇಶ ನೀಡಿದೆ. ಅವುಗಳು ಯಾವುವೆಂದರೆ, ಸಮಗ್ರವಾಗಿ ಯೋಚಿಸುವುದು, ಸೃಜನಾತ್ಮಕವಾಗಿ ಯೋಚಿಸುವುದು, ತೀರ್ಮಾನ ಕೈಗೊಳ್ಳುವುದು. ಸಮಸ್ಯೆಗಳನ್ನು ಪರಿಹರಿಸುವುದು, ಪರಿಣಾಮಕಾರೀ ಸಂವಹನ, ಮಾನವೀಯ ಸಂಬಂಧಗಳನ್ನು ನಿಭಾಯಿಸುವುದು, ಅನುಭೂತಿ, ಸ್ವಅರಿವು, ಒತ್ತಡಗಳನ್ನು ನಿಭಾಯಿಸುವುದು, ಮತ್ತು ಭಾವನೆಗಳನ್ನು ಹಿಡಿತದಲ್ಲಿಡುವುದು. ಇವುಗಳನ್ನು ಮಕ್ಕಳು ಮತ್ತು ಹರೆಯದವರಲ್ಲಿ ಪೋಷಕರು ರೂಢಿಗೊಳಿಸಬೇಕು. ಇದರಿಂದ ಆತ್ಮವಿಶ್ವಾಸ ಹೆಚ್ಚುತ್ತದೆ. ಧೈರ್ಯ, ಸಕಾರಾತ್ಮಕ ಆಲೋಚನೆಗಳು ಮನಸ್ಸನ್ನು ಶಾಂತವಾಗಿಡುತ್ತದೆ. ಹರೆಯದವರು ತಮ್ಮ ಸವಾಲು ಮತ್ತು ಒತ್ತಡಗಳನ್ನು ಸುಲಭವಾಗಿ ನಿಭಾಯಿಸಬಲ್ಲರು.

ಹಳೆಯ ಪುಸ್ತಕಗಳ, ಹಳತಾಗದ ನೆನಪುಗಳು!

ಮೊದಲೆಲ್ಲ ಪರೀಕ್ಷೆ ಮುಗಿದು, ಫಲಿತಾಂಶ ಹೊರಬೀಳುವ ಮುನ್ನವೇ ಹಳೆ ಪುಸ್ತಕಗಳನ್ನು ಇನ್ನೊಬ್ಬ ವಿದ್ಯಾರ್ಥಿಗೆ ಮಾರಾಟ ಮಾಡುವ ವಹಿವಾಟು ನಡೆದಿರುತ್ತಿತ್ತು.

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಶೈಕ್ಷಣಿಕ ವರ್ಷವೊಂದು ತನ್ನ ಕೊನೆ ದಿನಗಳನ್ನು ಎಣಿಸಲು ಶುರುವಿಟ್ಟುಕೊಂಡಿದೆ. ಇನ್ನೇನು ಕೆಲವೇ ದಿನಗಳಲ್ಲಿ ಅದು ನನ್ನ ಪಾಳಿ ಮುಗಿಯಿತು ಎಂದು ಎದ್ದು ನಡೆಯಲಿದೆ. ಪರೀಕ್ಷೆಗಳೂ, ಆದರ ಹಿಂದಿನ ಪೋಷಕರ ನಿರೀಕ್ಷೆಗಳೂ ಒಂದೇ ಸಮನೇ, ಏರುತ್ತಿರುವ ಬೇಸಿಗೆಯ ಬಿಸಿಯನ್ನೂ ಹಿಂದಿಕ್ಕಿ ಮೇಲೆ ಮೇಲೇರುತ್ತಲೇ ಇದೆ. ಈ ತಾಪಮಾನ, 'ಕೋಪ'ಮಾನಗಳನ್ನು ಅಳೆಯಲು ಯಾವ ಮಾಪಕವೂ ಸದ್ಯಕ್ಕೆ ಲಭ್ಯವಿಲ್ಲ ಎನ್ನಬಹುದು. ಅಂಕಗಳ ಅಂತರ್ಯದಲ್ಲಿ ಅಡಗಿರುವ ಆತಂಕವೂ ಮೆಲ್ಲಮೆಲ್ಲನೇ ಈಚೆ ಬರಲು ಹವಣಿಸುತ್ತಿರುವ ಕಾಲವಿದು. ಏನೇ ಆದರೂ ಈ ವರ್ಷದ ತನ್ನ ಪ್ರಯತ್ನ 'ರಿಮಾರ್ಕ್‌ಬಲ್' ಎನಿಸಿಕೊಳ್ಳಬೇಕು, ಎಲ್ಲರಿಂದಲೂ ಅದಕ್ಕಾಗಿ ಹೊಗಳಿಸಿಕೊಳ್ಳಬೇಕು ಎಂದರೆ ಮಕ್ಕಳ ಕೈಯ್ಯಲ್ಲಿ ಇರುವ ಒಂದೇ ಆಯ್ಕೆ ಎಂದರೆ ಅದು ಒಳ್ಳೆಯ 'ಮಾರ್ಕ್' ಗಳಿಸುವುದು. ಇದಕ್ಕಾಗಿ ವರ್ಷ ಪೂರ್ತಿ ಸದ್ದಿಲ್ಲದೇ ಶ್ರಮಿಸುವಲ್ಲಿ ಪುಸ್ತಕಗಳ ಪಾತ್ರವೂ ದೊಡ್ಡದು. ಅಂತಿಪ್ಪ ಪುಸ್ತಕಗಳೂ ತಮ್ಮ ಕೆಲಸ ಮುಗಿಯಿತೆಂದು ಇನ್ನೇನು ನಿಧಾನಕ್ಕೆ ಬದಿಗೆ ಸರಿಯಲಿವೆ. ಹಳತಾದ ಪುಸ್ತಕಗಳ ಈ ಕಾಲದ ಹಳಹಳಿಕೆಗಳೇ ಬೇರೆ. ಆದರೆ ಈ ಹಳೆ ಪುಸ್ತಕಗಳ ಹಿಂದೆ ಎಂದೂ ಹಳತಾಗದ ನೆನಪಿನ ಹೊಳಹುಗಳು ಮಸ್ತಕದಲ್ಲಿ ಸಾಕಷ್ಟು ಸಂಗ್ರಹವಾಗಿದೆ ಎಂದರೆ ಅಂಥವರನ್ನು 90ರ ದಶಕದಲ್ಲಿ ಓದಿ, ಬೆಳೆದವರು ಎಂದು ಖಂಡಿತವಾಗಿಯೂ ಹೇಳಬಹುದು.



ಹಾಗೆ ನೋಡಿದರೆ ಆ ಕಾಲವೇ ಅಂಥದ್ದು. 'ಹಳತು ಹೊನ್ನು' ಎಂಬ ನಂಬಿಕೆ ಅತ್ಯಂತ ಬಲವಾಗಿದ್ದು, ಅದನ್ನು ಎಲ್ಲದರಲ್ಲೂ ಚಾಚೂ ತಪ್ಪದೇ ಪಾಲಿಸಲಾಗುತ್ತಿತ್ತು. 'ಹೊನ್ನು' ಎಂದ ಕಾರಣಕ್ಕೆ ಅದನ್ನು ಸುವರ್ಣ ಕಾಲ ಎನ್ನಬಹುದೇ? ಬರು ಬರುತ್ತಾ ಹೊನ್ನಿನ ದರವೂ ಎರ್ರಾಬಿರ್ರಿ ಏರಿಕೆಯಾಯಿತು, ಹಾಗೆಯೇ ಹಳತೆಲ್ಲ ಹೊನ್ನು ಎಂದು ಭಾವಿಸುವ ಮನೋಭಾವವೂ ಕ್ರಮೇಣ ಹೊಳಪು ಕಳೆದುಕೊಂಡು, ಇಂದಿನವರ ಪಾಲಿಗೆ ಅದು ಅಕ್ಷರಶಃ ಗೋಲ್ಡ್ ಅಲ್ಲ ರೋಲ್ಡ್‌ಗೋಲ್ಡ್ ಎಂದು ಅನಿಸಲೂ ಪ್ರಾರಂಭವಾಯಿತು. ಇರಲಿ ಅದು ಕಾಲದ ಬದಲಾವಣೆಯ ಪ್ರಭಾವವೆನ್ನಿ. ಮತ್ತೆ ನಾವು ಆ ಹಳೆಯದರತ್ತ ಕೊಂಚ ಹೊರಳೋಣ. ಹಾಗಂತ ಇದು ಬರೀ ಹಳಿಹಳಿಕೆಯೋ, ಅತಾರ್ಕಿಕ ಹೊಗಳಿಕೆಯೋ ಅಲ್ಲ.

ಆ ದಿನಮಾನಗಳಲ್ಲಿ ಹಳೆಯ ಪುಸ್ತಕಗಳಿಗೆ ಭಾರೀ ಡಿಮ್ಯಾಂಡ್ ಇದ್ದಿರುತ್ತಿತ್ತು. ಈ ವರ್ಷದ ಪರೀಕ್ಷೆ ಮುಗಿಯಿತು, ಇನ್ನು ಈ ಪುಸ್ತಕಗಳಿಗೆ ಚಿಕ್ಕಾಸಿನ ಬೆಲೆಯೂ ಇಲ್ಲವೇನೋ ಎಂಬಂತೆ ಎಲ್ಲೆಂದರಲ್ಲಿ ಎಸೆಯೋ ರೂಢಿ ಆಗ ಇರಲಿಲ್ಲವಾಗಿತ್ತು. ಪರೀಕ್ಷೆಗಳೆಲ್ಲ ಮುಗಿದು, ಫಲಿತಾಂಶ ಹೊರಬೀಳುವ ಮುನ್ನವೇ ಈ ಹಳೆ ಪುಸ್ತಕಗಳನ್ನು ಇನ್ನೊಬ್ಬ ವಿದ್ಯಾರ್ಥಿಗೆ ಮಾರಾಟ ಮಾಡುವ ವಹಿವಾಟು ನಡೆದಿರುತ್ತಿತ್ತು. ಅಲ್ಲಿಗೆ ಆ ಪುಸ್ತಕಗಳೆಲ್ಲವೂ ಮಾರುದ್ದದ ಭಾಷಣ, ಭಾರೀ ಪ್ರಚಾರದ ತೆವಲು ಇತ್ಯಾದಿಗಳಾವುವೂ ಇಲ್ಲದೇ ಮರುಬಳಕೆಯಾಗುತ್ತಿದ್ದವು.

ನಿಗದಿತ ತರಗತಿಯ ಪುಸ್ತಕಗಳು, ಆ ವರ್ಷ ಮುಗಿದಾಕ್ಷಣ ತಾವು ತೊಟ್ಟಿದ್ದ ಬಟ್ಟೆಯನ್ನು ಬಿಚ್ಚಿಸಿಕೊಂಡು, ಅಂದರೆ ಅದಕ್ಕೆ ಹಾಕಿದ್ದ ಬೈಂಡ್‌ನ್ನು ತೆಗೆದಿರಿಸಿಕೊಂಡು ಚೊಕ್ಕಟವಾಗಿ ಜೋಡಿಸಲ್ಪಡುತ್ತಿದ್ದವು. ಒಮ್ಮೆ ಆ ಎಲ್ಲಾ ಹಾಳೆಗಳನ್ನು ತಿರುವಿ ಹಾಕಿ ಅದರೊಳಗೆ ಏನಾದರೂ ಇರಿಸಿದ್ದರೆ ಅದನ್ನೆಲ್ಲಾ ತೆಗೆದು ಅವುಗಳ ಆ ವರ್ಷದ ಜವಾಬ್ದಾರಿಯಿಂದ ಮುಕ್ತಗೊಳಿಸಲಾಗುತ್ತಿತ್ತು. ಆದರೆ ಅವುಗಳು ವ್ಯರ್ಥವಾಗುತ್ತಿರಲಿಲ್ಲ. ಬದಲಿಗೆ ನಾಳೆಯ ಇನ್ನಾರದೋ ಓದಿಗೆ ಅವು ಆ ಮೂಲಕ ಸಜ್ಜುಗೊಳ್ಳುತ್ತಿದ್ದವು. ಆ ವರ್ಷ ಹಾಕಿದ್ದ ಬೈಂಡ್, ಲೇಬಲ್ ಮತ್ತು ಅದರ ಮೇಲೆ ಬರೆದ ಹೆಸರುಗಳಿಗೆ ಅಲ್ಲೇ ಶಾಶ್ವತ ನಿವೃತ್ತಿ. ಆ ಜಾಗಕ್ಕೆ ಇನ್ನು ಬೇರೆ ಪುಸ್ತಕಗಳು ಬಂದರೆ, ಖಾಲಿಯಾದ ಮತ್ತಾವುದೋ ಜಾಗವನ್ನು ಭರ್ತಿ ಮಾಡಲು ಈ ಪುಸ್ತಕಗಳ ಕಟ್ಟು ಹೊರಡಲನುವಾಗುತ್ತಿತ್ತು. ಪ್ರತೀ ಶೈಕ್ಷಣಿಕ ವರ್ಷಾಂತ್ಯದಲ್ಲೂ ಅದು ತಪ್ಪದೇ ನಡೆಯುವ ಪ್ರಕ್ರಿಯೆ. ಪುಸ್ತಕದ ಗರಿ ಗರಿ ಹಾಳೆಗಳ ನಡುವೆ ಅಲ್ಲಲ್ಲಿ ಹಾಕಿದ್ದ ಚಿತ್ತು, ಕಾಟು, ಗೀಚು ಹಾಗೂ ಗೀಟುಗಳೆಲ್ಲವೂ ತಮ್ಮ ಆ ವರುಷದ ಮಾಲೀಕನಿಗೆ ವಿದಾಯ ಹೇಳಿ, ಇನ್ನಾರದೋ ಕೈ ಸೇರಲು ಮನಸ್ಸಿಲ್ಲದ ಮನಸ್ಸಿನಲ್ಲಿ ಅನುವಾಗುತ್ತಿದ್ದವು.

ಈ ಹಳೆಯ ಪುಸ್ತಕಗಳ ಕೊಡು–ಕೊಳ್ಳುವಿಕೆ ಎನ್ನುವುದು ಅಂದಿನ ಮಕ್ಕಳಲ್ಲಿ ಒಂದು ರೀತಿಯ ವ್ಯಾಪಾರ ಹಾಗೂ ವ್ಯವಹಾರ ಜ್ಞಾನದ ಪ್ರಾಯೋಗಿಕ ಅನುಭವ ಮೂಡಿಸುವಲ್ಲಿ ಸಫಲವಾಗುತ್ತಿದ್ದವು. ಕೆಲವೊಮ್ಮೆ ಮನೆಯ ಹಿರಿಯರ ಪಾತ್ರವೂ ಇರುತ್ತಿತ್ತು. ಅವರೇ ಖುದ್ದು ಬಂದು ಮುಂದಿನ ವರ್ಷಕ್ಕೆ ಪುಸ್ತಕ ತಮ್ಮ ಮಕ್ಕಳಿಗೇ ನೀಡಬೇಕು ಎಂದು ಆ ಹಳೆಯ ಬುಕ್‌ಗಳನ್ನೇ ಪ್ರೀ–ಬುಕ್ ಮಾಡಿ ಹೋಗುತ್ತಿದ್ದರು. ಆಗೆಲ್ಲ ಸರ್ಕಾರಿಯೇ ಆಗಲಿ ಅಥವಾ ಖಾಸಗಿ ಶಾಲೆಗಳಲ್ಲೇ ಆಗಲಿ ಫ್ರೀ ಬುಕ್ಸ್ ನೀಡುವ ಪದ್ಧತಿ ಚಾಲ್ತಿಯಲ್ಲಿ ಇರಲಿಲ್ಲ. ತಮಗೆ ಬೇಕಾದ ಪುಸ್ತಕಗಳನ್ನು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ವ್ಯವಸ್ಥೆ ಮಾಡಿಕೊಳ್ಳಬೇಕಾದ್ದರಿಂದ ಈ ವಹಿವಾಟು ಒಂದು ಕ್ರಮಬದ್ಧ ರೀತಿಯಲ್ಲಿ ನಡೆಯುತ್ತಿತ್ತು. ತಮ್ಮಲ್ಲಿರುವ ಹಳೆಯ ಪುಸ್ತಕಗಳಿಗೆ ವಿದ್ಯಾರ್ಥಿಯೇ ಒಂದು ಸೆಕೆಂಡ್ ಹ್ಯಾಂಡ್ ದರವನ್ನು ನಿಗದಿಪಡಿಸುತ್ತಿದ್ದರೂ, ಕೆಲವೊಮ್ಮೆ ಅದಕ್ಕಾಗಿ ಹಿರಿಯರ ಸಲಹೆ–ಸೂಚನೆಯನ್ನೂ ಪಡೆದುಕೊಳ್ಳಲಾಗುತ್ತಿತ್ತು. ಪ್ರತೀ ಪುಸ್ತಕದಲ್ಲಿ ಅಚ್ಚಾಗಿರುತ್ತಿದ್ದ ಅಸಲಿ ದರದ ಮೇಲೆಯೇ, ಒಂದು ಪೆನ್ಸಿಲ್‌ನಲ್ಲಿ ಈ ಸೆಕೆಂಡ್ ಹ್ಯಾಂಡ್ ರೇಟ್‌ನ್ನು ನಮೂದಿಸಲಾಗುತ್ತಿತ್ತು. ಕೊನೆಗೆ ಆ ಎಲ್ಲಾ ಬೆಲೆಗಳನ್ನೂ ಒಂದು ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ, ತಮ್ಮಲ್ಲಿರುವ ಗಣಿತದ ಎಲ್ಲಾ ಕೌಶಲ್ಯಗಳನ್ನೂ ಬಳಸಿಕೊಂಡು ಅದರ ಮೊತ್ತವನ್ನು ಲೆಕ್ಕ ಹಾಕಿ, ಇಷ್ಟು ರೂಪಾಯಿ, ಇಂತಿಷ್ಟು ಪೈಸೆ ಎಂದು ಸ್ಪಷ್ಟವಾಗಿ ಬರೆಯುವ ಮೂಲಕ ಬಲೆ ನಿಗದಿಯ ಟಾಸ್ಕ್ ಒಂದು ಹಂತಕ್ಕೆ ಮುಗಿಯುತ್ತಿತ್ತು. ಮತ್ತೇನಿದ್ದರೂ ಮನೆಯವರು ಇನ್ನೊಮ್ಮೆ ಅದನ್ನು ಪರಿಶೀಲಿಸಿ ಸರಿ ಎಂದರೆ, ಅಲ್ಲಿಗೆ ಆದಕ್ಕೆ ಅಪ್ರೂವಲ್ ಸಿಕ್ಕಂತೆಯೇ ಸರಿ.

ಬೆಲೆಯನ್ನಾದರೂ ಯಾವ ಆಧಾರದಲ್ಲಿ ನಿಗದಿಪಡಿಸಲಾಗುತ್ತಿತ್ತು ಎಂದರೆ, ಆ ಪುಸ್ತಕ ಖರೀದಿಸಿ ಎಷ್ಟು ವರ್ಷಗಳಾಗಿವೆ ಎಂಬ ಲೆಕ್ಕಾಚಾರದ ಮೇಲೆ. ಖರೀದಿಸಿ ಒಂದೇ ವರ್ಷ ಆಗಿದ್ದರೆ ಪ್ರತಿಶತ 70 ರಂತೆ, ಎರಡು ಮೂರು ವರ್ಷ ಆಗಿದ್ದರೆ 50 ಪ್ರತಿಶತ ಅದಕ್ಕೂ ಮೀರಿದ್ದರೆ ಆಗ 25–30 ಶೇಕಡಾ ಎಂದು ನಿಗದಿಪಡಿಸಲಾಗುತ್ತಿತ್ತು. ಯಾರಾದರೂ ಶ್ರೀಮಂತರು ಕೆಲವೊಮ್ಮೆ ಉಚಿತವಾಗಿಯೇ ತಮ್ಮ ಮಕ್ಕಳ ಪುಸ್ತಕಗಳನ್ನು ಯಾರಿಗಾದರೂ ಕೊಟ್ಟು ಬಿಟ್ಟರಂತೂ ಆ ಸುದ್ದಿ ಊರಲ್ಲೆಲ್ಲಾ ಹಬ್ಬಿ, ಮುಂದಿನ ವರ್ಷಕ್ಕೆ ಆ ಪುಸ್ತಕ ತಮಗೇ ನೀಡಿ ಎಂದು ಅವರಲ್ಲಿ ಅದೆಷ್ಟೋ ಜನರು ದುಂಬಾಲು ಬೀಳುತ್ತಿದ್ದುದೂ ಉಂಟು. ಇದರ ಪ್ರತೀ ಪೈಸೆ ಪೈಸೆಯನ್ನೂ ಹಗಲು ರಾತ್ರಿಯೆನ್ನದೇ ಕನವರಿಸುವ ಮಕ್ಕಳಿಗೆ ಅದೊಂದು ದೊಡ್ಡ ಮೊತ್ತದಂತೆ ಭಾಸವಾಗುತ್ತಿತ್ತು.

ಇಲ್ಲಿ ಅಡ್ವಾನ್ಸ್ ನೀಡುವ ಕ್ರಮವೂ ಇರುತ್ತಿತ್ತು. ಈ ವರ್ಷದ ಪುಸ್ತಕ ತನಗೇ ನೀಡಬೇಕು ಎಂದು ಎರಡೋ, ಐದೋ ರುಪಾಯಿಯನ್ನು ಮುಂಗಡ ನೀಡಿ ಕಾಯ್ದಿರಿಸಲಾಗುತ್ತಿತ್ತು ಎಂದರೆ ಆ ಪುಸ್ತಕಗಳ ಮಾರ್ಕೆಟ್ ಏನು ಎತ್ತ ಎನ್ನುವುದು ತಿಳಿಯುತ್ತದೆ. ಆ ಪುಸ್ತಕಗಳಿಗೆ ಬುಕ್ ಬೈಂಡ್ ಮಾಡಿಸಿದ್ದರೆ ಆಗ ಅದಕ್ಕೆ ತುಸು ಹೆಚ್ಚುವರಿ ದರ. ಅದೇ ರೀತಿ ಪುಸ್ತಕದ ಸ್ಥಿತಿ ಗತಿ, ಇಟ್ಟುಕೊಂಡಿರುವ ರೀತಿ, ಅದರ ಬಣ್ಣ, ಮೇಲಿನ ಕಲೆ ಇತ್ಯಾದಿಗಳ ಆಧಾರದ ಮೇಲೆಯೂ ಬೆಲೆಯಲ್ಲಿ ವ್ಯತ್ಯಾಸವಾಗುತ್ತಿತ್ತು. ಖರೀದಿಸಿ ಕೊಂಡು ಹೋದ ಮೇಲೆಯೂ, ಆ ಪುಸ್ತಕಗಳಲ್ಲಿ ಏನಾದರೂ ಸಮಸ್ಯೆ ಕಂಡರೆ, ಆಗ ಕೊಟ್ಟಿರುವ ಬೆಲೆಯ ಮೇಲೇ ಚೌಕಾಸಿಗೆ ಇಳಿಯುವುದು, ವಾಪಾಸ್ಸು ಕೊಡಲು ಕೇಳುವುದು ಮತ್ತು ಅದರಲ್ಲಿ ಮನೆಯ ದೊಡ್ಡವರೂ ಭಾಗಿಯಾಗುವುದೆಲ್ಲವೂ ನಡೆಯುತ್ತಿತ್ತು.

ಈ ಸೌಭಾಗ್ಯ ಕೇವಲ ಪಠ್ಯ ಪುಸ್ತಕಗಳಿಗಷ್ಟೇ ಸೀಮಿತವಾಗಿರಲಿಲ್ಲ. ನೋಟ್ ಪುಸ್ತಕವೂ ಈ ಮರುಬಳಕೆಗೆ ಒಳಗಾಗುತ್ತಿತ್ತು. ಅದರ ಖಾಲಿ ಹಾಳೆಗಳನ್ನೆಲ್ಲಾ ಕಿತ್ತು ಅವುಗಳನ್ನೆಲ್ಲಾ ಒಟ್ಟುಗೂಡಿಸಿ ಪುಸ್ತಕದ ರೀತಿ ಬುಕ್ ಬೈಂಡ್ ಮಾಡಿಸಿ ಇರಿಸಿಕೊಳ್ಳಲಾಗುತ್ತಿತ್ತು. ಈ ಪುಸ್ತಕಗಳೂ, ವಿದ್ಯಾರ್ಥಿಗಳ ಜೊತೆ ಜೊತೆಗೇ ಈ ರೂಪದಲ್ಲಾದರೂ ಮುಂದಿನ ತರಗತಿಗಳಿಗೆ ತೇರ್ಗಡೆ ಹೊಂದುತ್ತಿದ್ದವು. ಬರೆಯದೇ ಉಳಿದ ಒಂದೇ ಒಂದು ಹಾಳೆಯೂ ವ್ಯರ್ಥವಾಗುವ ಸಾಧ್ಯತೆಯೇ ಆಗ ಇರುತ್ತಿರಲಿಲ್ಲ. ಅವು ಕ್ಲಾಸ್ ವರ್ಕ್, ರಫ್ ವರ್ಕ್‌ಗಳಾಗಿ ಬಳಸಲ್ಪಡುತ್ತಿದ್ದವು. ಏನೇ ಹೇಳಿ, ಹಳೆಯದೆಂದು ಹೀಗಳೆಯದೇ, ಹರಿದು ಮೂಲೆಗೆಸೆಯದೇ ಮತ್ತೆ ಮತ್ತೆ ಬಳಸಲು ಕಾರಣವಾಗುವ ಆ ಒಟ್ಟಾರೆ ಚಟುವಟಿಕೆ ಒಂದು ಚೆಂದದ ಪ್ರಕ್ರಿಯೆಯಂತೆ ನಡೆಯುತ್ತಿತ್ತು. ಹೀಗಾಗಿಯೇ ಅದು ಹಳೆಯ ಪುಸ್ತಕದ ನೆನಪುಗಳೇ ಆದರೂ ಅದನ್ನು ಅನುಭವಿಸಿದವರಿಗೆ ಇದೆಂದೂ ಹಳತು ಎಂದೆನಿಸುವುದೇ ಇಲ್ಲ. ಅದು ಸದಾ ಹೊಸತು, ತಾಜಾ ಹಾಗೂ ಹಸಿ ಹಸಿರು!

ಓವರ್‌ಡೋಸ್: ಆ ಕಾಲದಲ್ಲಿ ಹಳೆಯದನ್ನು ಉಳಿಸಿಕೊಳ್ಳಲು ಕಾರಣ ಹುಡುಕುತ್ತಿದ್ದರು, ಈಗ ಹೊಸತನ್ನು ಕೊಂಡುಕೊಳ್ಳಲು ಕಾರಣ ಹುಡುಕುತ್ತಾರೆ!

ಕಿರುಸುದ್ದಿ

ಹುಬ್ಬಳ್ಳಿ ಲವ್ ಜಿಹಾದ್ ಪ್ರಕರಣ: ಸೂಕ್ತ ಕ್ರಮಕ್ಕೆ ಹಿಂಜಾವೇ ಆಗ್ರಹ

ಮಡಿಕೇರಿ: ಹುಬ್ಬಳ್ಳಿಯ ಲವ್ ಜಿಹಾದ್ ಪ್ರಕರಣವನ್ನು ಉಗ್ರವಾಗಿ ಖಂಡಿಸಿದ್ದು, ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಪೊಲೀಸ್ ಇಲಾಖೆಯನ್ನು ಒತ್ತಾಯಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಂಘಟನೆಯ ಜಿಲ್ಲಾ ಸಂಯೋಜಕ ಭೋಜೇಗೌಡ ಅವರು, ಜಿಮ್ ಟ್ರೈನರ್ ಸಮೀರ್ ಎಂಬಾತ ತನ್ನ ಅಕ್ಕನ ಮೂಲಕ ಆಕೆಯ ಸ್ನೇಹಿತೆಯರನ್ನು ಪರಿಚಯ ಮಾಡಿಸಿಕೊಂಡು ನಿರಂತರವಾಗಿ ಲೈಂಗಿಕ ದೌರ್ಜನ್ಯವೆಸಗಿರುವುದು ಬೆಳಕಿಗೆ ಬಂದಿದೆ. ಮತಾಂಧರ ಈ ವ್ಯವಸ್ಥಿತ ಲವ್ ಜಿಹಾದ್ ಪ್ರಕರಣವನ್ನು ಹಿಂದೂ ಜಾಗರಣ ವೇದಿಕೆಯು ಉಗ್ರವಾಗಿ ಖಂಡಿಸುತ್ತದೆ. ಪೊಲೀಸ್ ಇಲಾಖೆಯು ಪ್ರಕರಣದ ಸಮಗ್ರ ತನಿಖೆಯನ್ನು ಯಾವುದೇ ಓಲೈಕೆ ರಾಜಕಾರಣಿಗಳ ಒತ್ತಡಗಳಿಗೆ ಮಣಿಯದೆ ನ್ಯಾಯಸಮ್ಮತವಾಗಿ ನಡೆಸಿ ತಪ್ಪಿತಸ್ಥರೆಲ್ಲರ ವಿರುದ್ಧ ಕಠಿಣ ಕಾನೂನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ತಪ್ಪಿದಲ್ಲಿ ಹಿಂದೂ ಜಾಗರಣ ವೇದಿಕೆ ನ್ಯಾಯಕ್ಕಾಗಿ ಆಗ್ರಹಿಸಿ ಬೃಹತ್ ಜನಾಂದೋಲನ ರೂಪಿಸುತ್ತದೆ ಎಂದು ಎಚ್ಚರಿಸಿರುವ ಅವರು, ಈ ರೀತಿಯ ಪ್ರಕರಣ ಏಗಳ ಮಾಹಿತಿ ದೊರೆತ ತಕ್ಷಣವೇ ಯುವತಿಯರ ಪೋಷಕರು ಮತ್ತು ಸಾರ್ವಜನಿಕರು ಸಂಘಟನೆಯ ಗಮನಕ್ಕೆ ತರುವಂತೆಯೂ ಭೋಜೇಗೌಡ ಮನವಿ ಮಾಡಿದ್ದಾರೆ.

ಏ.16ರಿಂದ 30ರವರೆಗೆ ಶಿವಳ್ಳಿ ಬ್ರಾಹ್ಮಣ ವಟುಗಳಿಗೆ 'ವಸಂತ ವೇದ ಪಾಠ' ಶಿಬಿರ

ಬೆಳ್ತಂಗಡಿ: ತುಳು ಶಿವಳ್ಳಿ ಸಭಾ ಬೆಳ್ತಂಗಡಿ ತಾಲೂಕು ಇದರ ನೇತೃತ್ವದಲ್ಲಿ, ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದ ಆಶ್ರಯದಲ್ಲಿ, ಶಿವಳ್ಳಿ ಸಭಾ ಉಜಿರೆ ವಲಯದ ಸಹಕಾರದಲ್ಲಿ ಪ್ರತಿ ವರ್ಷದಂತೆ ಈ ಸಲವೂ ಆನುವಂಶಿಕ ಆಡಳಿತ ಮೊಕ್ತೇಸರ ಶರತ್‌ಕೃಷ್ಣ ಪಡುವೆಟ್ನಾಯರ ಮಾರ್ಗದರ್ಶನದಲ್ಲಿ ಏ. 16 ರಿಂದ ಏ. 30 ರ ತನಕ ಶಿವಳ್ಳಿ ಬ್ರಾಹ್ಮಣ ವಟುಗಳಿಗೆ 'ವಸಂತ ವೇದ ಪಾಠ' ಶಿಬಿರ ನಡೆಯಲಿದೆ. ಹಿಂದಿನ ವರ್ಷಗಳಲ್ಲಿ ಶಿಬಿರದಲ್ಲಿದ್ದ ವಿದ್ಯಾರ್ಥಿಗಳು ಕಲಿತ ಪಾಠಗಳನ್ನು ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಬಂದು ಪೂರ್ವ ಪರೀಕ್ಷೆ ಬಳಿಕ ಮುಂದಿನ ತರಗತಿಗೆ ಮುಂದುವರಿಸಬಹುದು. ನೂತನ ವಟುಗಳು ವಾಸ್ತವ್ಯಕ್ಕೆ ಅಗತ್ಯವಿರುವ ಸಾಮಗ್ರಿಗಳೊಂದಿಗೆ ಏ.16 ರಂದು ಬೆಳಿಗ್ಗೆ 9 ಕ್ಕೆ ಉಜಿರೆ ಶ್ರೀ ಜನಾರ್ದನ ದೇವಸ್ಥಾನಕ್ಕೆ ಬರಬೇಕು. ಉದ್ಘಾಟನಾ ಕಾರ್ಯಕ್ರಮದ ಬಳಿಕ ಪಾಠಗಳು ಆರಂಭಗೊಳ್ಳುತ್ತವೆ. ಬೆಂಗಳೂರು ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದ ಗುರುಗಳು ದೈನಂದಿನ ಪಾಠಪ್ರವಚನಗಳ ನಡೆಸಿಕೊಡಲಿದ್ದಾರೆ. ಆಸಕ್ತ ಉಪನೀತ ವಟುಗಳು ಮಾಹಿತಿಗೆ ಹರ್ಷಕುಮಾರ್ 8088950612 ರಾಜ್ ಕುಮಾರ್ (ಮೇನೇಜರ್) 9535325256 ಅಥವಾ ಮುರಳೀಕೃಷ್ಣ ಆಚಾರ್ 9740150276 ಅವರನ್ನು ಸಂಪರ್ಕಿಸಬಹುದಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಗೌತಮಿ ಶೆಟ್ಟಿ, ಪದೆಂಜಿಲಗುತ್ತು ಮನೆ, ಪಾರೆಂಕಿ, ಮಡಂತ್ಯಾರು, ಬೆಳ್ತಂಗಡಿ (ತಾ).
2. ಮುತ್ತು ಪೂಜಾರ್ತಿ, 'ಮಾತೃಛಾಯ', ಜಮಾದಾರ್ ತೋಟ, ಹೆಜಮಾಡಿ.
3. ಸತ್ಯನಾರಾಯಣ ಪೂಜಾ ಸೇವಾ ಸಮಿತಿ, ಬೈಲು ಬೀಡಿನ ಬಳಿ, ಕೊಳಂಬೆ, ಬಜಪೆ, ಮಂಗಳೂರು (ತಾ).
4. ಸದಾಶಿವ ಶೆಟ್ಟಿ, "ದೇವಿ ಕೃಪಾ", ಶಿವಶಕ್ತಿನಗರ, ಕೆರೆಕಾಡು, ಹೊಸಬೆಟ್ಟು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
5. ಲಲಿತಾ ಶೆಟ್ಟಿ, ಕುಬೆವೂರುಗುತ್ತು ಹೊಸಮನೆ, ಕಿಂಚನಕೆರೆ, ಮುಲ್ಕಿ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
6. ದಿ। ವಿಶ್ವನಾಥ್ ಸ್ಮರಣಾರ್ಥ ಸಹೋದರ, ಸಹೋದರಿ, 1ನೇ ಬ್ಲಾಕ್, ಕಾಟಿಪಳ್ಳ, ಕೈಕಂಬ ವಯಾ ಸುರತ್ಕಲ್.
7. ಬಿ.ಆರ್. ಕೃಷ್ಣ ಪ್ರಸಾದ್, ಬಾಕಿಲ ಹೌಸ್, ಗುತ್ತಿಗಾರು, ಸುಳ್ಯ (ತಾ).

ಶ್ರೀ ಧರ್ಮಸ್ಥಳ ಮೇಳ
ಬಿಜೂರಿನಲ್ಲಿ
ದಿ. ನಾರಾಯಣ ಶೆಟ್ಟಿ ಸ್ಮರಣಾರ್ಥ ಮಕ್ಕಳು, ರಾಘವೇಂದ್ರ ನಿಲಯ

ಶ್ರೀ ಸಾಲಿಗ್ರಾಮ ಮೇಳ
ಹಿರೇಗುತ್ತಿ ಕುಮಟಾದಲ್ಲಿ ಬಯಲಾಟ
ಸುದರ್ಶನ- ಶ್ರೀನಿವಾಸ ಕಲ್ಯಾಣ

ಶ್ರೀ ಪೆರ್ಡೂರು ಮೇಳ
ಸೂರಾಲಿನಲ್ಲಿ - **ಚದುರಂಗ**

ಶ್ರೀ ಹನುಮಗಿರಿ ಮೇಳ
ಪದ್ಯಾಣದಲ್ಲಿ

ಶ್ರೀ ಪಾವಂಜೆ ಮೇಳ
ಶ್ರೀ ಸುಭಾಷ್‌ಚಂದ್ರ ಭೋಸ್ ಕ್ರೀಡಾಂಗಣ
ಬೆಣ್ಣೆಗುಡ್ಡ ಕಮ್ಮರಡಿ
ಪಾಪಣ್ಣ ವಿಜಯ, ಗುಣಸುಂದರಿ



ಪುತ್ತೂರಿನ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಏ.10ರಿಂದ ವಾರ್ಷಿಕ ಜಾತ್ರೆ ಆರಂಭಗೊಳ್ಳಲಿದ್ದು, ಇದಕ್ಕೆ ಪೂರಕವಾಗಿ ದೇವಾಲಯದ ಆವರಣದಲ್ಲಿ ಭಾನುವಾರ ಸ್ವಚ್ಛತಾ ಶ್ರಮದಾನ ನಡೆಯಿತು. ಮಹಾಲಿಂಗೇಶ್ವರ ದೇವಾಲಯ ಸಂರಕ್ಷಣಾ ಸಮಿತಿ, ವಿವಿಧ ಸಂಘಟನೆಗಳು, ಭಕ್ತರು ಇದರಲ್ಲಿ ಪಾಲ್ಗೊಂಡರು. ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್, ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ: 483 ಕೋಟಿ ರೂ.ಗಳ ವ್ಯವಹಾರ: ವಸಂತ್

ಮುಲ್ಕಿ: ಸದಸ್ಯರ ಪ್ರೋತ್ಸಾಹ, ಗ್ರಾಹಕರ ಸಹಕಾರ, ಆಡಳಿತ ವರ್ಗದವರ ಮಾರ್ಗದರ್ಶನ ಹಾಗೂ ಸಿಬ್ಬಂದಿಗಳ ಕಾರ್ಯಶ್ರಮತೆಯಿಂದಾಗಿ 2025–26ನೇ ಸಾಲಿನಲ್ಲಿ ಹಳೆಯಂಗಡಿ ಪ್ರಿಯದರ್ಶಿನಿ ಕೋ–ಆಪರೇಟಿವ್ ಸೊಸೈಟಿಯು 483 ಕೋಟಿ ರೂ ವ್ಯವಹಾರ ನಡೆಸಿದೆ ಎಂದು ಸೊಸೈಟಿ ಅಧ್ಯಕ್ಷ ವಸಂತ್ ಬೆರ್ನಾರ್ಡ್ ಹೇಳಿದರು.



ಅವರು ಮಾಧ್ಯಮದ ಜೊತೆ ಮಾತನಾಡಿ, ಮಾಜಿ ಸಚಿವ ಕೆ. ಅಭಯ ಚಂದ್ರ ಜೈನ್ ಅವರ ಮಾರ್ಗದರ್ಶನದಲ್ಲಿ ಹಾಗೂ ಸಹಕಾರಿ ಭೀಷ್ಮ ದಿ.ಎಚ್. ನಾರಾಯಣ ಸನಿಲ್ ಮತ್ತು ದಿ. ಪಂಜದಗುತ್ತು ಶಾಂತರಾಮ ಶೆಟ್ಟಿ ರವರ ಪ್ರೇರಣಾ ಶಕ್ತಿಯಿಂದ 2021ರಲ್ಲಿ ಪ್ರಾರಂಭವಾದ ಪ್ರಿಯದರ್ಶಿನಿ ಕೋ– ಆಪರೇಟಿವ್ ಸೊಸೈಟಿಯು, ವರದಿ ಸಾಲಿನಲ್ಲಿ 483 ಕೋಟಿ ರೂ. ವ್ಯವಹಾರವನ್ನು ದಾಖಲಿಸಿದೆ. ಕಳೆದ ಸಾಲಿನ ವ್ಯವಹಾರವನ್ನು ತುಲನೆ ಮಾಡಿದರೇ ಶೇ 72.86% ಏರಿಕೆಯನ್ನು ಕಂಡಿದೆ. ಪ್ರಸ್ತುತ 38.32 ಕೋಟಿ ರೂ. ಠೇವಣಿ, 32.48 ಕೋಟಿ ರೂ. ಸಾಲ ಮತ್ತು ಮುಂಗಡಗಳೊಂದಿಗೆ, ರೂ. 76.57 ಲಕ್ಷ ಪಾಲು ಬಂಡವಾಳ, ರೂ. 90.50 ಲಕ್ಷ ನಿಧಿಗಳು, ರೂ. 40 ಕೋಟಿ ದುಡಿಯುವ ಬಂಡವಾಳ ಹೊಂದಿ ರುತ್ತದೆ ಎಂದರು.

ಹೊಸ ಶಾಖೆಯನ್ನು ತೆರೆಯುವ ಗುರಿ

2025–26ನೇ ಸಾಲಿನಲ್ಲಿ ಉತ್ತಮ ಲಾಭಾಂಶ ಗಳಿಸಿದ್ದು, ಸದಸ್ಯರಿಗೆ ಉತ್ತಮ ರೀತಿಯ ಪಾಲು ಮುನಾಫೆಯನ್ನು ಹಂಚುವ ಗುರಿ ಹೊಂದಿದೆ, ಹಳೆಯಂಗಡಿ, ಪಡುಬಿದ್ರೆ, ಕಿನ್ನಿಗೋಳಿ ಮತ್ತು ಮೂಡಬಿದ್ರೆಯಲ್ಲಿ ಒಟ್ಟು ನಾಲ್ಕು ಶಾಖೆಗಳನ್ನು ಹೊಂದಿರುವ ಸೊಸೈಟಿಯು ವರದಿ ವರ್ಷದಲ್ಲಿ ಕೂಡ ಹೊಸ ಶಾಖೆಯನ್ನು ತೆರೆಯುವ ಗುರಿ ಹೊಂದಿದೆ ಎಂದು ಅವರು ಹೇಳಿದರು

ಅವಲೋಕನ ಸಭೆಯಲ್ಲಿ ಸೊಸೈಟಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುದರ್ಶನ, ಲೆಕ್ಕಿಗರಾದ ಲೋಲಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.

ಉಡುಪಿ ಜಿಲ್ಲೆಯ ಪ್ರಸಿದ್ಧ ಮೀನುಗಾರಿಕಾ ಪ್ರದೇಶಕ್ಕೆ ಗ್ರಹಣ | ಮತ್ಸ್ಯಕ್ಷಾಮಕ್ಕೆ ಕಡಲಮಕ್ಕಳು ಹೈರಾಣ

ಭಣಗುಡುತ್ತಿದೆ ಗಂಗೊಳ್ಳಿಯ ಬಂದರು

ಗಂಗೊಳ್ಳಿ: ಉಡುಪಿ ಜಿಲ್ಲೆಯ ಪ್ರಸಿದ್ಧ ಮೀನುಗಾರಿಕಾ ಬಂದರು ಪ್ರದೇಶ, ಗಂಗೊಳ್ಳಿ ಮೀನುಗಾರಿಕಾ ಬಂದರಿನಲ್ಲಿ ಕಳೆದ ಮೂರು ತಿಂಗಳಿನಿಂದ ಬರದ ಛಾಯೆಯೇ ಆವರಿಸಿದ್ದು, ಮತ್ಸ್ಯಕ್ಷಾಮಕ್ಕೆ ಮೀನುಗಾರರು ಕಂಗಾಲಾಗಿದ್ದಾರೆ.

ಈ ಬಂದರಿನಿಂದ ಮೀನುಗಾರಿಕೆಗೆ ತೆರಳುವ ಬೋಟುಗಳು ಸಮುದ್ರದಲ್ಲಿ ಮತ್ಸ್ಯಕ್ಷಾಮದಿಂದ ಬರಿಗೈಯಲ್ಲಿ ವಾಪಾಸಾಗುತ್ತಿವೆ.

ಮತ್ತೆ ಸಂಕಷ್ಟದಲ್ಲಿ ಮೀನೂರರು

ಮೀನುಗಾರಿಕಾ ಋತುವಿನ ಆರಂಭದಲ್ಲಿ ಉತ್ತಮ ಮೀನುಗಾರಿಕೆ ನಡೆಸುತ್ತಿದ್ದ ಈ ಭಾಗದ ಮೀನುಗಾರರು ಈ ಬಾರಿ ಸಂಕಷ್ಟಕ್ಕೀಡಾಗಿದ್ದಾರೆ. ಸ್ಥಳೀಯ ಮೀನುಗಾರರಿಗೆ ಈ ಮತ್ಸ್ಯಕ್ಷಾಮ ಆರ್ಥಿಕವಾಗಿ ಭಾರೀ ಹೊಡೆತ ನೀಡಿದೆ.

ಸಮುದ್ರದಲ್ಲಿ ಮತ್ಸ್ಯ ಸಂಪತ್ತು ಯಥೇಚ್ಛ ಪ್ರಮಾಣದಲ್ಲಿ ದೊರೆಯದ ಕಾರಣ ಫಿಶ್ಶಿಂಗ್, ಪರ್ಸಿನ್ ಬೋಟುಗಳು ಗಂಗೊಳ್ಳಿ ಬಂದರಿನಲ್ಲಿ ಲಂಗರು ಹಾಕಿದೆ. ಕೆಲವೊಂದು ಟ್ರಾಲ್‌ಬೋಟ್, ಫಿಶ್ಶಿಂಗ್ ಬೋಟ್, ದೋಣಿ ಕಡಲಿಗೆ ಇಳಿಯುತ್ತಿದ್ದರೂ ಮೀನು ದೊರೆಯುತ್ತಿಲ್ಲ. ಮೀನುಗಾರಿಕೆ ಇಲ್ಲದೆ ಬಂದರು ಬಿಕೋ ಎನ್ನುತ್ತಿದ್ದು, ಬಡ ಕಾರ್ಮಿಕರು ಮಹಿಳೆಯರು ಕೆಲಸ ಇಲ್ಲದೆ ಕಷ್ಟದಲ್ಲಿ ಜೀವನ ಸಾಗಿಸುವ ಪರಿಸ್ಥಿತಿ ತಲೆದೋರಿದೆ.

ಕಳೆದ ಸುಮಾರು ಮೂರು ತಿಂಗಳಿನಿಂದ ಬಹುತೇಕ ಬೋಟುಗಳು ಕಡಲಿಗಿಳಿದಿಲ್ಲ. ಬೆಳಕು



ಮೀನುಗಾರಿಕೆ ನಡೆಸುವ ಬೋಟುಗಳಿಗೆ ಕೂಡ ನಿರೀಕ್ಷೆಗೆತಕ್ಕಂತೆ ಮೀನು ದೊರೆಯದಿರುವುದರಿಂದ ಬೋಟ್ ಮಾಲೀಕರು ಚಿಂತಿತರಾಗಿದ್ದಾರೆ. ವೆಚ್ಚಕ್ಕೆ ತಕ್ಕ ಲಾಭ ಸಿಗುತ್ತಿಲ್ಲ.

ಕಾರ್ಮಿಕರಿಗೆ ನೀಡಲು ದುಡ್ಡಿಲ್ಲ

ದಿಗಂತ ವಿಶೇಷ

ಬೋಟುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೀನುಗಾರರಿಗೆ ನೀಡಲು ದುಡ್ಡಿಲ್ಲ. ಹೀಗಾಗಿ ಆರ್ಥಿಕ ನಷ್ಟ ಸಂಭವಿಸದಂತೆ ಹಾಗೂ ಮುಂಜಾಗ್ರತಾ ಕ್ರಮವಾಗಿ ಈಗ ಅನಿವಾರ್ಯವಾಗಿ ಬೋಟುಗಳನ್ನು ಬಂದರಿನಲ್ಲಿ ಲಂಗರು ಹಾಕಲಾಗಿದೆ ಎಂದು ಸ್ಥಳೀಯ ಮೀನುಗಾರರು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ.

ಕಳೆದ ಎರಡು ತಿಂಗಳಿನಿಂದ ಮತ್ಸ್ಯಕ್ಷಾಮದ ಛಾಯೆ ಆವರಿಸಿರುವುದರಿಂದ ಬಹುತೇಕ ಬೋಟುಗಳು ಕಡಲಿಗಿಳಿಯುವ ಧೈರ್ಯ ತೋರುತ್ತಿಲ್ಲ. ಮೀನುಗಳಿಗೆ ಪ್ರಸಿದ್ಧವಾಗಿರುವ ಕರಾವಳಿಯ ಈ ಪ್ರದೇಶಗಳಲ್ಲಿ ಮೀನಿನ ಲಭ್ಯತೆ ಕಡಿಮೆಯಾಗುತ್ತಿರುವುದರಿಂದ ಮೀನುಗಳ ಬೆಲೆ ಗಗನಕ್ಕೇರುತ್ತಿದೆ.

ಮೀನುಗಳ ದರದಲ್ಲಿ ಭಾರಿ ಏರಿಕೆ

ಒಂದೆಡೆ ಮತ್ಸ್ಯಕ್ಷಾಮ, ಇನ್ನೊಂದೆಡೆ ಮೀನು ದರದಲ್ಲಿ ಭಾರೀ ಏರಿಕೆಯಾಗಿರುವುದರಿಂದ ಮೀನುಗಾರರು ಕಂಗಾ ಲಾಗಿದ್ದಾರೆ. ಈ ವರ್ಷ ಸುಮಾರು ಎರಡು ತಿಂಗಳ ಕಾಲ ಸರಿಯಾಗಿ ಮೀನುಗಾರಿಕೆ ನಡೆಸಲು ಸಾಧ್ಯವಾಗಿಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣಗೊಂಡಿದೆ. ಮೀನುಗಳಿಲ್ಲದೇ ಮೀನುಗಾರರು, ಮೀನು ಮಾರಾಟಗಾರರು ದಿಕ್ಕು ತೋಚದೆ ಕಂಗಾಲಾಗಿದ್ದಾರೆ. ಮೀನುಗಾರಿಕೆಯನ್ನೇ ಅವಲಂಬಿಸಿಕೊಂಡಿರುವ ಗಂಗೊಳ್ಳಿಯ ಜನರ ಆರ್ಥಿಕ ಪರಿಸ್ಥಿತಿ ಕೂಡ ಈಗ ಬಿಗಡಾಯಿಸುತ್ತಿದೆ.

ಇನ್ನೆರಡು ತಿಂಗಳು ಬಾಕಿ ಇವೆ

ಪ್ರಸಕ್ತ ಸಾಲಿನ ಮೀನುಗಾರಿಕೆ ಋತು ಅಂತ್ಯವಾಗಲು ಇನ್ನೆರಡು ತಿಂಗಳು ಬಾಕಿ ಉಳಿದಿದ್ದು, ಮತ್ಸ್ಯಕ್ಷಾಮ ಹಾಗೂ ಕಾರ್ಮಿಕರ ಕೊರತೆ ಹಿನ್ನೆಲೆಯಲ್ಲಿ ಅವಧಿಗೆ ಮೊದಲೇ ಮೀನುಗಾರಿಕೆ ಋತು ಅಂತ್ಯಗೊಳ್ಳುವ ಸಾಧ್ಯತೆ ಇದೆ.

ಕಾದು ಕಾದು ಸುಸ್ತಾಗಿದ್ದೇವೆ

ಕಳೆದ ಎರಡು ತಿಂಗಳಿನಿಂದ ಗಂಗೊಳ್ಳಿ ಬಂದರಿನಲ್ಲಿ ಮೀನುಗಾರಿಕಾ ಚಟುವಟಿಕೆ ಸಂಪೂರ್ಣವಾಗಿ ಸ್ತಬ್ಧಗೊಂಡಿದೆ. ಮೀನುಗಾರಿಕಾ ಇಲ್ಲದಿರುವುದರಿಂದ ದೈನಂದಿನ ಜೀವನ ನಡೆಸಲು ಕಷ್ಟವಾಗುತ್ತಿದೆ. ಮೀನುಗಾರಿಕೆಗೆ ತೆರಳಿದ ಬೋಟುಗಳು ಖಾಲಿಯಾಗಿ ವಾಪಾಸು ದಡಕ್ಕೆ ಬರುತ್ತಿರುವುದರಿಂದ ಮೀನುಗಾರ ಕಾರ್ಮಿಕರಿಗೆ ಕೆಲಸ ಇಲ್ಲದಂತಾಗಿದೆ. ಪ್ರತಿನಿತ್ಯ ಕಾದು ಕಾದು ಸುಸ್ತಾಗಿದ್ದು ಜೀವನ ನಡೆಸಲು ಬಹಳ ತೊಂದರೆಯಾಗಿದೆ

■ ಅಶೋಕ ಎನ್.ಡಿ., ಮೀನುಗಾರಿಕೆಯ ಕಾರ್ಮಿಕ

ಈಗ ಜೀವನ ನಡೆಸುವುದು ಕಷ್ಟ

ಗಂಗೊಳ್ಳಿಯಲ್ಲಿ ಕಳೆದ ಎರಡು ತಿಂಗಳಿನಿಂದ ಮತ್ಸ್ಯಕ್ಷಾಮ ತಲೆದೋರಿದ್ದು, ಬಹುತೇಕ ಬೋಟುಗಳು ಗಂಗೊಳ್ಳಿಯಲ್ಲಿ ಲಂಗರು ಹಾಕಿದೆ. ಮತ್ಸ್ಯಕ್ಷಾಮದಿಂದ ಈ ಭಾಗದ ಮೀನುಗಾರರ ಸಂಕಷ್ಟ ಅನುಭವಿಸುತ್ತಿದ್ದಾರೆ. ತಮ್ಮ ದೈನಂದಿನ ಖರ್ಚುಗಳನ್ನು ಸರಿತೂಗಿಸಲು ಮೀನುಗಾರರು ಕಷ್ಟಪಡುತ್ತಿದ್ದಾರೆ. ಆರಂಭದ ಕೆಲವು ತಿಂಗಳು ಹೊರತುಪಡಿಸಿದರೆ ಉಳಿದ ದಿನಗಳಲ್ಲಿ ಕಾಡುತ್ತಿರುವ ಮತ್ಸ್ಯಕ್ಷಾಮದಿಂದ ಮೀನುಗಾರರು ಜೀವನ ನಡೆಸುವುದು ಕಷ್ಟಕರವಾಗುತ್ತಿದೆ. ಸರಕಾರ ಮೀನುಗಾರರ ಸಂಕಷ್ಟಕ್ಕೆ ಸ್ಪಂದಿಸಬೇಕು

■ ರಾಮಪ್ಪ ಖಾರ್ವಿ, ಮೀನುಗಾರ ಮುಖಂಡ, ಗಂಗೊಳ್ಳಿ

ಕಡಬ ಶ್ರೀ ದುರ್ಗಾಂಬಿಕಾ ದೇವಸ್ಥಾನದ ನವೀಕೃತಗೊಂಡ ಪಾಕಶಾಲೆ ಉದ್ಘಾಟನೆ

ಕಡಬ: ಭಜನಾ ಮಂಡಳಿ ಸಕ್ರಿಯ ಪದಾಧಿಕಾರಿಯಾಗಿದ್ದ ಹಿರಿಯ ಧಾರ್ಮಿಕ ಮುಂದಾಳು, ದಿ.ಕೆ. ನಾರಾಯಣ ಭಂಡಾರಿ ಅವರ ಸ್ಮರಣಾರ್ಥ ಪುನರ್ ನಿರ್ಮಾಣಗೊಂಡ ಪಾಕಶಾಲೆ ಹಾಗೂ ಭಕ್ತಾದಿಗಳ ಅನುಕೂಲಕ್ಕಾಗಿ ನಿರ್ಮಾಣ ಗೊಂಡ ಕೈ ತೊಳೆಯುವ ವ್ಯವಸ್ಥೆಯ ಉದ್ಘಾಟನೆ ಇಲ್ಲಿನ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದ ಸಭಾಂಗಣ ದಲ್ಲಿ ನೆರವೇರಿತು.

ಪಾಕಶಾಲೆ ಪುನರ್ನಿರ್ಮಾಣ ಹಾಗೂ ಕೈ ತೊಳೆಯುವ ವ್ಯವಸ್ಥೆಗೆ ತಗುಲಿದ ಸುಮಾರು ರೂ.7 ಲಕ್ಷ ವೆಚ್ಚವನ್ನು ಭರಿಸಿದ ಮಂಗಳೂರಿನ ಉದ್ಯಮಿ ಪ್ರಸಾದ್ ಎನ್.ಕೆ. ಮತ್ತು ಡಾ. ಸೌಮ್ಯ ದಂಪತಿಯ ಉಪಸ್ಥಿತಿಯಲ್ಲಿ ದಿ.ಕೆ. ನಾರಾಯಣ ಭಂಡಾರಿ ಅವರ ಪತ್ನಿ ಲೀಲಾವತಿ ಅವರು ಉದ್ಘಾಟನೆ ನೆರವೇರಿಸಿದರು.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚಂದ್ರಶೇಖರ ಕರ್ಕೇರ ಪೆಲತ್ತೋಡಿ, ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿಯ ಅಧ್ಯಕ್ಷ ಸೋಮಪ್ಪ ನ್ಯಾಕ್ ಕಡಬ, ಏಕಾಹ ಭಜನಾ ಸಮಿತಿಯ ಅಧ್ಯಕ್ಷ ದಯಾನಂದ ಗೌಡ ಆರಿಗ, ಸರಸ್ವತಿ ವಿದ್ಯಾಲಯದ ಅಧ್ಯಕ್ಷ ರವಿರಾಜ್ ಶೆಟ್ಟಿ, ಧಾರ್ಮಿಕ ಮುಂದಾಳು ಸೀತಾರಾಮ ಗೌಡ ಪೊಸವಳಿಕೆ ಮಾತನಾಡಿ ದೇವಸ್ಥಾನದ ಮೂಲಭೂತ ಸೌಕರ್ಯಕ್ಕೆ ಕೊಡುಗೆ



ನೀಡಿದ ದಾನಿ ಪ್ರಸಾದ್ ಎನ್.ಕೆ. ಅವರ ಸಮಾಜಮುಖಿ ಕಳಕಳಿಯ ಕುರಿತು ಶ್ಲಾಘನೆ ವ್ಯಕ್ತಪಡಿಸಿದರು. ಪತ್ರಕರ್ತ ನಾಗರಾಜ್ ಎನ್.ಕೆ. ಶುಭ ಹಾರೈಸಿದರು.

ವಿವಿಧ ಗಣ್ಯರುಗಳ ಉಪಸ್ಥಿತಿ

ನಿವೃತ್ತ ಮುಖ್ಯ ಶಿಕ್ಷಕ ವಸಂತ ಗೌಡ ಪಡೆಜ್ಜಾರ್, ಏಕಾಹ ಭಜನಾ ಸಮಿತಿಯ ಕಾರ್ಯದರ್ಶಿ ಜಯಂತ ಕುತ್ಯಾಡಿ ಸಂಕೇಶ, ಕೋಶಾಧಿಕಾರಿ ಸೀತಾರಾಮ ಗೌಡ ಎ., ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿಯ ಕಾರ್ಯದರ್ಶಿ ಮನೋಹರ ರೈ ಬೆದ್ರಾಜೆ, ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಗೀತಾ ಲೋಕೇಶ, ರಾಮಚಂದ್ರ ಗೌಡ ಸನಿಲ, ಕಮಲ ಪಣೆಮಜಲು, ಶೀನ ನಾಯ್ಕ, ಸದಾನಂದ ಗೌಡ ಸಾಂತ್ಯಡ್ಕ, ಕಿಶನ್ ಕುಮಾರ್ ರೈ ಪೆರಿಯಡ್ಕ ಗುತ್ತು, ನೀಲಾವತಿ ಶಿವರಾಂ, ಅಶೋಕ್ ಕುಮಾರ್ ಪಿ., ಪ್ರಕಾಶ್ ಎನ್.ಕೆ., ಅಜಿತ್ ರೈ ಆರ್ತಿಲ, ವಿಶ್ವನಾಥ ರೈ ಪೆರ್ಲ, ಸತೀಶ್ ಶೆಟ್ಟಿ ಬೀರುಕ್ಕು, ದಯಾನಂದ ಪ್ರಭು, ರಾಮಚಂದ್ರ ಭಟ್ ಪಾದೆ, ಅಶೋಕ್ ಆಳ್ವ ಬೆದ್ರಾಜೆ, ಶಿವಪ್ರಸಾದ್ ರೈ ಮೈಲೇರಿ, ಯಶೋಧರ ಪೂವಳ, ರಾಧಾಕೃಷ್ಣ ಕೋಲ್ಪೆ, ಪುಲಸ್ತ್ಯಾ ರೈ, ಗೀತಾ ಗೋಪಾಲಕೃಷ್ಣ ಕೇವಳ, ದಯಾನಂದ ಗೌಡ ಪೊಯ್ಯೆತಡ್ಡ, ಲಿಂಗಪ್ಪ ಜೆ., ಸಾಯಿಪ್ರಸಾದ್ ಪೈ ಮತ್ತಿತರರು ಉಪಸ್ಥಿತರಿದ್ದರು. ಶಿವಪ್ರಸಾದ್ ರೈ ಮೈಲೇರಿ ಸ್ವಾಗತಿಸಿ, ವಂದಿಸಿದರು.

ಬಾಡಿಗೆ ಹೆಚ್ಚಿಸಲು ಅವಕಾಶ ನೀಡಿ: ಪುತ್ತೂರು ಆಟೋ ಚಾಲಕರ ಆಗ್ರಹ

ಪುತ್ತೂರು: ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಯುದ್ಧ ನಡೆಯುತ್ತಿರುವ ಪರಿಣಾಮ ಎಲ್‌ಪಿಜಿ ಆಟೋ ಗ್ಯಾಸ್‌ಗಳಲ್ಲಿ ಏರಿಕೆ ಆಗುತ್ತಿದೆ. ಒಂದೊಂದು ಬಂಕ್‌ಗಳಲ್ಲಿ ಒಂದೊಂದು ದರವಿದೆ. ಹೀಗೆ ದರ ಏರಿಕೆಯಾದರೆ ಬಾಡಿಗೆ ದರವನ್ನು ಏರಿಸುವುದು ಅನಿವಾರ್ಯವಾಗಬಹುದು ಎಂದು ಪುತ್ತೂರು ತಾಲೂಕು ಆಟೋ ಚಾಲಕ ಮಾಲಕರ ಸಂಯುಕ್ತ ಹೋರಾಟ ಸಮಿತಿ ಅಧ್ಯಕ್ಷ ಜಯರಾಮ ಕುಲಾಲ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್‌ಪಿಜಿ ಹಾಗೂ ಇತರ ಬಂಕ್‌ಗಳಲ್ಲಿ ನಿರಂತರವಾಗಿ ಆಟೋ ಎಲ್ಪಿಜಿ ದರ ಹೆಚ್ಚಳ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಬೇರೆ ಬೇರೆ ಬಂಕ್ ಗಳಲ್ಲಿ ಬೇರೆ ಬೇರೆ ರೀತಿಯ ದರಗಳನ್ನು ಆಟೋ ಚಾಲಕರಲ್ಲಿ ಪಡೆಯುತ್ತಿದ್ದಾರೆ. ಆರಂಭದಲ್ಲಿ ರೂ. 62 ಇದ್ದ ಗ್ಯಾಸ್‌ಗೆ ಈಗ ಕೆಲವೊಂದು ಬಂಕ್‌ಗಳಲ್ಲಿ ರೂ. 105ಕ್ಕೆ ಏರಿದೆ. ಆದರೆ, ನಮಗೆ ಬಾಡಿಗೆ ದರ ಏರಿಕೆ ಮಾಡಲು ಪ್ರಾದೇಶಿಕ ಸಾರಿಗೆ ಇಲಾಖೆಯ ಅನುಮತಿ ನೀಡಿಲ್ಲ. ಹೊಟೇಲ್‌ಗಳಲ್ಲಿ ಯಾವುದೇ ಮುಲಾಜಿಲ್ಲದೇ ದರ ಏರಿಕೆಯನ್ನು ಮಾಡಿದ್ದಾರೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸ್ನೇಹ ಸಂಗಮ ಆಟೋ ರಿಕ್ಷಾ ಚಾಲಕರ ಮಾಲಕರ ಸಂಘದ ಅಧ್ಯಕ್ಷ ತಾರನಾಥ ಬನ್ನೂರು, ಇಸ್ಮಾಯಿಲ್ ಬೊಳುವಾರು, ಕರ್ನಾಟಕ ರಿಕ್ಷಾ ಚಾಲಕ ಮಾಲಕರ ಸಂಘದ ಅಧ್ಯಕ್ಷ ಅರುಣ್ ಕುಮಾರ್ ಕೆ., ಎಸ್‌ಡಿಟಿಯು ರಿಕ್ಷಾ ಚಾಲಕ ಮಾಲಕರ ಸಂಘದ ಅಧ್ಯಕ್ಷ ಆಶೀಫ್ ಮುಕ್ವೆ, ಪ್ರಧಾನ ಕಾರ್ಯದರ್ಶಿ ಇಲ್ಯಾಸ್ ಉಪಸ್ಥಿತರಿದ್ದರು.



ನಾವೇ ದರ ಏರಿಕೆ ಮಾಡುತ್ತೇವೆ...

ರಿಕ್ಷಾ ಚಾಲಕರ ಬದುಕು ಸಂಕಷ್ಟಕ್ಕೆ ಈಡಾಗಿದೆ. ಹಾಗಾಗಿ ಎಲ್‌ಪಿಜಿ ಮತ್ತು ಇತರ ಎಲ್ಲಾ ಆಟೋ ಗ್ಯಾಸ್ ಪಂಪ್‌ಗಳಲ್ಲಿ ಏಕರೂಪ ದರ ನಿಗದಿಪಡಿಸಬೇಕು. ಸರಕಾರ ನಿಗದಿಪಡಿಸಿದ ಆಟೋ ಗ್ಯಾಸ್ ದರವನ್ನೇ ಅಳವಡಿಸಬೇಕು. ಇದರ ಜೊತೆಗೆ ರಿಕ್ಷಾಗಳಿಗೆ ಪೆಟ್ರೋಲ್ ಹಾಕಿಯಾದರೂ ಬಾಡಿಗೆ ಮಾಡುವ ಎಂದರೆ ಹಳೆ ಎಲ್‌ಪಿಜಿ ಆಟೋ ರಿಕ್ಷಾಗಳಿಗೆ ಪೆಟ್ರೋಲ್ ಹಾಕಿ ಓಡಿಸಲು ಸಾಧ್ಯವಿಲ್ಲ. ನಮ್ಮ ಸಮಸ್ಯೆಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿ ಮನವಿ ಮಾಡಿದ್ದೇವೆ. ಯಾವ ಸ್ಪಂದನೆಯೂ ಸಿಕ್ಕಿಲ್ಲ. ಹಾಗಾಗಿ ನಮ್ಮ ಬೇಡಿಕೆ ಈಡೇರದಿದ್ದಲ್ಲಿ ಮುಂದಿನ ದಿನಗಳಲ್ಲಿ ಗ್ಯಾಸ್ ದರಕ್ಕೆ ಅನುಗುಣವಾಗಿ ಬಾಡಿಗೆ ದರವನ್ನು ಹೆಚ್ಚಳ ಮಾಡುತ್ತೇವೆ ಎಂದು ಜಯರಾಮ ಕುಲಾಲ್ ಅವರು ಹೇಳಿದರು.

ಉಡುಪಿಯಲ್ಲಿ ಪ್ರವಾಸೋದ್ಯಮ ಪಾಲುದಾರರ ಜೊತೆ ಸಭೆ | ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ

ಪರಿಸರ ಪೂರಕ ಅಭಿವೃದ್ಧಿಗೆ ತುರ್ತು ನೀಲನಕಾಶೆ

ಉಡುಪಿ: ಪ್ರಕೃತಿದತ್ತ ಸೌಂದರ್ಯ ಹೊದಿರುವ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಕ್ಷೇತ್ರ ಇನ್ನಷ್ಟು ಅಭಿವೃದ್ಧಿ ಹೊಂದಬೇಕಾದ ನಿಟ್ಟಿನಲ್ಲಿ ಎಲ್ಲಾ ಸಕ್ರೀಯ ಪಾಲುದಾರರು ಪರಿಸರ ಸ್ನೇಹಿ ಪ್ರವಾಸೋದ್ಯಮದ ಸಮಗ್ರ ಅಭಿವೃದ್ಧಿಗೆ ಪೂರಕವಾದ ನೀಲನಕಾಶೆ ಸಿದ್ಧಪಡಿಸಿ, ಶೀಘ್ರ ಪ್ರಸ್ತುತಪಡಿಸುವಂತೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಅವರು ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಉತ್ತೇಜಿಸುವ ಕುರಿತಾಗಿ ಜಿಲ್ಲೆಯ ಪ್ರವಾಸೋದ್ಯಮ ಪಾಲುದಾರರೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮೂಲಭೂತ ಸೌಕರ್ಯಗಳಿಗೆ ಒತ್ತು

ಜಿಲ್ಲೆಯಲ್ಲಿ ಕಡಲ ಕಿನಾರೆಗಳು, ರಮಣೀಯ ಪಶ್ಚಿಮ ಘಟ್ಟಗಳ ಶ್ರೇಣಿಗಳು, ಕಾನನಗಳು, ಝರಿಗಳು ಹಾಗೂ ಧಾರ್ಮಿಕ ಕ್ಷೇತ್ರಗಳು ಪ್ರಮುಖವಾಗಿದ್ದು, ಸಾವಿರಾರು ಪ್ರವಾಸಿಗರು ಆಗಮಿಸಿ ಜಿಲ್ಲೆಯ ಸೌಂದರ್ಯ ಕಣ್ತುಂಬಿಕೊಳ್ಳುತ್ತಿದ್ದಾರೆ. ಯಾವುದೇ ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆ ಕೈಗೊಳ್ಳುವ ಮುನ್ನ ಪ್ರವಾಸಿ ತಾಣಗಳಲ್ಲಿ ಕುಡಿಯುವ ನೀರು, ಶೌಚಾಲಯ,



ಪಾರ್ಕಿಂಗ್, ವಸತಿ ಸೇರಿದಂತೆ ಮತ್ತಿತರ ಮೂಲಭೂತ ಸೌಕರ್ಯ ಕಲ್ಪಿಸಲು ಒತ್ತು ನೀಡುವ ರೀತಿಯಲ್ಲಿ ಯೋಜನೆ ರೂಪಿಸಿ ಪ್ರಸ್ತುತ ಪಡಿಸಲು ಮೊದಲ ಆದ್ಯತೆ ನೀಡಬೇಕು. ಕಳೆದ ಸಭೆಯಲ್ಲಿ ಸೂಚಿಸಿದಂತೆ ರಚಿಸಲಾದ ಪಾಲುಗಾರ ತಂಡವು ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗುವಂತೆ ಆಸಕ್ತ ವಿಷಯಗಳ ಬಗ್ಗೆ ವಿಸ್ತೃತ ವರದಿಯೊಂದಿಗೆ ಏ.10 ರಂದು ಪ್ರಸ್ತುತಪಡಿಸಲು ಜಿಲಾಧ್ಲಿಕಾರಿಗಳು ತಿಳಿಸಿದರು.

ಜಾಲತಾಣ ಪರಿಣಾಮಕಾರಿ ಬಳಸಿಕೊಳ್ಳಿ

ಜಿಲ್ಲೆಗೆ ಆಗಮಿಸುವ ಶೇ. 90ರಷ್ಟು ಪ್ರವಾಸಿಗರಿಗೆ ಜಿಲ್ಲೆಯ ಪ್ರವಾಸೋದ್ಯಮದ ಬಗ್ಗೆ ಮಾಹಿತಿ ಇಲ್ಲ. ಫೇಸ್ ಬುಕ್, ಇನ್ಸಾಗ್ರಾಂ ಸೇರಿದಂತೆ ಸಾಮಾಜಿಕ ಜಾಲತಾಣ ಪರಿಣಾಮಕಾರಿ ಬಳಸಿಕೊಳ್ಳುವುದರೊಂದಿಗೆ ಜಿಲ್ಲೆಯ ಪ್ರವಾಸಿ ತಾಣಗಳ ವಿವರ ಪ್ರವಾಸಿಗರಿಗೆ ಸುಲಭವಾಗಿ ದೊರಕುವಂತಾಗಬೇಕು ಎಂದರು.

ಸಭೆಯಲ್ಲಿ ಉಡುಪಿ ಜಿಲ್ಲೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರಪಡಿಸಲು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕಿ ವಿಂಧ್ಯಾ ಎನ್.ಎಂ, ಜಿಲ್ಲೆಯ ಪ್ರವಾಸೋದ್ಯಮ ಪಾಲುದಾರರ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಪ್ರವಾಸೋದ್ಯಮ ವಿಸ್ತರಣೆಗೆ ಒತ್ತುಕೊಡಿ

ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಪ್ರಸ್ತುತ ಇರುವ ಪ್ರವಾಸಿ ತಾಣಗಳ ಜೊತೆಗೆ ತೆರೆ-ಮರೆಯಲ್ಲಿರುವ ಪ್ರವಾಸಿ ತಾಣಗಳ ವಿವರಗಳು, ತಂಗಲು ಅನುಕೂಲವಾಗುವಂತೆ ಸ್ಥಳೀಯವಾಗಿ ಲಭ್ಯವಿರುವ ವಸತಿ ವ್ಯವಸ್ಥೆ ಸೇರಿದಂತೆ ಮತ್ತಿತರ ಮಾಹಿತಿ ಪ್ರವಾಸಿಗರಿಗೆ ದೊರೆತಲ್ಲಿ ಇನ್ನೂ ಹೆಚ್ಚಿನ ಸಮಯವನ್ನು ಜಿಲ್ಲೆಯಲ್ಲಿ ಕಳೆಯಲು ಅವರು ಬಯಸುತ್ತಾರೆ. ಇದರಿಂದ ಆದಾಯ ಹೆಚ್ಚುವ ಜೊತೆಗೆ ಪ್ರವಾಸೋದ್ಯಮ ಕ್ಷೇತ್ರ ಇನ್ನಷ್ಟು ವಿಸ್ತರಣೆಗೊಳ್ಳಲಿದೆ. ಪಾಲುದಾರರು ಇದಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಶ್ರೀ ನಾಲ್ಕೂರು ದೈವಸ್ಥಾನದಲ್ಲಿ ನೇಮೋತ್ಸವ



ಮುಲ್ಕಿ: ಪಡುಪಣಂಬೂರು ಶ್ರೀ ನಾಲ್ಕೂರು ಪಂಜುರ್ಲಿ ದೈವಸ್ಥಾನದಲ್ಲಿ ನೇಮೋತ್ಸವವು ಆನೆಗುಂದಿ ಮಹಾಸಂಸ್ಥಾನ ಮಠದ ಅನಂತ ಶ್ರೀವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾ ಸ್ವಾಮೀಜಿ, ಸೀಮೆಯ ಒಂಬತ್ತು ಮಾಗಣೆಯ ಅರಸರಾದ ದುಗ್ಗಣ್ಣ ಸಾವಂತರ ದಿವ್ಯ ಉಪಸ್ಥಿತಿಯಲ್ಲಿ ವಿಜೃಂಭಣೆಯಿಂದ ನಡೆಯಿತು.

ಕಿರುಸುದ್ದಿ

ಫ್ರಿಡ್ಜ್ ಮೆಕ್ಯಾನಿಕ್‌ಗೆ ಬೆದರಿಕೆ, ಲಕ್ಷಾಂತರ ರೂಪಾಯಿ ಸುಲಿಗೆ ಆರೋಪ

ಉಡುಪಿ: ಉಪ್ಪೂರು ನಿವಾಸಿ, ಕಳೆದ 20 ವರ್ಷಗಳಿಂದ ಫ್ರಿಡ್ಜ್ ರಿಪೇರಿ ವೃತ್ತಿ ಮಾಡುತ್ತಿರುವ ವಿನ್ಸಿ ಡಿ ಸೋಜಾ (55) ಎಂಬುವವರಿಗೆ ಪುತ್ತೂರು ಗ್ರಾಮದ ಸಂತೆಕಟ್ಟೆಯ ಆನೆಟ್ ವೀರಾ ಮಥಾಯಸ್ ಎಂಬಾಕೆ ಬೆದರಿಕೆ ಹಾಕಿರುವ ಬಗ್ಗೆ ಉಡುಪಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆಬ್ರವರಿ 1ರಂದು ಆನೆಟ್ ಅವರ ಮನೆಗೆ ಫ್ರಿಡ್ಜ್ ರಿಪೇರಿಗೆ ಹೋಗಿದ್ದ ವಿನ್ಸಿ, ರಿಪೇರಿ ಸಾಧ್ಯವಾಗದ ಕಾರಣ ಬಿಡಿಭಾಗ ಬದಲಿಸುವಂತೆ ತಿಳಿಸಿ ಬಂದಿದ್ದರು. ಆದರೆ, ಫೆ.26ರಂದು ಫೋನ್ ಮಾಡಿದ ಆನೆಟ್, ನೀನು ನನ್ನ 3,50,000 ರೂಪಾಯಿ ಮೌಲ್ಯದ ಚಿನ್ನ ಕಳ್ಳತನ ಮಾಡಿದ್ದೀಯಾ, ಆ ಹಣ ನೀಡದಿದ್ದರೆ ನಿನ್ನ ಮಾನವನ್ನು ವಾಟ್ಸಾಪ್‌ನಲ್ಲಿ ಹರಾಜು ಹಾಕುತ್ತೇನೆ ಎಂದು ಬೆದರಿಕೆ ಒಡ್ಡಿದ್ದಾಳೆನ್ನಲಾಗಿದೆ. ವಿನ್ಸಿ ಅವರ ಕೆನರಾ ಬ್ಯಾಂಕ್ ಚೆಕ್ ಬಳಸಿ ಉಪ್ಪೂರು ಶಾಖೆಯಿಂದ 1 ಲಕ್ಷ ರೂ. ಹಣ ಅಕ್ರಮವಾಗಿ ಪಡೆದುಕೊಂಡಿದ್ದಾಳೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಬಗ್ಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ರೌಡಿ ಶೀಟರ್ ಗಣೇಶ್ ಪೂಜಾರಿಯನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಆದೇಶ

ಕಾರ್ಕಳ: ಸಮಾಜದ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ತರುತ್ತಿದ್ದ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕುಖ್ಯಾತ ರೌಡಿ ಗಣೇಶ್ ಪೂಜಾರಿ (48) ಎಂಬಾತನ ವಿರುದ್ಧ ಜಿಲ್ಲಾಡಳಿತ ಕಠಿಣ ಕ್ರಮ ಕೈಗೊಂಡಿದೆ. ನಿರಂತರ ಅಪರಾಧ ಚಟುವಟಿಕೆಗಳನ್ನು ಗಮನಿಸಿದ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರು (TP), ಆತನ ವಿರುದ್ಧ ಗೂಂಡಾ ಕಾಯ್ದೆ ಜಾರಿಗೊಳಿಸುವಂತೆ ವರದಿ ಸಲ್ಲಿಸಿದ್ದರು. ಈ ವರದಿಯನ್ನು ಪುರಸ್ಕರಿಸಿದ ಜಿಲ್ಲಾ ದಂಡಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ಏಪ್ರಿಲ್ 04 ರಂದು ಬಂಧನಕ್ಕೆ ಅಧಿಕೃತ ಆದೇಶ ನೀಡಿದ್ದಾರೆ. ಬಂಧಿತ ಗಣೇಶ್ ಪೂಜಾರಿಯನ್ನು ಮುಂಜಾಗ್ರತಾ ಕ್ರಮವಾಗಿ ಕಲಬುರ್ಗಿಯ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಿ ಅಲ್ಲಿ ಬಂಧನದಲ್ಲಿರಿಸಲು ಆದೇಶಿಸಲಾಗಿದೆ. ಕೌಡೂರು ಗ್ರಾಮದ ನಿವಾಸಿಯಾಗಿರುವ ಗಣೇಶ್ ಪೂಜಾರಿ ದೀರ್ಘಕಾಲದಿಂದ ಕಾರ್ಕಳ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರೌಡಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಈತನ ವಿರುದ್ಧ ಕೊಲೆಯತ್ನ, ದರೋಡೆ, ಹಲ್ಲೆ ಸೇರಿದಂತೆ ಒಟ್ಟು 11 ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಈ ಪ್ರಕರಣಗಳ ಪೈಕಿ ಒಂದು ಪ್ರಕರಣದಲ್ಲಿ ಶಿಕ್ಷೆಯಾಗಿದ್ದು, ಏಳು ಪ್ರಕರಣಗಳಲ್ಲಿ ಖುಲಾಸೆಗೊಂಡಿದ್ದಾನೆ. ಉಳಿದಂತೆ ಒಂದು ಪ್ರಕರಣ ನ್ಯಾಯಾಂಗ ವಿಚಾರಣೆಯಲ್ಲಿದ್ದರೆ, ಎರಡು ಪ್ರಕರಣಗಳು ಪ್ರಸ್ತುತ ತನಿಖಾ ಹಂತದಲ್ಲಿವೆ.



ವಿಶ್ವಹಿಂದೂ ಪರಿಷತ್, ಭಜರಂಗದಳ ಬಂಟ್ವಾಳ ಪ್ರಖಂಡದಿಂದ ಪೊಳಲಿ ದೇವಸ್ಥಾನಕ್ಕೆ ಪಾದಯಾತ್ರೆ

ಭಕ್ತಾದಿಗಳಿಂದ 'ಅಮ್ಮನೆಡೆಗೆ ನಮ್ಮ ನಡಿಗೆ' ಹೆಜ್ಜೆ

ಬಂಟ್ವಾಳ: ವಿಶ್ವಹಿಂದೂ ಪರಿಷತ್, ಬಜರಂಗ ದಳ ಬಂಟ್ವಾಳ ಪ್ರಖಂಡದ ವತಿಯಿಂದ ಸಾವಿರ ಸೀಮೆಯ ಒಡತಿ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನಕ್ಕೆ 7ನೇ ವರ್ಷದ 'ಅಮ್ಮನೆಡೆಗೆ ನಮ್ಮ ನಡಿಗೆ' ಪಾದಾಯಾತ್ರೆ ಭಾನುವಾರ ನಡೆಯಿತು.

ಬೆಳಿಗ್ಗೆ 5.30ಕ್ಕೆ ಬಿ.ಸಿ.ರೋಡಿನ ಕೈಕಂಬ ಪೊಳಲಿ ದ್ವಾರ, ಕಡೆಗೋಳಿ ಪೊಳಲಿ ದ್ವಾರ ಹಾಗೂ ಗುರುಪುರ ಕೈಕಂಬ ಪೊಳಲಿ ದ್ವಾರದ ಬಳಿಯಿಂದ ಏಕಕಾಲಕ್ಕೆ ಪಾದಯಾತ್ರೆಯು ಆರಂಭಗೊಂಡಿದ್ದು, ಸುಮಾರು 9 ಗಂಟೆಗೆ ಪೊಳಲಿ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಸಂಪನ್ನಗೊಂಡಿತು. ವಿಹಿಂಪ, ಭಜರಂಗದಳ ಕಾರ್ಯಕರ್ತರ ಸಹಿತ ಸಾವಿರಾರು ಸಂಖ್ಯೆಯಲ್ಲಿ ಹಿಂದೂ ಸಮಾಜದ ಬಂಧುಗಳು ಈ ಪಾದಯಾತ್ರೆಯಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ದೇವಳಕ್ಕಾಗಮಿಸುವ ಭಕ್ತರಿಗೆ ಹಿಂದೂ ಸಂಸ್ಕೃತಿಗೆ ಪೂರಕವಾದ ವಸ್ತ್ರ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು, ದೇವಸ್ಥಾನದ ವಠಾರದಲ್ಲಿ ಇಲ್ಲವೇ ಯೋಗ್ಯ ಸ್ಥಳದಲ್ಲಿ ಸುಸಜ್ಜಿತವಾದ ಗೋ ಶಾಲೆಯ ನಿರ್ಮಾಣ ಮತ್ತು ನಿರ್ವಹಣೆ ಮಾಡುವುದು, ಬಾಲಕ-ಬಾಲಕಿಯರಿಗೆ ಹಿಂದು ಸಂಪ್ರದಾಯದ ಧಾರ್ಮಿಕ ಸಂಸ್ಕಾರ ನೀಡುವ ವಿಚಾರಗಳನ್ನು ಬೋಧಿಸುವ ನಿಟ್ಟಿನಲ್ಲಿ ದೇವಸ್ಥಾನದ ವತಿಯಿಂದ ಹಿಂದೂ ಬಾಲ ಸಂಸ್ಕಾರ ಕೇಂದ್ರವನ್ನು ತೆರೆದು ಹಿಂದೂ ಧಾರ್ಮಿಕ ಶಿಕ್ಷಣವನ್ನು ನೀಡುವುದು, ದೇವಸ್ಥಾನದಲ್ಲಿ



ವರ್ಷದಲ್ಲಿ ಒಂದು ಬಾರಿಯಾದರೂ ಹಿಂದೂ ಬಂಧುಗಳಿಗೆ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಏರ್ಪಡಿಸುವುದು, ಜಾತ್ರಾ ಮಹೋತ್ಸವ,ಉತ್ಸವಾದಿಗಳ ಸಂದರ್ಭ ಹಿಂದೂ ಧಾರ್ಮಿಕ ದತ್ತಿ ಕಾಯ್ದೆಯನುಸಾರ ಹಿಂದೂಗಳಿಗೆ ಮಾತ್ರ ವ್ಯಾಪಾರ ವ್ಯವಹಾರ ಕೇಂದ್ರಗಳನ್ನು ತೆರೆಯಲು ಅವಕಾಶ ಮಾಡಿಕೊಡುವುದು ಮತ್ತು ಉತ್ಸವಾದಿಗಳ ಸಂದರ್ಭದಲ್ಲಿ ರಾತ್ರಿ ಭೋಜನದ ವ್ಯವಸ್ಥೆ ಕಲ್ಪಿಸುವುದು ಹಾಗೂ ದೇವಳದ ವತಿಯಿಂದ ಸುವ್ಯವಸ್ಥಿತವಾದ ಭೋಜನ ಶಾಲೆ ನಿರ್ಮಿಸುವುದು, ದೇವಸ್ಥಾನದಲ್ಲಿ ಕಾಣಿಕೆ ರೂಪದಲ್ಲಿ ಹಾಗೂ ಸೇವಾ ರೂಪದಲ್ಲಿ ಸಂಗ್ರಹವಾದ ಹಣವನ್ನು ಹಿಂದೂ ಧಾರ್ಮಿಕ ಹಾಗೂ ಧರ್ಮದಾಯ ದತ್ತಿ ಕಾಯ್ದೆಗನುಗುಣವಾಗಿ ಹಿಂದು ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗೆ ಅವಶ್ಯಕವಾದ ಪೂರಕ ಕ್ರಮಗಳಿಗೆ ವಿನಿಯೋಗಿಸುವಂತೆ ಒತ್ತಾಯಿಸಿ ಮನವಿಯನ್ನು ಸಲ್ಲಿಸಲಾಯಿತು.

ಈ ಸಂದರ್ಭ ಮಾತನಾಡಿದ ವಿ.ಹಿಂ.ಪ.ನ ಬಂಟ್ವಾಳ ಪ್ರಖಂಡದ ಅಧ್ಯಕ್ಷ, ನ್ಯಾಯವಾದಿ ಪ್ರಸಾದ್ ಕುಮಾರ್ ರೈ, ಪುತ್ತೂರು ಜಿಲ್ಲಾ ವಿ.ಹಿಂ. ಪ. ಜಿಲ್ಲಾಧ್ಯಕ್ಷ ಡಾ. ಕೃಷ್ಣ ಪ್ರಸನ್ನ ಹಾಗೂ ಹಿಂದು ಮುಖಂಡ ರಘು ಸಕಲೇಶಪುರ ಅವರು ವಸ್ತ್ರಸಂಹಿತೆ ಜಾರಿಗಾಗಿ ಸತತ ಏಳು ವರ್ಷದಿಂದ ಪಾದಯಾತ್ರೆಯ ಮೂಲಕ ಬಂದು ಮನವಿ ಮಾಡಿಕೊಂಡು ಬರಲಾಗುತ್ತಿದೆ. ಅದು ಕೂಡ ಇಲ್ಲಿಯವರೆಗೂ ಜಾರಿಯಾಗಿಲ್ಲ. ಹಾಗಾಗಿ ಈ ಬಾರಿಯಾದರು ಪೊಳಲಿಯಲ್ಲಿ ಹಿಂದೂ ಸಂಪ್ರದಾಯಕ್ಕೆ ಒಳಪಟ್ಟಂತೆ ವಸ್ತ್ರಸಂಹಿತೆ ಜಾರಿಯಾಗಬೇಕು ಎಂದು ಒತ್ತಾಯಿಸಿದರು. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರವಿರುವಾಗಲೇ ವಿಹಿಂಪ., ಬಜರಂಗದಳ ಪಾದಯಾತ್ರೆಯ ಮೂಲಕ ದೇವಸ್ಥಾನಕ್ಕಾಗಮಿಸಿ ಕೆಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮನವಿಗಳನ್ನ ನೀಡುತ್ತಾ ಬಂದಿದೆ.ಇವುಗಳ ಪೈಕಿ ಕೆಲವು ಕಾರ್ಯರೂಪಕ್ಕೆ ಬಾರದಿದ್ದು, ಈಗಿನ ಸರ್ಕಾರವಾದರೂ ಹಿಂದು ಧಾರ್ಮಿಕ ಕ್ಷೇತ್ರದಲ್ಲಿ ಆಗಬೇಕಾದ ಕೆಲವೊಂದು ಬೇಡಿಕೆ ಈಡೇರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ದೇವಳದ ಕಾರ್ಯನಿರ್ವಹಣಾಧಿಕಾರಿ ಚಂದ್ರಮೋಹನ್ ಅವರು ಮನವಿ ಸ್ವೀಕರಿಸಿ ಬೇಡಿಕೆ ಈಡೇರಿಸುವ ಭರವಸೆ ನೀಡಿದರು. ಇದೇ ವೇಳೆ ವಿಹಿಂಪ., ಬಜರಂಗದಳ ಸಂಘಟನೆಯ ವತಿಯಿಂದ ದೇವಳದ ಆವರಣದಲ್ಲಿ ವಸ್ತ್ರ ಸಂಹಿತೆಯ ಫಲಕವನ್ನು ಅಳವಡಿಸಲಾಯಿತು. ಸಂಘಟನೆಯ ಪುತ್ತೂರು ಜಿಲ್ಲಾ ಪ್ರಮುಖರಾದ ನವೀನ್ ನೆರಿಯಾ, ಪ್ರಮೋದ್ ರೈ, ದೀಪಕ್ ಅಜೆಕಲ, ಲೋಹಿತ್ ಪಣೋಲಿಬೈಲ್, ಸಂತೋಷ್ ಸರಪಾಡಿ, ಚೆನ್ನಪ್ಪ ಕೋಟ್ಯಾನ್ ಉಪಸ್ಥಿತರಿದ್ದರು. ಕುಣಿತ ಭಜನೆ ಪಾದಯಾತ್ರೆಗೆ ಮೆರಗು ನೀಡಿತು.

ಕರಿಮಜಲು: ಐತಿಹಾಸಿಕ ತಾಣದಲ್ಲಿ 56ನೇ ವರ್ಷದ ಒತ್ತೆಕೋಲ

ಒತ್ತೆ ಕೋಲ ಕಣ್ತುಂಬಿಕೊಂಡ ಭಕ್ತ ಗಡಣ

ಸುಬ್ರಹ್ಮಣ್ಯ: ಕರಿಮಜಲು ವಿಷ್ಣುಪುರ ಶ್ರೀ ಮಹಾವಿಷ್ಣುಮೂರ್ತಿ ದೈವಸ್ಥಾನ ಮತ್ತು ಶ್ರೀ ಕಾಳಿಕಾಂಬಾ ದೇವಿ ದೇವಸ್ಥಾನದಲ್ಲಿ ಶ್ರೀ ಮಹಾವಿಷ್ಣುಮೂರ್ತಿ ದೈವದ 57ನೇ ವರ್ಷದ ಒತ್ತೆ ಕೋಲವು ಶ್ರದ್ಧಾ ಭಕ್ತಿಯಿಂದ ಶನಿವಾರ ಸಂಪನ್ನಗೊಂಡಿತು. ಸಹಸ್ರಾರು ಭಕ್ತಾದಿಗಳು ಶ್ರೀ ದೈವದ ದರುಶನ ಪಡೆದು ಪ್ರಸಾದ ಸ್ವೀಕರಿಸಿ ಕೃತಾರ್ಥರಾದರು.



ಗುರುವಾರ ಮೆರವಣಿಗೆ ಮೂಲಕ ಭಕ್ತರು ಹಸಿರು ಕಾಣಿಕೆ ಸಮರ್ಪಿಸಿದರು. ಶುಕ್ರವಾರ ಬೆಳಗ್ಗೆ ಸ್ಥಳ ಶುದ್ಧೀಕರಣ, ಗಣಹೋಮ, ಸಂಜೆ ವಿಷ್ಣುಪುರ ದೈವಸ್ಥಾನದಿಂದ ಭಂಡಾರ ತೆಗೆಯುವ ಕಾರ್ಯ ನೆರವೇರಿತು. ಭಂಡಾರದ ಮೆರವಣಿಗೆಯ ನಂತರ ಮೇಲೇರಿಗೆ ಅಗ್ನಿಸ್ಪರ್ಶ ಮಾಡಲಾಯಿತು. ಅಸಂಖ್ಯಾತ ಭಕ್ತರು ಈ ಸಂದರ್ಭದಲ್ಲಿ ಮೇಲೇರಿಗೆ ಎಣ್ಣೆ ಎರಚಿ ಹರಕೆ ತೀರಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಬಳಿಕ ಶ್ರೀ ವಿಷ್ಣುಮೂರ್ತಿ ದೈವದ ಕುಳಿಚಾಟ ನೆರವೇರಿತು. ಶನಿವಾರ ಪ್ರಾತಃಕಾಲ ಶ್ರೀ ಮಹಾವಿಷ್ಣುಮೂರ್ತಿ ದೈವದ ಅಗ್ನಿಪ್ರವೇಶ ನೆರವೇರಿತು. ಈ ಸಂದರ್ಭ ಆಡಳಿತ ಮಂಡಳಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರು, ಮೊಕ್ತೇಸರರಾದ ವೆಂಕಟ್ರಮಣ ಆಚಾರ್ಯ ವಿಷ್ಣುಪುರ, ಜನಾರ್ದನ ಆಚಾರ್ಯ ವಿಷ್ಣುಪುರ, ಕೃಷ್ಣ ಆಚಾರ್ಯ ವಿಷ್ಣುಪುರ, ಆಡಳಿತ ಸಮಿತಿ ಪ್ರಧಾನ ಕಾರ್ಯದರ್ಶಿ ಮೋನಪ್ಪ ಬಂಡಾಜೆ, ಉಪಾಧ್ಯಕ್ಷ ಶೇಷಪ್ಪ ಗೌಡ ಬೆದ್ರಂಗಳ, ಜತೆ ಕಾರ್ಯದರ್ಶಿ ಮಿಥುನ್ ಪೈಕ, ಆಡಳಿತ ಮಂಡಳಿ ಸದಸ್ಯರಾದ ಸಂಜೀವ ರೈ ಪೈಕ, ಕುಮಾರ ಆಚಾರ್ಯ ದೋಳ್ಪಾಡಿ, ಪ್ರದೀಪ್ ಬೊಬ್ಬಕೇರಿ ಮತ್ತಿತರರಿದ್ದರು.

ಉಜಿರೆ: ಅಕ್ಷರ ಜ್ಞಾನ ಶಿಬಿರಕ್ಕೆ ಚಾಲನೆ

ಬೆಳ್ತಂಗಡಿ: ವಿದ್ಯಾರ್ಥಿಗಳು ಪ್ರಾಥಮಿಕ ಹಂತದಲ್ಲೇ ತಪ್ಪಿಲ್ಲದೆ ಸ್ಪಷ್ಟ ಕನ್ನಡ ಹಾಗು ಇಂಗ್ಲೀಷ್ ಬರವಣಿಗೆಯನ್ನು ಅಭ್ಯಾಸ ಮಾಡಿಕೊಳ್ಳಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಅಕ್ಷರ ಜ್ಞಾನ ಅತಿ ಪ್ರಾಮುಖ್ಯವಾದುದು. ಮಕ್ಕಳು ತಮ್ಮ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಶಿಕ್ಷಣದ ಜತೆಗೆ ಜೀವನ ಶಿಕ್ಷಣ, ಸ್ಪಷ್ಟ ಕನ್ನಡ ಬರವಣಿಗೆ ರೂಢಿಸಿಕೊಳ್ಳಬೇಕು ಎಂದು ಬೆಳ್ತಂಗಡಿ ತಹಸೀಲ್ದಾರ್ ಪೃಥ್ವಿ ಸಾನಿಕಮ್ ನುಡಿದರು.

ಅವರು ಉಜಿರೆ ರತ್ನಮಾನಸ ಜೀವನ ಶಿಕ್ಷಣ ವಿದ್ಯಾರ್ಥಿ ನಿಲಯದಲ್ಲಿ ನಿಲಯದ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾದ 6 ದಿನಗಳ 'ಅಕ್ಷರ ಜ್ಞಾನ ಶಿಬಿರ' ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅತಿಥಿ ಎಸ್‌ಡಿಎಂ ಪ.ಪೂ.ಕಾಲೇಜು ಪ್ರಾಚಾರ್ಯ ಪ್ರೊ. ಪ್ರಮೋದ್ ಕುಮಾರ್ ಮಾತನಾಡಿ ಶಿಬಿರದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ ಭಾಷಾ ಜ್ಞಾನ ತರಬೇತಿ ವಿಶಿಷ್ಟ ಕಾರ್ಯಕ್ರಮವಾಗಿದ್ದು ವಿದ್ಯಾರ್ಥಿಗಳು ಪೂರ್ಣ ಪ್ರಯೋಜನ ಪಡೆಯಬೇಕು ಎಂದರು. ಎಸ್‌ಡಿಎಂ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಧನ್ಯಕುಮಾರ್ ಮಾತನಾಡಿ ಎಸ್‌ಡಿಎಂ ಶಿಕ್ಷಣ ಸಂಸ್ಥೆಯ ಎಲ್ಲ 16 ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರತಿಭೆಗೆ ಬೇಸಿಗೆ ಶಿಬಿರ ನಡೆಸಲಾಗುತ್ತದೆ. ವಿದ್ಯಾರ್ಥಿಗಳು ಎಲ್ಲ ಕಲೆ, ವ್ಯಕ್ತಿತ್ವ ವಿಕಸನಕ್ಕೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಸಂಪನ್ಮೂಲ ವ್ಯಕ್ತಿಗಳಾಗಿ ಉಪನ್ಯಾಸಕ ಮಂಜು ಆರ್., ಸಾಹಿತಿ ಅರುಣಾ ಶ್ರೀನಿವಾಸ್ ಮತ್ತು ಅನುಗ್ರಹ ಕಾಲೇಜು ಹಿಂದಿ ಶಿಕ್ಷಕಿ ಗೀತಾ ಜೋಶಿ ಭಾಗವಹಿಸಿ ಕನ್ನಡ ಭಾಷಾ ಬೆಳವಣಿಗೆ, ಇಂಗ್ಲಿಷ್ ಬರವಣಿಗೆ,ಹಿಂದಿ ಬರವಣಿಗೆ, ಕಥೆಗಳ ರಚನೆ ಕುರಿತು ಮಾಹಿತಿ ನೀಡಿದರು.



ಕೋಡಿಂಬಾಡಿ -ಬೆಳ್ಳಿಪ್ಪಾಡಿ ಗ್ರಾಮಕ್ಕೆ ರೂ.11.7 ಕೋ. ಅನುದಾನ: ಶಾಸಕ ರೈ

- ಕ್ಷೇತ್ರದ ಎಲ್ಲಾ ಗ್ರಾಮಗಳಿಗೂ ಸಮಪ್ರಮಾಣದಲ್ಲಿ ಹಂಚಿಕೆ
- ತಾರತಮ್ಯ ಮಾಡಿಲ್ಲ, ರಾಜಕೀಯ ಮಾಡಿಲ್ಲ
- ನನ್ನ ಸ್ವಂತ ಗ್ರಾಮಕ್ಕೆ ಒಂದೆರಡು ಕೋಟಿ ಹೆಚ್ಚು ಅನುದಾನನವನ್ನು ನೀಡಿದ್ದೇನೆ

ಪುತ್ತೂರು: ತನ್ನ ಗ್ರಾಮಕ್ಕೆ ಶಾಸಕರು ಎಷ್ಟು ಅನುದಾನ ನೀಡಿರಬಹುದು ಎಂಬ ಕುತೂಹಲ ಕೆಲವರಲ್ಲಿತ್ತು. ನಾನು ನನ್ನ ತವರು ಗ್ರಾಮಕ್ಕೆ ಉಳಿದ ಗ್ರಾಮಕ್ಕಿಂತ ಸ್ವಲ್ಪ ಹೆಚ್ಚು ಅನುದಾನವನ್ನು ನೀಡುವ ಮೂಲಕ ನನ್ನ ಗ್ರಾಮಸ್ಥರಿಗೆ ಪ್ರೀತಿಯ ಉಡುಗೊರೆಯನ್ನು ನೀಡಿದ ತೃಪ್ತಿ ಇದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಅನುದಾನವನ್ನು ನೀಡುವುದಾಗಿ ಶಾಸಕ ಅಶೋಕ್ ರೈ ಹೇಳಿದರು.

ಅವರು ಕೋಡಿಂಬಾಡಿ ಹಾಗೂ ಬೆಳ್ಳಿಪ್ಪಾಡಿ ಗ್ರಾಮದ 23 ವಿವಿಧ ರಸ್ತೆಗಳ ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಅನುದಾನವನ್ನು ತನ್ನ ಕ್ಷೇತ್ರದ ಎಲ್ಲಾ ಗ್ರಾಮಗಳಿಗೂ ಸಮಪ್ರಮಾಣದಲ್ಲಿ ಹಂಚಿಕೆ ಮಾಡಿದ್ದೇನೆ, ತಾರತಮ್ಯ ಮಾಡಿಲ್ಲ, ರಾಜಕೀಯ ಮಾಡಿಲ್ಲ. ಇದರ ನಡುವೆ ತನ್ನ ಸ್ವಂತ ಗ್ರಾಮಕ್ಕೆ ಒಂದೆರಡು ಕೋಟಿ ಹೆಚ್ಚು ಅನುದಾನನವನ್ನು ನೀಡಿದ್ದೇನೆ ಎಂದು ಹೇಳಿದರು. ಬೆಳ್ಳಿಪ್ಪಾಡಿ ಹಾಗೂ ಕೋಡಿಂಬಾಡಿ ಗ್ರಾಮದಲ್ಲಿ ನನಗೆ ಬಿದ್ದ ಮತಗಳ ಸಂಖ್ಯೆ ಕಡಿಮೆ ಇತ್ತು. ಯಾವುದೋ ಕಾರಣಕ್ಕೆ ಇದು ಆಗಿರಬಹುದು. ಆದರೆ, ನಾನು ಮಾತ್ರ ಓಟು ಬಿದ್ದಿಲ್ಲ ಎಂದು ಅನುದಾನ ಕಡಿಮೆ ಮಾಡಿಲ್ಲ. ನಾನು ಹೋದ ಕಡೆಯಲ್ಲಿ ನನಗೆ ಈ ಎರಡೂ ಗ್ರಾಮದಲ್ಲಿ ಜನರಿಂದ ಬೆಂಬಲ ವ್ಯಕ್ತವಾಗಿದೆ. ಮುಂದೆ ಅವರು ನನಗೆ ಆಶೀರ್ವಾದ ಮಾಡಿಯೇ ಮಾಡುತ್ತಾರೆ ಎಂಬ ನಂಬಿಕೆ ಇದೆ ಎಂದು ಹೇಳಿದರು. ಕೋಡಿಂಬಾಡಿ ಮತ್ತು ಬೆಳ್ಳಿಪ್ಪಾಡಿ ಗ್ರಾಮಸ್ಥರು ನಮ್ಮ ರಸ್ತೆಗೆ ಅನುದಾನ ಕೊಡಿ ಎಂದು ಶಾಸಕರಲ್ಲಿ ಅರ್ಜಿ ಹಾಕದೇ ಇದ್ದರೂ ಶಾಸಕರು ಅನುದಾನವನ್ನು ನೀಡಿದ್ದಾರೆ. ಸ್ವಂತ ಗ್ರಾಮ ಎಂಬ ವಿಶೇಷ ಪರಿಕಲ್ಪನೆಯಿಂದ ಅವರು ಅನುದಾನ ನೀಡಿದ್ದಾರೆ. ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಕೂಡಾ ಇದಕ್ಕೆ ಬೆಂಬಲವನ್ನು ನೀಡುವ ಮೂಲಕ ಯಾವುದೇ ರಾಜಕೀಯ ಮಾಡದೆ ಅನುದಾನವನ್ನು ಎಲ್ಲಾ ಕಡೆ ಡಂಪ್ ಮಾಡಲಾಗಿದೆ ಎಂದು ಕೋಡಿಂಬಾಡಿ ಗ್ರಾ.ಪಂ. ನಿಕಟಪೂರ್ವ ಉಪಾಧ್ಯಕ್ಷ ಜಯಪ್ರಕಾಶ್ ಬದಿನಾರ್ ಹೇಳಿದರು. ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮುರಳೀಧರ್ ರೈ ಮಠಂತಬೆಟ್ಟು ಮಾತನಾಡಿದರು. ಉಪ್ಪಿನಂಗಡಿ ಬ್ಲಾಕ್ ಅಧ್ಯಕ್ಷ ಯು.ಟಿ. ತೌಸೀಫ್, ಪಂಚ ಗ್ಯಾರಂಟಿ ತಾಲೂಕು ಅಧ್ಯಕ್ಷ ಉಮಾನಾಥ ಶೆಟ್ಟಿ ಪೆರ್ನೆ, ಕಾರ್ಯಾಧ್ಯಕ್ಷ ವಿಕ್ರಂ ಶೆಟ್ಟಿ, ವಲಯ ಅಧ್ಯಕ್ಷ ಮೋನಪ್ಪ ಗೌಡ, ಶಿವಪ್ರಸಾದ್ ರೈ, ಕೋಡಿಂಬಾಡಿ ಗ್ರಾ.ಪಂ. ನಿಕಟಪೂರ್ವ ಅಧ್ಯಕ್ಷೆ ಮಲ್ಲಿಕಾ ಅಶೋಕ್, ಗ್ರಾ.ಪಂ. ಸದಸ್ಯೆ ಗೀತಾ ಬಾಬು ಮುಗೇರ, ಉಷಾ ಲಕ್ಷ್ಮಣ ಪೂಜಾರಿ, ಜಗನ್ನಾಥ ಶೆಟ್ಟಿ ನಡುಮನೆ, ಪುಷ್ಪಾ ಲೋಕಯ್ಯ ನಾಯ್ಕ, ಪೂರ್ಣಿಮಾ ಯತೀಶ್ ಶೆಟ್ಟಿ, ವಲಯ ಪ್ರಧಾನ ಕಾರ್ಯದರ್ಶಿ ಯೋಗೀಶ್ ಸಾಮಾನಿ, ಬೂತ್ ಅಧ್ಯಕ್ಷರಾದ ಯತೀಶ್ ಶೆಟ್ಟಿ ಬರಮೇಲು, ಪ್ರಭಾಕರ ಸಾಮಾನಿ ಮಠಂತಬೆಟ್ಟು, ಪದ್ಮನಾಭ ಪಕ್ಕಳ, ಪದ್ಮನಾಭ ಶೆಟ್ಟಿ ರೆಂಜಾಜೆ, ಕೇಶವ ಭಂಡಾರಿ ಕೈಪಾ ಮತ್ತಿತರರು ಉಪಸ್ಥಿತರಿದ್ದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-49) ಡ್ರಾ ಏಪ್ರಿಲ್ 5ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MJ 757518 (KOZHIKODE)

Consolation Prize Rs.5,000/-
MA 757518 MB 757518 MC 757518 MD 757518
ME 757518 MF 757518 MG 757518 MH 757518
MK 757518 ML 757518 MM 757518

2nd Prize Rs.25,00,000/- [25 Lakhs]
MD 812012 (IDUKKI)

3rd Prize Rs.5,00,000/- [5 Lakhs]
1) MD 590440 (KOLLAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0942 2490 2762 2828 2969 3091 3150 3338 3415 3469
3539 4103 5037 6998 8004 8334 9066 9432 9773

5th Prize Rs.2,000/-
0360 3922 4713 6697 7746 9247

6th Prize Rs.1,000/-
0057 0349 0755 1431 1471 1599 1783 2397 2493 2637
2875 3105 3115 3372 3423 3721 4197 5908 7020 7464
7867 8384 8815 8856 9312

7th Prize Rs.500/-
0217 0328 0365 0641 0961 0987 1065 1185 1252 1271
1406 1432 1632 1918 2035 2040 2080 2097 2509 2680
2718 2844 2847 2996 3315 3344 3496 3693 3860 4009
4118 4130 4227 4258 4362 4507 4522 4687 4776 5001
5279 5292 5429 5627 5849 5907 5999 6147 6553 6598
7097 7112 7201 7225 7253 7476 7619 7656 7696 7796
8151 8474 8649 8721 8728 8733 8820 9038 9063 9095
9110 9174 9240 9388 9712 9729

8th Prize Rs.200/-
0060 0105 0361 0439 0472 0512 0621 0700 0780 0825
0864 0867 1141 1387 1774 1900 2027 2182 2200 2221
2223 2239 2264 2429 2468 2626 2665 3043 3086 3121
3125 3200 3330 3404 3595 3802 3956 4054 4067 4219
4678 4685 4786 4854 5331 5332 5401 5588 5592 5678
5855 5862 5898 5917 5930 6036 6075 6166 6167 6207
6267 6353 6545 6736 6944 6973 7307 7590 7814 8116
8128 8130 8169 8228 8362 8468 8500 8589 8597 8833
9114 9127 9251 9281 9354 9363 9392 9530 9554 9715
9827 9904

9th Prize Rs.100/-
0021 0034 0242 0252 0283 0284 0303 0304 0307 0320
0322 0344 0410 0533 0540 0853 1063 1183 1206 1335
1363 1404 1498 1594 1706 1753 1760 1849 1992 2013
2031 2295 2335 2387 2433 2496 2532 2613 2686 2866
2870 2928 3013 3117 3192 3209 3439 3518 3636 3677
3701 3719 3875 3954 3962 4122 4181 4213 4240 4268
4361 4420 4532 4570 4591 4609 4668 4686 4769 4778
4791 4821 4831 4904 5149 5233 5375 5379 5418 5534
5548 5597 5755 5808 5928 6168 6169 6228 6271 6305
6319 6356 6432 6503 6645 6657 6781 6809 6824 6922
6924 6956 7180 7218 7273 7303 7410 7475 7511 7513
7521 7562 7618 7679 7830 7940 7946 7959 7983 8016
8158 8254 8269 8300 8355 8489 8521 8624 8634 8639
8698 8719 8764 8795 8853 8864 9001 9456 9489 9569
9594 9641 9713 9739 9814 9844 9905 9942 9971 9995

ಕಿರುಸುದ್ದಿ

ಅಪ್ರಾಪ್ತ ವಯಸ್ಕಳಿಗೆ ಕಿರುಕುಳ ಆರೋಪ: ವಾಟರ್ ಮ್ಯಾನ್ ಪೊಲೀಸ್ ವಶ

ಕೈಕಂಬ: ಭಿನ್ನ ಕೋಮಿನ ಅಪ್ರಾಪ್ತ ಬಾಲಕಿಯನ್ನು ಹಿಂಬಾಲಿಸಿ ಕಿರುಕುಳ ನೀಡಿದ ಆರೋಪದ ಮೇಲೆ ಕುಪ್ಪೆಪದವಿನ ವಾಟರ್ ಮ್ಯಾನ್‌ನನ್ನು ವಶಕ್ಕೆ ಪಡೆದುಕೊಂಡ ಬಜಪೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಉಬ್ಬಿ ಯಾನೆ ಉಬೈದುಲ್ಲಾ ಆರೋಪಿಯಾಗಿದ್ದಾನೆ. 7ನೇ ತರಗತಿಯ ವಿದ್ಯಾರ್ಥಿನಿ ಶಾಲೆಯಿಂದ ತನ್ನ ಮನೆಗೆ ಹೋಗುತ್ತಿದ್ದ ವೇಳೆ ಅದೇ ದಾರಿಯಲ್ಲಿ ನೀರಿನ ಪೈಪ್ ದುರಸ್ಥಿ ಮಾಡುತ್ತಿದ್ದ ಆರೋಪಿ ಅಪ್ರಾಪ್ತೆಯನ್ನು ಹಿಂಬಾಲಿಸಿ ಮೈಮುಟ್ಟಿ ಕಿರುಕುಳ ನೀಡಿದ್ದ. ಅಪ್ರಾಪ್ತೆಯ ಮನೆಯವರೆಗೂ ಹೋಗಿದ್ದ ಆರೋಪಿ ಸಂತ್ರಸ್ತೆಯ ತಂದೆ ಮನೆಯಲ್ಲಿ ಇರುವುದನ್ನು ಕಂಡು ವಾಪಸ್ ಆಗಿದ್ದ. ವಿಷಯ ತಿಳಿದು ಹಿಂದು ಸಂಘಟನೆಯ ಯುವಕರು ಸಂತ್ರಸ್ಥೆಯ ಮನೆ ಬಳಿ ಸೇರಿದ್ದು, ಅಪ್ರಾಪ್ಥೆಗೆ ಕಿರುಕುಳ ನೀಡಿದ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು.

ಸಾಸ್ತಾನ ಪಾಂಡೇಶ್ವರದ ನಿವಾಸಿ ಫೋಟೋಗ್ರಾಫರ್ ಆತ್ಮಹತ್ಯೆಗೆ ಶರಣು

ಕೋಟ: ಫೋಟೋಗ್ರಾಫರ್, ಕ್ರಿಕೆಟ್ ಆಟಗಾರ ಸಾಸ್ತಾನ ಪಾಂಡೇಶ್ವರದ ನಿವಾಸಿ ಗಣೇಶ್ ಮೆಂಡನ್ (38) ಆತ್ಮಹತ್ಯೆ ಮಾಡಿಕೊಂಡ ಘಟನೆ ಸಾಸ್ತಾನ ಮೂಡಹಡು ಗ್ರಾಮದಲ್ಲಿ ಭಾನುವಾರ ಮುಂಜಾನೆ ನಡೆದಿದೆ. ಗಣೇಶ ಮೆಂಡನ್ ರವರು ಫೋಟೋಗ್ರಾಫರ್ ವೃತ್ತಿ ಮಾಡಿಕೊಂಡಿದ್ದು, ಶನಿವಾರ ಕೊಮೆ ಬೀಚ್‌ನಲ್ಲಿ ಶೂಟ್ ಮುಗಿಸಿ ರಾತ್ರಿ 11 ಗಂಟೆಗೆ ಮನೆಗೆ ಬಂದಿದ್ದರು.



ಮನೆಯವರು ಭಾನುವಾರ ಬೆಳಗಿನ ನೋಡುವಾಗ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದರು. ಈ ಬಗ್ಗೆ ಮೃತರ ಪತ್ನಿ ಅಕ್ಷತಾ ನೀಡಿದ ದೂರಿನಂತೆ ಕೋಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾನುವಾರು ಅಕ್ರಮ ಸಾಗಾಟ ಪತ್ತೆ: ಮೂವರ ಬಂಧನ, ವಾಹನಗಳು ವಶಕ್ಕೆ

ಉಡುಪಿ: ಹುಲಿಕಲ್ ಘಾಟಿ ಮಾರ್ಗವಾಗಿ ಅಕ್ರಮವಾಗಿ ಜಾನುವಾರು ಸಾಗಿಸುತ್ತಿದ್ದ ಜಾಲವನ್ನು ಅಮಾಸೆಬೈಲು ಪೊಲೀಸರು ಭಾನುವಾರ ಕಾರ್ಯಾಚರಣೆ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಿ ಸಾಗಾಟಕ್ಕೆ ಬಳಸಿದ ಟಾಟಾ ಇಂಟ್ರಾ ವಾಹನ ಹಾಗೂ ಬೆಂಗಾವಲಾಗಿ ಬಂದಿದ್ದ ಎಟಿಯೋಸ್ ಕಾರನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತ ಆರೋಪಿಗಳನ್ನು ಬೆಳಗಾವಿ ಜಿಲ್ಲೆಯ ರಾಮದುರ್ಗ ನಿವಾಸಿಗಳಾದ ಮುಸ್ತಾಕ್ ಹುಸೇನ್ ಸಾಬ್ ನದಾಫ್ (29) ಮತ್ತು ಸಲೀಂ ಹುಸೇನ್ ಸಾಬ್ ನದಾಫ್ (33) ಹಾಗೂ ಬೈಂದೂರು ತಾಲೂಕಿನ ಶಿರೂರು ನಿವಾಸಿ ನದೀಂ ಅಬ್ದುಲ್ ಖಾದರ್ (34) ಎಂಧು ಗುರುತಿಸಲಾಗಿದೆ.

ನಿಧನ ಸುದ್ದಿ

ಕೆ.ಪದ್ಮನಾಭನ್

ಕಾಸರಗೋಡು: ಸಿಪಿಐ ಕಾಸರಗೋಡು ಜಿಲ್ಲಾ ಕೌನ್ಸಿಲ್ ಕಚೇರಿ ಕಾರ್ಯದರ್ಶಿ, ಪೆರುಂಬಳ ಚೆಟ್ಟಂಗುಳಿ ನಿವಾಸಿ ಕೆ.ಪದ್ಮನಾಭನ್ (70) ನಿಧನಹೊಂದಿದರು. ಅಸೌಖ್ಯದ ಹಿನ್ನೆಲೆಯಲ್ಲಿ ಕಳೆದ ಕೆಲವು ದಿನಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದರು. ಧೀರ್ಘ ಕಾಲದಿಂದ ಪಕ್ಷದ ಜಿಲ್ಲಾ ಕೌನ್ಸಿಲ್ ಕಚೇರಿಯಲ್ಲಿ ಕಾರ್ಯದರ್ಶಿಯಾಗಿದ್ದರು. ಮೃತರು ಪತ್ನಿ ಹಾಗೂ ಮೂವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಗುರುಪುರ ಸುರೇಶ್ ಕಾಮತ್

ಕೈಕಂಬ: ಗುರುಪುರ ಶ್ರೀ ವರದರಾಜ ವೆಂಕಟರಮಣ ದೇವಸ್ಥಾನ ಬಳಿಯ ನಿವಾಸಿ, ಅಂಗಡಿ ಮಾಲಕ ಸುರೇಶ್ ಯು. ಕಾಮತ್ (73) ಅವರು ಶನಿವಾರ ಸ್ವಗೃಹದಲ್ಲಿ ನಿಧನ ಹೊಂದಿದರು. ಶ್ರೀ ವರದರಾಜ ವೆಂಕಟರಮಣ ದೇವಸ್ಥಾನದ ಆಡಳಿತ ಮೊಕ್ತೇಸರ ಆಗಿದ್ದ ಇವರು ಪತ್ನಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.



ಲತಾ ಮೊಯ್ಲಿ ಕೆಮ್ರಾಲ್

ಪಕ್ಷಿಕೆರೆ : ಇಲ್ಲಿನ ನಿವಾಸಿ ಕೆಮ್ರಾಲ್ ಗ್ರಾಮ ಪಂಚಾಯತ್ ಮಾಜಿ ಸದಸ್ಯೆ ಲತಾ ಮೊಯ್ಲಿ(58ವರ್ಷ) ನಿಧನರಾದರು. ಅವರು ಪತಿ, ಸಾಮಾಜಿಕ ಕಾರ್ಯಕರ್ತ ವಿಠಲ ಮೊಯ್ಲಿ ಪತ್ನಿ ಹಾಗೂ ಓರ್ವ ಪುತ್ರ, ಓರ್ವ ಪುತ್ರಿಯನ್ನು ಆಗಲಿದ್ದಾರೆ.





ಉಡುಪಿ ಧರ್ಮಪ್ರಾಂತ್ಯದಲ್ಲೇ ಅತೀ ಹಿರಿಯ ಇಗರ್ಜಿಯಾದ ಕುಂದಾಪುರ ರೋಜರಿ ಮಾತಾ ಇಗರ್ಜಿಯಲ್ಲಿ ಯೇಸುವಿನ ಪುನರುತ್ಥಾನ ಹೊಂದಿದ ಪಾಸ್ಖ ಹಬ್ಬವನ್ನು ಶನಿವಾರ ಸಂಜೆ ಭಕ್ತಿ ಶ್ರದ್ಧೆಯಿಂದ ಆಚರಿಸಲಾಯಿತು. ಮೂಲ್ಕಿ ಡಿವೈನ್ ಕಾಲ್ ಸೆಂಟರ್‌ನ ಪ್ರವಚಕ, ಧರ್ಮಗುರು ಅನಿಲ್ ಕಿರಣ್ ಫೆರ್ನಾಂಡಿಸ್ ದಿವ್ಯ ಬಲಿದಾನವನ್ನು ಅರ್ಪಿಸಿದರು.

ಕೊಲ್ಲಿ ಸಮರ: ಏಪ್ರಿಲ್, ಮೇ ತಿಂಗಳಲ್ಲಿ ರೇಶನ್ ಸಾಮಗ್ರಿ ಒಟ್ಟಿಗೆ ವಿತರಣೆ ಶುರು

ಕಾಸರಗೋಡು: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಹಿನ್ನೆಲೆಯಲ್ಲಿ ಕೇರಳದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳ ರೇಶನ್ ಸಾಮಗ್ರಿಗಳನ್ನು ಒಟ್ಟಿಗೆ ಪಡೆಯುವ ಸೌಕರ್ಯವನ್ನು ಕೇಂದ್ರ ಸರಕಾರ ಏರ್ಪಡಿಸಿದೆ. ಅದರಂತೆ ಈಗಾಗಲೇ ಏಪ್ರಿಲ್ ತಿಂಗಳ ರೇಶನ್ ಸಾಮಗ್ರಿಗಳ ವಿತರಣೆ ಆರಂಭಗೊಂಡಿದೆ. ಇದರ ಜೊತೆಗೆ ಮೇ ತಿಂಗಳ ರೇಶನ್ ಸಾಮಗ್ರಿಗಳನ್ನೂ ಪಡೆಯಬಹುದಾಗಿದೆ. ಹಳದಿ ಕಾರ್ಡ್‌ದಾರರಿಗೆ ಏಪ್ರಿಲ್ ಮತ್ತು ಮೇ ತಿಂಗಳ ರೇಶನ್ ತಲಾ 30ರಂತೆ ಒಟ್ಟು 60 ಕಿಲೋ ಅಕ್ಕಿ, ತಲಾ ಎರಡು ಕಿಲೋದಂತೆ ನಾಲ್ಕು ಕಿಲೋ ಗೋಧಿ ಮತ್ತು ತಲಾ ಮೂರು ಪ್ಯಾಕೆಟ್‌ನಂತೆ 6 ಪ್ಯಾಕೆಟ್ ಗೋಧಿ ಹಿಟ್ಟು (ತಲಾ 7 ರೂ. ದರದಲ್ಲಿ) ಲಭಿಸಲಿದೆ. ಇದೇ ರೀತಿ ಪಿಂಕ್ ಕಾರ್ಡ್‌ದಾರರಿಗೆ ಏಪ್ರಿಲ್ ಮತ್ತು ಮೇ ತಿಂಗಳ ರೇಶನ್ ಸಾಮಗ್ರಿ ಕಾರ್ಡ್‌ನ ಪ್ರತಿ ಸದಸ್ಯರಿಗೆ ತಲಾ 4 ಕಿಲೋದಂತೆ 8ಕಿಲೋ ಅಕ್ಕಿ ತಲಾ ಒಂದು ಕಿಲೋದಂತೆ 2 ಕಿಲೋ ಗೋಧಿ ಲಭಿಸಲಿದೆ. 4 ಸದಸ್ಯರಿರುವ ಪಿಂಕ್ ಕಾರ್ಡ್‌ಗಳಿಗೆ ಗೋಧಿಯ ಬದಲು ತಲಾ ನಾಲ್ಕರಂತೆ 8 ಪ್ಯಾಕೆಟ್ ಗೋಧಿಹಿಟ್ಟು, ನಾಲ್ಕಕ್ಕಿಂತ ಹೆಚ್ಚು ಸದಸ್ಯರಿದ್ದ ಕಾರ್ಡ್‌ಗಳಿಗೆ ಅದರ ಪ್ರತೀ ಸದಸ್ಯರಿಗೆ ಹೆಚ್ಚುವರಿಯಾಗಿ ತಲಾ ಒಂದರಂತೆ ಎರಡು ಕಿಲೋ ಗೋಧಿ ಲಭಿಸಲಿದೆ. ನೀಲಿ ಕಾರ್ಡ್‌ದಾರರಿಗೆ ಏಪ್ರಿಲ್ ಮತ್ತು ಮೇ ತಿಂಗಳು ಸೇರಿ ಪ್ರತೀ ಸದಸ್ಯರಿಗೆ ತಲಾ 2 ಕಿಲೋದಂತೆ ಒಟ್ಟು 4 ಕಿಲೋ ಅಕ್ಕಿ, ತಲಾ 4 ರೂ. ದರಕ್ಕೆ ಲಭಿಸಲಿದೆ. ಇದರ ಹೊರತಾಗಿ ಈ ಎರಡು ತಿಂಗಳ ಹೆಚ್ಚುವರಿಯಾಗಿ ತಲಾ 2 ಮತ್ತು 3 ಕಿಲೋದಂತೆ ಐದು ಕಿಲೋ ಹೆಚ್ಚುವರಿ ಅಕ್ಕಿ ತಲಾ 10.90 ರೂ. ದರದಲ್ಲಿ ಲಭಿಸಲಿದೆ. ಸ್ಟಾಕ್ ಇದ್ದಲ್ಲಿ ತಲಾ 17 ರೂ. ದರದಲ್ಲಿ ಗೋಧಿ ಹಿಟ್ಟು ಕೂಡಾ ಲಭಿಸಲಿದೆ.

ಬಿಳಿ ಕಾರ್ಡ್‌ದಾರರಿಗೆ ಏಪ್ರಿಲ್ ಮತ್ತು ಮೇ ತಿಂಗಳು ಸೇರಿ ತಲಾ 6 ಮತ್ತು 4ರಂತೆ 10 ಕಿಲೋ ಅಕ್ಕಿ ಕಿಲೋಕ್ಕೆ ತಲಾ 10.90ರೂ. ದರದಲ್ಲಿ ಲಭಿಸಲಿದೆ. ಸ್ಟಾಕ್ ಇದ್ದಲ್ಲಿ 17 ರೂ. ದರದಲ್ಲಿ ಗೋಧಿ ಹಿಟ್ಟು ಕೂಡಾ ಲಭಿಸಲಿದೆ. ಕ್ಷೇಮ ಸಂಸ್ಥೆಗಳಿಗೂ ಎರಡು ತಿಂಗಳ ರೇಶನ್ ಸಾಮಗ್ರಿಗಳನ್ನು ವಿತರಿಸಲಾಗುತ್ತಿದೆ.

ಅವಿಭಜಿತ ದಕ್ಷಿಣ ಕನ್ನಡದಲ್ಲಿ ಜಿಲ್ಲಾಡಳಿತಗಳಿಂದ ಡಾ.ಬಾಬು ಜಗಜೀವನ ರಾಂ 119ನೇ ಜನ್ಮದಿನಾಚರಣೆ

ಹಸಿರು ಹರಿಕಾರ, ಧೀಮಂತ ಚೇತನ

ಮಂಗಳೂರು: ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ ಹಾಗೂ ಭಾರತದ ಮಾಜಿ ಉಪ ಪ್ರಧಾನಿಯಾಗಿದ್ದ ಡಾ.ಬಾಬು ಜಗಜೀವನ ರಾಂ ಅವರ 119 ನೇ ಜನ್ಮದಿನಾಚರಣೆ ಕಾರ್ಯಕ್ರಮ ಭಾನುವಾರ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಂಗಳೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ದಕ್ಷಿಣ ಕನ್ನಡ ಜಿಲ್ಲೆ ಇವುಗಳ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ದೇಶದ ಉಜ್ವಲಕ್ಕೆ ಶ್ರಮಿಸಿದರು

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ದಕ್ಷಿಣ ಕನ್ನಡ ಜಿಲ್ಲಾ ಅಪರ ಜಿಲ್ಲಾಧಿಕಾರಿ ರಾಜು ಕೆ., ಸಮಾಜಕ್ಕೆ ಜಗಜೀವನ್ ರಾಂ ಅವರ ಕೊಡುಗೆ ಮಹತ್ತರವಾದುದು. ಅಂದಿನ ಅತ್ಯಂತ ಕ್ಲಿಷ್ಟಕರ ಸನ್ನಿವೇಶದಲ್ಲಿಯೂ ಅವರು ಹಸಿರು ಕ್ರಾಂತಿಯ ಮೂಲಕ ದೇಶದ ಉಜ್ವಲಕ್ಕೆ ಶ್ರಮಿಸಿದವರು. ಅವರನ್ನೂ ಈ ಸಮಾಜ ಎಂದೂ ಮರೆಯದು ಎಂದರು.

ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ. ಶಶಿಧರ್ ಅವರು ಮಾತನಾಡಿ, ಬಾಬು ಜಗಜೀವನರಾಂ ಅವರ ಸಾಧನೆ ಸದಾ ಕಾಲಕ್ಕೂ ಪ್ರೇರಣೆ ನೀಡುವಂತದ್ದು. ಜ್ವಲ ಭವಿಷ್ಯಕ್ಕಾಗಿ ಯುವ ಸಮುದಾಯ ಅವರನ್ನು ಅನುಸರಿಸಬೇಕು ಎಂದು ಅವರು ದರು.

ಕಾರ್ಯಕ್ರಮದಲ್ಲಿ ಸೈಬರ್ ಕ್ರೈಮ್ ವಿಭಾಗದ ಡಿವೈಎಸ್‌ಪಿ ಮಂಜುನಾಥ ಆರ್.ಜಿ., ಮಂಗಳೂರು ತಾಲೂಕು ತಹಶಿಲ್ದಾರ ರಮೇಶ ಬಾಬು, ಡಿಡಿಪಿಐ ರಾಜೇಶ್ವರಿ, ಸಮಾಜ ಕಲ್ಯಾಣಇಲಾಖೆ ಉಪನಿರ್ದೇಶಕ (ಪ್ರಭಾರ) ಸುರೇಶ್ ಅಡಿಗ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಪುಟ್ಟಸ್ವಾಮಿ ಸ್ವಾಗತಿಸಿದರು. ಪ್ರದೀಪ್ ಕಾರ್ಯಕ್ರಮ ನಿರೂಪಿಸಿದರು.



ಯುವ ಜನತೆಗೆ ಇವರು ಮಾದರಿ

ಮಹಾತ್ಮ ಗಾಂಧೀಜಿಯವರ ಮೌಲ್ಯದಿಂದ ಪ್ರಭಾವಿತರಾಗಿದ್ದ ಬಾಬು ಜಗಜೀವನ ರಾಂ ಅವರು ಸ್ವಾತಂತ್ರ್ಯ ಹೋರಾಟದಲ್ಲಿಯೂ ತನ್ನನ್ನು ತೊಡಗಿಸಿಕೊಂಡಿದ್ದರು. ಸಂಸದರಾಗಿ, ದೇಶಕಂಡ ಹಸಿರು ಹರಿಕಾರರಾಗಿ ಕಠಿಣ ಪರಿಸ್ಥಿತಿಯಲ್ಲಿಯೂ ಕರ್ತವ್ಯ ನಿರ್ವಹಿಸಿದ್ದರು. ಅವರ ನಡೆಸಿಕೊಟ್ಟ ದಾರಿಯಲ್ಲಿ ನಾವೆಲ್ಲಾ ನಡೆಯಬೇಕು.

■ ರಾಜು ಕೆ., ಅಪರ ಜಿಲ್ಲಾಧಿಕಾರಿ

ಉಡುಪಿ: ಡಾ. ಬಾಬು ಜಗಜೀವನ್ ರಾಮ್ ಅವರನ್ನು ನಾವು ಹಸಿರು ಕ್ರಾಂತಿಯ ಹರಿಕಾರ ಎಂದು ಸ್ಮರಿಸುತ್ತೇವೆ. ಜೊತೆಗೆ ಬಾಬೂಜಿ, ದೇಶದ ರಕ್ಷಣಾಮಂತ್ರಿಯಾಗಿ 1971 ರ ಭಾರತ– ಪಾಕಿಸ್ತಾನ ಯುದ್ಧದ ಸಮಯದಲ್ಲಿ ಭಾರತಕ್ಕೆ ಐತಿಹಾಸಿಕ ಜಯಗಳಿಸಿಕೊಟ್ಟಿರುವುದನ್ನೂ ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್ ಹೇಳಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ನಗರಸಭೆ ಸಮಾಜ ಕಲ್ಯಾಣ ಇಲಾಖೆ ಉಡುಪಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಮಣಿಪಾಲದ ಜಿಲ್ಲಾಧಿಕಾರಿ ಕಚೇರಿಯ ಕೋರ್ಟ್ ಹಾಲ್ ನಲ್ಲಿ ಹಸಿರು ಕ್ರಾಂತಿಯ ಹರಿಕಾರ ಮಾಜಿ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ರವರ 119 ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಅಧ್ಯಕ್ಷತೆವಹಿಸಿದ್ದ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್ ಮಾತನಾಡಿ, ಜಾತಿ ಮತ, ಮೇಲು, ಕೀಳು ತಾರತಮ್ಯದಿಂದ ಮುಕ್ತವಾದಸಮಾನತೆಯಸಮಾಜವನ್ನು ನಿರ್ಮಿಸಲು ಬಾಬೂಜಿಯವರು ಅವಿರತ ಶ್ರಮಿಸಿದ್ದಾರೆ ಎಂದರು.

ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ನಿವೃತ್ತ ಉಪನ್ಯಾಸಕ ದಯಾನಂದ ಡಿ. ಕಿದಿಯೂರು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳ ಮುಖಂಡರು, ಇಲಾಖೆಯ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ನಾರಾಯಣ ಸ್ವಾಮಿ ಸ್ವಾಗತಿಸಿ, ಇಲಾಖೆಯ ಸಿಬ್ಬಂದಿ ಶ್ರೀದೇವಿ ನಿರೂಪಿಸಿ ವಂದಿಸಿದರು.



ಉದಾತ್ತ ಗುಣ ನಮಗೆ ಮಾದರಿ

ತಮ್ಮ ಧೀಮಂತ ವ್ಯಕ್ತಿತ್ವದಿಂದ ಬಾಂಗ್ಲಾ ವಿಮೋಚನೆಯಲ್ಲಿ ಮಹತ್ವಪೂರ್ಣ ಪಾತ್ರವನ್ನು ಜಗಜೀವನ್ ರಾಂ ಅವರು ನಿರ್ವಹಿಸಿದ್ದಾರೆ. ಇಂತಹ ಮಹಾನ್ ನಾಯಕರ ಉದಾತ್ತ ಗುಣಗಳು ನಮಗೆಲ್ಲರಿಗೂ ಮಾದರಿಯಾಗಿದ್ದು ನಾವು ಕೂಡಾ ಇದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

■ ಹರಿರಾಮ್ ಶಂಕರ್, ಜಿಲ್ಲಾ ಪೊಲೀಸ್ ಅಧೀಕ್ಷಕ

ಕೋಡಂಗಲ್ಲು ಕೀರ್ತಿನಗರ: ಉಚಿತ ಶ್ರವಣ ತಪಾಸಣಾ ಶಿಬಿರ

ಈಶ್ವರ ಮಲ್ಪೆಗೆ ಗೌರವ ಪುರಸ್ಕಾರ ಪ್ರದಾನ

ಮೂಡುಬಿದಿರೆ: 106ನೇ ಉಚಿತ ಶ್ರವಣ ತಪಾಸಣೆ ಹಾಗೂ ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣೆ ಕಾರ್ಯಕ್ರಮ ಭಾನುವಾರ ಕೋಡಂಗಲ್ಲು ಕೀರ್ತಿನಗರ ರೋಟರಿ ಕ್ಲಬ್ ಆಫ್ ಟೆಂಪಲ್ ಟೌನ್ ಆಡಿಟೋರಿಯಂನಲ್ಲಿ ಯಶಸ್ವಿಯಾಗಿ ನಡೆಯಿತು. 32ಮಂದಿ ಶಿಬಿರದ ಪ್ರಯೋಜನ ಪಡೆದುಕೊಂಡರು. ಇದೇ ಸಂದರ್ಭದಲ್ಲಿ ಮುಳುಗು ತಜ್ಞ, ಸಮಾಜ ಸೇವಕ ಈಶ್ವರ ಮಲ್ಪೆ ಅವರಿಗೆ ವರ್ಷ ಕ್ರಿಯೇಷನ್ಸ್ ಪ್ರಸ್ತುತಿಯ ಯಶ ಕರ್ನಾಟಕ ಗೌರವ ಪುರಸ್ಕಾರ 2026ನ್ನು ನೀಡಿ ಪುರಸ್ಕರಿಸಲಾಯಿತು.

ಯಶ ಕರ್ನಾಟಕ ವಾರಪತ್ರಿಕೆ ಮತ್ತು ವಿಕಾಸ ಸಮಾನ ಮನಸ್ಕ ಮಾಧ್ಯಮ ಮಿತ್ರರ ವೇದಿಕೆ ನೇತೃತ್ವದಲ್ಲಿ, ರೋಟರಿ ಕ್ಲಬ್ ಆಫ್ ಮೂಡುಬಿದಿರೆ ಟೆಂಪಲ್ ಟೌನ್ ಹಾಗೂ ಕೀರ್ತಿನಗರ ಅಭಿವೃದ್ಧಿ ಸಮಿತಿ ಸಹಕಾರದೊಂದಿಗೆ ತಪಾಸಣಾ ಶಿಬಿರ ನಡೆಯಿತು.

ವಿಕಾಸ ಸಮಾನ ಮನಸ್ಕ ಮಾಧ್ಯಮ ಮಿತ್ರರ ವೇದಿಕೆಯ ರಾಜ್ಯ ಉಪಾಧ್ಯಕ್ಷ ಡಾ. ಮಂದಾರ ರಾಜೇಶ್ ಭಟ್ ಅಧ್ಯಕ್ಷತೆ ವಹಿಸಿ ಮಾತನಾಡಿ ಆರೋಗ್ಯ ಹಾಗೂ ಪರಿಸರ ಒಂದಕ್ಕೊಂದು ಪೂರಕವಾದುದು. ಪರಿಸರ ಸಂರಕ್ಷಣೆಯಲ್ಲಿ ನಮ್ಮ ಕೊಡುಗೆ ಅತೀ ಅಗತ್ಯ ಎಂದರು. ಕಾರ್ಯನಿರತಪತ್ರಕರ್ತರಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ಶ್ರೀನಿವಾಸ್ ನಾಯಕ್ ಇಂದಾಜೆ, ರೋಟರಿ ಅಸಿಸ್ಟೆಂಟ್ ಗವರ್ನರ್ ಉಮೇಶ್ ರಾವ್ ಕೆ, ಕೀರ್ತಿನಗರ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಉದಯ ಕುಮಾರ್, ಶ್ರವಣ ತಜ್ಞರಾದ ಡಾ. ಅಂಕಿತಾ ಕಲ್ಮಾಡಿ ಅತಿಥಿಗಳಾಗಿ ಭಾಗವಹಿಸಿದ್ದರು.

ವರ್ಷ ಕ್ರಿಯೇಷನ್ಸ್‌ನ ಸಿ.ಇ.ಒ ಹರೀಶ್ ಕೆ. ಆದೂರು ಸ್ವಾಗತಿಸಿದರು. ಟೀಂ ಈಶ್ವರ ಮಲ್ಪೆಯ ಸಂಚಾಲಕ ಲವ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ ಸಮಾಜದಲ್ಲಿ ಕಣ್ಣಿನ ತಪಾಸಣೆ ನಡೆಯುತ್ತಿರುತ್ತದೆ. ಕಣ್ಣು ಕಾಣಿಸದವರ ಬಗ್ಗೆ ಕನಿಕರ ತೋರಿಸುತ್ತೇವೆ ಆದರೆ ಕಿವಿ ಕೇಳಿಸದವರಿಗೆ ಗೌರವ ಇಲ್ಲದಂತಾಗಿದೆ. ಇದನ್ನೆಲ್ಲಾಗಮನಿಸಿಕಿವಿಯ ಸಮಸ್ಯೆಗಳಿಗೆ ಪರಿಹಾರ ನೀಡಬೇಕೆನ್ನುವ ಉದ್ದೇಶದಿಂದ ಕ್ಯಾಂಪ್‌ಗಳು ನಡೆದಿವೆ. ಕಿವಿಯ ಸಾಧನಗಳನ್ನು ತೆಗೆದುಕೊಳ್ಳಲು ಸರಕಾರದಿಂದ ಪರಹಾರ ಸಿಗುವುದಿಲ್ಲ ಇದನ್ನು ಮನಗಂಡ ಈಶ್ವರ್ ಅವರು ತಾನು ದುಡಿದದರಲ್ಲಿ ಶೇ 40ರಷ್ಟು ದೇಣಿಗೆಯನ್ನು ಮೀಸಲಿಟ್ಟಿದ್ದಾರೆ ಎಂದರು.

ಸೌಮ್ಯ ಕುಗ್ವೆ ನಿರೂಪಿಸಿ ದರು. ರೋಟರಿ ಟೆಂಪಲ್ ಟೌನ್‌ನ ಅಧ್ಯಕ್ಷ ಹರೀಶ್ ಎಂ. ಕೆ. ವಂದಿಸಿದರು.



ರಾಜ್ಯಾದ್ಯಂತ ಶಿಬಿರ ಆಯೋಜನೆ

ಸಾಮಾಜಿಕ ಕಾರ್ಯಕರ್ತ, ಮುಳುಗು ತಜ್ಞ ಈಶ್ವರ ಮಲ್ಪೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ದೇಹದ ಪಂಚೇಂದ್ರಿಯಗಳಲ್ಲಿ ಕಿವಿಯು ಬಹುಮುಖ್ಯವಾದ ಅಂಗವಾಗಿದೆ. ಕಿವಿ ಕೇಳಿಸದೆ ಸಮಸ್ಯೆಯಲ್ಲಿರುವವರು ಅನೇಕರಿದ್ದಾರೆ. ಅಂತಹವರಿಗೆ ಉತ್ತಮ ರೀತಿಯಲ್ಲಿ ಚಿಕಿತ್ಸೆಯನ್ನು ನೀಡಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಶ್ರವಣ ತಪಾಸಣಾ ಶಿಬಿರ ಗಳನ್ನು ಆಯೋಜಿಸಲಾಗುತ್ತಿದ್ದು ಇದರ ಪ್ರಯೋಜನವನ್ನು ಪಡೆದುಕೊಳ್ಳುವಂತೆ ವಿನಂತಿಸಿದರು.

ವಿಷು, ಬೇಸಿಗೆ ರಜೆ ಪ್ರಯಾಣಿಕರ ದಟ್ಟಣೆ ನಿವಾರಣೆಗೆ ಹಳಿಗಿಳಿಯಲಿದೆ ವಿಶೇಷ ರೈಲು

ಕಾಸರಗೋಡು: ವಿಷು ಹಾಗೂ ಬೇಸಿಗೆ ರಜಾದಿನಗಳಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯ ಹಿನ್ನೆಲೆಯಲ್ಲಿ ರೈಲು ಪ್ರಯಾಣಿಕರಿಗೆ ಅನುಕೂಲವಾಗುವಂತೆ ರೈಲುಗಳನ್ನು ರೈಲ್ವೆ ಇಲಾಖೆ ಘೋಷಿಸಿದೆ. ವಿಶೇಷ ನಂಬ್ರ 06126 ಚೆನ್ನೈ ರೈಲುಗಾಡಿ ಮಂಗಳೂರು ಸೆಂಟ್ರಲ್– ಚೆನ್ನೈ ಎಗ್ಮೋರ್ ವಿಶೇಷ ರೈಲು ಏಪ್ರಿಲ್ 6 ಮತ್ತು ಏಪ್ರಿಲ್ 13ರಂದು ಸಂಜೆ 4ಕ್ಕೆ ಮಂಗಳೂರು ಸೆಂಟ್ರಲ್‌ನಿಂದ ಹೊರಟು ಮರುದಿನ ಬೆಳಗ್ಗೆ 10.30ಕ್ಕೆ ಚೆನ್ನೈ ಎಗ್ಮೋರ್ ತಲುಪಲಿದೆ. ಮತ್ತೆ ವಾಪಸ್ ರೈಲುಗಾಡಿ ನಂಬ್ರ 06125 ಚೆನ್ನೈ ಎಗ್ಮೋರ್– ಮಂಗಳೂರು ಸೆಂಟ್ರಲ್ ವಿಶೇಷ ರೈಲು ಏಪ್ರಿಲ್ 7 ಮತ್ತು ಏಪ್ರಿಲ್ 14ರಂದು ಮಧ್ಯಾಹ್ನ 2 ಗಂಟೆಗೆ ಚೆನ್ನೈನಿಂದ ಹೊರಟು ಮರುದಿನ ಬೆಳಗ್ಗೆ 6.50ಕ್ಕೆ ಮಂಗಳೂರು ನಿಲ್ದಾಣ ತಲುಪಲಿದೆ.

ಎಲ್ಲೆಲ್ಲಿ ಇದೆ ನಿಲುಗಡೆ?

ಪಾಲಕ್ಕಾಡ್ ನಂತರ ವಿಶೇಷ ರೈಲು ಪೋತನ್ನೂರು, ತಿರುಪೂರು, ಈರೋಡ್, ಸೇಲಂ, ಜೋಲಾರ್ಪೆಟ್ಟೈ, ಕಡಪಾಡಿ, ಶೋಲಿಗನಲ್ಲೂರ್, ಅರಕ್ಕೋಣಂ, ತಿರುವಳ್ಳೂರು ಮತ್ತು ಪೆರಂಬೂರು ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರುತ್ತದೆ. ವಿಶೇಷ ರೈಲಿನ ಬೋಗಿಗಳು ಎರಡು ಎಸಿ ಟೂ–ಟೈರ್ ಕೋಚ್‌ಗಳು, ಎಂಟು ಎಸಿ ತ್ರೀ–ಟೈರ್ ಕೋಚ್‌ಗಳು, ಆರು ಸ್ಲೀಪರ್ ಕ್ಲಾಸ್ ಕೋಚ್‌ಗಳು, ನಾಲ್ಕು ಸಾಮಾನ್ಯ ಎರಡನೇ ದರ್ಜೆಯ ಕೋಚ್‌ಗಳು ಮತ್ತು ಒಂದು ವಿಶೇಷಚೇತನ ಸ್ನೇಹಿ ಎರಡನೇ ದರ್ಜೆಯ ಕೋಚ್ ಇರುತ್ತದೆ.

ಚೆನ್ನೈನಿಂದ ಪ್ರಾರಂಭವಾಗುವ ಮತ್ತು ಬೆಂಗಳೂರು – ಹಾಸನ – ಮಂಗಳೂರು ಸೆಂಟ್ರಲ್ ಮೂಲಕ ಪ್ರಯಾಣಿಸುವ ವಿಶೇಷ ರೈಲು ಚೆನ್ನೈ– ಮಂಗಳೂರು – ಕಣ್ಣೂರು ವಿಭಾಗ, ಬೆಂಗಳೂರು –ಮಂಗಳೂರು– ಅದರಂತೆ ಕಣ್ಣೂರು ವಿಭಾಗ ಮತ್ತು ಮಂಗಳೂರು – ಎರ್ನಾಕುಳಂ ಮೂಲಕ ಸಂಚಾರ ನಡೆಸುವ ಪ್ರಯಾಣಿಕರಿಗೆ ಹೆಚ್ಚಿನ ಪ್ರಯೋಜನವಾಗಲಿದೆ. ಏ.10ರಂದು ಚೆನ್ನೈನಿಂದ ಆರಂಭಿಸಿ ಮತ್ತು ವಾಪಸ್ ಸೇವೆಯು ಏ.15ರಂದು ಎರ್ನಾಕುಳಂನಿಂದಪ್ರಾರಂಭಿಸಬಹುದು ಎಂದು ಮನವಿಯಲ್ಲಿ ತಿಳಿಸಲಾಗಿತ್ತು.

ಈ ರೀತಿಯಲ್ಲಿ ವಿಶೇಷ ರೈಲು ಸೇವೆ ಪರಿಚಯಿಸುವುದರಿಂದ ಜನದಟ್ಟಣೆಯಿರುವ ನಿಯಮಿತ ರೈಲುಗಳಲ್ಲಿ ಪ್ರಯಾಣಿಸಬೇಕಾದ ಸಾರ್ವಜನಿಕರಿಗೆ ಹೆಚ್ಚಿನ ಪ್ರಯೋಜನ ಉಂಟಾಗಲಿದೆ.



ವಿಶೇಷ ರೈಲುಗಾಡಿಗೆ ಕಾಸರಗೋಡು ಸಂಸದರಿಂದ ಮನವಿ

ವಿಷು ಮತ್ತು ಬೇಸಿಗೆ ರಜೆಯ ಸಂದರ್ಭದಲ್ಲಿ ಕೇರಳಕ್ಕೆ ಪ್ರಯಾಣಿಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಏ.10ರಂದು ಚೆನ್ನೆಯಿಂದ ಎರ್ನಾಕುಳಂಗೆ (ಬಂಗಾರ ಪೇಟೆ– ಯಶವಂತಪುರ– ಹಾಸನ– ಮಂಗಳೂರು ಸೆಂಟ್ರಲ್– ಕಣ್ಣೂರು ಮೂಲಕ) ವಿಶೇಷ ರೈಲು ಸಂಚಾರ ಆರಂಭಿಸಲು ಕಾಸರಗೋಡು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಕೇಂದ್ರ ರೈಲ್ವೆ ಸಚಿವರಿಗೆ ಪತ್ರ ಬರೆದು ಮನವಿ ಮಾಡಿದ್ದರು.

ಸುಳ್ಯ ತಾಲೂಕು ಪಂಚಾಯತ್ ತೆರಿಗೆ ಸಂಗ್ರಹ, ಅಭಿವೃದ್ಧಿ ಕಾರ್ಯಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಥಮ

ಬರೋಬ್ಬರಿ ರೂಪಾಯಿ 2,49,35,745 ಸಂಗ್ರಹ!

▸ ಮಿಥುನ್ ಕರ್ಲಪ್ಪಾಡಿ

ಸುಳ್ಯ: ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಅಡಿ ಕೆಲಸ ನಿರ್ವಹಿಸುತ್ತಿರುವ ಸುಳ್ಯ ತಾಲೂಕು ಪಂಚಾಯತ್ ತೆರಿಗೆ ಸಂಗ್ರಹ ಹಾಗೂ ಅನುದಾನಗಳ ಸದ್ಬಳಕೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನದೊಂದಿಗೆ ಅಗ್ರಸ್ಥಾನ ಕಾಯ್ದುಕೊಂಡಿದೆ.

ಶೇ.94.41 ಗುರಿ ಸಾಧನೆ

ಸುಳ್ಯ ತಾಲೂಕು ಪಂಚಾಯತ್ ಒಟ್ಟು 25 ಗ್ರಾಮ ಪಂಚಾಯತ್‌ಗಳನ್ನು ಒಳಗೊಂಡಿದ್ದು, ಶೇ. 94.41 ಗುರಿಯೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಮತ್ತೆ ಕಾಯ್ದುಕೊಂಡಿದೆ. 25 ಗ್ರಾಮ ಪಂಚಾಯತ್‌ಗಳಲ್ಲಿ ಬೇಡಿಕೆ ಆದಾಯವಾಗಿ ರೂ. 24271034.36 ಹೊಂದಿದ್ದು ಒಟ್ಟಾರೆಯಾಗಿ ರೂ. 24935745.6 ಸಂಗ್ರಹದೊಂದಿಗೆ ಶೇ. 94.41 ಹೊಂದಿ ಅಗ್ರ ಸ್ಥಾನವನ್ನು ಕಾಯ್ದುಕೊಂಡಿದ್ದು 2ನೇ ಸ್ಥಾನದಲ್ಲಿ ಕಡಬ, ಪುತ್ತೂರು, ಬೆಳ್ತಂಗಡಿ, ಮಂಗಳೂರು, ಮೂಡಬಿದ್ರೆ, ಮುಲ್ಕಿ, ಉಳ್ಳಾಲ, ಬಂಟ್ವಾಳ ಹೀಗೆ ಸ್ಥಾನಗಳನ್ನು ಹಂಚಿಕೊಂಡಿವೆ.



ಅನುದಾನ ಬಳಕೆಯಲ್ಲೂ ಶೇ.100 ಸಾಧನೆ

ತಾಲೂಕು ಪಂಚಾಯತ್ ನಿರ್ಬಂಧಿತ ಅನುದಾನ ಒಬಿಸಿಯಲ್ಲಿ ರೂ.17064453 ಮೊತ್ತದಲ್ಲಿ ರೂ.1706423 ಬಳಕೆಯೊಂದಿಗೆ ನೂರು ಸಾಧನೆ ನಡೆಸಿದ್ದು ಜೊತೆಗೆ ಅನಿರ್ಬಂಧಿತ ಪ.ಜಾತಿ ಅನುದಾನ ರೂ. 3855896 ಗಳಲ್ಲಿ ರೂ. 3854857 ಗಳನ್ನು ಬಳಸಿಕೊಂಡು ಶೇ. 99.97 ಗುರಿ ತಲುಪಿದೆ. ಪ.ಪಂಗಡ ರೂ.1562611 ಗಳಲ್ಲಿ ರೂ. 1562035 ಬಳಸಿಕೊಂಡು ಶೇ.99.96 ದುರಸ್ತಿ ಮತ್ತು ಸಾಗಣಿಕೆಯಲ್ಲಿ ಶೇ. 99.98, ನೂತನ ಸರಬರಾಜು ಶೇ. 99.93 ಹಾಗೂ ಆರೋಗ್ಯ ಇಲಾಖೆ ಕಟ್ಟಡಗಳಲ್ಲಿ ಶೇ. 100 ಸಾಧನೆಯೊಂದಿಗೆ ಆರ್ಥಿಕ ಲೆಕ್ಕ ವಾರ್ಷಿಕ ಖರ್ಚು ವೆಚ್ಚಗಳಲ್ಲಿಯು ಪ್ರಥಮ ಸ್ಥಾನದೊಂದಿಗೆ ಜಿಲ್ಲೆಯಲ್ಲಿ ಮಾದರಿಯಾಗಿ ಅಭಿವೃದ್ಧಿ ಕಾರ್ಯಗಳಲ್ಲಿ ಮುನ್ನಡೆಯುತ್ತಿದೆ.

ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಸ್ಥಳೀಯ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಆಡಳಿತ ಸಮಿತಿ, ಜನಪ್ರತಿನಿಧಿಗಳು ಹಾಗೂ ಸಿಬ್ಬಂದಿ ವರ್ಗಗಳ ಸಹಕಾರದಿಂದ ತಾಲೂಕು ಅಭಿವೃದ್ಧಿ ಅನುದಾನ ಬಳಕೆ ಹಾಗೂ ತೆರಿಗೆ ಸಂಗ್ರಹದಲ್ಲಿ ಪ್ರಥಮ ಸ್ಥಾನವನ್ನು ಕಳೆದ ಬಾರಿಯಂತೆ ಈ ಬಾರಿಯು ಕಾಯ್ದುಕೊಂಡಿದೆ ಎಂದು ತಾ.ಪಂ. ಇಒ ರಾಜಣ್ಣ ತಿಳಿಸಿದ್ದಾರೆ.

ಗ್ರಾಮವಾರು ಸಾಧನೆ

ಅರಂತೋಡು, ಬಾಳಿಲ, ಕೊಲ್ಲಮೊಗರು, ಮುರುಳ್ಯ ಶೇ. 100 ರಷ್ಟು ಗುರಿಯನ್ನು ಮುಟ್ಟಿದ್ದು ಶೇ. 99 ಸಾಧನೆಯನ್ನು ಕೊಡಿಯಾಳ, ಕಳಂಜ, ಪೆರುವಾಜೆ, ಗುತ್ತಿಗಾರು, ನೆಲ್ಲೂರು ಕೆಮ್ರಾಜೆ, ಸಾಧಿಸಿದ್ದು ದೇವಚಳ್ಳ, ಉಬರಡ್ಕ ಮಿತ್ತೂರು, ಆಲೆಟ್ಟಿ 98 ಹಾಗೂ ಉಳಿದಂತೆ ಅಮರ ಮುಡ್ನೂರು, ಬೆಳ್ಳಾರೆ, ಕನಕಮಜಲು, ಕಲ್ಮಡ್ಕ, ಮಂಡೆಕೋಲು, ಮಡಪ್ಪಾಡಿ, ಹರಿಹರ ಪಳ್ಳತ್ತಡ್ಕ, ಮರ್ಕಂಜ, ಪಂಜ, ಜಾಲ್ಸೂರು ಐವರ್ನಾಡು ಸಾಧಿಸಿದ್ದು ಶೇ.84.17 ತೆರಿಗೆ ಸಂಗ್ರಹದೊಂದಿಗೆ ಅಜ್ಜಾವರ ತಾಲೂಕಿನಲ್ಲಿ ಕೊನೆಯ ಸ್ಥಾನವನ್ನು ಪಡೆದಿದ್ದು ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಶೇ.94.41 ತೆರಿಗೆ ಸಂಗ್ರಹದೊಂದಿಗೆ ಪ್ರಥಮ ಸ್ಥಾನವನ್ನು ಕಾಯ್ದುಕೊಂಡಿದೆ.

ಕಂಬಳ ಕ್ಷೇತ್ರದಲ್ಲಿಯೂ ಪ್ರಸಿದ್ಧಿ ಪಡೆದ ಗಿಳಿಯಾರು 'ಗಾಡಿ ಕೂಸಣ್ಣ' ವಿಧಿವಶ

ಕೋಟ: ಅವಿಭಜಿತ ಜಿಲ್ಲೆಗಳ ಕಂಬಳ ಕ್ಷೇತ್ರದಲ್ಲಿ ಪ್ರಸಿದ್ಧ 'ಗಾಡಿ ಕೂಸಣ್ಣ' ಎಂದೆ ಜನಜನಿತರಾದ ಗಿಳಿಯಾರು ಕೂಸ ಪೂಜಾರಿ (80) ಅನಾರೋಗ್ಯದಿಂದ ಭಾನುವಾರ ನಿಧನರಾದರು.

1970ರ ಕಾಲಘಟ್ಟದಲ್ಲಿ ಎತ್ತಿನಗಾಡಿಯ ಮೂಲಕ ಪ್ರಸಿದ್ಧಿಹೊಂದಿದ ಕೂಸ ಪೂಜಾರಿ ಕೃಷಿ ಕಾಯಕದ ನಡುವೆ ಗಾಡಿ ಕೂಸಣ್ಣ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಆಗಿನ ಕಾಲದಲ್ಲಿ ಎತ್ತಿನಗಾಡಿಯ ಮೂಲಕ ಸಾಕಷ್ಟು ವ್ಯವಹಾರಗಳು ನಡೆಯುತ್ತಿದ್ದು ಇತ್ತೀಚಿಗಿನ ವರ್ಷದಲ್ಲಿ ಪುತ್ರ ಬೋಜ ಪೂಜಾರಿ ಮೂಲಕ ಗಾಡಿ ಕೂಸಣ್ಣ ಎಂಬ ಹೆಸರಿನೊಂದಿಗೆ ಅವಿಭಜಿತ ಜಿಲ್ಲೆಗಳ ಕಂಬಳದ ಮೂಲಕ ಹಲವು ಪ್ರಶಸ್ತಿಗಳನ್ನು ಮುಡಿಗೆರಿಸಿ ಪ್ರಸಿದ್ಧಿ ಪಡೆದಿದ್ದರು.



ಅಲ್ಲದೆ ಗಿರಿಜ ರೋಡ್ ಲೈನ್ಸ್ ಮೂಲಕ ವಾಹನ ಕ್ಷೇತ್ರದಲ್ಲಿ ತನ್ನದೆ ಆದ ಕಾರ್ಯವೈಖರಿಗೆ ಮುನ್ನುಡಿ ಬರೆದ ಕೂಸಣ್ಣ ಪುತ್ರನ ಪ್ರತಿ ಕೈಂಕರ್ಯದಲ್ಲಿ ಭಾಗಿಯಾಗಿದ್ದರು. ಇಂದಿನ ಕಾಲದಲ್ಲಿ ಎತ್ತಿನಗಾಡಿ ಮರೆಯಾದ ಹಿನ್ನಲೆಯಲ್ಲಿ ಇಂದಿನ ಯುವ ಜನಾಂಗಕ್ಕೆ ಕಾರಂತ ಥೀಂ ಪಾರ್ಕ್‌ನಲ್ಲಿ ಗಾಡಿ ಕೂಸಣ್ಣನ ಎತ್ತಿನಗಾಡಿ ಏಕತಾ ಪ್ರತಿಮೆ ಅಳವಡಿಸಿ ಗಾಡಿ ಕೂಸಣ್ಣನ ವಿಚಾರಧಾರೆ ಪಸರಿಸಲು ಸಂಸದ ಕೋಟ ಶ್ರೀನಿವಾಸ ಪೂಜಾರಿಯವರ ವಿಶೇಷ ಮುತುವರ್ಜಿಯಲ್ಲಿ ಅವಳಡಿಸಲಾಗಿದೆ.

ಸಂಸದರ ಕಾಣುವ ಹಂಬಲ

ಸಂಸದ ಕೋಟ ಶ್ರೀನಿವಾಸ ಪೂಜಾರಿಯವರ ಬಗ್ಗೆ ಅಪಾರವಾದ ಅಭಿಮಾನ ಹೊಂದಿದ್ದ ಕೂಸಣ್ಣ ತನ್ನ ಜೀವಿತ ಕೊನೆಯ ದಿನದಲ್ಲಿ ಸಂಸದ ಕೋಟರವರ ಜತೆ ಸಂವಹನ ನಡೆಸುವ ಬಗ್ಗೆ ಪುತ್ರನಲ್ಲಿ ಒತ್ತಡ ಹೇರಿದ್ದರು. ಅದರಂತೆ ಶನಿವಾರ ಸಂಸದ ಕೋಟ ಭೇಟಿ ನೀಡಿ ಅವರ ಆರೋಗ್ಯ ವಿಚಾರಿಸಿದ್ದರು. ಕೂಸಣ್ಣ ಅವರು ಪತ್ನಿ, ಇಬ್ಬರು ಪುತ್ರಿ, ಸಾಲಿಗ್ರಾಮ ಪಟ್ಟಣ ಪಂಚಾಯತ್ ಮಾಜಿ ಸದಸ್ಯ ಭೋಜ ಪೂಜಾರಿ ಸಹಿತ ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಕಿರುಸುದ್ದಿ

ಏ.7: ಸುರೇಂದ್ರನ್ ರೋಡ್ ಶೋ ಅಣ್ಣಾಮಲೈ ಪೆರ್ಲಕ್ಕೆ



ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್ ಅವರ ಚುನಾವಣಾ ರೋಡ್ ಶೋ ಕಾರ್ಯಕ್ರಮವು ಬಹಿರಂಗ ಪ್ರಚಾರದ ಅಂತಿಮ ದಿನವಾದ ಏ.7ರಂದು ಬೆಳಗ್ಗೆ 10 ಗಂಟೆಗೆ ಪೆರ್ಲ ಪೇಟೆಯಲ್ಲಿ ಜರಗಲಿದೆ. ಈ ಕಾರ್ಯಕ್ರಮದಲ್ಲಿ ಬಿಜೆಪಿ ತಮಿಳುನಾಡು ರಾಜ್ಯ ಮಾಜಿ ಅಧ್ಯಕ್ಷ ಕೆ.ಅಣ್ಣಾಮಲೈ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಪಾಲ್ಗೊಳ್ಳುವರು.

ಕಲ್ಲಟ್ರ ಮಾಹಿನ್: ಇಂದು ವಿವಿಧೆಡೆ ಮತ ಪ್ರಚಾರ

ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಅವರ ಮೂರನೇ ಹಂತದ ಚುನಾವಣಾ ಪ್ರವಾಸವು ಏ.6ರಂದು ಚೆಂಗಳ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯಲಿದೆ. ಅದರಂತೆ ಅಪರಾಹ್ನ 3 ಗಂಟೆಗೆ ಆಲಂಪಾಡಿಯಲ್ಲಿ ಪ್ರಚಾರ ಕಾರ್ಯ ಆರಂಭವಾಗಲಿದೆ. 3.30 ನಾಲ್ತಡ್ಕ, 3.45ಕ್ಕೆ ಕಲ್ಲಕಟ್ಟ, ಸಂಜೆ 4ಗಂಟೆಗೆ ಪಯೋಟ, 4.15ಕ್ಕೆ ಹಿಮಾಯತ್ ನಗರ, 4.30 ಎರ್ದುಂಕಡವು, 5ಕ್ಕೆ ಕೋಪ, 5.15ಕ್ಕೆ ಪಡುವಡ್ಕ, 5.30ಕ್ಕೆ ತಾಯಲ್ ನಾಯನ್ಮಾರಮೂಲೆ, 5.45ಕ್ಕೆ ರಹ್ಮಾನಿಯಾ ನಗರ, 6 ಗಂಟೆಗೆ ಪಡಿಂಜಾರ್, 6.15 ನಾಯನ್ಮಾರಮೂಲೆ, 6.30ಕ್ಕೆ ಪಣಲಂಗೆ, 6.45ಕ್ಕೆ ಸಂತೋಷ್‌ನಗರ, ರಾತ್ರಿ 7 ಗಂಟೆಗೆ ಏರಿಯಾಪಾಡಿ, 7.15ಕ್ಕೆ ಎರ್ಮಲಂಗೆ, 7:30ಕ್ಕೆ ತೈವಳಪ್ಪು, 8 ಗಂಟೆಗೆ ರಹಮತ್ ನಗರಕ್ಕೆ ತೆರಳಿ, 8.30ಕ್ಕೆ ಚೆಂಗಳದಲ್ಲಿ ಮುಕ್ತಾಯಗೊಳ್ಳಲಿದೆ.

ಕಾಸರಗೋಡು ಜಿಲ್ಲೆಯಲ್ಲಿ 'ಮನೆಯಲ್ಲೇ ಮತದಾನ' ಪೂರ್ಣ

98.11% ಹಕ್ಕು ಚಲಾವಣೆ

ಕಾಸರಗೋಡು: 2026ನೇ ಕೇರಳ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಮತಗಟ್ಟೆ ಅಧಿಕಾರಿಗಳು ಮತದಾರರ ಮನೆಗಳಿಗೆ ಭೇಟಿ ನೀಡಿ ಮತಗಳನ್ನು ನೋಂದಾಯಿಸುವ ಕಾರ್ಯವಾದ ಮನೆಯಲ್ಲೇ ಮತ ಚಲಾಯಿಸಿ ಸೇವೆ ಪೂರ್ಣಗೊಂಡಿದೆ. ಜಿಲ್ಲೆಯಲ್ಲಿ 6679 ಜನರು ಮನೆಯಲ್ಲಿಯೇ ಮತ ಚಲಾಯಿಸಿದ್ದಾರೆ. ಈ ಮೂಲಕ ಮತದಾನದ ಪ್ರಮಾಣ ಶೇಕಡಾ 98.11 ಆಗಿದೆ.

ದಿವ್ಯಾಂಗರು ಮತ್ತು 85 ವರ್ಷ ಮೇಲ್ಪಟ್ಟವರು ಮನೆಯಿಂದಲೇ ಮತ ಚಲಾಯಿಸಲು ಅವಕಾಶ ನೀಡಲಾಗಿತ್ತು. ಜಿಲ್ಲೆಯಲ್ಲಿ 85 ವರ್ಷ ಮೇಲ್ಪಟ್ಟ 3189 ಮಂದಿ ಮತದಾರರು ಮತ್ತು 3490 ದಿವ್ಯಾಂಗ ವಲಯದ ಮತದಾರರು ಮನೆಯಿಂದಲೇ ಮತ ಚಲಾಯಿಸಿದ್ದಾರೆ.

ಮಂಜೇಶ್ವರ ಕ್ಷೇತ್ರದಲ್ಲಿ 85 ವರ್ಷ ಮೇಲ್ಪಟ್ಟ 341 ಜನರು ಮತ್ತು 642 ದಿವ್ಯಾಂಗರು ಮನೆಯಲ್ಲಿಯೇ ಮತ ಚಲಾಯಿಸಿದ್ದಾರೆ. ಕಾಸರಗೋಡು ಕ್ಷೇತ್ರದಲ್ಲಿ 85 ವರ್ಷ ಮೇಲ್ಪಟ್ಟ 344 ಜನರು ಮತ್ತು 540 ದಿವ್ಯಾಂಗರು ಮನೆಯಲ್ಲಿಯೇ ಮತ ಚಲಾಯಿಸಿದ್ದಾರೆ.

ಉದುಮ ಕ್ಷೇತ್ರದಲ್ಲಿ 85 ವರ್ಷ ಮೇಲ್ಪಟ್ಟ 648 ಜನರು ಮತ್ತು 879 ದಿವ್ಯಾಂಗರು, ಕಾಞಂಗಾಡು ಕ್ಷೇತ್ರದಲ್ಲಿ 85 ವರ್ಷ ಮೇಲ್ಪಟ್ಟ 923 ಜನರು ಮತ್ತು 718 ದಿವ್ಯಾಂಗರು, ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದಲ್ಲಿ 85 ವರ್ಷ ಮೇಲ್ಪಟ್ಟ 933 ಜನರು ಮತ್ತು 711 ದಿವ್ಯಾಂಗರು ಮನೆಯಲ್ಲಿಯೇ ಮತ ಚಲಾಯಿಸಿದರು.

ಇಬ್ಬರು ಮತಗಟ್ಟೆ ಅಧಿಕಾರಿಗಳು, ಒಬ್ಬ ಮೈಕ್ರೋ ವೀಕ್ಷಕ, ಒಬ್ಬ ವಿಡಿಯೋಗ್ರಾಫರ್, ಒಬ್ಬ ಪೊಲೀಸ್ ಅಧಿಕಾರಿ ಮತ್ತು ಒಬ್ಬ ಬೂತ್ ಮಟ್ಟದ ಅಧಿಕಾರಿಯನ್ನು ಒಳಗೊಂಡ ತಂಡವು ಮನೆಯಲ್ಲಿ ಮತದಾನದ ಭಾಗವಾಗಿ ಮನೆಗಳಿಗೆ ಭೇಟಿ ನೀಡಿದೆ.



ಜಿಲ್ಲೆಯಲ್ಲಿ 85 ವರ್ಷ ಮೇಲ್ಪಟ್ಟ 3281 ಮಂದಿಗೆ ಮತ್ತು 3529 ಮಂದಿ ದಿವ್ಯಾಂಗ ವಲಯದ ವರಿಗೆ ಮನೆಯಲ್ಲಿಯೇ ಮತ ಚಲಾಯಿಸಲು ಅವಕಾಶ ನೀಡಲಾಗಿತ್ತು. ವಿವಿಧ ಕಾರಣಗಳಿಂದ ಕೆಲವು ಮತದಾರರು ಮನೆ ಮತದಾನ ಸೇವೆಯಲ್ಲಿ ಮತ ಚಲಾಯಿಸಲು ಸಾಧ್ಯವಾಗಲಿಲ್ಲ ಎಂದು ನೋಡಲ್ ಅಧಿಕಾರಿ ಸುನೀಲ್ ಎಂ.ನಾಯರ್ ತಿಳಿಸಿದ್ದಾರೆ.



ಇಂದು ಚುನಾವಣಾ ಮಾರ್ಗದರ್ಶಿ ಬಿಡುಗಡೆ

ಕಾಸರಗೋಡು ಜಿಲ್ಲಾ ಮಾಹಿತಿ ಕಚೇರಿ (ಎಂಸಿಎಂಸಿ) ಹೊರ ತಂದಿರುವ ವಿಧಾನಸಭಾ ಚುನಾವಣಾ ಮಾರ್ಗದರ್ಶಿಯನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಏ.6ರಂದು ಬಿಡುಗಡೆ ಮಾಡಲಿದ್ದಾರೆ. ಬೆಳಗ್ಗೆ 10.30ಕ್ಕೆ ಜಿಲ್ಲಾಧಿಕಾರಿಗಳ ಕೊಠಡಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಎಡಿಎಂ ಕೆ.ವಿ.ಶ್ರುತಿ, ಚುನಾವಣಾ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್ ಮತ್ತು ವಿವಿಧ ಕ್ಷೇತ್ರಗಳ ಚುನಾವಣಾ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಇಂದು ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ

ಕಾಸರಗೋಡು: ವಿಧಾನ ಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಮಾ.31, ಏ.1 ಮತ್ತು ಏ.4 ರಂದು ಮತಗಟ್ಟೆ ಅಧಿಕಾರಿಗಳಿಗೆ ನಡೆಸಲಾದ ಚುನಾವಣಾ ತರಬೇತಿಗೆ ಹಾಜರಾಗಲು ಸಾಧ್ಯವಾಗದವರಿಗೆ ತರಬೇತಿಯು ಏ.6ರಂದು ಬೆಳಗ್ಗೆ 9.30ಕ್ಕೆ ಕಲೆಕ್ಟರೇಟ್‌ನ ಮುಖ್ಯ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ.

ಕಾಸರಗೋಡು ಎನ್‌ಡಿಎ ಅಭ್ಯರ್ಥಿಗೆ ರಾಘವೇಶ್ವರ ಶ್ರೀ ಅನುಗ್ರಹ ಮಂತ್ರಾಕ್ಷತೆ



ಕಾಸರಗೋಡು: ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಯವರನ್ನು ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಜಿಲ್ಲಾಧ್ಯಕ್ಷೆ ಅಶ್ವಿನಿ ಎಂ.ಎಲ್. ಅವರು ಭೇಟಿ ಮಾಡಿ ಆಶೀರ್ವಾದ ಪಡೆದುಕೊಂಡರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸಂದರ್ಭ ಶ್ರೀ ಕ್ಷೇತ್ರಕ್ಕೆ ಆಗಮಿಸಿದ್ದ ಶ್ರೀಗಳನ್ನು ಕ್ಷೇತ್ರದ ಸಮೀಪ ಶ್ರೀ ಸವಾರಿಯ ಮೊಕ್ಕಾಂ ನಿವಾಸದಲ್ಲಿ ಭಾನುವಾರ ಭೇಟಿಯಾಗಿ ಪಾದುಕಾ ಪೂಜೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಶ್ರೀಗಳು ಅನುಗ್ರಹ ಮಂತ್ರಾಕ್ಷತೆಯನ್ನಿತ್ತು ಹರಸುತ್ತಾ ಕೇರಳ ರಾಜ್ಯದ ರಾಜಕೀಯದಲ್ಲಿ ಬದಲಾವಣೆಯ ಪರ್ವದ ಲಕ್ಷಣಗಳು ಗೋಚರಿಸುತ್ತಿವೆ. ಅನಿವಾರ್ಯವೂ ಹೌದು. ಗೋ ಸಂರಕ್ಷಣೆ ಹಾಗೂ ಹಿಂದು ಧಾರ್ಮಿಕ ಹಿತರಕ್ಷಣೆಯನ್ನು ಕಾಪಾಡುವಂತಹ ಜನರು ಆಯ್ಕೆಯಾಗಬೇಕು ಎಂದು ತಿಳಿಸಿದ ಅವರು ಸಮಾಜದ ಪೂರ್ಣ ಬೆಂಬಲ ಹಾಗೂ ಶ್ರೀ ಪೀಠದ ಅನುಗ್ರಹ ಸದಾ ಜೊತೆಗಿದೆ ಎಂದು ಮಂತ್ರಾಕ್ಷತೆಯನ್ನಿತ್ತು ಹರಸಿದರು.

ಈ ಸಂದರ್ಭದಲ್ಲಿ ಶ್ರೀ ಮಠದ ಕಾನೂನು ವಿಭಾಗದ ವಕೀಲ ಅರುಣ ಶ್ಯಾಮ, ಮುಳ್ಳೇರಿಯ ಮಂಡಲದ ಮಹೇಶ ಸರಳಿ, ಬಿಜೆಪಿ ಬದಿಯಡ್ಕ ಪಂಚಾಯತ್ ಸಮಿತಿ ಅಧ್ಯಕ್ಷ ಮಹೇಶ್ ವಳಕ್ಕುಂಜ ಮತ್ತಿತರರು ಜೊತೆಗಿದ್ದರು.

ಮಂದಿರ, ಮಸೀದಿ, ಚರ್ಚ್‌ಗಳಿಗೆ ಭೇಟಿ, ಕ್ರಿಕೆಟ್ ಪಂದ್ಯಾಟಕ್ಕೆ ಚಾಲನೆ

ಕಾಸರಗೋಡು: ಕಾಸರಗೋಡು ವಿಧಾನಸಭಾಕ್ಷೇತ್ರದಎನ್‌ಡಿಎಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಭಾನುವಾರ ತಳಂಗರೆ ಮಾಲಿಕ್ ದಿನಾರ್ ಜುಮಾ ಮಸೀದಿಗೆ ಭೇಟಿ ನೀಡಿದರು. ನಂತರ ಕಾಸರಗೋಡು ನಗರದ ವ್ಯಾಕುಲ ಮಾತಾ ಕ್ರಿಶ್ಚಿಯನ್ ಚರ್ಚ್, ನುಳ್ಳಿಪಾಡಿ ಶ್ರೀ ಅಯ್ಯಪ್ಪ ಭಜನಾ ಮಂದಿರ, ಮಾತಾ ಅಮೃತಾನಂದ ಮಯಿ ಮಠ ಮತ್ತು ಅಣಂಗೂರು ಶ್ರೀ ಧೂಮಾವತಿ ದೈವಸ್ಥಾನಕ್ಕೆ ಭೇಟಿ ನೀಡಿದರು.

ಬಳಿಕ ಕೂಡ್ಲು ರಾಮದಾಸನಗರ ಗೆಳೆಯರ ಬಳಗದ ವತಿಯಿಂದ ನಡೆದ 9ನೇ ಸ್ವರ್ಗೀಯ ಅಶೋಕ್ ಶೆಟ್ಟಿ ಸ್ಮಾರಕ ಅಂಡರ್ ಆರ್ಮ್ ಕ್ರಿಕೆಟ್ ಪಂದ್ಯಾವಳಿಯನ್ನು ಎಂ.ಎಲ್.ಅಶ್ವಿನಿ ಉದ್ಘಾಟಿಸಿ ಮಾತನಾಡಿದರು. ನಂತರ ಪಿಲಾಂಕಟ್ಟೆ ಎಸ್‌ಸಿ ಉನ್ನತಿಯಲ್ಲಿ ಮತ ಯಾಚಿಸಿದರು. ಬಿಜೆಪಿ ರಾಜ್ಯ ಪರಿಷತ್ ಸದಸ್ಯ ಹರೀಶ್ ನಾರಂಪಾಡಿ, ಜಿಲ್ಲಾ ಸೆಲ್ ಸಂಯೋಜಕ ಸುಕುಮಾ ಕುದ್ರೆಪ್ಪಾಡಿ, ಕಾಸರಗೋಡು ಮಂಡಲ ಅಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು, ಪ್ರಧಾನ ಕಾರ್ಯದರ್ಶಿ ಶ್ರೀಧರ ಕೂಡ್ಲು, ನವನೀತ ರೈ, ನಗರಸಭಾ ಮಾಜಿ ಸದಸ್ಯರಾದ ಶರತ್ ಅಮೈ, ಕೆ.ಶಂಕರ, ಶಶಿಕುಮಾರ್ ಮನ್ನಿಪ್ಪಾಡಿ, ಚೈತ್ರೇಶ್ ನೆಕ್ರಾಜೆ, ಮೋಹನ್ ಶೆಟ್ಟಿ, ದೇವಿಪ್ರಸಾದ್, ಸುನೀಲ್ ಕುಮಾರ್, ಜಯಚಂದ್ರ, ಚಿತ್ರಕಲಾ, ಪ್ರದೀಪ್ ಮುಂತಾದವರು ಅಭ್ಯರ್ಥಿ ಜೊತೆಗಿದ್ದರು.





ಈ ಬಾರಿ ಕೆ. ಸುರೇಂದ್ರನ್: ಜಾಲತಾಣಗಳಲ್ಲಿ ವೈರಲ್!

ಮಂಜೇಶ್ವರ: ತಿರುವನಂತಪುರದ ಕೋವಳಂ ಅರಮನೆ ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರು ಬಿಜೆಪಿ ಮುಖಂಡ ಕೆ.ಸುರೇಂದ್ರನ್ ಅವರನ್ನು ಸುತ್ತುವರಿದು ಥಳಿಸಿದ ಘಟನೆಯಿಂದ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರಿಂದ ಮತ ಯಾಚಿಸುವವರೆಗೆ ಕೇವಲ ಎರಡು ನಿಮಿಷಗಳಲ್ಲಿ ಅವರ ಜೀವನ ಚರಿತ್ರೆಯನ್ನು ಚಿತ್ರಿಸುವ ಕೃತಕ ಬುದ್ಧಿಮತ್ತೆಯ ವಿಡಿಯೋ (ಚುನಾವಣಾ ಥೀಮ್ ಸಾಂಗ್) ಸಾಮಾಜಿಕ ಜಾಲತಾಣದಲ್ಲಿ ಭಾರೀ ಟ್ರೆಂಡಿಂಗ್ ಆಗುತ್ತಿದೆ.

ಕೆ.ಸುರೇಂದ್ರನ್ ಅವರ ಚುನಾವಣಾ ಗೀತೆ ಕಾವ್ಯನೀತಿಯನ್ನು 12 ಗಂಟೆಗಳಲ್ಲಿ 10 ಲಕ್ಷ ಜನರು ವೀಕ್ಷಿಸಿದ್ದಾರೆ. ಬೆಂಗಳೂರು ಸಂಸದ ತೇಜಸ್ವಿ ಸೂರ್ಯ, ತಿರುವನಂತಪುರ ಮೇಯರ್ ವಿ.ವಿ.ರಾಜೇಶ್, ಮಂಗಳೂರು ಉತ್ತರ ಶಾಸಕ ಡಾ.ವೈ.ಭರತ್ ಶೆಟ್ಟಿ ಮತ್ತು ಇತರರು ಈ ವಿಡಿಯೋವನ್ನು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಹಂಚಿಕೊಂಡಿದ್ದಾರೆ.

ಯುವಮೋರ್ಚಾ ಸಂದರ್ಭದ ಹೋರಾಟಗಳು, ಶಬರಿಮಲೆಗೆ ಮಹಿಳೆಯರ ಪ್ರವೇಶದ ವಿರುದ್ಧದ ಆಂದೋಲನ ಮತ್ತು ಪ್ರಧಾನಮಂತ್ರಿ ಹಾಗೂ ಕೇಂದ್ರ ಗೃಹ ಸಚಿವರಂತಹ ರಾಷ್ಟ್ರೀಯ ನಾಯಕರೊಂದಿಗಿನ ಚಿತ್ರಗಳನ್ನು ಸಂಯೋಜಿಸಿ ಈ ವಿಡಿಯೋವನ್ನು ಕೃತಕ ಬುದ್ಧಿಮತ್ತೆ ಬಳಸಿ ಚಿತ್ರೀಕರಿಸಲಾಗಿದೆ.



2016ರಲ್ಲಿ ಕೆ.ಸುರೇಂದ್ರನ್ ಅವರನ್ನು 89 ಮತಗಳಿಂದ ಸೋಲಿಸಿದ್ದಕ್ಕಾಗಿ ಮಂಜೇಶ್ವರದ ಜನರಿಗೆ ಸೇಡು ತೀರಿಸಿಕೊಳ್ಳಲು ಈ ಚುನಾವಣೆ ಒಂದು ಅವಕಾಶ ಎಂದು ಹೇಳಲಾಗಿದೆ. ಈ ಬಾರಿ ಕೆ.ಸುರೇಂದ್ರನ್ ಎಂಬ ಕನ್ನಡ ಶೀರ್ಷಿಕೆಯೊಂದಿಗೆ ಬಿಡುಗಡೆಯಾದ ಕೆ.ಸುರೇಂದ್ರನ್ ಅವರ ಜೀವನ ಚರಿತ್ರೆಯ ವಿಡಿಯೋ ಕರ್ನಾಟಕದಲ್ಲಿಯೂ ಹಿಟ್ ಆಗಿದೆ. ಈ ವಿಡಿಯೋವನ್ನು ಪತ್ರಕರ್ತ ಎಂ.ಸುವರ್ಣ ಪ್ರಸಾದ್ ಮತ್ತು ಬೆಂಗಳೂರಿನ ಐಟಿ ವಲಯದಲ್ಲಿ ಕೆಲಸ ನಿರ್ವಹಿಸುವ ಅರವಿಂದ ಮೈಲಕ್ಕರ ರಚಿಸಿದ್ದಾರೆ.

ಕಾಸರಗೋಡಿನಾದ್ಯಂತ ಕೊಡ್ಗಿ ಬಿರುಸಿನ ಚುನಾವಣಾ ಪ್ರಚಾರ

ಕುಂದಾಪುರ: ಕೇರಳ ರಾಜ್ಯದ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಕಾಸರಗೋಡು ಬಿಜೆಪಿ ಅಭ್ಯರ್ಥಿಯ ಪರ ಕುಂದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ನೇತೃತ್ವದಲ್ಲಿ ಭಾನುವಾರ ಕಾಸರಗೋಡು ಬಿಜೆಪಿ ಅಭ್ಯರ್ಥಿಯ ಪರ ಚುನಾವಣಾ ಪ್ರಚಾರ ನಡೆಸಲಾಯಿತು.

ಕಾಸರಗೋಡು ಬಿಜೆಪಿ ಜಿಲ್ಲಾ ಕಚೇರಿಗೆ ಭೇಟಿ ನೀಡಿದ ಶಾಸಕರ ನೇತೃತ್ವದ ತಂಡ ಅಲ್ಲಿಯ ಕಾರ್ಯಕರ್ತರೊಂದಿಗೆ ಮಾತುಕತೆ ನಡೆಸಿದರು. ತದನಂತರ ವಿವಿಧ ಭಾಗಗಳಲ್ಲಿ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ, ಕುಂದಾಪುರ ಕ್ಷೇತ್ರದ ಅಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ, ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್., ನಿಕಟಪೂರ್ವ ಬಿಜೆಪಿ ಅಧ್ಯಕ್ಷ ಶಂಕರ್ ಅಂಕದಕಟ್ಟೆ ನೇತೃತ್ವದಲ್ಲಿ ಮೂರು ಪ್ರತ್ಯೇಕ ತಂಡಗಳಾಗಿ ಬಿಜೆಪಿ ಅಭ್ಯರ್ಥಿ ಅಶ್ವಿನಿ ಎಂ.ಎಲ್. ಪರವಾಗಿ ಚುನಾವಣಾ ಪ್ರಚಾರವನ್ನು ಮಾಡಿದರು.

ಈ ಚುನಾವಣಾ ಪ್ರಚಾರದಲ್ಲಿ ಉಡುಪಿ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸುರೇಶ್ ಶೆಟ್ಟಿ ಕಾಡೂರು, ಬಿಜೆಪಿ ಮಂಗಳೂರು ನಿಕಟಪೂರ್ವ ಸಹಪ್ರಭಾರಿ ರಾಜೇಶ್ ಕಾವೇರಿ, ಮಂಡಲ ಉಪಾಧ್ಯಕ್ಷ ಸುನೀಲ್ ಶೆಟ್ಟಿ ಹೇರಿಕುದ್ರು, ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ, ಪ್ರಧಾನ ಕಾರ್ಯದರ್ಶಿ ಅಭಿಜಿತ್ ಸುವರ್ಣ, ಮಂಡಲ ಕಾರ್ಯದರ್ಶಿ ರಾಜೇಶ್ ಶೆಟ್ಟಿ, ಬಿಜೆಪಿ ಒಬಿಸಿ ಅಧ್ಯಕ್ಷ ಸುರೇಂದ್ರ ಕಾಂಚನ್ ಸಂಗಮ್, ಪಕ್ಷದ ಪ್ರಮುಖರಾದ ಸಂಪತ್ ಶೆಟ್ಟಿ, ರಾಜು ಪೂಜಾರಿ ಸಾಲಿಗ್ರಾಮ, ರಾಜೇಶ್ ಉಡುಪ, ಸಂತೋಷ್ ಶೆಟ್ಟಿ, ದಿವಾಕರ ಕಡ್ಗಿ, ರಾಮಣ್ಣ ಹೆಗ್ಡೆ, ಮಂಜುನಾಥ್ ಪೂಜಾರಿ, ಜಯಪ್ರಕಾಶ್ ಶೆಟ್ಟಿ, ಪುರಸಭಾ ಮಾಜಿ ಸದಸ್ಯರಾದ ಸಂದೀಪ್ ಖಾರ್ವಿ, ಸಂತೋಷ್ ಶೆಟ್ಟಿ, ಸಂದೇಶ್ ಮೂಡಗೋಪಾಡಿ, ನವೀನ್ ಕಡ್ಗಿ ಶಾಸಕರ ಆಪ್ತ ಸಹಾಯಕ ಹರ್ಷ ಪೂಜಾರಿ ಪಾಲ್ಗೊಂಡಿದ್ದರು.





ಸೂಪರ್ ಕಿಂಗ್ಸ್‌ಗೆ 251 ರನ್ ಗುರಿ | ಒಂದೇ ಪಂದ್ಯ 19 ಸಿಕ್ಸರ್

ಚೆನ್ನೈಗೆ ಡೆವಿಡ್ ಪಂಚ್



ಚಿತ್ರ: ಲೋಕೇಶ್ ಕುಮಾರ್ ಬಿ. ಎನ್

ಬೆಂಗಳೂರು: ಇನ್ನಿಂಗ್ಸ್ ಉದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದ ಆರ್‌ಸಿಬಿ ಬ್ಯಾಟಿಂಗ್ ಪಡೆ ಐಪಿಎಲ್‌ನ ತಮ್ಮ ಎರಡನೇ ಪಂದ್ಯದಲ್ಲಿ ಚೆನ್ನೈ ವಿರುದ್ಧ ಮೂರನೇ ಅತಿ ಹೆಚ್ಚು ಸ್ಕೋರ್ ಮಾಡಿತು.

ಮೊದಲಿಗೆ ಕೊಹ್ಲಿ, ನಂತರ ಪಡಿಕ್ಕಲ್, ಕೊನೆಯಲ್ಲಿ ಪಾಟಿದಾರ್ ಮತ್ತು ಡೆತ್ ಓವರ್‌ಗಳಲ್ಲಿ ಡೆವಿಡ್? ಹೀಗೆ ಬಂದ ಬ್ಯಾಟರ್‌ಗಳು ಚೆನ್ನೈ ತಂಡವನ್ನು ದಂಡಿಸುತ್ತಿದ್ದರೆ ಚೆನ್ನೈ ನೋಡುತ್ತಾ ನಿಂತಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬರೋಬ್ಬರಿ 250 ರನ್ ಚಚ್ಚಿತು. ಚೆನ್ನೈ ಕೇವಲ 3 ವಿಕೆಟ್ ಪಡೆಯಿತು.

ಆರ್‌ಸಿಬಿ 19 ಸಿಕ್ಸರ್‌ಗಳನ್ನು ಬಾರಿಸಿತು. ಇದರಲ್ಲಿ ಡೆವಿಡ್ 8 ಬಾರಿಸಿದರೆ ಪಾಟಿದಾರ್ 6 ಸಿಕ್ಸರ್‌ಗಳನ್ನು ಬಾರಿಸಿದರು. ಆರ್‌ಸಿಬಿ ತನ್ನ ಮೂರನೇ ಅತಿ ಹೆಚ್ಚು ರನ್ ಬಾರಿಸಿದೆ.

ದಂಡಿಸಿದ ದಾಂಡಿಗರು: ಟಾಸ್ ಸೋಲಿನೊಂದಿಗೆ ಬ್ಯಾಟಿಂಗ್‌ಗಿಳಿದ ಬೆಂಗಳೂರು ನಿರೀಕ್ಷಿತ ಆರಂಭ ಪಡೆಯಲಿಲ್ಲ. ಮೊದಲನೇ ಬೌಂಡರಿ ಗಳಿಸಲು 20 ಎಸೆತ ಎದುರಿಸಿತು. ಅದಕ್ಕೂ ಹೆಚ್ಚಾಗಿ ಮೊದಲ ಓವರ್‌ನಲ್ಲೇ ಕೊಹ್ಲಿ ರನೌಟ್‌ನಿಂದ ಪಾರಾದರು. ಎರಡನೇ ಓವರ್‌ನಲ್ಲಿ ದುಬೆಯಿಂದ ಜೀವದಾನ ಪಡೆದರು. ಆದಾಗ್ಯೂ ಅವರ ಬ್ಯಾಟ್‌ನಿಂದ ಬಂದಿದ್ದು 28 ರನ್ ಮಾತ್ರ! ಇತ್ತ ಸೆಟ್ ಆಗುವ ಔಪಚಾರಿಕತೆಗೆ ಬಿದ್ದ ಸಾಲ್ಟ್, ಬಿರುಸಿನ ಬ್ಯಾಟಿಂಗ್‌ಗೆ ಮುಂದಾಗಲೇ ಇಲ್ಲ. ಮೂರನೇ ಕ್ರಮಾಂಕದಲ್ಲಿ ಬಂದ ಪಡಿಕ್ಕಲ್ ಸಿಂಗಲ್-ಟುಡಿಗಳ ಮುಲಾಜಿಗೆ ಬಿದ್ದರು. ಪವರ್‌ಪ್ಲೇನಲ್ಲಿ ಆರ್‌ಸಿಬಿ 51 ರನ್ ಗಳಿಸಿತು.

ಪವರ್‌ಪ್ಲೇ ಮುಗಿದ ನಂತರ ಪಡಿಕ್ಕಲ್ ಹಾಗೂ ಸಾಲ್ಟ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಈ ಜೋಡಿ 56 ರನ್ ಗಳಿಸಿತು. ಸೆಟ್ ಆಗಿದ್ದ ಸಾಲ್ಟ್ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗುತ್ತಿದ್ದಂತೆ 46 ಗಳಿಸಿದ್ದಾಗ ಕ್ಯಾಚ್ ಆದರು. ಅವರ ಇನ್ನಿಂಗ್ಸ್‌ನಲ್ಲಿ 2 ಸಿಕ್ಸ್ ಮತ್ತು 3 ಫೋರ್‌ಗಳು ಸೇರಿವೆ.

ರಜತ್-ಪಡಿಕ್ಕಲ್ ಅಬ್ಬರ: ಸ್ಲಾಗ್ ಓವರ್‌ಗಳಲ್ಲಿ ಒಂದಾದ ಪಡಿಕ್ಕಲ್ ಮತ್ತು ಪಾಟಿದಾರ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮೊದಲಿನಿಂದಲೂ ವಿಕೆಟ್ ಬಿದ್ದ ಒತ್ತಡ ಎದುರಿಸುತ್ತಿದೆ ಅನ್ನಿಸಲೇ ಇಲ್ಲ. ಮೈದಾನದ ಪ್ರತಿ ದಿಕ್ಕಿಲ್ಲೂ ಚಚ್ಚಿದ ಈ ಜೋಡಿ ಸರಸರನೇ ರನ್ ಗಳಿಸಿತು. ಕೇವಲ 17 ಬಾಲ್‌ಗಳಲ್ಲೇ 50 ರನ್ ನಿರ್ಮಿಸಿತು. ಇನ್ನೇನು ಸೆಟ್ ಆದರು, ಒಂದು ಹಂತದಲ್ಲಿ ಮುನ್ನಡೆಯಲ್ಲಿದ್ದ ಚೆನ್ನೈ ತಂಡ ಸಂಕಷ್ಟಕ್ಕೆ ಸಿಲುಕಿಕೊಂಡಿತು ಅನ್ನುವಷ್ಟರಲ್ಲಿ 15ನೇ ಓವರ್ ಬೌಲಿಂಗ್ ಮಾಡಲು ಬಂದ ಜಿಮ್ಮಿ ಓವರ್‌ಟನ್ ಮೊದಲ ಬಾಲ್ ಅನ್ನೇ ಆಡಲಾಗದ ಯಾರ್ಕರ್ ಎಸೆದರು. ಪಡಿಕ್ಕಲ್ ಪೆವಿಲಿಯನ್ ಹಾದಿ ಹಿಡಿದರು.

ಮತ್ತೆ ಪಡಿಕ್ಕಲ್ ಪರಾಕ್ರಮ: ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬಂದಿದ್ದ ಅಭಿಮಾನಿಗಳನ್ನು ಪಡಿಕ್ಕಲ್ ರಂಜಿಸಿದರು. ಕಳೆದ ಪಂದ್ಯದಲ್ಲೂ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅರ್ಧಶತಕ ಬಾರಿಸಿದ್ದ ಅವರು ಈ ಪಂದ್ಯದಲ್ಲೂ 50 ರನ್ ಬಾರಿಸಿದರು. ಈ ಇನ್ನಿಂಗ್ಸ್‌ನಲ್ಲಿ5 ಬೌಂಡರಿ ಮತ್ತು 2 ಸಿಕ್ಸರ್‌ಗಳು ಸೇರಿವೆ.

ಪಾಟಿದಾರ್ ಬಿರುಸಿನಾಟ: ಮಧ್ಯಮ ಕ್ರಮಾಂಕದಲ್ಲಿ ಬಂದ ಪಾಟಿದಾರ್ ಈ ಬಾರಿ ಸ್ಕೋರ್ ಹಿಗ್ಗಿಸುವ ಜವಾಬ್ದಾರಿ ನಂದೆಂದರು. ಮೊದಲನೇ ಎಸೆತದಿಂದಲೂ ಅವರು ಸ್ಫೋಟಕ ಬ್ಯಾಟಿಂಗ್‌ಗೆ ಯತ್ನಿಸಿದರು. ಗಗನದೆತ್ತರ ಸಿಕ್ಸರ್ ಬಾರಿಸುತ್ತಾ, ಚಾಣಾಕ್ಷ್ಯ ಮತ್ತು ಕ್ಲಾಸಿಕ್ ಬೌಂಡರಿಗಳನ್ನು ಬಾರಿಸುತ್ತಾ 50 ರನ್ ಪೂರೈಸಿದರು. ಅವರಿಗೆ ಟೀಮ್ ಡೆವಿಡ್ ಸಾಥ್ ಸಿಕ್ಕಿತು. ಸ್ವಲ್ಪ ಸಮಯದ ನಂತರ ಅವರೂ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಒಟ್ಟು 19 ಎಸೆತ ಎದುರಿಸಿದ ಅವರು ಔಟಾಗದೆ 48 ರನ್ ಗಳಿಸಿದರು.



ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ ಎಂಡ್ ಅನಾವರಣ

ಪಂದ್ಯಕ್ಕೂ ಮುನ್ನ ಕ್ರಿಕೆಟ್ ಗೋಡೆ, ಕನ್ನಡಿಗ ರಾಹುಲ್ ದ್ರಾವಿಡ್ ಹಾಗೂ ಜಂಬೋ ಖ್ಯಾತಿಯ ಅನಿಲ್ ಕುಂಬ್ಳೆ ಎಂಡ್‌ಗಳ ಅನಾವರಣ ಮಾಡಲಾಯಿತು. ಕ್ರೀಡಾಂಗಣದ ಎರಡೂ ಪೆವಿಲಿಯನ್ ಎಂಡ್‌ಗಳಿಗೂ ಒಬ್ಬೊಬ್ಬರ ಹೆಸರನ್ನು ಇಡಲಾಗಿದೆ. ಟಾಸಿಗೂ ಮುನ್ನವೇ ದ್ರಾವಿಡ್, ಕುಂಬ್ಳೆ, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಸೇರಿದಂತೆ ವಿವಿಧ ಗಣ್ಯರ ಉಪಸ್ಥಿತಿಯಲ್ಲಿ ಅನಾವರಣ ಕಾರ್ಯಕ್ರಮ ಮಾಡಲಾಯಿತು.

ಸಿಕ್ಸರ್‌ಗಳ ಸುರಿಮಳೆಗೈದ ಡೆವಿಡ್

ಇನ್ನು ಡೆತ್ ಓವರ್‌ಗಳಲ್ಲಿ ಸಿಕ್ಸರ್‌ಗಳ ಸುರಿಮಳೆಗೈದ ಟೀಮ್ ಡೆವಿಡ್ ತಂಡದ ಮೊತ್ತ ಹಿಗ್ಗಿಸಿದ್ದಲ್ಲದೆ, ಚೆನ್ನೈ ಸೂಪರ್ ಕಿಂಗ್ಸ್ ತಂಡದ ಯೋಜನೆಗಳನ್ನೇಲ್ಲಾ ಮುರಿದು ಹಾಕಿದರು. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸಿದರು. ಗಗನದೆತ್ತದ ಸಿಕ್ಸರ್‌ಗಳನ್ನು ಬಾರಿಸಿದರು. ಇನ್ನಿಂಗ್ಸ್‌ನಲ್ಲಿ 25 ಬಾಲ್ ಎದುರಿಸಿದರು. ಆದರಲ್ಲಿ 8 ಸಿಕ್ಸರ್‌ಗಳು! ಒಟ್ಟು 75 ರನ್ ಗಳಿಸಿದ ಅವರು 250 ರನ್ ಗಡಿ ದಾಟಿಸಿದರು. ಪಾಟಿದಾರ್ ಔಟಾಗದೆ 48 ರನ್ ಗಳಿಸಿದರು.

ಲಖನೌ ಸೂಪರ್‌ಗೆ ಮೊದಲ ಗೆಲುವು | ಹೈದರಾಬಾದ್‌ಗೆ ನಿರಾಸೆ

ಪಂತ್ ತಾಳ್ಮೆಯಾಟಕ್ಕೆ ಜಯ

ಹೈದರಾಬಾದ್: ಮೊಹಮ್ಮದ್ ಶಮಿ ಸೇರಿದಂತೆ ತಂಡದ ವೇಗಿಗಳ ಮಾರಕ ಬೌಲಿಂಗ್ ದಾಳಿ ಹಾಗೂ ರಿಷಭ್ ಪಂತ್ ಅವರ ಸಮಯೋಚಿತ ಬ್ಯಾಟಿಂಗ್ ಪರಿಣಾಮ ಲಖನೌ ಸೂಪರ್ ಜೇಂಟ್ಸ್ ತಂಡ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ 5 ವಿಕೆಟ್‌ಗಳಿಂದ ಗೆಲುವು ಸಾಧಿಸಿದೆ.

ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸೂಪರ್ ವಿಕೆಂಡ್‌ನ ಮೊದಲ ಪಂದ್ಯದಲ್ಲಿ ಎದುರಾಗಿದ್ದ ಹೈದರಾಬಾದ್ ಬ್ಯಾಟಿಂಗ್‌ನಲ್ಲಿ ವೈಫಲ್ಯ ಕಂಡಿತು. ನಂತರ ಬೌಲಿಂಗ್ ವೇಳೆ ಒತ್ತಡ ಹೇರಲು ಪ್ರಯತ್ನಿಸಿದರೂ ಗೆಲ್ಲಲು ಬೇಕಾದ ಆವೇಗ ಪಡೆಯದೇ ಸೋಲೊಪ್ಪಿಕೊಂಡಿತು.

ಟಾಸ್ ಗೆದ್ದ ರಿಷಭ್ ಪಂತ್ ಬೌಲಿಂಗ್ ಆಯ್ಕೆ ಮಾಡಿಕೊಂಡರು. ಮೊಹಮ್ಮದ್ ಶಮಿ, ಪ್ರಿನ್ಸ್ ಯಾದವ್ ಹಾಗೂ ದಿಗ್ವೇಶ್ ರಾಥಿ ಆರಂಭಿಕ ಓವರ್‌ಗಳಲ್ಲಿ ಕರಾರುವಾಕ್ ದಾಳಿ ಸಂಘಟಿಸಿದರು. ಪರಿಣಾಮ ಹೈದರಾಬಾದ್ 20 ಓವರ್‌ಗಳಲ್ಲಿ9 ವಿಕೆಟ್ ನಷ್ಟಕ್ಕೆ 156 ರನ್‌ಗಳಿಸಿತು. ತಂಡದ ಪರ ಹೆನ್ರಿಚ್ ಕ್ಲಾಸೆನ್ 62, ನಿತಿಶ್ ರೆಡ್ಡಿ 56 ರನ್ ಗಳಿಸಿದರು. ಲಖನೌ ಪರ ಶಮಿ, ಆವೇಶ್ ಹಾಗೂ ಪ್ರಿನ್ಸ್ ತಲಾ 2 ವಿಕೆಟ್ ಪಡೆದುಕೊಂಡರು.

ಗುರಿ ಬೆನ್ನತ್ತಿದ ಲಖನೌ 19.5 ಓವರ್‌ಗಳಲ್ಲಿ 160 ರನ್ ಗಳಿಸಿ ಗುರಿ ಮುಟ್ಟಿತು. ತಂಡದ ಪರ ನಾಯಕ ರಿಷಭ್ ಪಂತ್ ಅಜೇಯ 68 ರನ್ ಗಳಿಸಿದರೆ, ಮಾರ್ಕ್ರಂ 45 ರನ್‌ಗಳಿಸಿದರು. ಹೈದರಾಬಾದ್ ಪರ ಹರ್ಷ 2 ವಿಕೆಟ್ ಪಡೆದುಕೊಂಡರು.

ಪಂತ್ ಕೊನೆಯವರೆಗೂ ತಾಳ್ಮೆ ಕಳೆದುಕೊಳ್ಳದೆ ಬ್ಯಾಟಿಂಗ್ ಮಾಡಿ ಪಂದ್ಯ ಗೆಲ್ಲಿಸಿ ಹೀರೋ ಅನ್ನಿಸಿಕೊಂಡರು. ಮಾರ್ಕ್ರಂ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿ ಗೆಲುವಿನ ರೂವಾರಿ ಎನಿಸಿಕೊಂಡರು. ಬೌಲಿಂಗ್ ವೇಳೆ ಮೊಹಮ್ಮದ್ ಶಮಿ 18 ಬಾಲ್ ಡಾಟ್ ಮಾಡಿ ದಿನದಾಟದ ಪ್ರಮುಖ ಆಕರ್ಷಣೆಯಾಗಿದ್ದರು. ಹೈದರಾಬಾದ್ ಪರ ರೆಡ್ಡಿ ಮತ್ತು ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್ ಮಾಡಿ ಹೋರಾಡಿದರು.

ಪಂತ್ ಮಿಂಚಿನಾಟ: ಗುರಿ ಬೆನ್ನತ್ತುವಾಗ ಲಖನೌ ಉತ್ತಮ ಆರಂಬವೇ ಪಡೆಯಿತು. ಮೊದಲಿಗೆ ಮಾರ್ಷ್ ಹಾಗೂ ಮಾರ್ಕ್ರಂ ಉತ್ತಮ ಜೊತೆಯಾಟ ನಿರ್ಮಿಸುವತ್ತ ಸಾಗುತ್ತಿದ್ದರು. ಸೆಟ್ ಆಗುವ ಮುಲಾಜಿಗೆ ಬಿದ್ದ ಮಾರ್ಷ್ ಸೆಟ್ ಆಗುವುದರೊಳಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ರಿಷಭ್ ಪಂತ್ ತಮ್ಮ ಸ್ವಾಭಾವಿಕ ಆಟ ಬಿಟ್ಟು ನಿಧಾನವಾಗಿ ಇನ್ನಿಂಗ್ಸ್ ಕಟ್ಟಿದರು. ಮಾರ್ಕ್ರಂ ಔಪಚಾರಿಕತೆ ಮುಗಿಸಿಕೊಂಡ ನಂತರ ಸಿಕ್ಸರ್‌ಗಳನ್ನು ಬಾರಿಸುತ್ತಾ ಮಿಂಚಿದರು. ಮಾರ್ಕ್ರಂ ಔಟಾದರು. ಕೆಳಕ್ರಮಾಂಕದಲ್ಲಿ ಯಾರೊಬ್ಬರೂ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಲಿಲ್ಲ. ಸ್ಲಾಗ್ ಓವರ್‌ಗಳಲ್ಲಿ ಎರಡು ವಿಕೆಟ್ ಪಡೆದ ಹೈದರಾಬಾದ್ ಒತ್ತಡ ಹೇರಲೆತ್ನಿಸಿತು. ಆದರೆ ಪಂದ್ಯ ಬಹುತೇಕ ಕೈತಪ್ಪಿತ್ತು. ಉಳಿದ ರನ್‌ಗಳನ್ನು ಪಂತ್ ಬಾರಿಸಿದರು. ಕೊನೆಯ ಓವರ್‌ನಲ್ಲಿ 9 ರನ್ ಬೇಕಿದ್ದಾಗ 3 ಬೌಂಡರಿಗಳನ್ನು ಬಾರಿಸಿದ ಪಂತ್ ತಾಳ್ಮೆಯಿಂದ ಪಂದ್ಯ ಗೆಲ್ಲಿಸಿದವರಾದರು.



ಸಂಕ್ಷಿಪ್ತ ಸ್ಕೋರ್

- ಹೈದರಾಬಾದ್: 20 ಓವರ್‌ಗಳಲ್ಲಿ 156/9: ಕ್ಲಾಸೆನ್ 62, ರೆಡ್ಡಿ; ಶಮಿ 9/2, ಪ್ರಿನ್ಸ್ 34/2
- ಲಖನೌ: 19.5 ಓವರ್‌ಗಳಲ್ಲಿ 160/5: ಪಂತ್ 68★, ಮಾರ್ಕ್ರಂ 45; ಹರ್ಷ 18/2

ಕ್ಲಾಸೆನ್-ರೆಡ್ಡಿ ಆಸರೆ

ಬ್ಯಾಟಿಂಗ್ ಆಹ್ವಾನ ಪಡೆದಿದ್ದ ಹೈದರಾಬಾದ್ ಶಮಿಯ ಕರಾರುವಕ್ ಬೌಲಿಂಗ್ ದಾಳಿಗೆ ತತ್ತರಿಸಿತು. ಆರಂಭದಲ್ಲಿ 26 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತ್ತು. ಇದಾದ ಬಳಿಕ ಒಂದಾದ ರೆಡ್ಡಿ ಮತ್ತು ಕ್ಲಾಸೆನ್ ದೊಡ್ಡ ಜೊತೆಯಾಟ ನಿರ್ಮಿಸಿದರು. ಒಂದು ಹಂತದಲ್ಲಿ ಸೆಟ್ ಆಗಿ ಒತ್ತಡ ನೀಗಿಸುವ ಔಪಚಾರಿಕತೆ ಮುಗಿಸಿಕೊಂಡ ನಂತರ ಇಬ್ಬರೂ ದಂಡಿಸಲಾರಂಭಿಸಿದರು. 10 ಓವರ್‌ಗಳಲ್ಲಿ 50 ರನ್ ದಾಟಿದ ಹೈದರಾಬಾದ್ 140 ದಾಟಿತು. ರೆಡ್ಡಿ, ಕ್ಲಾಸೆನ್ ವಿಕೆಟ್ ಒಪ್ಪಿಸಿದ ನಂತರ ಕೊನೆಯಲ್ಲಿ ಹೈದರಾಬಾದ್ 5 ವಿಕೆಟ್‌ಗಳನ್ನು ಕಳೆದುಕೊಂಡಿಯಿತು. ರೆಡ್ಡಿ 56, ಕ್ಲಾಸೆನ್ 62 ರನ್ ಗಳಿಸಿದರು.



ಕಿರುಸುದ್ದಿ

ಪ್ರಾಯೋಜಕತ್ವಕ್ಕೆ ಸಂಸ್ಥೆ ಅನುಮತಿ ಕಡ್ಡಾಯ


ಹೊಸದಿಲ್ಲಿ: ಭಾರತೀಯರ ಅಥ್ಲೀಟ್‌ಗಳು ವೈಯಕ್ತಿಕ ಪ್ರಾಯೋಜಕತ್ವ ಪಡೆಯುವ ಮುನ್ನ ದೇಶಿ ಅಥ್ಲೆಟಿಕ್ಸ್ ಸಂಸ್ಥೆಯ ಅನುಮತಿ ಪಡೆಯಬೇಕೆಂದು ತಿಳಿಸಲಾಗಿದೆ. ಭಾರತೀಯ ಅಥ್ಲೆಟಿಕ್ಸ್ ಕ್ರೀಡಾಪಟುಗಳಿಗೆ ಈಗಿನಿಂದ ಹೊಸ ನಿಯಮ ಜಾರಿಯಾಗಿದೆ. ಇತ್ತೀಚೆಗೆ ಹೊರಡಿಸಿದ ಪ್ರಕಟಣೆಯಲ್ಲಿ ಎಎಫ್ಐ, ಕ್ರೀಡಾಪಟುಗಳು ಮತ್ತು ಪ್ರಾಯೋಜಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ಸ್ಪಾನ್ಸರ್ ಅಥವಾ ಮೂರನೇ ವ್ಯಕ್ತಿಯೊಂದಿಗೆ ಒಪ್ಪಂದಕ್ಕೆ ಸೇರುವ ಮೊದಲು ಎಎಫ್ಐ ಅನುಮತಿ ಪಡೆಯಬೇಕು ಎಂದು ತಿಳಿಸಿದೆ.ಇದಲ್ಲದೆ, ಕ್ರೀಡಾಪಟು ಅಗತ್ಯ ಅನುಮತಿ ಪಡೆದಿರುವುದನ್ನು ಎಎಫ್ಐಯಿಂದ ದೃಢೀಕರಿಸಿದ ನಂತರವೇ ಪ್ರಾಯೋಜಕರು ಒಪ್ಪಂದ ಪ್ರಕ್ರಿಯೆಯನ್ನು ಮುಂದುವರಿಸಬೇಕು. ವಿನಂತಿ ಬಂದ ದಿನಾಂಕದಿಂದ ಮೂರು ದಿನಗಳ ಒಳಗೆ ಎಎಫ್ಐ ದೃಢೀಕರಣ ನೀಡುತ್ತದೆ ಎಂದು ಹೇಳಲಾಗಿದೆ. ಸೂಚನೆಯನ್ನು ಎಲ್ಲಾ ರಾಜ್ಯ ಘಟಕಗಳು, ಮುಖ್ಯ ಕೋಚ್ ರಾಧಿಕೃಷ್ಣನ್ ನಾಯರ್, ರಿಲಯನ್ಸ್ ಫೌಂಡೇಶನ್ ಯೂತ್ ಸ್ಪೋರ್ಟ್ಸ್, ಜೆಎಸ್ ಡಬ್ಲ್ಯು ಸ್ಪೋರ್ಟ್ಸ್, ಒಎನ್‌ಜಿಸಿ ಸ್ಪೋರ್ಟ್ಸ್, ಗೋ ಸ್ಪೋರ್ಟ್ಸ್ ಫೌಂಡೇಶನ್, ಒಲಿಂಪಿಕ್ ಗೋಲ್ಡ್ ಕ್ವೆಸ್ಟ್ ಸೇರಿದಂತೆ ಇತರ ಪ್ರಾಯೋಜಕರಿಗೂ ಕಳುಹಿಸಲಾಗಿದೆ.

> ಎಲ್ಲಾ ರಾಜ್ಯ ಹಾಗೂ ವಿಭಾಗದ ಸಂಸ್ಥೆಗಳಿಗೆ ಅನ್ವಯ

ಕ್ಯಾಂಡಿಡೇಟ್ಸ್ ಚೆಸ್ | ಪ್ರಜ್ಞಾನಂದ ಪಂದ್ಯ ಡ್ರಾ

ಚೆಸ್: ದಿವ್ಯಾ, ವೈಶಾಲಿಗೆ ಜಯ





ಹೊಸದಿಲ್ಲಿ: ಜಯದ ಹುಡುಕಾಟದಲ್ಲಿದ್ದ ಭಾರತೀಯ ಗ್ರ್ಯಾಂಡ್‌ಮಾಸ್ಟರ್‌ಗಳು ಕ್ಯಾಂಡಿಡೇಟ್ಸ್ ಚೆಸ್ ಪಂದ್ಯಾವಳಿಯಲ್ಲಿ ಗೆಲುವಿನ ನಗೆ ಬೀರಿದರು. ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಮತ್ತು ಭರವಸೆಯ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ತಮ್ಮ ಮೊದಲ ಜಯಗಳನ್ನು ಸಾಧಿಸಿದರು. ಈ ಗೆಲುವಿನ ಮೂಲಕ ವೈಶಾಲಿ ಈಗ ಸಂಯುಕ್ತ ದ್ವಿತೀಯ ಸ್ಥಾನಕ್ಕೆ ಏರಿದ್ದು, ಗೆಲುವಿನ ಆಸೆ ಜೀವಂತವಾಗಿರಿಸಿದ್ದಾರೆ.

ಬಿಬಿಸಾರಾ ಮಾಡಿದ ಕೆಲವು ತಪ್ಪುಗಳನ್ನು ಸದುಪಯೋಗಪಡಿಸಿಕೊಂಡ ದಿವ್ಯ, 46ನೇ ನಡೆಯಲ್ಲಿ ಕ್ಯೂಎಫ್-4 ಆಡಿದರು. ಕ್ಯಾಟ್ರಿನಾ ಲ್ಯಾಗ್ನೊ ಅವರನ್ನು ಎದುರಿಸಿದ್ದ ಆರ್. ವೈಶಾಲಿ ಚಾಣಾಕ್ಷ ಪ್ರದರ್ಶನದೊಂದಿಗೆ ಪಂದ್ಯವನ್ನು ಗೆದ್ದುಕೊಂಡರು. ನಂತರ ಅವರು ನಿರಂತರವಾಗಿ ರಾಜನ ಮೇಲೆ ದಾಳಿ ನಡೆಸಿ ಜಯ ಸಾಧಿಸಿದರು. ಮಹಿಳಾ ವಿಭಾಗದಲ್ಲಿ ಅನ್ನಾ ಮುಝಿಚುಕ್, ಝು ಜಿನರ್ ಅವರನ್ನು ಸೋಲಿಸಿ ಅಗ್ರಸ್ಥಾನವನ್ನು ಕಾಯ್ದುಕೊಂಡರು.

ಇನ್ನೊಂದು ಪಂದ್ಯದಲ್ಲಿ ಆರ್ ಪ್ರಜ್ಞಾನಂದ ಹಾಗೂ ಹಿಕಾರು ನಕಾಮುರಾ ಡ್ರಾ ಮಾಡಿಕೊಂಡರು. ನಕಾಮುರಾ ಕ್ವೀನ್ ಪಾನ್ ಆರಂಭವನ್ನು ಆಯ್ಕೆ ಮಾಡಿಕೊಂಡರೆ, ಪ್ರಜ್ಞಾನಂದ ಸ್ಥಿರ ಆಟದೊಂದಿಗೆ ಎದುರಾಳಿ ಯೋಜನೆಗಳನ್ನು ವಿಫಲಗೊಳಿಸಿದರು. ಇಬ್ಬರೂ ಆಳವಾದ ತಯಾರಿಯನ್ನು ತೋರಿದರೂ ನಿರ್ಣಾಯಕ ಮುನ್ನಡೆ ಯಾರಿಗೂ ಸಿಗದೆ ಪಂದ್ಯ ಡ್ರಾಗೆ ಅಂತ್ಯವಾಯಿತು. ಕೊನೆಯ ಪಂದ್ಯದಲ್ಲಿ ಅನೀಶ್ ಗಿರಿ ಮತ್ತು ಮಥಿಯಾಸ್ ಬ್ಲೂಬಾಮ್ ಕೂಡ ಡ್ರಾ ಮಾಡಿಕೊಂಡರು.

ಅಗ್ರಸ್ಥಾನದಲ್ಲೇ ಉಳಿದ ಸಿಂದಾರೊವ್:

ತಮ್ಮ ಸ್ವಾಭಾವಿಕ ಆಟ ಮುಂದುವರಿಸಿರುವ ಉಜ್ಬೇಕಿಸ್ತಾನದ ಗ್ರ್ಯಾಂಡ್‌ಮಾಸ್ಟರ್ ಜವೋಖಿರ್ ಸಿಂದಾರೊವ್ ಸೈಪ್ರಸ್‌ನಲ್ಲಿ ನಡೆಯುತ್ತಿರುವ ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಪಾರುಪತ್ಯ ಮುಂದುವರಿಸಿದ್ದಾರೆ. ಆರನೇ ಸುತ್ತಿನಲ್ಲಿ ಚೀನಾದ ವೇಯಿ ಯಿಯನ್ನು ಮಣಿಸಿದ ಸಿಂದಾರೊವ್, ಆರು ಪಂದ್ಯಗಳಿಂದ 5.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.

ಆಟದ ಆರಂಭದಲ್ಲೇ ಪಾನ್ ರಚನೆ ಹಾನಿಗೊಳಗಾದರೂ, ಸಿಂದಾರೊವ್ ಶೀಘ್ರದಲ್ಲೇ ಓಪನ್ ಜಿ-ಫೈಲ್ ಅನ್ನು ಹಿಡಿದು ಚುರುಕಾದ ಆಟ ಪ್ರದರ್ಶಿಸಿದರು. ಎದುರಾಳಿ ವೇಯಿ ಯಿ ಹ್‌-4 ಮತ್ತು ಕಿಂಗ್‌ಸೈಡ್ ದಾಳಿಗಳ ಮೂಲಕ ಒತ್ತಡ ಸೃಷ್ಟಿಸಲು ಪ್ರಯತ್ನಿಸಿದರೂ, ಸಿಂದಾರೊವ್ ಆರ್‌ಜಿ-8 ಮೂಲಕ ಪ್ರತಿಕ್ರಿಯಿಸಿ ಕ್ವೀನ್‌ಸೈಡ್ ವಿಸ್ತರಣೆ ಮಾಡಿದರು. ವೇಯಿಯ ಸಂಯೋಜನೆಯನ್ನು ದುರ್ಬಲಗೊಳಿಸಿದರು. ಮಧ್ಯಭಾಗದ ಆಟದಲ್ಲಿ ಅವರ ರಾಣಿ ಮತ್ತು ಬಿಷಪ್ ಹಾಗೂ ಕಿಂಗ್‌ಸೈಡ್ ಚೌಕಗಳ ಮೇಲೆ ಒತ್ತಡ ತಂದು ಪ್ರಾಬಲ್ಯ ಸಾಧಿಸಿದವು.

ಪಂಜಾಬ್‌ಗೆ ಹ್ಯಾಟ್ರಿಕ್ ಗೆಲುವಿನ ಹಂಬಲ

ಕೋಲ್ಕತ್ತಾ: ಸೋಲಿನ ಸರಪಳಿಯಲ್ಲಿ ಸಿಲುಕಿಕೊಂಡಿರುವ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ಗೆಲುವಿನ ವಿಶ್ವಾಸ ಹೊತ್ತಿರುವ ಪಂಜಾಬ್ ಕಿಂಗ್ಸ್ ತಂಡಗಳು ಸೋಮವಾರದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಕಳೆದ ಆವೃತ್ತಿಯಿಂದಲೂ ಅತ್ಯುತ್ತಮ ಪ್ರದರ್ಶನ ನೀಡಿರುವ ಪಂಜಾಬ್ ತನ್ನ ಕೊನೆಯ ಪಂದ್ಯದಲ್ಲಿ ಚೆನ್ನೈ ತಂಡವನ್ನು ಸೋಲಿಸಿದೆ. ಇತ್ತ ಕೆಕೆಆರ್ ಆಡಿರುವ ಎರಡೂ ಪಂದ್ಯಗಳಲ್ಲಿ ಸೋತಿದೆ. ಐಪಿಎಲ್ ಶುರುವಾಗಿ ವಾರವಷ್ಟೇ ಕಳೆದರೂ ಪಂದ್ಯಾವಳಿಯಲ್ಲಿ ಅಂಕಪಟ್ಟಿಯ ಪೈಪೋಟಿ ಶುರುವಾದಂತಿದ್ದು, ಪಂಜಾಬ್ ಪೈಪೋಟಿಯಲ್ಲಿದೆ. ಬಲಿಷ್ಠ ಬೌಲಿಂಗ್ ಮತ್ತು ಸಮತೋಲಿತ ಬ್ಯಾಟಿಂಗ್ ವಿಭಾಗ ಹೊಂದಿರುವ ಪಂಜಾಬ್ ಸವಾಲಿಗೆ ಸಿದ್ಧವಾದರೆ ಇತ್ತ ಬ್ಯಾಟಿಂಗ್ ಪಡೆಯನ್ನು ಹೊಂದಿದ್ದರೂ ಬೌಲಿಂಗ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸುತ್ತಿದೆ.

ಆತ್ಮವಿಶ್ವಾಸದಲ್ಲಿ ಪಂಜಾಬ್: ಎರಡು ಗೆಲುವಿನ ವಿಶ್ವಾಸದಲ್ಲಿ ಪಂಜಾಬ್ ಕಿಂಗ್ಸ್ ಕಾಣಿಸಿಕೊಂಡಿದೆ. ಬಲಿಷ್ಠ ಬೌಲಿಂಗ್ ಪಡೆಯೊಂದಿಗೆ ಬ್ಯಾಟಿಂಗ್‌ನಲ್ಲೂ ಅದ್ಭುತ ಆಟಗಾರರನ್ನು ಪಂಜಾಬ್ ಹೊಂದಿದೆ. ಕಳೆದ ಪಂದ್ಯದಲ್ಲಿ ಕುಸಿತ ಅನುಭವಿಸಿದ್ದರೂ ಕೂಪರ್ ಕೊನೊಲಿ ಉತ್ತಮ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದ್ದಾರೆ. ಪ್ರಭುಸಿಮ್ರನ್ ಸಿಂಗ್, ಶ್ರೇಯಸ್ ಅಯ್ಯರ್ ಲಯದಲ್ಲಿದ್ದಾರೆ. ಆದಾಗ್ಯೂ ಪ್ರಿಯಾಂಶ್ ಆರ್ಯ, ವಧೇರಾ ಅಂಥವರು ಲಯಕ್ಕೆ ಬರಬೇಕಿದೆ. ಬೌಲಿಂಗ್‌ನಲ್ಲಿ ವಿವಿಧ ಆಟಗಾರರು ಭರವಸೆ ಹೆಚ್ಚಿಸಿದ್ದಾರೆ.

ಕೆಕೆಆರ್‌ಗೆ ಗೆಲುವಿನ ತವಕ: ಇನ್ನು ಕೆಕೆಆರ್ ಬ್ಯಾಟಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದರೂ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸುತ್ತಿದೆ. ತಂಡದಲ್ಲಿ ಗಾಯದಿಂದಾಗಿ ವಿವಿಧ ಆಟಗಾರರು ಆಡುತ್ತಿಲ್ಲ. ಅದರಲ್ಲೂ ಬೌಲಿಂಗ್ ವಿಭಾಗದವರೆ ಗೈರಾಗಿರುವುದು ತಂಡಕ್ಕೆ ಹೊಡೆತ ಬಿದ್ದಿದೆ. ಅಲೆನ್ ಉತ್ತಮ ಲಯದಲ್ಲಿದ್ದಾರೆ. ರಹಾನೆ, ಅಂಗ್ರಿಶ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದ್ದಾರೆ. ರಿಂಕು ಸಿಂಗ್, ನರೈನ್ ಕೂಡ ಬ್ಯಾಟಿಂಗ್ ಮಾಡಬಲ್ಲರು. ಬೌಲಿಂಗ್‌ನಲ್ಲಿ ವೈಭವ್ ದುಬಾರಿಯಾಗಿದ್ದಾರೆ. ಸ್ಪಿನ್ನರ್‌ಗಳಾದ ವರುಣ್ ಮತ್ತು ನರೈನ್ ಹೆಚ್ಚಿನ ವಿಕೆಟ್‌ಗಳನ್ನು ಕಿತ್ತಿಲ್ಲ.

ಪಂದ್ಯದ ವಿವರ

- ಯಾವಾಗ?: ಸೋಮವಾರ
- ಎಲ್ಲಿ: ಈಡನ್ ಗಾರ್ಡನ್ಸ್, ಕೋಲ್ಕತ್ತಾ
- ಸಮಯ: ಸಂಜೆ 7:30
- ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್



ಪಿಚ್: ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಈ ಹಿಂದೆ ನಡೆದಿರುವ ಪಂದ್ಯಗಳಲ್ಲಿ ಮಿಶ್ರ ಫಲ ಸಿಕ್ಕಿದೆ. ಬ್ಯಾಟರ್‌ಗಳಿಗೆ ಉತ್ತಮ ಅವಕಾಶವಿದ್ದರೂ ದೊಡ್ಡ ಸ್ಕೋರ್ ಕಲೆ ಹಾಕಲಾಗಲ್ಲ, ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟವೂ ಇರಲಿದೆ.

ಉದ್ದ ಜಿಗಿತ: ಮುರಳಿ, ಅಂಸಿ ಚಾಂಪಿಯನ್ಸ್

> ಭಾರತೀಯ ಅಥ್ಲೆಟಿಕ್ಸ್ ಸರಣಿಯಲ್ಲಿ ಕಮಾಲ್

ಹೊಸದಿಲ್ಲಿ: ಭಾರತೀಯ ಅಥ್ಲೆಟಿಕ್ಸ್ ಸರಣಿ-1ರ ಉದ್ದ ಜಿಗಿತ ಸ್ಪರ್ಧೆಯಲ್ಲಿ ದೇಶಿ ಸ್ಟಾರ್‌ಗಳಾದ ಮುರಳಿ ಶ್ರೀಶಂಕರ ಮತ್ತು ಅಂಸಿ ಸೋಜನ್ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಚಾಂಪಿಯನ್ ಪಟ್ಟಗಳನ್ನು ತಮ್ಮದಾಗಿಸಿಕೊಂಡರು. 2022ರ ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಮುರಳಿ ಶ್ರೀಶಂಕರ ಉತ್ತಮ ಪ್ರದರ್ಶನ ನೀಡಿದರು. ಆರು ಪ್ರಯತ್ನಗಳಲ್ಲಿ ಐದು ಬಾರಿ ಎಂಟು ಮೀಟರ್ ಗಡಿ ದಾಟಿದರು. ಮೂರನೇ ಪ್ರಯತ್ನದಲ್ಲಿ 8.13 ಮೀಟರ್ ಜಿಗಿದು ಸ್ಪರ್ಧೆಯಲ್ಲಿ ಸ್ಪಷ್ಟ ಮುನ್ನಡೆ ಸಾಧಿಸಿದರು. ಬಿಹಾರದ ಸನ್ನಿ ಕುಮಾರ್ 7.90 ಮೀಟರ್ ಜಿಗಿದು ಎರಡನೇ ಸ್ಥಾನ ಪಡೆದರು.

ಮಹಿಳೆಯರ ವಿಭಾಗ: ಮಹಿಳಾ ವಿಭಾಗದಲ್ಲಿ ರಿಲಯನ್ಸ್ ತಂಡದ ಅಂಸಿ ಸೋಜನ್ ಸಂಪೂರ್ಣ ಪ್ರಾಬಲ್ಯ ತೋರಿದರು. ಮೊದಲ ಪ್ರಯತ್ನದಲ್ಲೇ 6.54 ಮೀಟರ್ ಜಿಗಿದು ಮುನ್ನಡೆ ಸಾಧಿಸಿದರು. ಆದರೆ 2025ರ ಏಷ್ಯನ್ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ ಶೈಲಿ ಸಿಂಗ್ ನಿರೀಕ್ಷಿತ ಮಟ್ಟದ ಪ್ರದರ್ಶನ ನೀಡಲಿಲ್ಲ. ಶೈಲಿ ಮೊದಲ ಪ್ರಯತ್ನದಲ್ಲಿ 6.52 ಮೀಟರ್ ಜಿಗಿದರೂ, ನಂತರದ ನಾಲ್ಕು ಪ್ರಯತ್ನಗಳಲ್ಲಿ ಫೌಲ್ ಮಾಡಿದರು. ಪಕ್ಕದಿಂದ ಕೋಚ್ ಅಂಜು ಬಾಬಿ ಜಾರ್ಜ್ ಸಲಹೆ ಹಾಗೂ ಪ್ರೋತ್ಸಾಹ ನೀಡಿದರೂ, ಕೊನೆಯ ಪ್ರಯತ್ನದಲ್ಲಿ ಸರಿಯಾದ ಟೇಕ್-ಆಫ್ ಸಾಧಿಸಲು ವಿಫಲರಾದ ಶೈಲಿ ಕೇವಲ 4.99 ಮೀಟರ್ ಮಾತ್ರ ಜಿಗಿದು ನಿರಾಶೆ ಮೂಡಿಸಿದರು.

ರಾಜಸ್ಥಾನಕ್ಕೆ 6 ರನ್‌ಗಳ ರೋಚಕ ಗೆಲುವು

ಅಹಮದಾಬಾದ್: ಕೊನೆಯ ಓವರ್‌ನಲ್ಲಿ ಮುಕ್ತಾಯಗೊಂಡ ರೋಮಾಂಚನಕಾರಿ ಪಂದ್ಯವನ್ನು ರಾಜಸ್ಥಾನ ರಾಯಲ್ಸ್ ತಂಡ 6 ರನ್‌ಗಳಿಂದ ಗೆಲುವು ಸಾಧಿಸಿತು. ಅನಿರೀಕ್ಷಿತ ಪ್ರದರ್ಶನ ನೀಡಿದ ತುಷಾರ್ ದೇಶಪಾಂಡೆ ಕೊನೆಯ ಓವರ್‌ನಲ್ಲಿ ಗುಜರಾತ್ ತಂಡಕ್ಕೆ ಕಡಿವಾಣ ಹಾಕಿ ಗೆಲ್ಲಿಸಿದರು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ರಾಜಸ್ಥಾನ ರಾಯಲ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 210 ರನ್ ಗಳಿಸಿತ್ತು. ತಂಡದ ಪರ ಜೈಸ್ವಾಲ್ 55, ವೈಭವ್ 31 ಮತ್ತು ಜುರೇಲ್ 75 ರನ್‌ಗಳಿಸಿದ್ದರು. ರಬಾಡ 2 ವಿಕೆಟ್ ಕಿತ್ತಿದ್ದರು. ಗುರಿ ಬೆನ್ನತ್ತಿದ ಗುಜರಾತ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 204 ರನ್ ಗಳಿಸಿತು. ಸುದರ್ಶನ್ 73 ರನ್ ಗಳಿಸಿ ಹೋರಾಟ ನಡೆಸಿದರು. ರಬಾಡ ಹೋಪ್ ಉಳಿಸಿದ್ದಾದರೂ ಪಂದ್ಯವನ್ನು ಗೆಲ್ಲಿಸಲಾಗಲಿಲ್ಲ, ರವಿ ಬಿಷ್ಣೋಯ್ 4 ವಿಕೆಟ್ ಕಿತ್ತರು. ಜುರೇಲ್, ಸುದರ್ಶನ್ ತಮ್ಮ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಪಂದ್ಯದ ಕೇಂದ್ರಬಿಂದುವಾಗಿದ್ದರು. ರಾಜಸ್ಥಾನ ಪರ ರವಿ ಬಿಷ್ಣೋಯ್ 4 ವಿಕೆಟ್ ಕಿತ್ತು ಹೀರೋ ಅನ್ನಿಸಿಕೊಂಡರು. ಕೊನೆಯ 2 ಓವರ್‌ಗಳಲ್ಲಿ ಕರಾರುವಾಕ್ ದಾಳಿ ಸಂಘಟಿಸಿದ ದೇಶಪಾಂಡೆ ಹಾಗೂ ಆರ್ಚರ್ ಗೆಲುವಿನ ರೂವಾರಿ ಎನಿಸಿಕೊಂಡರು.

ರೋಚಕ ಅಂತ್ಯ: ಗುರಿ ಬೆನ್ನತ್ತುವಾಗ ಗುಜರಾತ್ ಸುದರ್ಶನ್ ಅವರ ಸ್ಫೋಟಕ ಬ್ಯಾಟಿಂಗ್ ಆಸರೆ ಪಡೆಯಿತು. ಆರಂಭದಿಂದಲೂ ತಮ್ಮ ಆಕ್ರಮಣಕಾರಿ ಬ್ಯಾಟಿಂಗ್ ಶೈಲಿಯೊಂದಿಗೆ ಮಿಂಚಿದ ಅವರು, ಪಂದ್ಯವನ್ನು ತಂದುಕೊಟ್ಟರು. ಮಧ್ಯಮ ಕ್ರಮಾಂಕದಲ್ಲಿ ಹೆಚ್ಚಿನ ಕೊಡುಗೆ ಯಾರಿಂದಲೂ ಬರಲಿಲ್ಲ. ಸುದರ್ಶನ್ 73ಕ್ಕೆ ವಿಕೆಟ್ ಒಪ್ಪಿಸಿದರು. ಕೊನೆಯ ನಾಲ್ಕು ಓವರ್‌ಗಳಲ್ಲಿ 30 ರನ್ ಬೇಕಿತ್ತು. ರಾಶಿದ್ ಖಾನ್ ಮತ್ತು ರಬಾಡ ಸ್ಫೋಟಕ ಸಿಕ್ಸರ್‌ಗಳೊಂದಿಗೆ ಪಂದ್ಯ ಹೊಳ್ಳಿಸಿದರು. 2 ಓವರ್‌ಗಳಲ್ಲಿ 15 ರನ್ ಬೇಕಿತ್ತು. ದಾಳಿಗಿಳಿದ ಆರ್ಚರ್ 4 ರನ್ ಮಾತ್ರ ನೀಡಿದರು. ಕೊನೆಯ ಓವರ್‌ನಲ್ಲಿ 11 ರನ್ ಬೇಕಿತ್ತು. ದೇಶಪಾಂಡೆ ಅಲ್ಲಿ ರಶೀದ್ ಖಾನ್ ವಿಕೆಟ್ ಪಡೆದಿದ್ದಲ್ಲದೆ 4 ರನ್ ಮಾತ್ರ ನೀಡಿ ಪಂದ್ಯ ಗೆಲ್ಲಿಸಿದರು.




ಸಂಕ್ಷಿಪ್ತ ಸ್ಕೋರ್

- ರಾಜಸ್ಥಾನ 20 ಓವರ್‌ಗಳಲ್ಲಿ 210/6; ಜುರೇಲ್ 75, ಜೈಸ್ವಾಲ್ 55; ರಬಾಡ 42/2
- ಗುಜರಾತ್ 20 ಓವರ್‌ಗಳಲ್ಲಿ 204/8; ಸುದರ್ಶನ್ 73, ಬಟ್ಲರ್ 26; ಬಿಷ್ಣೋಯ್ 41/4

ಪದಬಂಧ

ರಾಜಾ ಸಂಗಮೇಶ ಹಿರೇಮಠ



5945

ಎಡದಿಂದ ಬಲಕ್ಕೆ
2.ನೀರಿನಲ್ಲಿ ಮುಳುಗದಂತೆ ಮಾಡು (3)
5.ಮಹಾಜನರು ಸಲ್ಲಿಸಿದ ಪಂಚನಾಮೆ (4)
6.ಶಾರೀರಿಕ ವ್ಯಾಯಾಮವಿಲ್ಲಿ ತಿರುಗಿದೆ (4)
7.ನಿರ್ದಿಷ್ಟ ಗಡಿಗಳೊಳಗಿನ ಭೂಭಾಗ (2)
8.ಚರ್ಮದ ಊದುಚೀಲವಿದು (2)
10.ಕಪಟಧ್ಯಾನಕ್ಕೆ ಹೆಸರಾದ ಪಕ್ಷಿ ತಿರುಗಿದೆ (2)
12.ಶಿವನನ್ನು ಪ್ರಾರ್ಥಿಸಿ ಪತಿಯನ್ನು ಪಡೆದವಳು (2)
13.ಹರನ ನಡುವೆ ಸೈನ್ಯದ ಅಧಿಕಾರಿಯಿದ್ದಾನೆ (4)
15.ಸ್ಥಿರವಾದ ಉದ್ದೇಶ-ಧ್ಯೇಯವಿದು (4)
16.ನೆನಪು ಮಾಡಿಕೊಳ್ಳುವಿಕೆ ತಿರುಗಿದೆ (3)

ಮೇಲಿನಿಂದ ಕೆಳಕ್ಕೆ
1.ಲೌಕಿಕ ವಿಷಯಗಳ ಬಂಧನ (4)
2.ದೇವರ ವಿಗ್ರಹವನ್ನಿಟ್ಟು ಎಳೆಯುವ ರಥ (2)
3.ತಿರುಗು-ಪ್ರದಕ್ಷಿಣೆ ಹಾಕು (2)
4.ಮೋತಿಯ ನಡುವೆ ವಂಚಕಿಯಿದ್ದಾಳೆ (4)
7.ತತ್ವೋಪದೇಶ ಮಾಡುವವನು (3)
9.ಈಶ ದಿಶೆಯ ಒಡೆಯ-ಇಂದ್ರ (3)
11.ವೈಜಯಂತಿಯ ಇನ್ನೊಂದು ಹೆಸರು (4)
12.ಆಸೆ-ಕ್ರಿಯೆಗೆ ಸಂಬಂಧಿಸಿದ ಸ್ವಭಾವವಿದು (4)
14.ದೇವತೆಯಿಲ್ಲಿ ತಲೆಕೆಳಗಾಗಿದ್ದಾನೆ (2)
15.ಹೂವು-ಹಣ್ಣುಗಳ ಗೊಂಚಲು (2)

5944 ಉತ್ತರ

ಎಡದಿಂದ ಬಲಕ್ಕೆ:
1.ಪಲ್ಲಶರ 3.ಬಿಗಿಮೊಗ
5.ಪಟಕ 6.ಮಿಣುಕು
8.ವಿವರ್ಣ 10.ಆಶಯ
11.ಶಕಲ 15.ಮಾಧವ
16.ನವಧಾನ್ಯ
17.ಲೇಸುಗಾರ

ಮೇಲಿನಿಂದ ಕೆಳಕ್ಕೆ :
1.ಪುರೋಗಾಮಿ 2.ರಪಣ
3.ಬಿಕರಿ 4.ಗಜಕರ್ಣ
7.ಶರಣು 9.ವಣಿಕ
10.ಆಯುರ್ಮಾನ
12.ಶಸ್ತ್ರಾಗಾರ 13.ಸಾಮಾನ್ಯ
14.ಲೇವಡಿ

ಕಿರುಸುದ್ದಿ

ವರ್ಕಾಡಿ, ಮಂಜೇಶ್ವರದಲ್ಲಿ ಸಿಎಂ ಸಿದ್ದರಾಮಯ್ಯ ಪ್ರಚಾರ

ಮಂಗಳೂರು: ಕೇರಳ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಭಾನುವಾರ ಮಂಗಳೂರಿಗೆ ಆಗಮಿಸಿದ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಳಿಕ ಕಾಸರಗೋಡಿಗೆ ತೆರಳಿ ವರ್ಕಾಡಿ, ಮಂಜೇಶ್ವರ ಪರಿಸರದಲ್ಲಿ ಮಂಜೇಶ್ವರ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಎ.ಕೆ. ಎಂ.ಅಶ್ರಫ್ ಪರ ಮತ ಪ್ರಚಾರ ನಡೆಸಿದರು. ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿದ್ದಂತೆ ಅವರನ್ನು ಮಾಜಿ ಸಚಿವ ವಿನಯ ಕುಮಾರ್ ಸೊರಕೆ ಸೇರಿದಂತೆ ಪಕ್ಷದ ಮುಖಂಡರು ಸ್ವಾಗತಿಸಿದರು. ಬೆಂಗಳೂರಿನಿಂದ ಬರುವಾಗಲೇ ತಡವಾಗಿದ್ದರಿಂದ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಲು ನಿರಾಕರಿಸಿದ ಅವರು ನೇರವಾಗಿ ರಸ್ತೆ ಮಾರ್ಗವಾಗಿ ವರ್ಕಾಡಿಗೆ ತೆರಳಿದರು. ಈ ಸಂದರ್ಭ ಮಾಜಿ ಸಚಿವರಾದ ರಮಾನಾಥ ರೈ, ವಿನಯ ಕುಮಾರ್ ಸೊರಕೆ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಜಿಪಂ ಸಿಇಒ ನರ್ವಾಡೆ ವಿನಾಯಕ ಕಾರ್ಬಾರಿ, ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ, ಎಸ್ಪಿ ಡಾ.ಅರುಣ್ ಕೆ., ಯು.ಟಿ. ಇಫ್ತಿಕರ್ ಅಲಿ ಉಪಸ್ಥಿತರಿದ್ದರು.

ಬೆಳ್ತಂಗಡಿ: ರಬ್ಬರ್ ತೋಟದಲ್ಲಿ ಚಿರತೆ ಪ್ರತ್ಯಕ್ಷ



ಬೆಳ್ತಂಗಡಿ : ನೆರಿಯ ಗ್ರಾಮದ ಅಲವೂರು ಎಂಬಲ್ಲಿ ಬಾಬಿ ಎಂಬವರ ಎಸ್ಟೇಟ್‌ನ ರಬ್ಬರ್ ತೋಟದಲ್ಲಿ ಬೆಳಗ್ಗಿನ ಜಾವ ರಬ್ಬರ್ ತೋಟದಲ್ಲಿದ್ದ ಟ್ಯಾಪಿಂಗ್ ಕಾರ್ಮಿಕರಿಗೆ ಚಿರತೆಯೊಂದು ಕಾಣ ಸಿಕ್ಕಿದ್ದು ಜನರಲ್ಲಿ ಭಯ ಮೂಡಿಸಿದೆ. ಕಳೆದ ಕೆಲವು ದಿನಗಳಿಂದ ತಾಲೂಕಿನಲ್ಲಿ ಚಿರತೆ ಕಾಣಿಸಿಕೊಂಡಿರಲಿಲ್ಲ. ಇದೀಗ ಏ.5ರಂದು ಬೆಳಗ್ಗೆ 5 ಗಂಟೆಯ ಸುಮಾರಿಗೆ ರಬ್ಬರ್ ತೋಟದಲ್ಲಿ ಟ್ಯಾಪಿಂಗ್ ಮಾಡಲು ತೆರಳಿದ್ದ ನಾಗಮ್ಮ ಎಂಬ ಮಹಿಳೆಗೆ ಚಿರತೆಯನ್ನು ನೋಡಿದ್ದು ಇದರ ವಿಡಿಯೋ ಮತ್ತು ಫೋಟೋವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. . ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ತೋಟದಲ್ಲಿ ಚಿರತೆ ಕಾಣಿಸಿಕೊಂಡಿರುವುದು ಸಾರ್ವಜನಿಕರಲ್ಲಿ ಆತಂಕ ಹೆಚ್ಚಿಸಿದೆ.

ಕಂಬಳಪದವಿನಲ್ಲಿ ಅಪಘಾತ: ಗಂಭೀರ ಗಾಯಗೊಂಡ ಯುವಕ ಮೃತ್ಯು

ಕೊಣಾಜೆ: ಉಳ್ಳಾಲ ತಾಲೂಕಿನ ಕಂಬಳಪದವು ಬಳಿ ಬೈಕೊಂದಕ್ಕೆ ಲಾರಿಯೊಂದು ಡಿಕ್ಕಿ ಹೊಡೆದು ಗಂಭೀರ ಗಾಯಗೊಂಡಿದ್ದ ಯುವಕ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.



ನಡುಪದವು ಅಂಬೇಡ್ಕರ್ ಕಾಲನಿಯ ಬೇಬಿ ಎಂಬವರ ಪುತ್ರ ಸುಶಾಂತ್ (23) ಮೃತಪಟ್ಟ ಯುವಕನಾಗಿದ್ದಾನೆ. ಕಳೆದ ಗುರುವಾರದಂದು ಕಂಬಳಪದವು ಬಳಿ ಲಾರಿಯೊಂದು ಬೈಕ್ ಗೆ ಡಿಕ್ಕಿ ಹೊಡೆದಿತ್ತು. ಡಿಕ್ಕಿಯ ರಭಸಕ್ಕೆ ಬೈಕ್ ಸವಾರ ರಸ್ತೆಗೆ ಎಸೆಯಲ್ಪಟ್ಟಿದ್ದು, ಈ ಸಂದರ್ಭದಲ್ಲಿ ತಲೆಗೆ ಗಂಭೀರವಾದ ಗಾಯವಾಗಿತ್ತು. ಕೂಡಲೇ ಆತನನ್ನು ದೇರಳಕಟ್ಟೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮೃತಪಟ್ಟಿದ್ದಾನೆ. ಮೃತಪಟ್ಟ ಯುವಕ ಕಳೆದ ಹಲವು ವರ್ಷಗಳ ಹಿಂದೆ ತಂದೆಯನ್ನು ಕಳೆದುಕೊಂಡಿದ್ದ. ಬಳಿಕ ಬಡ ಕುಟುಂಬಕ್ಕೆ ಈತನೇ ಆಧಾರಸ್ತಂಭವಾಗಿದ್ದ. ಒಂದೂವರೆ ವರ್ಷಗಳ ಹಿಂದೆ ಮದುವೆಯಾಗಿದ್ದ ದಂಪತಿಗೆ ಸಣ್ಣ ಮಗು ಕೂಡಾ ಇದೆ. ಇದೀಗ ಮೃತರ ಮನೆಯಲ್ಲಿ ಆಕ್ರಂದನ ಮುಗಿಲು ಮುಟ್ಟಿದೆ.

ಪಿಲಿಕೋಡು ಸಾರ್ವಜನಿಕ ಸ್ಥಳದಲ್ಲಿ ತ್ಯಾಜ್ಯ ಎಸೆತ: ದಂಡ

ಕಾಸರಗೋಡು: ಕೊಡಕ್ಕಾಡ್ ವೆಳ್ಳಾಲ್ ರಸ್ತೆ ಬದಿಯಲ್ಲಿ ವಾಹನಗಳಲ್ಲಿ ತಂದು ತ್ಯಾಜ್ಯ ಎಸೆಯುತ್ತಿರುವ ಕೃತ್ಯ ಹೆಚ್ಚುತ್ತಿದ್ದು, ತ್ಯಾಜ್ಯ ಎಸೆದ ವ್ಯಕ್ತಿಯನ್ನು ಪತ್ತೆಹಚ್ಚಿ ಆತನಿಂದಲೇ ತ್ಯಾಜ್ಯ ತೆಗೆಸಿದ ಘಟನೆ ನಡೆದಿದೆ. ಪಿಲಿಕ್ಕೋಡ್ ಪಂಚಾಯತ್ ಅಧಿಕಾರಿಗಳ ನೇತೃತ್ವದಲ್ಲಿ ಹಾಗೂ ಸಾರ್ವಜನಿಕರ ಸಹಭಾಗಿತ್ವದಲ್ಲಿ ತಪಾಸಣೆ ನಡೆಸಲಾಗಿದ್ದು, ತ್ಯಾಜ್ಯ ಎಸೆದ ಬಸ್ ಮಾಲಕನಿಗೆ 10 ಸಾವಿರ ರೂ. ದಂಡ ವಿಧಿಸಲಾಯಿತು. ರಸ್ತೆ ಬದಿಗಳಲ್ಲಿ ತ್ಯಾಜ್ಯ ಎಸೆಯುತ್ತಿರುವ ಕೃತ್ಯ ಹೆಚ್ಚಾಗುತ್ತಿರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಪಂಚಾಯತ್ ನೇತೃತ್ವದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲು ಕ್ರಮ ಕೈಗೊಳ್ಳಲಾಯಿತು.

ಕಾಪುವಿನಲ್ಲಿ ವಿವಾಹಿತೆಗೆ ವರದಕ್ಷಿಣೆ ಕಿರುಕುಳ: ಮಗುವಿನೊಂದಿಗೆ ರಸ್ತೆಗೆ ತಳ್ಳಿದ ಪತಿ ಕುಟುಂಬ

ಉಡುಪಿ: ಕಾಪು ತಾಲೂಕಿನ ನಡ್ಸಾಲು ಗ್ರಾಮದ ಶಬ್ರೀನ (25) ಎಂಬುವವರು ತನ್ನ ಪತಿ ಮತ್ತು ಕುಟುಂಬದ ವಿರುದ್ಧ ವರದಕ್ಷಿಣೆ ಕಿರುಕುಳ ಹಾಗೂ ಹಲ್ಲೆ ನಡೆಸಿದ ಬಗ್ಗೆ ಕಾಪು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. 2024ರ ಮೇ ತಿಂಗಳಿನಲ್ಲಿ ಮೂಡಬೆಟ್ಟು ನಿವಾಸಿ ಯಾಸೀರ್ ಸಾಬನ್ ಅಲಿ ಎಂಬುವರೊಂದಿಗೆ ಶಬ್ರೀನ ಅವರ ವಿವಾಹವಾಗಿತ್ತು. ಮದುವೆಯಾದ ಕೆಲವು ದಿನಗಳಲ್ಲೇ ಪತಿ ಯಾಸೀರ್, ಮಾವ ಸಾಬನ್ ಸಾಹೇಬ್ ಮತ್ತು ಅತ್ತೆ ಅಪ್ಪಮ್ಮ ಸೇರಿ ಹೆಚ್ಚಿನ ಹಣ ತರುವಂತೆ ಒತ್ತಾಯಿಸಿ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಲು ಆರಂಭಿಸಿದ್ದರು. ಪತಿ ಯಾಸೀರ್ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದಲ್ಲದೆ, ಕೈಯಿಂದ ಹಲ್ಲೆ ನಡೆಸಿದ್ದಾನೆ ಎಂದು ದೂರಿನಲ್ಲಿ ವಿವರಿಸಲಾಗಿದೆ. ಇತ್ತೀಚೆಗೆ ಆರೋಪಿಗಳೆಲ್ಲರೂ ಸೇರಿ ಶಬ್ರೀನ ಅವರನ್ನು ಹೊಡೆದು ಬಡಿದು, ಅವರ 5 ೪ ತಿಂಗಳ ಮಗುವಿನೊಂದಿಗೆ ಮನೆಯಿಂದ ಹೊರಹಾಕಿ ಪಡುಬಿದ್ರಿ ಮಾರ್ಗಮಧ್ಯೆ ಬಿಟ್ಟು ಹೋಗಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಕಾಪು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬುಡಕಟ್ಟು ಸಮುದಾಯಕ್ಕೆ ಆರ್ಥಿಕತೆಯ ಶಕ್ತಿಯಾದ ಪಿಎಂವಿಡಿವೈ ಯೋಜನೆ

ದಕ್ಷಿಣ ಕನ್ನಡದಲ್ಲಿ ಅನುಷ್ಠಾನ ಯಶಸ್ವಿ

ಮಂಗಳೂರು: ಬುಡಕಟ್ಟು ಸಮುದಾಯಗಳ ಆರ್ಥಿಕ ಸಬಲೀಕರಣಕ್ಕಾಗಿ ಆರಂಭಗೊಂಡಿರುವ ವನ್‌ಧನ್ ವಿಕಾಸ ಕೇಂದ್ರಗಳು ಈ ಸಮುದಾಯಗಳ ಬದುಕಿನಲ್ಲಿ ನವೋಲ್ಲಾಸ ಮೂಡಿಸಿವೆ.

ಮಹತ್ವಾಕಾಂಕ್ಷಿ ಯೋಜನೆಯಾದ ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ವನ್ ಧನ್ ವಿಕಾಸ್ ಯೋಜನೆ(ಪಿಎಂವಿಡಿವೈ) ಬುಡಕಟ್ಟು ಸಮುದಾಯದ ಮಂದಿ ಸಂಗ್ರಹಿಸುವ ಅರಣ್ಯ ಉತ್ಪನ್ನಗಳ ಆದಾಯ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಸ್ವಸಹಾಯ ಗುಂಪುಗಳ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಈ ಯೋಜನೆ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಉತ್ಪನ್ನಗಳ ಮೌಲ್ಯವರ್ಧನೆಗೆ ಸಹಕಾರಿ

ವನ್ ಧನ್ ವಿಕಾಸ ಕೇಂದ್ರಗಳು ಬುಡಕಟ್ಟು ಸಮುದಾಯಗಳು ಸಂಗ್ರಹಿಸುವ ಅರಣ್ಯ ಉತ್ಪನ್ನಗಳ ಮೌಲ್ಯವರ್ಧನೆ, ಸಂಸ್ಕರಣೆ ಮತ್ತು ಮಾರುಕಟ್ಟೆ ಸೌಲಭ್ಯವನ್ನು ಒದಗಿಸುತ್ತವೆ. ಈ ಕೇಂದ್ರಗಳು ಜೇನುತುಪ್ಪ, ಬಿದಿರು, ಚಾಪೆ, ಕಾಡು ಗಿಡಮೂಲಿಕೆಗಳು ಮತ್ತು ಇತರೆ ಅರಣ್ಯ ಉತ್ಪನ್ನಗಳನ್ನು ಬಳಸಿ, ಆದಾಯ ಹೆಚ್ಚಿಸಲು ತರಬೇತಿ ಮತ್ತು ಯಂತ್ರೋಪಕರಣಗಳನ್ನು ಒದಗಿಸುತ್ತವೆ. ಇವು ಸ್ವಸಹಾಯ ಗುಂಪುಗಳ ಮೂಲಕ ನಿರ್ವಹಿಸಲ್ಪಡುತ್ತಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗ ಸಮುದಾಯದ ಮಂದಿ ಈ ಯೋಜನೆಯಡಿ ತಮ್ಮನ್ನು ತೊಡಗಿಸಿಕೊಂಡಿದ್ದು, ಅವರ ಜೀವನೋಪಾಯಕ್ಕೆ ಶಕ್ತಿಯಾಗಿದೆ. ಬುಟ್ಟಿ ಎಣೆಯುವಿಕೆ, ಜೇನು ಸಂಗ್ರಹಣೆ ಸೇರಿದಂತೆ ವಿವಿಧ ಕಾಡುತ್ಪನ್ನಗಳ ಮೌಲ್ಯವರ್ಧನೆಗೆ ಸಹಕಾರಿಯಾಗಿದೆ.

ಪ್ರಾತಿನಿಧಿಕ ಚಿತ್ರ



ಆನ್‌ಲೈನ್ ಮಾರಾಟ

ಸುಳ್ಯದಲ್ಲಿನ ವನ್ ಧನ್ ಅಭಿವೃದ್ಧಿ ಕೇಂದ್ರದಲ್ಲಿ ಉತ್ಪಾದನೆಗಳ್ಳುವ ಉತ್ಪನ್ನಗಳು ಇಂದು ವಿವಿಧ ಮೇಳಗಳಲ್ಲಿ ಮಾರಾಟವಾಗುತ್ತಿವೆ. ಆನ್‌ಲೈನ್ ಮೂಲಕವೂ ಮಾರಾಟ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರಸ್ತುತ ಒಟ್ಟು 117 ಸದಸ್ಯರು ಈ ಕೇಂದ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಅರಂತೋಡಿನಲ್ಲಿ ಯಶಸ್ವಿ ನಿರ್ವಹಣೆ

ಸುಳ್ಯ ತಾಲೂಕಿನ ಅರಂತೋಡು ಗ್ರಾಮದಲ್ಲಿ ಸ್ಥಾಪಿತವಾದ ವನ್ ಧನ್ ಅಭಿವೃದ್ಧಿ ಕೇಂದ್ರಕ್ಕೆ ಆರಂಭದಲ್ಲಿ ಸರ್ಕಾರದಿಂದ 7.5 ಲಕ್ಷ ರೂ. ಹಣಕಾಸು ನೆರವು ದೊರೆತಿದೆ. ಎನ್‌ಆರ್‌ಎಲ್‌ಎಂ (ಸಂಜೀವಿನಿ) ಸಂಸ್ಥೆಯ ವತಿಯಿಂದ ಇಲ್ಲಿ ಸದಸ್ಯರಿಗೆ ತರಬೇತಿ ನೀಡಲಾಗುತ್ತಿದೆ.

ಸಂಜೀವಿನಿ ಸಂಸ್ಥೆ ಪ್ಯಾಕೇಜಿಂಗ್, ಲೇಬಲಿಂಗ್ ಹಾಗೂ ಅಗತ್ಯ ಪ್ರಮಾಣಪತ್ರಗಳನ್ನು ಪಡೆಯಲು ಸಹಾಯ ಮಾಡಿದ್ದು, ಸೀಲಿಂಗ್ ಮತ್ತು ಪ್ಯಾಕಿಂಗ್ ಯಂತ್ರಗಳನ್ನು ಒದಗಿಸಿದೆ. ಸ್ಥಳೀಯ ಗ್ರಾಮ ಪಂಚಾಯತ್ ಸಹಕಾರದಿಂದ ಎಪಿಎಂಸಿ ಇಲ್ಲಿನ ಆವರಣವನ್ನು ನವೀಕರಿಸಿ ವನ್ ಧನ್ ಅಭಿವೃದ್ಧಿ ಮಾರ್ಟ್ ಆಗಿ ಪರಿವರ್ತಿಸಲಾಗಿದೆ. ಈ ಯೋಜನೆಯಿಂದ ಸುಳ್ಯ ತಾಲೂಕಿನಲ್ಲಿ ಈಗಾಗಲೇ ಸುಮಾರು 80 ಮಂದಿ ಆದಿವಾಸಿಗಳು ಲಾಭ ಪಡೆದಿದ್ದಾರೆ ಎನ್ನುತ್ತಾರೆ ಅಧಿಕಾರಿಗಳು.

ಇಂದು ಕೊರಗ ಸಮುದಾಯದ ಸದಸ್ಯರು ವಿವಿಧ ನಮೂನೆಯ ಬ್ಯಾಗ್, ಮೇಣದ ಬತ್ತಿ,ಕಾಡು ಜೇನು, ಸಾಬೂನು, ಚಾಪೆ, ಅಲಂಕಾರಿಕ ವಸ್ತುಗಳು, ಹೂವಿನ ಬಾಸ್ಕೆಟ್, ಫಿನೈಲ್, ಉಪ್ಪಿನಕಾಯಿ, ತೆಂಗಿನ ಚಿಪ್ಪಿನ ಚಮಚ, ಬೇಕರಿ ಉತ್ಪನ್ನಗಳು, ಹೀಗೆ ನೂರಾರು ಬಗೆಯ ಉತ್ಪನ್ನಗಳನ್ನು ತಯಾರಿಸುವ ಮೂಲಕ ತಮ್ಮ ಕುಶಲತೆಯನ್ನು ಹೆಚ್ಚಿಸಿಕೊಂಡಿರುವುದು ಯೋಜನೆ ಎಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿದೆ ಎಂಬುದನ್ನು ಪುಷ್ಟೀಕರಿಸುತ್ತದೆ.

ದ.ಕ.ದಲ್ಲಿ ಮೂರು ಕೇಂದ್ರಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಮೂರು ವನ್ ಧನ್ ಅಭಿವೃದ್ಧಿ ಕೇಂದ್ರಗಳಿವೆ. ಬಂಟ್ವಾಳ ತಾಲೂಕಿನ ಪುಣಚ, ಪುತ್ತೂರು ತಾಲೂಕಿನ ಬೆಟ್ಟಂಪಾಡಿ ಹಾಗೂ ಸುಳ್ಯ ತಾಲೂಕಿನ ಅರಂತೋಡು ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಯೋಜನೆಯನ್ನು 2022ರಲ್ಲಿ ಕೇಂದ್ರ ಸರ್ಕಾರದ ಜನಜಾತಿ ವ್ಯವಹಾರಗಳ ಸಚಿವಾಲಯ ಪ್ರಾರಂಭಿಸಿದ್ದು, ಇದರ ಅನುಷ್ಠಾನಕ್ಕೆ ಟ್ರೈಬಲ್ ಕೋಆಪರೇಟಿವ್ ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಫೆಡರೇಶನ್ ಆಫ್ ಇಂಡಿಯಾ ಲಿಮಿಟೆಡ್ ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಇದರ ಜತೆಗೆ ಎನ್‌ಆರ್‌ಎಲ್‌ಎಂ (ಸಂಜೀವಿನಿ) ಸಂಸ್ಥೆಯು ಯೋಜನೆಯ ಅನುಷ್ಠಾನಕ್ಕೆ ವಿಶೇಷ ಸಹಕಾರ ನೀಡುತ್ತಿದೆ. ಯೋಜನೆಯ ಪ್ರಕಾರ ಪ್ರತಿ ಕ್ಲಸ್ಟರ್‌ನಲ್ಲಿ 15 ರಿಂದ 20 ಸ್ವಸಹಾಯ ಗುಂಪುಗಳಿದ್ದುಫಿ, ಸುಮಾರು 300 ಸದಸ್ಯರಿರಬೇಕು. ಶೇ.60ರಷ್ಟು ಸದಸ್ಯರು ಅನುಸೂಚಿತ ಪಂಗಡದವರಾಗಿರಬೇಕು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್ ಕ್ಷೇತ್ರದ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಿ ಪ್ರಚಾರ ಕಾರ್ಯ ನಡೆಸಿದರು. ಈ ಸಂದರ್ಭ ಚರ್ಚ್ ಹಾಗೂ ದೇವಸ್ಥಾನಗಳಿಗೂ ಅವರು ಭೇಟಿ ನೀಡಿದರು. ಭಾರೀ ಸಂಖ್ಯೆಯ ಕಾರ್ಯಕರ್ತರು ಕೂಡಾ ಈ ಸಂದರ್ಭ ಅವರ ಜೊತೆಗಿದ್ದರು.

ಮಜೀರ್‌ಪಳ್ಳ ಯುಡಿಎಫ್ ಚುನಾವಣಾ ಸಮಾವೇಶ: ಸಿಎಂ ಸಿದ್ದರಾಮಯ್ಯ ಭಾಗಿ

ಮಂಜೇಶ್ವರ: ಕೇರಳ ರಾಜ್ಯ ರಾಜಕೀಯದಲ್ಲಿ ಭಾರೀ ಬದಲಾವಣೆ ಕಂಡುಬರುತ್ತಿದ್ದು, ಈ ಬಾರಿಯ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಐಕ್ಯರಂಗ ಒಕ್ಕೂಟವು ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಲಿದೆ ಎಂದು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವರ್ಕಾಡಿ ಸಮೀಪದ ಮಜೀರ್ ಪಳ್ಳದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಎ.ಕೆ.ಎಂ. ಅಶ್ರಫ್ ಅವರ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕರ್ನಾಟಕದ ಅಭಿವೃದ್ಧಿ ಯೋಜನೆ ಗಳು ಕೇರಳದಲ್ಲೂ ಜಾರಿಯಾಗಬೇಕು ಈ ನಿಟ್ಟಿನಲ್ಲಿ ಯುಡಿಎಫ್ ಸರಕಾರವು ಅಧಿಕಾರಕ್ಕೆ ಬರಬೇಕೆಂಬುದು ಜನರ ಇಚ್ಛೆಯಾಗಿದೆ ಎಂದು ಅವರು ತಿಳಿಸಿದರು. ಕೇಂದ್ರ ಸರಕಾರವು ರಾಜ್ಯಗಳಿಗೆ ರಾಜ್ಯದ ಪಾಲುಮೊತ್ತವನ್ನು ಸರಿಯಾಗಿ ನೀಡುತ್ತಿಲ್ಲ. ಆದರೂ ಕರ್ನಾಟಕವು ಎಲ್ಲಾ ವಲಯಗಳಲ್ಲೂ ಅಭಿವೃದ್ಧಿ ಹೊಂದುತ್ತಿದೆ ಎಂದು ಹೇಳಿದರು.



ಗಡಿನಾಡು ಕಾಸರಗೋಡು ಜಿಲ್ಲೆಯ ಕನ್ನಡಿಗರಿಗೆ ಕರ್ನಾಟಕ ಸರಕಾರವು ಎಲ್ಲಾ ರೀತಿಯ ಅನುದಾನ, ಬೆಂಬಲ, ಪ್ರೋತ್ಸಾಹ ನೀಡುತ್ತಿದೆ. ಇಲ್ಲಿನ ಕನ್ನಡಿಗರು ಮೂಲ ನಿವಾಸಿಗಳಾಗಿದ್ದು, ಹಕ್ಕು, ಸವಲತ್ತುಗಳಿಗೆ ಅರ್ಹರಾಗಿದ್ದಾರೆ. ಆದಕಾರಣ ಗಡಿನಾಡಿನಲ್ಲಿ ಕನ್ನಡ ಭಾಷೆಗೆ ಸ್ಥಾನಮಾನ ಸಿಗುವಂತಾಗಬೇಕು ಎಂದು ಸಿದ್ದರಾಮಯ್ಯ ಉಲ್ಲೇಖಿಸಿದರು.

ಕರ್ನಾಟಕದ ಸಚಿವ ಎಸ್. ಭೋಸ ರಾಜ್, ಮಾಜಿ ಸಚಿವ ಬಿ. ರಮಾನಾಥ ರೈ, ಕಾಂಗ್ರೆಸ್ ಮುಖಂಡರಾದ ಪಿ.ಕೆ. ಫೈಸಲ್, ಹಕೀಂ ಕುನ್ನಿಲ್, ಹರ್ಷಾದ್ ವರ್ಕಾಡಿ, ಸೋಮಶೇಖರ ಜೆ.ಎಸ್. ಪಾಲ್ಗೊಂಡು ಮಾತನಾಡಿದರು.

ಮಂಜೇಶ್ವರ ಸಮಗ್ರ ಅಭಿವೃದ್ಧಿ

ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ, ಶಾಸಕ ಎ.ಕೆ. ಎಂ. ಅಶ್ರಫ್ ಮಾತನಾಡಿ, ಈ ಬಾರಿಯ ಚುನಾವಣೆಯಲ್ಲಿ ಮಂಜೇಶ್ವರದಲ್ಲಿ ಯುಡಿಎಫ್ ಒಕ್ಕೂಟ ಜಯ ಸಾಧಿಸುವುದು ನಿಶ್ಚಿತ ಎಂದರು. ಕಳೆದ 5 ವರ್ಷಗಳಲ್ಲಿ ಮಂಜೇಶ್ವರ ಮಂಡಲವು ಸಮಗ್ರ ವಿಕಸನ ಹೊಂದಿದೆ. ಮಂಡಲದ 8 ಗ್ರಾಮ ಪಂಚಾಯತ್‌ಗಳಲ್ಲೂ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದೇನೆ. ಮುಂದಿನ ಚುನಾವಣೆಯಲ್ಲಿ ಜನರ ಆಶೀರ್ವಾದದೊಂದಿಗೆ ಇನ್ನಷ್ಟು ಯೋಜನೆಗಳನ್ನು ಸಮರ್ಥವಾಗಿ ಕಾರ್ಯಗತಗೊಳಿಸಲಿದ್ದೇನೆ ಎಂದು ನುಡಿದರು.

ಪೆರಿಯ: ಮತದಾನ ಉತ್ತೇಜನಕ್ಕೆ ಪೆನಾಲ್ಟಿ ಶೂಟೌಟ್ ವಿಶೇಷ ಸ್ಪರ್ಧೆ!



ಕಾಸರಗೋಡು: ವಿಧಾನಸಭಾ ಚುನಾವಣೆಯ ಪ್ರಚಾರಕ್ಕೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಪುಲ್ಲೂರು ಪೆರಿಯ ಕುಟುಂಬಶ್ರೀ ಸಿಡಿಎಸ್ ನೇತೃತ್ವದಲ್ಲಿ ಘೋಷಣೆ ಮೆರವಣಿಗೆ ಮತ್ತು ಪೆನಾಲ್ಟಿ ಶೂಟೌಟ್ ಸ್ಪರ್ಧೆಯನ್ನು ಭಾನುವಾರ ಆಯೋಜಿಸಲಾಗಿತ್ತು.

ಚುನಾವಣಾ ಆಯೋಗದ ಸ್ವೀಪ್ ಯೋಜನೆಯ ಸಲುವಾಗಿ ಈ ಅಭಿಯಾನಕ್ಕೆ ಪ್ರಜಾಪ್ರಭುತ್ವದ ಶಕ್ತಿ – ಮತದಾನ ಅಭಿಯಾನ – 2026 ಎಂಬ ಶೀರ್ಷಿಕೆಯನ್ನು ನೀಡಲಾಗಿತ್ತು. ಪೆರಿಯ ಪೇಟೆಯಿಂದ ಪ್ರಾರಂಭವಾದ ವರ್ಣ ರಂಜಿತ ಮೆರವಣಿಗೆಯು ಪೆರಿಯ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಸಂಭ್ರಮ ಸಡಗರದೊಂದಿಗೆ ಸಮಾಪ್ತಿಯಾಯಿತು.

ನಂತರ ಶಾಲಾ ಮೈದಾನದಲ್ಲಿ ಸಹಾಯಕ ಜಿಲ್ಲಾ ಮಿಷನ್ ಸಂಯೋಜಕ ಡಿ.ಹರಿದಾಸ್ ಅವರು ರೋಮಾಂಚನಕಾರಿ ಪೆನಾಲ್ಟಿ ಶೂಟೌಟ್ ಪಂದ್ಯಾಟವನ್ನು ಉದ್ಘಾಟಿಸಿ, ಇಂತಹ ಕಾರ್ಯಕ್ರಮಗಳ ಮೂಲಕ ಶೇಕಡಾ 100ರಷ್ಟು ಮತದಾನ ನಡೆಯುವ ಗುರಿ ಹೊಂದಲಾಗಿದೆ ಎಂದರು. ಜಿಲ್ಲೆಯಲ್ಲಿ ಶಾಂತಿಯುತ ಮತ್ತು ನ್ಯಾಯಸಮ್ಮತ ಮತದಾನಕ್ಕೆ ವಿಶೇಷ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ಕುಟುಂಬಶ್ರೀ ಕಾರ್ಯಕರ್ತೆಯರಲ್ಲಿ ಮತದಾನದ ಆಸಕ್ತಿ ಹೆಚ್ಚಿಸಲು ಮತ್ತು ಪ್ರತೀ ವಿಧಾನಸಭಾ ಕ್ಷೇತ್ರದಲ್ಲಿ ಶೇಕಡಾ 100 ರಷ್ಟು ಮತದಾನವನ್ನು ಖಚಿತಪಡಿಸಿಕೊಳ್ಳಲು ಪ್ರತ್ಯೇಕ ಕ್ರೀಡಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಪುಲ್ಲೂರು ಪೆರಿಯ ಕುಟುಂಬಶ್ರೀ ಸಿಡಿಎಸ್ ಅಧ್ಯಕ್ಷೆ ಪಿ.ಪ್ರೀತಿ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಸರೋಜಾ ಸ್ವಾಗತಿಸಿ, ವಂದಿಸಿದರು.

ಬ್ಲಾಕ್ ಸಂಯೋಜಕಿ ರಮ್ಯಾ ಗಿರೀಶ್, ಮುರಳಿ, ಮನೀಶ್, ಶಾಲಿನಿ ಮತ್ತು ವಿಜಿತಾ ಅಭಿಯಾನದ ನೇತೃತ್ವ ವಹಿಸಿದ್ದರು. ಮುಂದಿನ ದಿನಗಳಲ್ಲಿ ಮತದಾರರನ್ನು ಮತಗಟ್ಟೆಗೆ ಕರೆತರಲು ಕುಟುಂಬಶ್ರೀ ಸಿಡಿಎಸ್ ನೇತೃತ್ವದಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ರಜೆ ಮಜಾ ಸವಿಯಲು ಕಡಲ ಕಿನಾರೆಯತ್ತ ಜನರ ದೌಡು

ಬೀಚ್‌ನಲ್ಲಿ ಕಂಡಿತು ಜನಜಾತ್ರೆ!

ಸುರತ್ಕಲ್: ಪಣಂಬೂರು ಪ್ರದೇಶದ ಬೀಚ್‌ಗಳಲ್ಲಿ ಭಾನುವಾರ ರಜೆ ಹಿನ್ನೆಲೆ ಅಪಾರ ಜನಸಂದಣಿ ಕಂಡುಬಂದಿತು. ಬೆಳಿಗ್ಗೆಯಿಂದಲೇ ಕುಟುಂಬ ಸಮೇತವಾಗಿ ಬಂದ ಜನರು ಸಮುದ್ರ ತೀರದಲ್ಲಿ ಕಾಲ ಕಳೆಯುತ್ತ, ರಜೆ ದಿನವನ್ನು ಸಂಭ್ರಮದಿಂದ ಆಚರಿಸಿದರು.

ಬಿಸಿಲಿನ ತಾಪಮಾನ ಹೆಚ್ಚಿದ್ದರೂ ಸಮುದ್ರದ ತಂಪು ಗಾಳಿ ಜನರಿಗೆ ಹಿತವಾಯಿತು. ಮಕ್ಕಳು ನೀರಾಟದಲ್ಲಿ ತೊಡಗಿಸಿಕೊಂಡು ಖುಷಿಪಟ್ಟರೆ, ಯುವಕರು ಸ್ನೇಹಿತರೊಂದಿಗೆ ಆಟ–ಮನರಂಜನೆಗಳಲ್ಲಿ ತೊಡಗಿದರು. ಕೆಲವರು ಸೆಲ್ಫಿ ಕ್ಲಿಕ್ಕಿಸುತ್ತಾ, ಇನ್ನೂ ಕೆಲವರು ಮರಳು ತೀರದಲ್ಲಿ ನಡೆದುಕೊಂಡು ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸಿದರು.

ಬೀಚ್ ಪ್ರದೇಶದಲ್ಲಿ ಒಂಟೆ ಸವಾರಿ, ಕುದುರೆ ಸವಾರಿ ಹಾಗೂ ತೇಲುವ ಬ್ರಿಡ್ಜ್ ಗಳಲ್ಲಿ ಜನರು ಹೆಚ್ಚು ಆಸಕ್ತಿ ತೋರಿದರು. ಆಹಾರ ಮಳಿಗೆಗಳು ಜನರಿಂದ ಕಿಕ್ಕಿರಿದು, ಚಾಟ್, ಐಸ್ ಕ್ರೀಮ್, ಸ್ಥಳೀಯ ತಿಂಡಿಗಳ ಸವಿಯನ್ನು ಜನರು ಆಸ್ವಾದಿಸಿದರು.



ಪೊಲೀಸರು ಮತ್ತು ಸ್ಥಳೀಯ ಆಡಳಿತವು ಭದ್ರತಾ ಕ್ರಮಗಳನ್ನು ಕೈಗೊಂಡಿದ್ದು, ಜನರ ಸುರಕ್ಷತೆಗಾಗಿ ಎಚ್ಚರಿಕೆ ಸೂಚನೆಗಳನ್ನು ನೀಡಿದರು. ಸಮುದ್ರದ ಅಲೆಗಳು ಹೆಚ್ಚಾಗಿರುವ ಕಾರಣ ಕೆಲವೊಂದು ಪ್ರದೇಶಗಳಲ್ಲಿ ನೀರಿಗೆ ಇಳಿಯದಂತೆ ಸೂಚಿಸಲಾಯಿತು.

ಒಟ್ಟಿನಲ್ಲಿ, ರಜೆ ದಿನದ ಪ್ರಯುಕ್ತ ಬೀಚ್‌ನಲ್ಲಿ ಜನಜಾತ್ರೆಯ ವಾತಾವರಣ ನಿರ್ಮಾಣಗೊಂಡಿದ್ದು, ಕುಟುಂಬ ಸಮೇತ ಬಂದ ಜನರು ನೆಮ್ಮದಿ ಹಾಗೂ ಸಂತೋಷದ ಕ್ಷಣಗಳನ್ನು ಕಳೆಯುವ ದೃಶ್ಯಗಳು ಎಲ್ಲೆಡೆ ಕಂಡುಬಂದವು.

ಮಂಗಳೂರು ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕ ಪ್ರೊ. ಜೈಶಂಕರ್ ಸೇವಾ ನಿವೃತ್ತಿ | ಮಂಗಳನಿಧಿ ಸಮರ್ಪಣೆ

ಗುರು ಶಿಷ್ಯ ಪರಂಪರೆಯೇ ಈ ದೇಶದ ವಿಶೇಷತೆ: ಕಜಂಪಾಡಿ

ಮಂಗಳೂರು: ಮಂಗಳೂರು ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕರಾದ ಪ್ರೊ. ಎಂ.ಜೈ ಶಂಕರ್ ಅವರ ಸೇವಾ ನಿವೃತ್ತಿಯ ಪ್ರಯುಕ್ತ 'ಮಂಗಳನಿಧಿ ಸಮರ್ಪಣೆ' ಕಾರ್ಯಕ್ರಮ ಭಾನುವಾರ ಮಂಗಳೂರಿನ ಸಂಘನಿಕೇತನದಲ್ಲಿ ನಡೆಯಿತು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯರಾದ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ಚಿಂತನೆ, ಮನಸ್ಸು ಸಮಾನವಾಗಿರಬೇಕು. ಗುರು ಶಿಷ್ಯ ಪರಂಪರೆ ಈ ದೇಶದ ವಿಶೇಷತೆಯಾಗಿದೆ. ನಮ್ಮ ಬದುಕಿನ ಅಂಧಕಾರವನ್ನು ದೂರ ಮಾಡುವ ಶಕ್ತಿ ಗುರುಗಳಿಗಿದೆ ಎಂದರು. ಸಮಾಜಮುಖಿ ಚಿಂತನೆಯ ಪ್ರಾಧ್ಯಾಪಕರಾದ ಪ್ರೊ.ಜೈ ಶಂಕರ್



ಅವರು ಮಂಗಳನಿಧಿಯ ಸಮರ್ಪಣೆಯ ಮೂಲಕ ಸಮಾಜಕ್ಕೆ ತಮ್ಮ ಸೇವೆಯನ್ನು ಒದಗಿಸಿದ್ದಾರೆ. ಸಮಾಜದ ಜೊತೆ ಕೆಲಸ ಮಾಡಿದರೆ ನಮ್ಮ ವಯಸ್ಸು ಪರಿಗಣನೆಗೆ ಬರದು.

> ವಿವಿಯಲ್ಲಿ ಪ್ರಾಧ್ಯಾಪಕನಾಗಿದ್ದುಕೊಂಡು ಡೀನ್, ಸಿಂಡಿಕೇಟ್ ಸದಸ್ಯನಾಗಿ ಅನೇಕ ಜವಾಬ್ದಾರಿಗಳನ್ನು ವಹಿಸಿಕೊಂಡು ವಿವಿಯ ಅಭಿವೃದ್ಧಿಯಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದೇನೆ. ವೃತ್ತಿ ಜೀವನದೊಂದಿಗೆ ಸಮಾಜಮುಖಿಯಾದ ಕಾರ್ಯಗಳನ್ನು ಮಾಡಿದ ತೃಪ್ತಿಯೂ ಇದೆ.
> ■ ಪ್ರೊ.ಜೈ ಶಂಕರ್, ವಿಶ್ರಾಂತ ಪ್ರಾಧ್ಯಾಪಕ

ಅವರು ಇನ್ನಷ್ಟು ಸಮಾಜಸೇವೆಯ ಮೂಲಕ ತೊಡಗಿಸಿಕೊಳ್ಳುವಂತಾಗಲಿ ಎಂದರು.

ಕಾರ್ಯಕ್ರಮದಲ್ಲಿ ಜೈ ಶಂಕರ್ ಅವರ ಗುರುಗಳಾದ ಪ್ರೊ.ಎಸ್.ಎನ್.ಹೆಗಡೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಾಲಗೋಕುಲದ ಪ್ರಶಿಕ್ಷಣ ಪ್ರಮುಖರಾದ ನರಸಿಂಹ ಕುಲಕರ್ಣಿ ಮೊದಲಾದವರು ಉಪಸ್ಥಿತರಿದ್ದರು.

ಪ್ರಾಧ್ಯಾಪಕ ಜೈ ಶಂಕರ್ ಅವರ ಪತ್ನಿ ಲಕ್ಷ್ಮೀ ಜೈ ಶಂಕರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಪ್ರಾಧ್ಯಾಪಕರಾದ ಪ್ರೊ.ಜೈಶಂಕರ್ ವಂದಿಸಿದರು. ಶ್ರೇಯಸ್, ವೈಷ್ಣವಿ ಅವರು ಕಾರ್ಯಕ್ರಮ ನಿರೂಪಿಸಿದರು.

ಜೈ ಶಂಕರ್ ಅವರ ಮಕ್ಕಳಾದ ಪೂಜಾ, ತೇಜಸ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ



ಸಂಗಮ

ದಕ್ಷಿಣ ಕನ್ನಡ । ಉಡುಪಿ । ಕೊಡಗು । ಕಾಸರಗೋಡು

ಕೇರಳ ವಿಧಾನಸಭಾ ಚುನಾವಣೆ -2026



ಎಲ್‌ಡಿಎಫ್-ಯುಡಿಎಫ್‌ಗಳು ವಿಫಲ ಅಭಿವೃದ್ಧಿಪರವಾದ ಬಿಜೆಪಿ ಬೆಂಬಲಿಸಿ

ದೇವರ ಸ್ವಂತ ನಾಡೆಂಬ ಹಿರಿಮೆಯ ಕೇರಳದಲ್ಲಿ ಈ ಬಾರಿ ಹೊಸ ಇತಿಹಾಸ ಸೃಷ್ಟಿಸುವ ಭರವಸೆಯೊಂದಿಗೆ ವಿಧಾನಸಭಾ ಚುನಾವಣೆ ನಡೆಯುತ್ತಿದೆ.ಇಡಿ ದೇಶವೇ ಬದಲಾದರೂ ಕೇರಳ ಬದಲಾಗದು ಎಂಬ ಹಣೆಪಟ್ಟಿಯನ್ನು ಈ ಬಾರಿ ಕಳಚಿಕೊಂಡು ಕೇರಳವೂ ಬದಲಾಗಿ ನವಕೇರಳ ನಿರ್ಮಾಣಕ್ಕೆ ನಾಂದಿ ಹಾಡುವ ಚುನಾವಣೆಯಿದು ಎಂಬ ನಿರೀಕ್ಷೆಗಳೊಂದಿಗೆ ನಡೆಯುತ್ತಿದೆ.

ಉತ್ತರ ಕೇರಳದ ತುತ್ತತುದಿಯ ಮಂಜೇಶ್ವರ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರಗಳು ಈ ಬಾರಿ ಬದಲಾವಣೆಯ ಪರ್ವದತ್ತ ಮುಖಮಾಡಿರುವುದಾಗಿ ವಿಶ್ಲೇಷಿಸಲಾಗುತ್ತಿದೆ.ದಶಕಗಳಿಂದ ಎಡರಂಗ ಮತ್ತು ಮುಸ್ಲಿಂಲೀಗ್–ಕಾಂಗ್ರೆಸ್ ಒಳಗೊಂಡ ಯುಡಿಎಫ್ ಕೂಟಗಳ ಶಾಸಕರು ಮಂಜೇಶ್ವರ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರವನ್ನು ಸತತವಾಗಿ ಪ್ರತಿನಿಧಿಸುತ್ತಿದ್ದರೂ ಇಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿ , ಶಿಕ್ಷಣ, ಆರೋಗ್ಯಕ್ಷೇತ್ರಗಳ ಪ್ರಗತಿ , ಕೈಗಾರಿಕಾ ಅಭಿವೃದ್ಧಿ ನಿರೀಕ್ಷಿತ ರೀತಿಯಲ್ಲಿ ಆಗದೆ ಇಲ್ಲಿನ ಮಕ್ಕಳು ಶಿಕ್ಷಣಕ್ಕೆ, ಆರೋಗ್ಯ ಚಿಕಿತ್ಸೆಗೆ, ಉದ್ಯೋಗಕ್ಕೆ ಪರರಾಜ್ಯಗಳನ್ನು ಅವಲಂಬಿಸುವಂತಾಗಿರುವುದು ಈಗ ಬಹುಚರ್ಚಿತ ವಿಷಯವಾಗಿದೆ.ಇದು ಇಲ್ಲಿನ ಜನತೆಯಲ್ಲಿ ಚಿಂತೆ, ಆತಂಕ, ತಳಮಳಗಳನ್ನು ಕೂಡ ಹುಟ್ಟುಹಾಕಿದೆ. ಈ ಸಂದರ್ಭದಲ್ಲಿ ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ , ಉತ್ಸಾಹಿ ಕಾರ್ಯಕರ್ತೆಯಾಗಿರುವ ಅಶ್ವಿನಿ ಎಂ.ಎಲ್. ಅವರು ಕ್ಷೇತ್ರದ ಮತದಾರರಲ್ಲಿ ಹೊಸ ಭರವಸೆಯನ್ನು ಮೂಡಿಸಿದ್ದಾರೆ. ಈ ಬಾರಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಿಂದ ಖ್ಯಾತ ಬಿಜೆಪಿ ನಾಯಕ ಸುರೇಂದ್ರನ್ ಸ್ಪರ್ಧಿಸಿದ್ದರೆ, ಕಾಸರಗೋಡು ವಿಧಾನಸಭಾ ಕ್ಷೇತ್ರದಿಂದ ಜಿಲ್ಲಾ ಬಿಜೆಪಿ ಅಧ್ಯಕ್ಷೆ ಅಶ್ವಿನಿ ಸ್ಪರ್ಧಿಸಿದ್ದು, ಈಗಾಗಲೇ ಕ್ಷೇತ್ರದ ಜನರ ಮನೆ–ಮನ ಸೆಳೆದಿದ್ದಾರೆ. ಅದರಲ್ಲೂ ಮಹಿಳೆಯರು, ಹೆಣ್ಣುಮಕ್ಕಳು ಭಾರೀ ಉತ್ಸಾಹದಿಂದ ಅಶ್ವಿನಿ ಅವರ ಪರವಾಗಿ ಖುದ್ದು ಪ್ರಚಾರಕ್ಕೆ ಇಳಿದಿರುವುದು ವಿಶೇಷವಾಗಿದೆ.ಅಶ್ವಿನಿ ಅವರನ್ನು ಭೇಟಿ ಮಾಡಿದ **'ಹೊಸದಿಗಂತ'** ಅವರೊಂದಿಗೆ ವಿಶೇಷ ಸಂದರ್ಶನ ನಡೆಸಿದ್ದು, ಕ್ಷೇತ್ರದ ಕುರಿತಂತೆ ಅವರ ಕಾಳಜಿ, ಜನರ ಸಮಸ್ಯೆ ಪರಿಹಾರಕ್ಕೆ ಅವರ ಚಿಂತನೆ ಇತ್ಯಾದಿಗಳನ್ನು ಅವರು ಈ ಸಂದರ್ಭ ಹಂಚಿಕೊಂಡಿದ್ದಾರೆ.

"ದಿಗಂತ ಸಂದರ್ಶನ"

ಪ್ರ: ಈ ಬಾರಿ ಕಾಸರಗೋಡು ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ನಿಮ್ಮನ್ನು ಕಣಕ್ಕಿಳಿಸಿದೆ. ಈ ಬಗ್ಗೆ ಏನನ್ನಿಸಿತು?

ಉ: ಈ ಬಾರಿ ಬದಲಾವಣೆಯ ಛಾಯೆ ಗೋಚರಿಸಿದೆ.ಈ ಕ್ಷೇತ್ರದಿಂದ ದಶಕಗಳಿಂದಲೂ ಮುಸ್ಲಿಂಲೀಗ್ ಅಭ್ಯರ್ಥಿಯೇ ಶಾಸಕರಾಗಿ ಗೆದ್ದು ಬರುತ್ತಿದ್ದಾರೆ. ಆದರೆ ಇಲ್ಲಿ ಯಾವುದೇ ಅಭಿವೃದ್ಧಿ ಆಗಿಲ್ಲ. ದಶಕಗಳಿಂದ ಸತತ ಆಯ್ಕೆಯಾಗುತ್ತಿದ್ದರೂ ಕ್ಷೇತ್ರದಲ್ಲಿ ಅಗತ್ಯ ಮೂಲಸೌಕರ್ಯಗಳ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಿಗೆ ನ್ಯಾಯ ನೀಡಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಬಾರಿ ಬದಲಾವಣೆಯೊಂದರ ಬೇಡಿಕೆ ಜನರಿಂದಲೇ ವ್ಯಕ್ತವಾಗಿದೆ. ಖಂಡಿತವಾಗಿಯೂ ಬಿಜೆಪಿ ಶಾಸಕರು ಇಲ್ಲಿಂದ, ಕಾಸರಗೋಡಿನ ಜನತೆಯ ಧ್ವನಿ ಕೇರಳ ವಿಧಾನಸಭೆ –ಸೆಕ್ರೇಟರಿಯೇಟ್‌ನಲ್ಲಿ ಗಟ್ಟಿಯಾಗಿ ಮೊಳಗುವ ವಿಶ್ವಾಸ ಇದೆ .

ಪ್ರ: ಕಾಸರಗೋಡು ಕ್ಷೇತ್ರದ ಸಮಸ್ಯೆಗಳೇನು?

ಉ : ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಮೂಲಸೌಕರ್ಯಗಳ ದೊಡ್ಡ ಕೊರತೆ ಇದೆ.ಇಲ್ಲಿ ಶಿಕ್ಷಣ, ಆರೋಗ್ಯ, ಉದ್ಯೋಗ ಎಲ್ಲದಕ್ಕೂ ಜನರು ಮಂಗಳೂರನ್ನೇ ಅವಲಂಬಿಸಬೇಕಾಗಿದೆ.ಇಲ್ಲಿ ಹುಟ್ಟಿದ ಮಕ್ಕಳಿಗೆ ಇಲ್ಲಿ ಶಿಕ್ಷಣ ಲಭಿಸುತ್ತಿಲ್ಲ. 11ಸಾವಿರ ಎಕರೆ ಭೂಮಿ ಇದ್ದರೂ ಕೈಗಾರಿಕಾ ಅಭಿವೃದ್ಧಿ ಆಗಿಲ್ಲ. ಅವಕಾಶ ಇದ್ದರೂ ಈ ವರೆಗೆ ಆಡಳಿತ ನಡೆಸಿದವರಾಗಲಿ, ಶಾಸಕರಾಗಲಿ ಈ ನಿಟ್ಟಿನಲ್ಲಿ ಯಾವುದೇ ಕಾಳಜಿ ತೋರಿಲ್ಲ ಎಂಬುದೇ ದೊಡ್ಡ ವಿಪರ್ಯಾಸ.

ಈ ಮೂಲಸೌಕರ್ಯಗಳ ಕೊರತೆಯ ಕಾರಣದಿಂದಲೇ ಕಾಸರಗೋಡು ಜಿಲ್ಲೆಯಿಂದ ಅತಿದೊಡ್ಡ ಸಂಖ್ಯೆಯಲ್ಲಿ ಜನತೆ ಕರ್ನಾಟಕಕ್ಕೆ ವಲಸೆ ಹೋಗುವಂತಾಗಿದೆ.ಅಲ್ಲದೆ ಮಕ್ಕಳು ಶಿಕ್ಷಣಕ್ಕಾಗಿ ಹೊರರಾಜ್ಯಗಳನ್ನು ನೆಚಿಕೊಂಡರೆ, ಉದ್ಯೋಗಕ್ಕೂ ಹೊರರಾಜ್ಯಗಳನ್ನೇ ಅವಲಂಬಿಸುವಂತಾಗಿದೆ.ಇಲ್ಲಿ ಹಿರಿಯರು ಮಾತ್ರವೇ ಉಳಿಯುವಂತಾಗಿದೆ.ಇಂತಹ ಗಂಭೀರ ಸಮಸ್ಯೆಗೆ ಕಾರಣವಾಗಿದ್ದು ಯಾರು ?ಈ ವರೆಗೆ ಈ ಕ್ಷೇತ್ರವನ್ನು ಪ್ರತಿನಿಧಿಸಿದವರು ಈ ಬಗ್ಗೆ ಗಂಭೀರವಾಗಿ ಯೋಚಿಸಲೇ ಇಲ್ಲ ಎಂಬುದೇ ದುರಂತವಲ್ಲವೇ?

ಪ್ರ: ಕಾಸರಗೋಡು ಕ್ಷೇತ್ರಕ್ಕೆ ನಿಮ್ಮ ಆದ್ಯತೆಗಳೇನು?

ಉ: ಅಭಿವೃದ್ಧಿ , ವೈದ್ಯಕೀಯ ಮೂಲಸೌಕರ್ಯ ಒದಗಿಸುವುದು ಮತ್ತು ಉದ್ಯೋಗ ಸೃಷ್ಟಿಗೆ ಪ್ರಯತ್ನ ನನ್ನ ಆದ್ಯತೆಯಾಗಿರಲಿದೆ.ಬೆಂಗಳೂರು, ಮಂಗಳೂರು ಮತ್ತಿತರ ನಗರಗಳನ್ನು ನೋಡುವಾಗ ನಮ್ಮ ಕಾಸರಗೋಡು ಯಾವಾಗ ಈ ರೀತಿ ಅಭಿವೃದ್ಧಿ ಹೊಂದುವುದು ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿರುತ್ತದೆ. ಕಾಸರಗೋಡನ್ನು ಕೂಡ ಒಂದು ಅಭಿವೃದ್ಧಿಯುಕ್ತ ಹೈಟೆಕ್ ಸಿಟಿಯನ್ನಾಗಿ ಅಭಿವೃದ್ಧಿಪಡಿಸಬೇಕು ಎಂಬ ಸಂಕಲ್ಪ ನನ್ನದು. ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಸರಕಾರ ಇಷ್ಟು ದೊಡ್ಡ ಪ್ರಮಾಣದಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸುತ್ತಿದೆ.ಕೇರಳಕ್ಕೂ ಅನೇಕ ಯೋಜನೆಗಳನ್ನು ಒದಗಿಸಿದೆ. ಆದರೆ ಕೇರಳದ ಎಡರಂಗ ಸರಕಾರ ಮೋದಿ ಸರಕಾರದ ಯೋಜನೆಗಳನ್ನು ಇಲ್ಲಿ ಅನುಷ್ಠಾನಕ್ಕೆ ತರದೆ ಜನರಿಗೆ ದ್ರೋಹಬಗೆದಿದೆ. ಈ ಹಿಂದೆ ಆಳಿದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರ ಕೂಡ ಕೇರಳದ ಅಭಿವೃದ್ಧಿಗೆ ಯಾವುದೇ ದೂರದೃಷ್ಟಿಯ ಯೋಜನೆಗಳನ್ನು ರೂಪಿಸದೆ ಕೇರಳ ಹಿಂದೆ ಬೀಳುವಂತೆ ಮಾಡಿದೆ. ಕೇರಳವನ್ನು ಅದಲುಬದಲಾಗಿ ಆಳಿದ ಎಡರಂಗ ಮತ್ತು ಯುಡಿಎಫ್‌ಗಳು ಕೇರಳವನ್ನು ಅಭಿವೃದ್ಧಿ ಪಡಿಸುವ ಎಲ್ಲ ಅವಕಾಶಗಳಲ್ಲೂ ವಿಫಲವಾಗಿದೆ. ಆದ್ದರಿಂದ ಈ ಬಾರಿ ಬಿಜೆಪಿ ನೇತೃತ್ವದ ಎನ್‌ಡಿಎ ಕಡೆಗೆ ಜನರ ಒಲವು ಬಲವಾಗಿ ವ್ಯಕ್ತಗೊಳ್ಳಲಾರಂಭಿಸಿದೆ.

ಕಡಪ್ಪುರದ ಜನರ ಸಂಕಷ್ಟಕ್ಕೆ ಪರಿಹಾರ ಕಲ್ಪಿಸಲೇ ಇಲ್ಲ

ಈ ವರೆಗಿನ ಮುಸ್ಲಿಂಲೀಗ್ ಜನಪ್ರತಿನಿಧಿಗಳು ಇಲ್ಲಿನ ಕಡಪ್ಪುರದ ಜನತೆ ಸಂಕಷ್ಟದಲ್ಲಿ ಮುಳುಗಿದ್ದರೂ ಅವರ ಸಂಕಷ್ಟ ಪರಿಹರಿಸಲು ಮುಂದಾಗಲಿಲ್ಲ. ಸಮುದ್ರ ಕೊರೆತ, ಸೂಕ್ತ ಮೂಲಸೌಕರ್ಯಗಳ ಕೊರತೆಯಿಂದ ಇಲ್ಲಿನ ಜನರು ಪಡಬಾರದ ಕಷ್ಟಗಳನ್ನು ಎದುರಿಸುತ್ತಿದ್ದಾರೆ.ಇಲ್ಲಿ ಬಂದರು ಯೋಜನೆಗೆ ಉಜ್ವಲ ಅವಕಾಶವಿದ್ದರೂ ಈ ವರೆಗಿನ ಸರಕಾರಗಳು ಗಮನ ಹರಿಸಲಿಲ್ಲ.ಕಡಪ್ಪುರದ ಜನತೆಗೆ ಸುರಕ್ಷತೆ ಕಲ್ಪಿಸಿ ಅವರ ಕಷ್ಟಗಳಿಗೆ ಸ್ಪಂದಿಸಿ ಅವರಿಗೆ ಉತ್ತಮ ಜೀವನ ಕಲ್ಪಿಸಬೇಕೆಂಬುದು ನನ್ನ ಅಪೇಕ್ಷೆ.


➡8



ರಸ್ತೆ ಅಭಿವೃದ್ಧಿ, ಸ್ವಚ್ಛತೆಗೆ ಆದ್ಯತೆ

ಕಾಸರಗೋಡು –ಮಂಗಳೂರು ರಸ್ತೆ ಬದಿಗಳುದ್ದಕ್ಕೂ ತ್ಯಾಜ್ಯಗಳ ರಾಶಿ ನೋಡಿದರೆ ಆಘಾತವಾಗುವಂತಿದೆ. ತೊಟ್ಟೆಗಳನ್ನು ಗಂಟುಕಟ್ಟಿ ಎಲ್ಲೆಂದರಲ್ಲಿ ಎಸೆಯಲಾಗುತ್ತದೆ. ಆದರೆ ಕೇಂದ್ರ ಸರಕಾರ ನೀಡಿರುವ ಅತ್ಯಂತ ಸುಂದರ ಹೆದ್ದಾರಿ ಮಾರ್ಗದಲ್ಲಿ ಹೋಗುವಾಗ ಇದಾವುದೂ ಕಾಣದು . ಸರ್ವೀಸ್ ರಸ್ತೆಯಲ್ಲಿ ಬಂದಾಗ ದುಃಖವಾಗುತ್ತದೆ. ತ್ಯಾಜ್ಯಮುಕ್ತ ಹೆದ್ದಾರಿಯನ್ನು ಖಾತ್ರಿಪಡಿಸಬೇಕೆಂಬುದು ನನ್ನ ಆಶಯವಾಗಿದೆ.ಈ ಹೆದ್ದಾರಿ ಯೋಜನೆಯನ್ನು ನೀಡಿದ ಮೋದಿ ಸರಕಾರಕ್ಕೆ ನಾನು ಹೃತ್ಪೂರ್ವಕ ಅಭಿನಂದನೆ ಸಲ್ಲಿಸಲು ಬಯಸುತ್ತೇನೆ.

ನಿಮ್ಮ ಮಕ್ಕಳ ಭವಿಷ್ಯ ಯೋಚಿಸಿ ಮತನೀಡಿ



ಮತದಾರರಿಗೆ ಕಾಸರಗೋಡು ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ **ಅಶ್ವಿನಿ** ಮನವಿ







ಸುತ್ತ ಮುತ್ತ

ತುಳು ಸಮ್ಮೇಳನ: ಅಧ್ಯಕ್ಷರಾಗಿ ಲೇಖಕಿ ಡಾ. ಇಂದಿರಾ ಹೆಗ್ಗಡೆ

ಮುಲ್ಕಿ: ತುಳುನಾಡಿನ ಸಂಸ್ಕೃತಿ, ಭಾಷೆ ಮತ್ತು ಮಾತೃಮೂಲ ಪರಂಪರೆಯ ಪುನರುಜ್ಜೀವನಕ್ಕಾಗಿ ಆಯೋಜಿಸಲಾಗುತ್ತಿರುವ ಮಹತ್ವದ 'ಅಪ್ಪೆ ಬೇರ್ ದ ತುಳುನಾಡ್' ಸಮ್ಮೇಳನಕ್ಕೆ ಖ್ಯಾತ ಲೇಖಕಿ



ಹಾಗೂ ಜಾನಪದ ತಜ್ಞೆ ಡಾ. ಇಂದಿರಾ ಹೆಗ್ಗಡೆ ಅವರನ್ನು ಸಮ್ಮೇಳನ ಅಧ್ಯಕ್ಷೆಯಾಗಿ ಆಯ್ಕೆ ಮಾಡಲಾಗಿದೆ. ಡಾ. ಇಂದಿರಾ ಹೆಗ್ಗಡೆ ಅವರು ತುಳುನಾಡಿನ ಜಾನಪದ, ಆಚರಣೆಗಳು, ನಂಬಿಕೆಗಳು ಮತ್ತು ಸಂಸ್ಕೃತಿಯ ಕುರಿತಾಗಿ ದೀರ್ಘಕಾಲದಿಂದ ಆಳವಾದ ಅಧ್ಯಯನ ನಡೆಸುತ್ತಿರುವ ಪ್ರಮುಖ ವಿದ್ವಾಂಸರು. ಕಿನ್ನಿಗೋಳಿ ಮೂಲದ ಅವರು ತುಳು ಮತ್ತು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ.

ಬಪ್ಪನಾಡು ಶ್ರೀಕ್ಷೇತ್ರ: ಶ್ರೀದೇವರ ಕೊಪ್ಪಲ ಸವಾರಿ, ರಥೋತ್ಸವ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜಾತ್ರಾ ಮಹೋತ್ಸವ ಅಂಗವಾಗಿ ಶನಿವಾರ ರಾತ್ರಿ ಶ್ರೀದೇವರ ಕೊಪ್ಪಲ ಸವಾರಿ ನಡೆಯಿತು. ಕೊಪ್ಪಲ ಸವಾರಿಯಲ್ಲಿ ಶ್ರೀ ದೇವರು ಕೊಪ್ಪಲ ಮಠಕ್ಕೆ ಭೇಟಿ ನೀಡಿ ಶ್ರೀ ದೇವಿಗೆ ಹಾಗೂ ಶ್ರೀ ಹನುಮಂತ ದೇವರಿಗೆ ಏಕಕಾಲದಲ್ಲಿ ಪೂಜೆ ಹಾಗೂ ಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭ ದೇವಸ್ಥಾನದ ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ, ಕಟೀಲು ಕ್ಷೇತ್ರದ ಅರ್ಚಕ ಹರಿನಾರಾಯಣದಾಸ ಆಸ್ರಣ್ಣ, ಬಪ್ಪನಾಡು ದೇವಸ್ಥಾನದ ಅರ್ಚಕ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್, ಪ್ರಸಾದ್ ಭಟ್, ಸುನಿಲ್ ಆಳ್ವ, ಸಂಜೀವ ದೇವಾಡಿಗ, ನಾಗಸ್ವರ ವಾದಕ ನಾಗೇಶ್ ಬಪ್ಪನಾಡು, ರಾಜೇಶ್ ಭಟ್ ಕೊಲಕಾಡಿ ಮತ್ತಿತರರಿದ್ದರು.

ಬೊಂಬೆ ರಥೋತ್ಸವ

ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ಜಾತ್ರಾ ಮಹೋತ್ಸವದ ಅಂಗವಾಗಿ ಮುಲ್ಕಿ ಸೀಮೆಯ ಬಿಲ್ಲವ ಸಮಾಜದ ಮೌಲ್ಯದ ಬಲಿ ಉತ್ಸವ, ಬೊಂಬೆ ರಥೋತ್ಸವ, ಪಲ್ಲಕ್ಕಿ ಉತ್ಸವ, ಶ್ರೀ ದೇವರ ಕೊಪ್ಪಲ ಸವಾರಿ ಶನಿವಾರ ನಡೆಯಿತು. ಈ ಸಂದರ್ಭ ದೇವಸ್ಥಾನದ ತಂತ್ರಿ ಶಿಬರೂರು ಗೋಪಾಲಕೃಷ್ಣ ತಂತ್ರಿ, ಅರ್ಚಕ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್, ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಡಾ. ಹರಿಕೃಷ್ಣ ಪುನರೂರು, ಗೋಪಾಲಕೃಷ್ಣ ಭಟ್ ಹಾಗೂ ಪ್ರಸಾದ್ ಭಟ್, ಚಂದ್ರಶೇಖರ ಕಾಸಪ್ಪಯ್ಯನವರ ಮನೆ, ಉದ್ಯಮಿ ಶರತ್ ಸಾಲ್ಯಾನ್ ,ಕಿರಣ್ ಶೆಟ್ಟಿ ಕೋಲ್ನಾಡು ಗುತ್ತು ,ಅಶ್ವಿನ್ ಆಳ್ವ ಕುಬೆವೂರು,ಡಾ. ಹರಿಶ್ಚಂದ್ರ ಪಿ. ಸಾಲ್ಯಾನ್, ಸತೀಶ್ ಅಂಚನ್ ಸುಜಿತ್ ಸಾಲ್ಯಾನ್, ಚಂದ್ರಶೇಖರ ಸುವರ್ಣ, ರಮೇಶ್ ಅಮೀನ್ ಕೊಕ್ಕರಕಲ್ ,ದಿನೇಶ್ ಹೆಗ್ಡೆ ಮಾನಂಪಾಡಿ, ಸತೀಶ್ ಶೆಟ್ಟಿ ಪೇಟೆ ಮನೆ, ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್ , ಕಾರ್ತಿಕ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದರು.

ಭಜನಾ ಮಂದಿರ: ಪದಾಧಿಕಾರಿಗಳ ಆಯ್ಕೆ



ಪುತ್ತೂರು: ಪಡ್ಡಾಯೂರಿನ ಅನ್ನಪೂರ್ಣೇಶ್ವರಿ ಭಜನಾ ಮಂದಿರದ 2025-2026ನೇ ಸಾಲಿನ ಲೆಕ್ಕಪತ್ರ ಮಂಡನೆ ಮತ್ತು ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ಗೌರವ ಅಧ್ಯಕ್ಷರಾಗಿ ಬಾಲಕೃಷ್ಣ ಮಲ್ಲೊಟ್ಟು, ಅಧ್ಯಕ್ಷರಾಗಿ ಪ್ರಜ್ವಲ್ ಜೆ.ಕೆ. ಪಡ್ಡಾಯೂರು, ಕಾರ್ಯದರ್ಶಿಯಾಗಿ ಬಾಲಸುಬ್ರಹ್ಮಣ್ಯ ಪಡ್ಡಾಯೂರು, ಉಪಾಧ್ಯಕ್ಷರಾಗಿ ವಿಮಲ ಪಡ್ಡಾಯೂರು, ಜತೆ ಕಾರ್ಯಾದರ್ಶಿಯಾಗಿ ವಿಜಯ ಮಲ್ಲೊಟ್ಟು, ಕೋಶಾಧಿಕಾರಿಯಾಗಿ ಮೋಹನ್ ಎನ್. ಪಡ್ಡಾಯೂರು ಹಾಗೂ ಸಮಿತಿಗೆ ನೂತನ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಪಾಂಗಳಾಯಿ ದೈವಸ್ಥಾನದ ವಠಾರದಲ್ಲಿ ಉಚಿತ ಸಂಸ್ಕಾರ ಬೇಸಿಗೆ ಶಿಬಿರ 'ಮಕ್ಕಳ ಕಲರವ' ಸಂಪನ್ನ

185 ಮಕ್ಕಳಿಗೆ, ಪೋಷಕರಿಗೆ ವಿನೂತನ ಕೌಶಲ್ಯದ ಶಿಕ್ಷಣ

ಪುತ್ತೂರು: ದೇವಾಲಯ ಸಂವರ್ಧನಾ ಸಮಿತಿ ಪುತ್ತೂರಿನ ಹಿಂದೂ ಧಾರ್ಮಿಕ ಶಿಕ್ಷಣ ಪ್ರಕಲ್ಪ ವತಿಯಿಂದ ನಗರದ ಪಾಂಗಳಾಯಿ ಅರಸು ಮುಂಡ್ಯತ್ತಾಯ ದೈವಸ್ಥಾನದ ವಠಾರದಲ್ಲಿ ನಡೆದ ಎರಡನೇ ದಿನದ 'ಮಕ್ಕಳ ಕಲರವ' ಬೇಸಿಗೆ ಶಿಬಿರವು ಯಶಸ್ವಿಯಾಗಿ ಸಂಪನ್ನಗೊಂಡಿತು.

ಬೋಧಕರಾಗಿ ಕೃಷ್ಣವೇಣಿ ಪ್ರಸಾದ್ ಮುಳಿಯ, ಡಾ. ವಿಜಯ ಸರಸ್ವತಿ, ಪ್ರಭಾವತಿ, ಶಂಕರಿ ಶರ್ಮ, ಶರಾವತಿ ರವಿನಾರಾಯಣ, ವಿದ್ಯಾ ಕಿಣಿ, ಉಮಾ ಡಿ. ಪ್ರಸನ್ನ ಹಾಗೂ ನಿರ್ವಾಹಕರಾಗಿ ಪ್ರತಿಮಾ ಸಂಪತ್, ರಶ್ಮಿ ಉಮಾಶಂಕರ್ ಮತ್ತು ವಿನುತ ಪಾಂಗಳಾಯಿ, ಕ್ಷಮಾ ಸಂತೋಷ್ ಮುಂತಾದವರು ಸಹಕರಿಸಿದರು.

ಮಕ್ಕಳಿಗೆ ವಿವಿಧ ಚಟುವಟಿಕೆ

ಧ್ಯಾನ ಹಾಗೂ ಸರಳ ಯೋಗ, ತೆಂಗಿನ ಗರಿಯಿಂದ ಪೊರಕೆ ಹಾಗೂ ಕರಕುಶಲ ವಸ್ತುಗಳು, ಮಕ್ಕಳಿಂದ ಸರಳವಾಗಿ ಶಾರದಾ ಪೂಜೆ, ದಿನನಿತ್ಯ ಪಠಿಸುವ ಶ್ಲೋಕಗಳು, ಹೂ ಕಟ್ಟುವುದು, ಗಂಧ ತೇಯುವುದು, ಸಾಂಪ್ರದಾಯಿಕ ಜಾನಪದ ಆಟಗಳಾದ ಕುಂಟೆಬಿಲ್ಲೆ,



ಲಗೋರಿ, ಚೆನ್ನೆಮಣೆ ಇತ್ಯಾದಿಗಳನ್ನು ಎಲ್ಲರು ಸೇರಿ ನಡೆಸಿಕೊಟ್ಟರು. ಸುಮಾರು 185 ಮಕ್ಕಳು ಹಾಗೂ ಪೋಷಕರು ಪಾಲ್ಗೊಂಡ 2ನೇ ದಿನದ ಶಿಬಿರವು ನಡೆಯಿತು. 3ನೇ ದಿನದ ಶಿಬಿರದಲ್ಲಿ ಬೋಧಕರಾಗಿ ವತ್ಸಲಾ ರಾಜ್ಞಿ, ಕೃಷ್ಣವೇಣಿ ಪ್ರಸಾದ್ ಮುಳಿಯ, ಪ್ರಭಾವತಿ, ಸುಧಾ ಹೆಬ್ಬಾರ್ ಗೋವಿನ ಮಹತ್ವದ ಬಗ್ಗೆ ಮಾಹಿತಿ ಕ್ಷಮಾ ಸಂತೋಷ್ ಹಾಗೂ ನಿರ್ವಾಹಕರಾಗಿ ಪ್ರತಿಮಾ ಸಂಪತ್, ರಶ್ಮಿ ಉಮಾನಾಥ್ ಮತ್ತು ವಿನುತ ಪಾಂಗಳಾಯಿ, ಕ್ಷಮಾ ಸಂತೋಷ್ ಮತ್ತಿತರರು ಸಹಕರಿಸಿದರು.

ಯೋಗ, ಧ್ಯಾನ, ಕಥೆ, ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ಆರತಿ ಬೆಳಗಿ ಅದರ ಕುರಿತಾದ ಶ್ಲೋಕ ಹೇಳಿ, ಮೊಸರು ಕಡೆದು ಬೆಣ್ಣೆ ತೆಗೆಯುವ ಪ್ರಾತ್ಯಕ್ಷಿಕೆ, ಗೋಪೂಜೆ ಪ್ರಾತ್ಯಕ್ಷಿಕೆ, ಭಜನೆ, ಕುಣಿತ ಭಜನೆ, ಕಥೆ, ನವಗ್ರಹಗಳಿಗೆ ಸಂಬಂಧಿಸಿದ ಧಾನ್ಯಗಳ ಪರಿಚಯ, ಬತ್ತಿ ಹೊಸೆಯುವುದು ಇತ್ಯಾದಿಗಳನ್ನು ನಡೆಸಿಕೊಡುವ ಮೂಲಕ ಶಿಬಿರವು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು.

ಗಣಪತಿ ಪೂಜೆ, ದಿನನಿತ್ಯ ಪಠಿಸುವ ಶ್ಲೋಕಗಳ ಕಲಿಕೆ ಜೊತೆ ಆಟ!

ಪುತ್ತೂರು: ದೇವಾಲಯ ಸಂವರ್ಧನಾ ಸಮಿತಿ, ಪುತ್ತೂರಿನ ಹಿಂದೂ ಧಾರ್ಮಿಕ ಶಿಕ್ಷಣ ಪ್ರಕಲ್ಪ ವತಿಯಿಂದ ಪಾಂಗಳಾಯಿ ಅರಸು ಮುಂಡಿತ್ತಾಯ ದೈವಸ್ಥಾನದ ವಠಾರದಲ್ಲಿ 'ಮಕ್ಕಳ ಕಲರವ' ಬೇಸಿಗೆ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಗಣೇಶ ಭಟ್ ಕೇರ ಖಂಡಿಗ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ದೇವಾಲಯ ಸಂವರ್ಧನಾ ಸಮಿತಿಯ ಜಿಲ್ಲಾಧ್ಯಕ್ಷ ಕೇಶವ ಪ್ರಸಾದ್ ಮುಳಿಯ ಅಧ್ಯಕ್ಷತೆ ವಹಿಸಿ, ಧಾರ್ಮಿಕ ಶಿಕ್ಷಣ ತರಗತಿಗಳು ಪ್ರಾರಂಭವಾದ ಬಗೆ ಹಾಗೂ ಅದು ಈವರೆಗೆ ನಡೆದು ಬಂದ ದಾರಿಯನ್ನು ವಿವರಿಸಿ ಶಿಬಿರಾರ್ಥಿಗಳಿಗೆ ಶುಭ ಕೋರಿದರು. ಪಾಂಗಳಾಯಿ ದೈವಸ್ಥಾನದ ಅಧ್ಯಕ್ಷ ಗೋಪಾಲ ನಾಯಕ್ ಶುಭ ಹಾರೈಸಿದರು. ಗಣೇಶ ಭಟ್ ಅವರ ಧರ್ಮಪತ್ನಿ ಪ್ರೀತಿ ಸುಧಾ, ಪುತ್ತೂರು ನಗರಸಭೆಯ ಮಾಜಿ ಉಪಾಧ್ಯಕ್ಷ ವಿನಯ ಭಂಡಾರಿ ಹಾಗೂ ದೈವಸ್ಥಾನದ ಮಾಜಿ ಅಧ್ಯಕ್ಷ ಸಂಪತ್ ಕುಮಾರ್ ಇದ್ದರು. ಗರಿಮಾ ಮತ್ತು ತಂಡದವರು ಪ್ರಾರ್ಥಿಸಿದರು. ಹಿಂದೂ ಧಾರ್ಮಿಕ ಶಿಕ್ಷಣ ಪ್ರಕಲ್ಪದ ಸಂಚಾಲಕಿ ಕೃಷ್ಣವೇಣಿ ಪ್ರಸಾದ್ ಮುಳಿಯ ಸ್ವಾಗತಿಸಿ, ಹಿಂದೂ ಧಾರ್ಮಿಕ ಶಿಕ್ಷಣದ ಪುಸ್ತಕ ಸಮಿತಿಯ ನಿರ್ವಾಹಕಿ ಶಂಕರಿ ಶರ್ಮ ವಂದಿಸಿದರು. ರಶ್ಮಿ ನಿರ್ವಹಿಸಿದರು.

ವಿವಿಧ ಚಟುವಟಿಕೆಗಳು

ಬೋಧಕರಾಗಿ ಕೃಷ್ಣವೇಣಿ ಪ್ರಸಾದ್ ಮುಳಿಯ, ಡಾ. ವಿಜಯ ಸರಸ್ವತಿ, ಪ್ರಭಾವತಿ, ಸುಧಾ ಹೆಬ್ಬಾರ್, ಶಂಕರಿ ಶರ್ಮ ಹಾಗೂ ನಿರ್ವಾಹಕರಾಗಿ ಪ್ರತಿಮಾ ಸಂಪತ್, ರಶ್ಮಿ ಉಮಾನಾಥ್ ಮತ್ತು ವಿನುತ, ಕ್ಷಮಾ ಸಂತೋಷ್ ಸಹಕರಿಸಿದರು. ಮಾವಿನ ಎಲೆಯಿಂದ ವಿಶೇಷ ತೋರಣ, ಮಕ್ಕಳಿಂದ ಸರಳವಾಗಿ ಗಣಪತಿ ಪೂಜೆ, ದಿನನಿತ್ಯ ಪಠಿಸುವ ಶ್ಲೋಕಗಳು, ಆಟ ಇತ್ಯಾದಿ ನಡೆಯಿತು.

ಸಾಸ್‌ನ ಮಹಿಳಾ ಘಟಕದಿಂದ ಹನುಮ ಜಯಂತಿ: ಕಲಾವಿದೆಗೆ ಸನ್ಮಾನ



ಮಂಗಳೂರು: ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂ (ಸಾಸ್) ದ. ಕ. ಜಿಲ್ಲೆ ಮಹಿಳಾ ಘಟಕ ಮತ್ತು ಶ್ರೀ ರಾಮಕೃಷ್ಣ ಭಜನಾ ಮಂದಿರ ಬಿಜೈ ಇವರ ಸಹಭಾಗಿತ್ವದಲ್ಲಿ ಹನುಮ ಜಯಂತಿ ಕಾರ್ಯಕ್ರಮ ಭಕ್ತಿ ಶ್ರದ್ಧೆಯಿಂದ ನೆರವೇರಿತು.

ಪ್ರಾರಂಭದಲ್ಲಿ ಕಿಶೋರ್ ಮಂಗಳಾದೇವಿ ಮತ್ತು ಬಳಗದಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು. ಬಳಿಕ ಶಿವಳ್ಳಿ ಸ್ಪಂದನ ಕದ್ರಿ ವಲಯ ಇದರ ಮಹಿಳಾ ಸದಸ್ಯೆ ರಮಾಮಣಿ ಭಟ್ ಮತ್ತು ಬಳಗದವರ ಭಜನಾ ಕಾರ್ಯಕ್ರಮ ನೆರವೇರಿತು. ನಂತರ ಅತಿಥಿಗಳಾದ ಶುಭ ಜಯರಾಮ್ ಭಟ್, ನೃತ್ಯ ವಿದುಷಿ ಗೀತಾ ಸರಳಾಯ, ಭಜನಾ ಮಂದಿರದ ಅಧ್ಯಕ್ಷ ಮುಕುಂದ ದೇವಾಡಿಗ, ಸಾಸ್ ಜಿಲ್ಲಾ ಮಹಿಳಾ ಪ್ರಮುಖ್ ಕಾತ್ಯಾಯಿನಿ ರಾವ್, ಚಂಚಲಾಕ್ಷಿ ಶೆಟ್ಟಿ ದೀಪ ಪ್ರಜ್ವಲನೆ ನಡೆಸಿದರು. ನೃತ್ಯ ಕ್ಷೇತ್ರದಲ್ಲಿ ಅಪಾರ ಸಾಧನೆಗೈದ ಗುರು ಗೀತಾ ಸರಳಾಯ ಅವರನ್ನು ಅಭಿನಂದಿಸಲಾಯಿತು. ಶ್ರದ್ಧಾ ಭಟ್ ನೃತ್ಯ ಶಿಕ್ಷಕಿ ಬಿಜೈ ಸನ್ಮಾನಿತರ ಪರಿಚಯ ನೀಡಿದರು. ಪುತ್ರಿ ವಿದುಷಿ ರಶ್ಮಿ ಚಿದಾನಂದ ಅವರನ್ನು ಶಾಲು ಹಾಕಿ ಗೌರವಿಸಲಾಯಿತು. ಗೀತಾ ಸರಳಾಯ ಮತ್ತು ಪುತ್ರಿ ರಶ್ಮಿ ಚಿದಾನಂದ ಹಾಗೂ ಅವರ ಶಿಷ್ಯ ವರ್ಗದಿಂದ 'ನವರಸ ರಾಮ' ನೃತ್ಯವನ್ನು ಪ್ರದರ್ಶಿಸಲಾಯಿತು. ಸಂಯೋಜಕಿ ಕಾತ್ಯಾಯಿನಿ ರಾವ್ ಸ್ವಾಗತಿಸಿ, ವಂದಿಸಿದರು. ಸೀಮಾ ರಜನೀಶ್ ರಾವ್ ನಿರೂಪಿಸಿದರು. ಸಾಸ್ ಜಿಲ್ಲಾಧ್ಯಕ್ಷ ಗಣೇಶ ಪೊದವಾಲ್, ಸದಾನಂದ ಪೇಜಾವರ, ಸುಭದ್ರ ರಾವ್, ಸಿರಿ ರಾವ್ ಸಹಕರಿಸಿದರು. ರಜನೀಶ್ ರಾವ್ ವತಿಯಿಂದ ಪ್ರಸಾದ ಪಾನಕವನ್ನು ವಿತರಿಸಲಾಯಿತು.

ನೆಲ್ಯಾಡಿ ಪ್ರಾ.ಕೃ. ಪತ್ತಿನ ಸಹಕಾರಿ ಸಂಘ: ಸಾಲ ವಸೂಲಾತಿಯಲ್ಲಿ ಶೇ.100 ಸಾಧನೆ

ಪುತ್ತೂರು: ನೆಲ್ಯಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘವು 2025-26ನೇ ಆರ್ಥಿಕ ವರ್ಷದಲ್ಲಿ ಶೇ.100ರಷ್ಟು ಸಾಲ ವಸೂಲಾತಿ ಮಾಡಿದೆ. ಸಂಘದ ಸದಸ್ಯರು ಪಡೆದುಕೊಂಡ ಸಾಲದ ಕಂತುಗಳನ್ನು ವಾಯ್ದೆಗೆ ಸರಿಯಾಗಿ ಮರು ಪಾವತಿ ಮಾಡಿರುವುದರಿಂದ ಸಂಘವು ಈ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಸಂಘದ ಅಧ್ಯಕ್ಷ ಬಾಲಕೃಷ್ಣ ಬಾಣಜಾಲು ಮತ್ತು ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ ದಯಾಕರ ರೈ ಕೆ.ಎಂ. ತಿಳಿಸಿದ್ದಾರೆ.

ಸಂಘ 2023-24 , 2025-25ರಲ್ಲೂ ಸಾಲ ವಸೂಲಾತಿಯಲ್ಲಿ ಶೇ.100 ಸಾಧನೆ ಮಾಡಿದ್ದು, 2025- 26 ರಲ್ಲೂ ಶೇ.100 ಸಾಧನೆ ಮಾಡಿ ದಾಖಲೆ ಮಾಡಿದೆ. 67ನೇ ವರ್ಷದಲ್ಲಿ ಮುನ್ನಡೆಯುತ್ತಿರುವ ನೆಲ್ಯಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘವು 7 ಗ್ರಾಮಗಳ ವ್ಯಾಪ್ತಿ ಹೊಂದಿರುತ್ತದೆ. ಸಂಘವೂ ಕೃಷಿ ಸಾಲಗಾರ ರೈತರಿಗೆ ಬೆಳೆವಿಮೆ ಯೋಜನೆ ಸೌಲಭ್ಯ ಅಳವಡಿಸಿದೆ. ನವೋದಯ ಗ್ರಾಮ ವಿಕಾಸ ಚಾರಿಟೇಬಲ್ ಟ್ರಸ್ಟ್ ಶ್ರೀ ಶಕ್ತಿ ಸ್ವಸಹಾಯ ಸಂಘಗಳು ಹಾಗೂ ಇನ್ನಿತರ ಸಂಘ ಸಂಸ್ಥೆಗಳಿಗೆ ಸಾಲ ವಿತರಿಸುತ್ತದೆ. ರಸಗೊಬ್ಬರ ಮಾರಾಟ, ಪಡಿತರ ವಿತರಣೆ ಮಾಡುತ್ತಿದೆ. ಸಂಘವೂ ಲಾಭದಲ್ಲಿ ಮುನ್ನಡೆಯುತ್ತಿದ್ದು, ಕೇಂದ್ರ ಸಹಕಾರಿ ಬ್ಯಾಂಕಿನಿಂದ ನಿರಂತರ 6 ವರ್ಷಗಳಿಂದ ಉತ್ತಮ ಸಹಕಾರಿ ಸಂಘ ಪ್ರಶಸ್ತಿ ಪಡೆದುಕೊಂಡಿದೆ. 2020ನೇ ವರ್ಷದಲ್ಲಿ ಮಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಸಹಕಾರಿ ಸಪ್ತಾಹದಲ್ಲಿ ಉತ್ತಮ ಕೃಷಿ ಪತ್ತಿನ ಸಹಕಾರಿ ಸಂಘವೆಂಬ ಪ್ರಶಸ್ತಿಯನ್ನು ಸಹಕಾರಿ ಇಲಾಖೆಯಿಂದ ಪಡೆದುಕೊಂಡಿದೆ.

ಸಹಕರಿಸಿದವರಿಗೆ ಕೃತಜ್ಞತೆ



ನೆಲ್ಯಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘವು ನಿರಂತರ ಮೂರು ವರ್ಷಗಳಿಂದ ಶೇ.100 ಸಾಲ ವಸೂಲಾತಿ ಸಾಧನೆ ಮಾಡುವ ಮೂಲಕ ಸಂಘದ ಸದಸ್ಯರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿದೆ. ಸಂಘದ ಮೇಲಿನ ಅಭಿಮಾನದಿಂದ ಸಕಾಲದಲ್ಲಿ ಸಾಲ ಮರುಪಾ ವತಿಸಿದ ಸದಸ್ಯರಿಗೆ ಸಂಘದ ಸರ್ವತೋಮುಖ ಪ್ರಗತಿ ಅಭಿವೃದ್ಧಿಗೆ ಸಹಕರಿಸಿದ ಸದಸ್ಯರಿಗೆ, ಗ್ರಾಹಕರಿಗೆ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ ಹಾಗೂ ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಸಂಘದ ವಲಯ ಮೇಲ್ವಿಚಾರಕರಿಗೆ ಆಡಳಿತ ಮಂಡಳಿ ಪರ ಕೃತಜ್ಞತೆ ಸಲ್ಲಿಸುತ್ತೇನೆ.

● **ಬಾಲಕೃಷ್ಣ ಬಾಣಜಾಲು,** ನೆಲ್ಯಾಡಿ ಪ್ರಾಥಮಿಕ ಕೃಷಿ ಸಹಕಾರಿ ಸಂಘದ ಅಧ್ಯಕ್ಷರು

ಕಡಬದ ಸುರೇಶ್ ಕುಮಾರ್‌ಗೆ ಮುಖ್ಯಮಂತ್ರಿಗಳ ಚಿನ್ನದ ಪದಕ



ಕಡಬ: ಮೈಸೂರಿನ ವಿಜಯನಗರ ಠಾಣಾ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿರುವ ಕಡಬದ ಕೋಡಿಬೈಲು ನಿವಾಸಿ ಸುರೇಶ್ ಕುಮಾರ್ ಎಸ್.ಡಿ. ಅವರಿಗೆ ಪೊಲೀಸ್ ಇಲಾಖೆಯಲ್ಲಿನ ಶ್ಲಾಘನೀಯ ಸೇವೆಗಾಗಿ ಮುಖ್ಯಮಂತ್ರಿಗಳ ಚಿನ್ನದ ಪದಕ ಲಭಿಸಿದೆ.

ಬೆಂಗಳೂರಿನ ಕೋರಮಂಗಲ ಕೆಎಸ್ ಆರ್‌ಪಿ ಮೈದಾನದಲ್ಲಿ ಜರಗಿದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುರೇಶ್ ಕುಮಾರ್ ಎಸ್.ಡಿ. ಅವರನ್ನು ಚಿನ್ನದ ಪದಕ ತೊಡಿಸಿ ಗೌರವಿಸಿದರು. ಗೃಹ ಸಚಿವ ಡಾ.ಜಿ. ಪರಮೇಶ್ವರ್, ಕರ್ನಾಟಕ ರಾಜ್ಯ ಪೊಲೀಸ್ ಮುಖ್ಯಸ್ಥ ಎಂ.ಎ. ಸಲೀಂ, ಎಡಿಜಿಪಿ ಮುರುಗನ್ ಮುಂತಾದ ಪ್ರಮುಖರು ಉಪಸ್ಥಿತರಿದ್ದರು. ಸುರೇಶ್‌ಕುಮಾರ್ ಎಸ್.ಡಿ. ಅವರು 2005ನೇ ಇಸವಿಯಲ್ಲಿ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ನೇಮಕಗೊಂಡರು. ಸೋಮವಾರಪೇಟೆ, ಗೋಣಿಕೊಪ್ಪ ಸುಂಟಿಕೊಪ್ಪ ಹಾಗೂ ಮೈಸೂರು ಜಿಲ್ಲೆಯ ಬೀಚನಹಳ್ಳಿಯಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ. ಚಾಮರಾಜನಗರ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹದಳದಲ್ಲಿ 2 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿ, ಬಳಿಕ ಮೈಸೂರು ನಗರದ ಜಯಲಕ್ಷ್ಮಿಪುರಂ, ಲಷ್ಕರ್ ಠಾಣೆ, ನರಸಿಂಹರಾಜ ಸಂಚಾರ ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿ ಪ್ರಸ್ತುತ ವಿಜಯನಗರ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಅಂಗನವಾಡಿ ಸುಸ್ಥಿತಿಯಲ್ಲಿದ್ದಾಗ ಮಕ್ಕಳಿಗೆ ಸುರಕ್ಷತೆ: ಭಾಗಿರಥಿ ಮುರುಳ್ಯ



ಕಡಬ: ಐತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಅಂತಿಬೆಟ್ಟು ಅಂಗನವಾಡಿ ಕೇಂದ್ರದಲ್ಲಿ ಸುಮಾರು ರೂ.10 ಲಕ್ಷ ವೆಚ್ಚದಲ್ಲಿ ನಿರ್ಮಾಣವಾದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ನಡೆಯಿತು.

ಉದ್ಘಾಟನೆ ನೆರವೇರಿಸಿ ಮಾತನಾಡಿದ ಸುಳ್ಯ ಶಾಸಕಿ ಭಾಗಿರಥಿ ಮುರುಳ್ಯ, ಎಳೆಯ ಮಕ್ಕಳ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕುವ ಅಂಗನವಾಡಿ ಕೇಂದ್ರ ಸುಸ್ಥಿಯಲ್ಲಿದ್ದಾಗ ಅವರಿಗೆ ಸುರಕ್ಷತೆ ಇರುತ್ತದೆ. ಈ ನಿಟ್ಟಿನಲ್ಲಿ ಇಲ್ಲಿ ಸುಂದರವಾದ ಕಟ್ಟಡ ನಿರ್ಮಾಣವಾಗಿದೆ. ಸರಕಾರ ಮಕ್ಕಳಿಗೆ ಉತ್ತಮ ಆಹಾರ ವ್ಯವಸ್ಥೆ ಮಾಡುತ್ತಿದೆ ಎಂದರು.

ಬಾಲವಿಕಾಸ ಸಮಿತಿಯ ಅಧ್ಯಕ್ಷೆ ಗೀತಾ ಪೂವಪ್ಪ ಗೌಡ ಅಂತಿಬೆಟ್ಟು ಅಧ್ಯಕ್ಷತೆ ವಹಿಸಿದ್ದರು. ತಾ.ಪಂ. ಮಾಜಿ ಸದಸ್ಯೆ ಪಿ.ವೈ. ಕುಸುಮ, ಎ.ಪಿ.ಎಂ.ಸಿ. ಮಾಜಿ ನಿರ್ದೇಶಕ ಮೇದಪ್ಪ ಗೌಡ ಡೆಪ್ಪುಣಿ, ಸಿಡಿಪಿಒ ಹರೀಶ್ ಕೆ., ಅಂಗನವಾಡಿ ಕೇಂದ್ರಗಳ ಶಿರಾಡಿ ವಲಯ ಮೇಲ್ವಿಚಾರಕಿ ಪುಷ್ಪಾವತಿ, ಸ್ಥಳೀಯ ಪ್ರಮುಖರಾದ ಪೂವಪ್ಪ ಗೌಡ ಐತ್ತೂರು, ಮೇದಪ್ಪ ಗೌಡ ಹೊಸೊಕ್ಲು, ಮರ್ದಾಳ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಜನಾರ್ದನ ಗೌಡ ಪುತ್ತಿಲ, ಹರೀಶ್ ಕೋಡಂದೂರು, ಉಪಾಧ್ಯಕ್ಷೆ ಜಯಲಕ್ಷ್ಮೀ ಬೊಳಂತಡ್ಕ, ಕಡಬ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕಿ ವಸಂತಿ, ಅಂಗನವಾಡಿ ಸಹಾಯಕಿ ಯಮುನಾ ಉಪಸ್ಥಿತರಿದ್ದರು. ಅಂಗನವಾಡಿ ಕೇಂದ್ರಕ್ಕೆ ಸಹಕರಿಸಿದ ಜಯಪ್ರಕಾಶ್ ಕೊಡೆಂಕಿರಿ ಮತ್ತು ಈರೇಶ್ ಗೌಡ ಪಂಜೋಡಿ ಅವರನ್ನು ಸನ್ಮಾನಿಸಲಾಯಿತು. ಶ್ರಮದಾನದ ಮೂಲಕ ಸಹರಿಸಿದವರನ್ನು ಗೌರವಿಸಲಾಯಿತು. ಐತ್ತೂರು ಗ್ರಾ.ಪಂ. ಮಾಜಿ ಸದಸ್ಯ ಈರೇಶ ಗೌಡ ಪಂಜೋಡಿ ಪ್ರಸ್ತಾವನೆಗೈದರು. ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಅಶ್ವಿನಿ ವರದಿ ವಾಚಿಸಿದರು. ದುಗ್ಗಪ್ಪ ಗೌಡ ಅಂತಿಬೆಟ್ಟು ಸ್ವಾಗತಿಸಿ, ಬಜಕೆರೆ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಲಿಂಗಮ್ಮ ವಂದಿಸಿ, ಪೂವಪ್ಪ ಗೌಡ ಅಂತಿಬೆಟ್ಟು ಕಾರ್ಯಕ್ರಮ ನಿರ್ವಹಿಸಿದರು.

ರೋಗ ನಿರೋಧಕ ಶಕ್ತಿ ವೃದ್ಧಿಗೆ ಪೌಷ್ಟಿಕ ಆಹಾರ ಸೇವನೆ ಅತ್ಯಗತ್ಯ: ಭೂಮರೆಡ್ಡಿ



ಬಂಟ್ವಾಳ: ನಾವು ತಿನ್ನುವ ಆಹಾರವೇ ನಮ್ಮ ದೇಹಕ್ಕೆ ಔಷಧಿಕಾಗಿ ಪರಿವರ್ತನೆಯಾದರೆ ಪ್ರತ್ಯೇಕ ಔಷಧಿಯ ಅಗತ್ಯವಿಲ್ಲ, ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಬೇಕಾದರೆ ಪೌಷ್ಟಿಕ ಆಹಾರ ಸೇವನೆ ಅಗತ್ಯ ಎಂದು ದ.ಕ. ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್ ಎಸ್.ಭೂಮರೆಡ್ಡಿ ಹೇಳಿದರು.

ಕೇಂದ್ರ ಸರಕಾರದ ನಿಕ್ಷಯ್ ಮಿತ್ರ ಯೋಜನೆಯಡಿ ಫರಂಗಿಪೇಟೆಯ ಸೇವಾಂಜಲಿ ಸಭಾಗೃಹದಲ್ಲಿ ನಡೆದ ಕ್ಷಯ ರೋಗಿಗಳಿಗೆ ಆಹಾರ ದವಸಧಾನ್ಯ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಕ್ಷಯ ರೋಗಿಗಳು ಪೌಷ್ಟಿಕ ಆಹಾರವನ್ನು ಹೆಚ್ಚು ಸೇವಿಸಿದಾಗ ಅವರು ರೋಗ ಮುಕ್ತರಾಗಿ ಉತ್ತಮ ಜೀವನ ನಡೆಸಲು ಸಾಧ್ಯವಿದೆ ಎಂದರು.

ಪುದು ಗ್ರಾ.ಪಂ. ಅಭಿವೃದ್ಧಿ ಅಧಿ ಕಾರಿ ಡಾ. ಸ್ಮೃತಿ ಯು., ಮುಖ್ಯ ಅತಿಥಿಯಾಗಿ ಭಾಗವಹಿಸಿ, ಸೇವಾಂಜಲಿ ಸಂಸ್ಥೆಯ ಕಾರ್ಯವನ್ನು ಶ್ಲಾಘಿಸಿ, ಸ್ವಾರ್ಥ ರಹಿತ ಮನೋಭಾವದ ಕೃಷ್ಣ ಕುಮಾರ್ ಪೂಂಜ ನಮ್ಮಗ್ರಾಮದಲ್ಲಿರುವುದು ನಮ್ಮ ಹೆಮ್ಮೆ ಎಂದು ತಿಳಿಸಿದರು.

ಸೇವಾಂಜಲಿ ಆಡಳಿತ ಟ್ರಸ್ಟಿ ಕೃಷ್ಣಕುಮಾರ್ ಪೂಂಜ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ನಿರ್ದೇಶಕ ಅರ್ಜುನ್ ಪೂಂಜ ಇದ್ದರು. ಪದ್ಮನಾಭ ಶೆಟ್ಟಿ ಪುಂಚಮೆ, ನಾರಾಯಣ ಬಗ್ಗೂರು, ದಿನೇಶ್ ಶೆಟ್ಟಿ ಕೊಟ್ಟಿಂಜ, ಪ್ರಶಾಂತ್ ತುಂಬೆ, ಮೋಹನ್ ಬೆಂಜನಪದವು, ಶಿವರಾಜ್ ಸುಜೀರ್, ಮಧುರಾಜ್ ಶೆಟ್ಟಿ ಮತ್ತಿತರರಿದ್ದರು.

ಕುದ್ರೋಳಿ ಶ್ರೀ ಭಗವತಿ ಕ್ಷೇತ್ರದ ಕುರಿತ 'ಅಮ್ಮ ಭಗವತೀ' ಭಕ್ತಿಗೀತೆ ಬಿಡುಗಡೆ



ಮಂಗಳೂರು: ಕೊಡಿಯಾಲ್‌ಬೈಲ್‌ನ ಕುದ್ರೋಳಿ ಶ್ರೀ ಭಗವತಿ ಕ್ಷೇತ್ರದ ದೇವಿಯನ್ನು ಸ್ತುತಿಸುವ ಕನ್ನಡ ಹಾಗೂ ಮಲೆಯಾಳಂ ಭಾಷೆಯ ಭಕ್ತಿಗೀತೆ 'ಅಮ್ಮ ಭಗವತೀ' ಶನಿವಾರ ಲೋಕಾರ್ಪಣೆಗೊಂಡಿತು.

ಕ್ಷೇತ್ರದ ಕೂಟಕ್ಕಳ ಆಡಿಟೋರಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಡಿ. ವೇದವ್ಯಾಸ ಕಾಮತ್ ಗೀತೆಯನ್ನು ಲೋಕಾರ್ಪಣೆಗೊಳಿಸಿ, ಇಂತಹ ಭಕ್ತಿಗೀತೆಗಳು ಕೇವಲ ಮನರಂಜನೆಗಾಗಿ ಮಾತ್ರವಲ್ಲ, ನಮ್ಮ ಆಧ್ಯಾತ್ಮಿಕ ಮೌಲ್ಯಗಳನ್ನು ಬಲಪಡಿಸುವ ಸಾಧನ. ಕುದ್ರೋಳಿ ಶ್ರೀ ಭಗವತಿ ಕ್ಷೇತ್ರವು ಸದಾ ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳ ಮೂಲಕ ಜನರಲ್ಲಿ ಭಕ್ತಿ ಹಾಗೂ ಒಗ್ಗಟ್ಟು ಬೆಳೆಸುತ್ತಿದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಮಲೆಯಾಳಂ ಎರಡೂ ಭಾಷೆಗಳಲ್ಲಿ ಗೀತೆ ಬಿಡುಗಡೆ ಮಾಡಿರುವುದು ಸಂಸ್ಕೃತಿಗಳ ಸೇತುವೆಯಾಗಿ ಕೆಲಸ ಮಾಡುತ್ತದೆ ಎಂದು ಅವರು ಶ್ಲಾಘಿಸಿದರು.

ಕುದ್ರೋಳಿ ಶ್ರೀ ಭಗವತಿ ಕ್ಷೇತ್ರದ ಅಧ್ಯಕ್ಷ ಗಣೇಶ್ ಕುಂಟಲ್ಪಾಡಿ, ಉಳ್ಳಾಲ ಶ್ರೀ ಚೀರುಂಬ ಭಗವತಿ ಕ್ಷೇತ್ರದ ಆಡಳಿತ ಮೊಕ್ತೇಸರ ಸುರೇಶ್ ಭಟ್ನಗರ, ಕದ್ರಿ ಶ್ರೀ ಮಂಜುನಾಥೇಶ್ವರ ಕ್ಷೇತ್ರದ ಟ್ರಸ್ಟಿ ಉಷಾ ಪ್ರಭಾಕರ್ ಯೆಯ್ಯಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಾಜೇಶ್ ಜಿ., ವಿಜಯ್ ಗುರೂಜಿ ಮಾದುಕೋಡಿ, ಸುಧೀರ್ ಬಿ.ಜಪ್ಪು ಹಾಗೂ ವೈ.ಬಿ.ಸುಂದರ್ ಇದ್ದರು. ಈ ಭಕ್ತಿಗೀತೆಗೆ ಚಂದ್ರಶೇಖರ್ ಪಾತೂರು ಸಾಹಿತ್ಯ ರಚಿಸಿದ್ದಾರೆ. ಟಿ.ವಿ. ಗಿರಿ ಕುರ್ನಾಡು ಗಾಯನ ಮತ್ತು ಸ್ವರ ಸಂಯೋಜನೆ ನೀಡಿದ್ದು, ಮಲೆಯಾಳಂ ಆವೃತ್ತಿಯನ್ನು ರಮೇಶ್ ಚಂದ್ರ ಬೆಂಗಳೂರು ಹಾಡಿದ್ದಾರೆ. ಗುರುರಾಜ್ ಎಂ.ಬಿ. ಅವರು ವಾದ್ಯ ಸಂಯೋಜನೆ ನೀಡಿದ್ದಾರೆ.

ಸಭಾ ಕಾರ್ಯಕ್ರಮ ಬಳಿಕ ಗಾಯಕ ರವೀಂದ್ರ ಪ್ರಭು ಮತ್ತು ಟಿ.ವಿ. ಗಿರಿ ಬಳಗದಿಂದ 'ಭಕ್ತಿಲಹರಿ' ಭಕ್ತಿ ಸಂಗೀತ ನಡೆಯಿತು. ಆರ್‌ಜೆ ಅಭಿಷೇಕ್ ನಿರೂಪಿಸಿದರು. ಸತೀಶ್ ಇರಾ ಕಾರ್ಯಕ್ರಮ ವಂದಿಸಿದರು.

ಅಡುಮರೋಳಿ ಮಾರಿಕಾಂಬಾ ಕ್ಷೇತ್ರದ ಜೀರ್ಣೋದ್ಧಾರ | ಪೂರ್ವಭಾವಿ ಸಮಾಲೋಚನಾ ಸಭೆ

ವರ್ಷದೊಳಗೆ ದೇವಳ ಜೀರ್ಣೋದ್ಧಾರಕ್ಕೆ ಪಣ: ಶಾಸಕ ಕಾಮತ್

ಮಂಗಳೂರು: ದೇವಸ್ಥಾನ-ದೈವಸ್ಥಾನ ಜೀರ್ಣೋದ್ಧಾರ ಕಾರ್ಯಗಳಲ್ಲಿ ಭಾಗವಹಿಸುವ ಅವಕಾಶ ಸಿಗುವುದು ಅದೊಂದು ಸುಯೋಗ. ಆ ಮೂಲಕ ನಮ್ಮನ್ನು ನಾವು ತೊಡಗಿಸಿಕೊಂಡಾಗ ಕ್ಷೇತ್ರದ ಅಭಿವೃದ್ಧಿಯ ಜತೆಗೆ ನಮ್ಮೊಳಗೆ ಚೈತನ್ಯತೆ ತುಂಬಲು ಸಾಧ್ಯವಿದೆ. ಆ ನಿಟ್ಟಿನಲ್ಲಿ ಅಡುಮರೋಳಿ ಮಾರಿಕಾಂಬಾ ಕ್ಷೇತ್ರದ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ನಾವೆಲ್ಲ ಜೊತೆಯಾಗೋಣ ಎಂದು ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಶಾಸಕ ಡಿ. ವೇದವ್ಯಾಸ ಕಾಮತ್ ಹೇಳಿದರು.

ಅಡುಮರೋಳಿ ಮಾರಿಕಾಂಬಾ ದೇವಸ್ಥಾನದ ಜೀರ್ಣೋದ್ಧಾರದ ಪೂರ್ವಭಾವಿಯಾಗಿ ಭಾನುವಾರ ನಡೆದ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು. ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕೆನ್ನುವುದು ಹಲವು ವರ್ಷಗಳ ಕನಸಾಗಿದ್ದು, ಅದನ್ನು ಸಾಕಾರಗೊಳಿಸುವಲ್ಲಿ ನಾನು ಸಂಪೂರ್ಣ ಸಹಕಾರ ನೀಡಲು ಬದ್ಧನಿದ್ದೇನೆ. ಈ



ಕ್ಷೇತ್ರಕ್ಕೆ ಸಂಬಂಧಪಟ್ಟವರು, ಮನೆ ಮನೆಯವರು ದೃಢ ಸಂಕಲ್ಪ ಮಾಡಿಕೊಂಡು ವರ್ಷದೊಳಗೆ ಜೀರ್ಣೋದ್ಧಾರ ಕಾರ್ಯ ಯಶಸ್ವಿಗೆ ಪಣತೊಡಬೇಕಾಗಿದೆ ಎಂದರು.

ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ಕಂಕನಾಡಿ ಗರಡಿ ಕ್ಷೇತ್ರದ ಅಧ್ಯಕ್ಷ ಚಿತ್ತರಂಜನ್ ಕೆ. ಮಾತನಾಡಿ, ಮರೋಳಿ ಗ್ರಾಮ ಆಧ್ಯಾತ್ಮಿಕವಾಗಿ, ಧಾರ್ಮಿಕ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದ ಗ್ರಾಮವಾಗಿದ್ದು, ಮರೋಳಿ ಮಾರಿಕಾಂಬಾ ಕ್ಷೇತ್ರದ ಅಭಿವೃದ್ಧಿ ಕಾರ್ಯ ಎಲ್ಲರೂ ಕೈಗೂಡಿದರೆ ತ್ರಾಸದಾಯಕವೇನಲ್ಲ, ವರ್ಷದೊಳಗೆ ಜೀರ್ಣೋದ್ಧಾರ ಕಾರ್ಯಪೂರ್ಣಗೊಳಿಸಲು ಪಣ ತೊಡೋಣ ಎಂದರು. ಮರೋಳಿ ಸೂರ್ಯನಾರಾಯಣ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕೆ.ಪಿ. ಶೆಟ್ಟಿ ಮಾತನಾಡಿ, ಮರೋಳಿ ಮಾರಿಕಾಂಬಾ ದೇವಸ್ಥಾನ ಜೀರ್ಣೋದ್ಧಾರ ಕಾರ್ಯಕ್ಕೆ ದೃಢಸಂಕಲ್ಪ ಮಾಡೋಣ. ನಾವು ನಿಮಿತ್ತ ಮಾತ್ರ, ಎಲ್ಲವೂ ದೇವಿ ಅನುಗ್ರಹಿಸಿದಂತೆ ಈಡೇಸಲಿದೆ ಎಂಬ ನಂಬಿಕೆಯಿರಲಿ ಎಂದರು.

ಕ್ಷೇತ್ರದ ಅರ್ಚಕ ರವಿ ಶಾಂತಿ, ಮಾರಿಕಾಂಬಾ ದೇವಸ್ಥಾನದ ಅಧ್ಯಕ್ಷ ನಾಗೇಶ್ ಸುವರ್ಣ ನಟ್ಟಿಮನೆ, ಆಡಳಿತ ಮೊಕ್ತೇಸರರಾದ ಚಂದ್ರಹಾಸ್ ಪಾಂಪುಮನೆ, ಜಗನ್ನಾಥ್ ದೊಡ್ಡಮನೆ, ಕಮಲಾಕ್ಷ ಸುವರ್ಣ ನಟ್ಟಿಮನೆ, ಕಾರ್ಯದರ್ಶಿ ಪ್ರಭಾಕರ್ ಪಾಂಪುಮನೆ, ಶಿಲ್ಪಿ ಯತೀಶ್, ಉದ್ಯಮಿಗಳಾದ ಪ್ರದೀಪ್ ಶೆಟ್ಟಿ, ಉಮೇಶ್ ಸಾಲ್ಯಾನ್, ಸುರೇಶ್, ಪ್ರಮುಖರಾದ ಪ್ರಸನ್ನ ಕುಮಾರ್, ಚಂದ್ರನಾಥ್ ಅತ್ತಾವರ, ವಿಜಯ್ ಕೋಟ್ಯಾನ್ ಪಡು, ಹರಿಣಾಕ್ಷ ಭಂಡಾರಿ, ಕೇಶವ ಮರೋಳಿ, ತೇಜಾಕ್ಷ ಸುವರ್ಣ, ಹರೀಶ್ ದೊಡ್ಡಮನೆ ಉಪಸ್ಥಿತರಿದ್ದರು. ದೇವ್‌ದಾಸ್ ಮರೋಳಿ, ಭಾಸ್ಕರ್ ಮರೋಳಿ ಕಾರ್ಯಕ್ರಮ ನಿರೂಪಿಸಿದರು.

ಮನಮೋಹನ್ ಸಿಂಗ್ ವಿವಿಯಿಂದ ಗೌರವ ಡಾಕ್ಟರೇಟ್

ಡಾ.ಮೋಹನ ಆಳ್ವಗೆ ಸನ್ಮಾನ

ಮೂಡುಬಿದಿರೆ: ಯಾರೂ ಹೆಸರು, ಹಣದ ಹಿಂದೆ ಹೋಗಬಾರದು. ನಮ್ಮ ಕೆಲಸ, ಸೇವೆ ಪ್ರಾಮಾಣಿಕವಾಗಿ ನಾವು ಮಾಡಬೇಕು. ನಮ್ಮ ಪ್ರಾಮಾಣಿಕ ಕಾರ್ಯಕ್ಕೆ ತಕ್ಕಂತೆ ಹಣ ಹೆಸರು ಎಲ್ಲವೂ ಅದಾಗಿಯೇ ಬಂದೇ ಬರುತ್ತದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಡಾ.ಎಂ. ಮೋಹನ ಆಳ್ವ ಅಭಿಪ್ರಾಯಿಸಿದರು.

ಬೆಂಗಳೂರಿನ ಡಾ. ಮನಮೋಹನ್ ಸಿಂಗ್ ನಗರ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಡಾ. ಎಂ. ಮೋಹನ್ ಆಳ್ವ ಅವರಿಗೆ ವರ್ಷ ಕ್ರಿಯೇಷನ್ಸ್ ವತಿಯಿಂದ ಆತ್ಮೀಯವಾಗಿ ಭಾನುವಾರ ಗೌರವಿಸಿ, ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ, ಅವರು ಸಮಯ ಪ್ರಜ್ಞೆ ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು. ಯುವ ಸಂಪತ್ತನ್ನು



ಸಮರ್ಥವಾಗಿ ಸದ್ವಿನಿಯೋಗ ಮಾಡಿಕೊಳ್ಳಬೇಕೆಂದರು. ವರ್ಷ ಕ್ರಿಯೇ ಷನ್ಸ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹರೀಶ್ ಕೆ.ಆದೂರು, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ಶ್ರೀನಿವಾಸ್ ನಾಯಕ್ ಇಂದಾಜೆ ಇದ್ದರು.

ಸುತ್ತಮುತ್ತ

ತ್ಯಾಜ್ಯ ವಿಂಗಡಣೆ ಮಾಡದೆ ನೀಡುವವರಿಗೆ ದಂಡ ಪ್ರಕ್ರಿಯೆ ಆರಂಭ



ಪುತ್ತೂರು: ಪುತ್ತೂರು ನಗರಸಭಾ ವ್ಯಾಪ್ತಿಯ ವಿವಿಧ ಭಾಗಗಳಲ್ಲಿ ತ್ಯಾಜ್ಯ ವಿಂಗಡಣೆ ಮಾಡದೆ ತ್ಯಾಜ್ಯವನ್ನು ಸಾಗಾಟ ವಾಹನಕ್ಕೆ ಹಸ್ತಾಂತರಿಸುತ್ತಿರುವ ವಿವಿಧ ಮನೆ, ವಾಣಿಜ್ಯ ಮಳಿಗೆ, ಶಾಲಾ – ಕಾಲೇಜು ಇತ್ಯಾದಿಗಳಿಗೆ ನಿಯಮಾನುಸಾರ ದಂಡ ವಿಧಿಸುವ ಪ್ರಕ್ರಿಯೆಯನ್ನು ನಗರಸಭಾ ಅಧಿಕಾರಿಗಳು ಆರಂಭಿಸಿದ್ದಾರೆ. ಘನ ತ್ಯಾಜ್ಯ ವಸ್ತುಗಳ ನಿರ್ವಹಣಾ ನಿಯಮಾವಳಿ–2016ರಂತೆ ಪ್ರತಿ ತ್ಯಾಜ್ಯ ಉತ್ಪಾದಕರೂ ತಮ್ಮಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ತ್ಯಾಜ್ಯ ಸಂಗ್ರಹಣಾ ವಾಹನಕ್ಕೆ ಹಸ್ತಾಂತರಿಸುವ ಮೊದಲು ಮೂಲದಲ್ಲೇ ತ್ಯಾಜ್ಯ ವಿಂಗಡಣೆ ಮಾಡುವುದು ಕಡ್ಡಾಯವಾಗಿದೆ. ಈಗಾಗಲೇ ನಾಗರಸಭಾ ವ್ಯಾಪ್ತಿಯ ಕೆಲವು ಭಾಗಗಳಲ್ಲಿ ತ್ಯಾಜ್ಯ ವಿಂಗಡಣೆಯಲ್ಲಿ ವಿಫಲರಾದವರಿಗೆ ದಂಡ ವಿಧಿಸಲಾಗಿದೆ.

ಉತ್ಪತ್ತಿಯಾದ ಘನ ತ್ಯಾಜ್ಯ ವಸ್ತುಗಳನ್ನು ತ್ಯಾಜ್ಯ ಸಂಗ್ರಹಣಾ ವಾಹನಕ್ಕೆ ಹಸ್ತಾಂತರಿಸುವ ಸಂದರ್ಭ ಸ್ವೀಕರಿಸಲಾಗುವ ತ್ಯಾಜ್ಯದ ಪ್ರಮಾಣಕ್ಕೆಅನುಸಾರವಾಗಿ ವಿವಿಧ ಸ್ಥರದಲ್ಲಿ ರೂ. 500, 1000 ಹೀಗೆ ಮುಂದುವರಿದಂತೆ ರೂ. 25,000 ವರೆಗೂ ದಂಡ ವಿಧಿಸಲು ಅವಕಾಶವಿದೆ. ಆರಂಭಿಕ ದಂಡನೆಯ ನಂತರವೂ ವಿಂಗಡಣೆ ವಿಫಲರಾದವರಿಂದ ತ್ಯಾಜ್ಯ ಸಂಗ್ರಹಣೆಯನ್ನು ಸ್ಥಗಿತ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ನಗರಸಭಾ ಪ್ರಕಟಣೆ ತಿಳಿಸಿದೆ.

ನೇರಳಾಡಿ ಶ್ರೀ ಮಲೆ ದೈವಗಳ ಪುನರ್ ಪ್ರತಿಷ್ಠೆ

ಸುಬ್ರಹ್ಮಣ್ಯ: ಗುತ್ತಿಗಾರು ಗ್ರಾಮದ ವಳಲಂಬೆಯ ನೇರಳಾಡಿ ಬದಿಕಾನದಲ್ಲಿ ಪುನರ್ ನಿರ್ಮಾಣಗೊಂಡ ಮಾಡದಲ್ಲಿ ಶ್ರೀ ಮಲೆ ಉಳ್ಳಾಕುಲು ಮತ್ತು ಸಪರಿವಾರ ದೈವಗಳ ಪುನರ್ ಪ್ರತಿಷ್ಠೆ ಕಲಶಾಭಿಷೇಕ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಡೆಯಿತು. ಬದಿಕಾನ ಮಾಡದಲ್ಲಿ ಸರ್ಪ ಸಂಸ್ಕಾರ, ಸಂಜೆ ಪುಣ್ಯಾಹ, ಸ್ಥಳಶುದ್ಧಿ, ವಾಸ್ತು ಹೋಮ, ರಾಘೋಘ್ನ ಹೋಮ, ವಾಸ್ತುಪೂಜೆ, ವಾಸ್ತುಬಲಿ ನಡೆಯಿತು. ನಂತರ ಗಣಪತಿ ಹೋಮ, ಪ್ರತಿಷ್ಠಾಂಗ ಹೋಮ, ಶ್ರೀ ಮಲೆ ದೈವಗಳ ಪ್ರತಿಷ್ಠೆ, ಗುಳಿಗ ದೈವದ ಶಿಲಾ ಪ್ರತಿಷ್ಠೆ, ಮಹಾಪೂಜೆ ನಡೆದು ಶ್ರೀ ದೈವಗಳ ಗುಂಡದ ಕೋಲು ಹೊಡೆಯುವುದು, ಮಧ್ಯಾಹ್ನ ಪ್ರಸಾದ ವಿತರಣೆ ನಡೆಯಿತು. ಸಂಜೆ ಆಶ್ಲೇಷ ಬಲಿ, ಪ್ರಸಾದ ವಿತರಣೆ, ರಾತ್ರಿ ದಂಬೆಕೋಡಿ ಭಂಡಾರ ಭಾವಡಿಯಿಂದ ಬದಿಕಾನದ ಮಾಡಕ್ಕೆ ದೈವಗಳ ಭಂಡಾರ ತರುವ ಕಾರ್ಯಕ್ರಮ ನಂತರ ನೇರಳಾಡಿ ಕೊಡಿಯಡಿಗೆ ಭಂಡಾರ ಕೊಂಡೊಯ್ಯಲಾಯಿತು.

ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ತೀರ್ಥರಾಮ ಎಚ್.ಬಿ. ಹೊಸೋಳಿಕೆ, ಗೌರವಾಧ್ಯಕ್ಷ ಗಂಗಾಧರ ಗೌಡ ದಂಬೆಕೋಡಿ, ಪ್ರಧಾನ ಕಾರ್ಯದರ್ಶಿ ರವೀಶ್ ಮೊಟ್ಟಮನೆ, ಕೋಶಾಕಾರಿ ಮಾಧವ ಮೂಕಮಲೆ, ಊರುಕಟ್ಟಿನ ಪ್ರಮುಖರಾದ ವೆಂಕಟ್ ದಂಬೆಕೋಡಿ, ಕೇಶವ ಎಚ್.ಬಿ. ಹೊಸೋಳಿಕೆ, ವೆಂಕಟ್ ವಳಲಂಬೆ ಮತ್ತಿತರರು ಉಪಸ್ಥಿತರಿದ್ದರು.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ

ಕುಂದಾಪುರ: ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿಗೆ ದಾನಿಗಳಾದ ವಿಜಯಾ ಕಾರ್ಕಳ ಅವರು ತಮ್ಮ ಸಹೋದರ ಹಟ್ಟಿಯಂಗಡಿ ಶಾಂತಾನಂದ ಭಟ್ ಸ್ಮಾರಕ ಕೊಡುಗೆಯಾಗಿ ನೀಡಿದ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಯಮಿ ದಿನೇಶ್ ಹೆಗ್ಡೆ ಮೊಳಹಳ್ಳಿ ಅವರು ಶನಿವಾರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಕಾರ್ಯದರ್ಶಿ ಯು.ಎಸ್.ಶೆಣೈ, ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಶುಭಕರಾಚಾರಿ, ಕಾಲೇಜಿನ ಪ್ರಾಕ್ತನ ವಿದ್ಯಾರ್ಥಿಗಳಾದ ದಾನಿಗಳಾದ ಕಿರಣ್ ಹಟ್ಟಿಯಂಗಡಿ, ಚಂದ್ರಶೇಖರ್ ಕೊತ್ವಾಲ್, ಭಾಸ್ಕರ ಗಾಣಿಗ, ನಾಮದೇವ ಖಾರ್ವಿ, ರಾಮಚಂದ್ರ, ಪ್ರಾಕ್ತನ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀಹರಿ ಚಾತ್ರ ಉಪಸ್ಥಿತರಿದ್ದರು.

ಪದಗ್ರಹಣ

ಸುಬ್ರಹ್ಮಣ್ಯ: ಜನತೆಗೆ ಸೇವೆ ನೀಡುವ ಮೂಲಕ ಉತ್ತಮ ಕಾರ್ಯವನ್ನು ಆಟೋ ಸಂಘವು ನಡೆಸುತ್ತಿದೆ. ಜನ ಹಿತ ಕಾರ್ಯವನ್ನು ನೆರವೇರಿಸುವುದು ತ್ರಿಚಕ್ರ ಸಾರಥಿಗಳ ಧ್ಯೇಯವಾಗಬೇಕು ಎಂದು ಗ್ರಾಮ ಪಂಚಾಯತ್‌ನ ನಿಕಟಪೂರ್ವ ಉಪಾಧ್ಯಕ್ಷ ರಾಜೇಶ್ ಎನ್.ಎಸ್. ಹೇಳಿದರು. ಸುಬ್ರಹ್ಮಣ್ಯದ ಕುಕ್ಕೆಶ್ರೀ ಆಟೋ ಚಾಲಕ ಮಾಲಕರ ಸಂಘದ 2026–27ನೇ ಸಾಲಿನ ಅಧ್ಯಕ್ಷ ಭುವನೇಶ್ ಆಗೋಳಿಕಜೆ ಮತ್ತು ತಂಡದ ಪದಗ್ರಹಣ ಸಮಾರಂಭ ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.






ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಕಾಸರಗೋಡು ನಗರದ ವ್ಯಾಕುಲ ಮಾತಾ ಕ್ರಿಶ್ಚಿಯನ್ ಚರ್ಚ್‌ಗೆ ಭೇಟಿ ನೀಡಿದರು. (ಚಿತ್ರ 1), ಕುಂಬಳೆ ಸಮೀಪದ ಅಂಬಿಲಡ್ಕ ದೈವಸ್ಥಾನಕ್ಕೆ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಭೇಟಿ ನೀಡಿದರು. (ಚಿತ್ರ 2), ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಅವರನ್ನು ಮಧೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಚೂರಿಯಲ್ಲಿ ಮುಸ್ಲಿಂಲೀಗ್ ಕಾರ್ಯಕರ್ತರು ಸ್ವಾಗತಿಸಿದರು. (ಚಿತ್ರ 3) ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಅವರ ಮೊಗ್ರಾಲ್ ಪುತ್ತೂರು ಪಂಚಾಯತ್ ಚುನಾವಣಾ ಪ್ರವಾಸವನ್ನು ಎರಿಯಾಲ್‌ನಲ್ಲಿ ಮುಸ್ಲಿಂಲೀಗ್ ಜಿಲ್ಲಾ ಕೋಶಾಧಿಕಾರಿ ಪಿ.ಎಂ.ಮುನೀರ್ ಹಾಜಿ ಉದ್ಘಾಟಿಸಿ ಮಾತನಾಡಿದರು. (ಚಿತ್ರ 4)

ಭಾರತ ದೇಶದ ರಕ್ಷಣಾ ವಿಭಾಗದ ಭೂ ಸೇನೆಯಲ್ಲಿ 24 ವರ್ಷ ಸೇವೆ ಸಲ್ಲಿಸಿ ನಿವೃತ್ತಿ

ಬೆಳಾಲುವಿನಲ್ಲಿ ಯೋಧನಿಗೆ ಹುಟ್ಟೂರ ಅಭಿನಂದನೆ

ಬೆಳ್ತಂಗಡಿ: ಭಾರತ ದೇಶದ ರಕ್ಷಣಾ ವಿಭಾಗದ ಭೂ ಸೇನೆಯಲ್ಲಿ 24 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ಹುಟ್ಟೂರಿಗೆ ಆಗಮಿಸಿದ ಬೆಳಾಲು ಗ್ರಾಮದ ಕಾಡಂಡ ನಿವಾಸಿ ವೀರ ಯೋಧ ಎ. ಸಿ. ಪಿ. ನಾಯಕ ಸುಬೇದಾರ್ ಮೋಹನ ಗೌಡ ಇವರಿಗೆ ಬೆಳಾಲು ಗ್ರಾಮದ ಸಂಘ ಸಂಸ್ಥೆಗಳ, ಊರವರ ಸಹಕಾರದಲ್ಲಿ ಅಭಿನಂದನಾ ಸಮಿತಿ ವತಿಯಿಂದ ಭಾನುವಾರ ಹುಟ್ಟೂರ ಅಭಿನಂದನಾ ಸಮಾರಂಭ ಬೆಳಾಲು ಎಸ್‌ಡಿಎಂ ಪ್ರೌಢ ಶಾಲೆಯಲ್ಲಿ ನಡೆಯಿತು.

ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ವಠಾರ ದಿಂದ ಸ್ವಾಗತ ಮೆರವಣಿಗೆ ಮೂಲಕ ಬರಮಾಡಿ ಕೊಳ್ಳಲಾಯಿತು. ಸ್ವಾಗತ ಮೆರವಣಿಗೆ ಉದ್ಘಾಟನೆಯನ್ನು ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯ ನೆರವೇರಿಸಿ ಮಾತನಾಡಿ, ಸಾಮರಸ್ಯದ ಬದುಕಿಗೆ ಮೂಲಕ ಕಾರಣ ಯೋಧರು ಇವರ ಸೇವೆಯ ಗೌರವಕ್ಕೆ 24 ವರ್ಷ ಕರ್ತವ್ಯ ನಿರ್ವಹಿಸಿದ ಮೋಹನ ಗೌಡರ ಸ್ವಾಗತ ಮೆರವಣಿಗೆ



ಅಭಿನಂದನೆ ಅರ್ಥಪೂರ್ಣ ಆಗಿದೆ. ಭಾರತ ಭೂಮಿ ಸೇವೆ ಮಾಡಲು ಕಾರಣ ಕರ್ತರಾದ ಅವರ ಕುಟುಂಬವರಿಗೆ ಅಭಿನಂದನೆಗಳು ಎಂದರು.

ಶಿಸ್ತು, ನಿಷ್ಠೆ ತ್ಯಾಗದ ಮೂಲಕ ಕರ್ತವ್ಯ

ಬೆಳಾಲಿನಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿದ ಆರಿಕೋಡಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಧರ್ಮದರ್ಶಿ ಹರೀಶ್ ಆರಿಕೋಡಿ ಮಾತನಾಡಿ, ದೇಶದ ಜನತೆ ನೆಮ್ಮದಿಯ ಜೀವನ ನಡೆಸಲು ದೇಶ ಸೈನಿಕರು ಕಾರಣ, ಇವರು ತಮ್ಮ ಶಿಸ್ತು, ನಿಷ್ಠೆ ತ್ಯಾಗದ ಮೂಲಕ ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಯುವ ಪೀಳಿಗೆಗೆ ಪ್ರೇರಣೆ

ಶಾಸಕ ಹರೀಶ್ ಪೂಂಜ ಮಾತನಾಡಿ, ಈ ಅಭಿನಂದನಾ ಕಾರ್ಯಕ್ರಮ ದೇಶ ಭಕ್ತಿಯ ಹುಟ್ಟೂರ ಸನ್ಮಾನ ಆಗಿದೆ. ಈ ಕಾರ್ಯಕ್ರಮದ ಮೂಲಕ ಯುವ ಪೀಳಿಗೆಗೆ ಪ್ರೇರಣೆಯಾಗಲಿದೆ. ವಿಧಾನ ಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್ ಮಾತನಾಡಿದರು.

> **ದೇಶಕ್ಕೇ ಮಾದರಿ**
>
> ನಿವೃತ್ತ ಯೋಧ ಮೋಹನ ಗೌಡರ ಹುಟ್ಟೂರ ಅಭಿನಂದನಾ ಕಾರ್ಯಕ್ರಮ ದೇಶಕ್ಕೆ ಮಾದರಿಯಾಗಿದೆ. ಇದರಿಂದ ಎರಡು ಉದ್ದೇಶ ಈಡೇರಿದೆ ಊರವರ ಪ್ರೀತಿ ಗೌರವ ಮತ್ತು ಮುಂದಿನ ಪೀಳಿಗೆಗೆ ಯುವಕರು ಸೇನೆಗೆ ಸೇರಲು ಪ್ರೇರಣೆಯಾಗಲಿದೆ. ಇಲ್ಲಿ ಗ್ರಾಮದ 45 ಸಂಘಟನೆಗಳು ಜಾತಿ, ಮತ ಪಂಥ ಬಿಟ್ಟು ಎಲ್ಲರೂ ಒಟ್ಟಾಗಿ ಸೇರಿ ತಮ್ಮ ಗೌರವ ತೋರಿಸಿದ್ದಾರೆ.
>
> ● ಕೆ.ಪ್ರತಾಪಸಿಂಹ ನಾಯಕ್

ಧಾರ್ಮಿಕ ಮುಖಂಡ ಕಿರಣ್ ಚಂದ್ರ ಪುಷ್ಪಗಿರಿ, ನಿವೃತ್ತ ಯೋಧ ಅತ್ಯುತ್ತಮ ಸೇನಾನಿ ಪ್ರಶಸ್ತಿ ಪುರಸ್ಕೃತ ಡಾ.ಗೋಪಾಲಕೃಷ್ಣ ಕಾಂಚೋಡು, ಅಖಿಲ ಕರ್ನಾಟಕ ಮಾಜಿ ಸೈನಿಕ ಸಂಘ ಬೆಳ್ತಂಗಡಿ ತಾಲೂಕು ಘಟಕದ ಅಧ್ಯಕ್ಷ ಎನ್. ಪಿ. ತಂಗಚ್ಚನ್ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಅಭಿನಂದನಾ ಸಮಿತಿ ಅಧ್ಯಕ್ಷ ಎಚ್. ಪದ್ಮ ಗೌಡ ಶುಭ ಹಾರೈಸಿದರು. ಸನ್ಮಾನ ಸ್ವೀಕರಿಸಿದ ನಿವೃತ್ತ ಯೋಧ ಮೋಹನ ಗೌಡ ಸೇನೆಯ ಅನುಭವ ಹಂಚಿಕೊಂಡರು. ಅಭಿನಂದನಾ ಸಮಿತಿಯ ಸಂಚಾಲಕ ದಾಮೋದರ ಗೌಡ ಸುರುಳಿ, ಕೋಶಾಧಿಕಾರಿ ಸುರೇಂದ್ರ ಗೌಡ, ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಯೋಧರ ತಂದೆ ಮೋನಪ್ಪ ಗೌಡ, ತಾಯಿ ಬೂದಮ್ಮ, ಪತ್ನಿ ಜಯಶ್ರೀ,ಮಕ್ಕಳಾದ ವಂಶಿ, ದಿಯಾನ್ ಇವರನ್ನು ಬೆಳಾಲಿನ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಊರವರು, ಮಾಜಿ ಸೈನಿಕರು ಅಭಿಮಾನಿಗಳು, ಮೋಹನ ಗೌಡರ ಕುಟುಂಬ ವರ್ಗದವರು ಹಾಜರಿದ್ದು ಸನ್ಮಾನಿಸಿದರು.

ಅಭಿನಂದನಾ ಕಾರ್ಯದರ್ಶಿ ಧರ್ಮೇಂದ್ರ ಕುಮಾರ್ ಸ್ವಾಗತಿಸಿದರು. ಶಿಕ್ಷಕ ಮಹೇಶ್ ಪುಳಿತ್ತಡಿ ಮತ್ತು ಉಪನ್ಯಾಸಕ ಬೆಳಿಯಪ್ಪ ಗೌಡ ಕಾರ್ಯಕ್ರಮ ನಿರೂಪಿಸಿದರು. ಸಮಿತಿ ಸದಸ್ಯ ಸುಲೈಮಾನ್ ಭೀಮಂಡೆ ವಂದಿಸಿದರು. ಉಮೇಶ್ ಮಂಜೊತ್ತು ಸನ್ಮಾನ ಪತ್ರ ವಾಚಿಸಿದರು.

ಏ.11ರಂದು ಸುಳ್ಯ ಭಾರದ್ವಾಜಾಶ್ರಮಕ್ಕೆ ಕಾಂಚಿ ಕಾಮಕೋಟಿ ಶ್ರೀ ಆಗಮನ



ಸುಳ್ಯ: ಅರಂಬೂರು ಭಾರದ್ವಾಜಾಶ್ರಮಕ್ಕೆ ಕಾಂಚಿ ಕಾಮಕೋಟಿ ಪೀಠದ ಶ್ರೀ ಶಂಕರ ವಿಜಯೇಂದ್ರ ಸರಸ್ವತಿ ಮಹಾಸ್ವಾಮಿಗಳು ಏ.11 ಶನಿವಾರ ಮಧ್ಯಾಹ್ನ ಆಗಮಿಸಲಿದ್ದಾರೆ. ನವೀಕೃತ ಶ್ರೀ ಕಾಂಚಿ ಕಾಮಕೋಟಿ ವೇದ ವಿದ್ಯಾಲಯವನ್ನು ಉದ್ಘಾಟಿಸಿ ಆಶೀರ್ವಚನ ನೀಡಲಿದ್ದಾರೆ. ಈ ಸಂದರ್ಭ ಈ ಪರಿಸರದಲ್ಲಿ ಇರುವ ವಸಂತ ವೇದಪಾಠ ಶಾಲೆ, ನಿರಂತರ ವೇದಪಾಠ ಶಾಲೆ ಹಾಗೂ ವೇದ ವಿದ್ವಾಂಸರನ್ನು ಗೌರವಿಸಿ ಆಶೀರ್ವದಿಸಲಿದ್ದಾರೆ.

ವೇದ ವಿದ್ಯಾಲಯದಲ್ಲಿ ಕಲಿತು ಅನಂತರ ಉನ್ನತ ಅಧ್ಯಯನ ನಡೆಸಿದ ವಿದ್ಯಾರ್ಥಿಗಳಿಗೆ ಆಶೀರ್ವದಿಸಲಿದ್ದಾರೆ ಎಂದು ವಿದ್ಯಾಲಯದ ವ್ಯವಸ್ಥಾಪಕರಾದ ರವಿಶಂಕರ್ ಭಾರದ್ವಾಜ್, ಗಣೇಶ ಕೃಷ್ಣ ಭಟ್ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.



ಮಂಗಳೂರಿನ ಮಣ್ಣಗುಡ್ಡೆಯ ಶ್ರೀ ಈಶ್ವರ ಸ್ಥಾನದಲ್ಲಿ ಇತ್ತೀಚೆಗೆ ನಡೆದ ನೇಮದ ಸಂದರ್ಭ ಧರ್ಮ ದೈವಗಳಿಗೆ ನೂತನವಾಗಿ ನಿರ್ಮಿಸಿದ ಬಂಡಿಯನ್ನು ಸಮರ್ಪಿಸಲಾಯಿತು. ಈ ಸಂದರ್ಭ ಶಾಸಕ ವೇದವ್ಯಾಸ ಕಾಮತ್, ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರ ಕೀರ್ತಿ ಸುವರ್ಣ, ಸೇವಾ ಸಮಿತಿ ಅಧ್ಯಕ್ಷ ದಿನಕರ ಶೆಟ್ಟಿ, ದೈವ ಪಾತ್ರಿ ಅಣ್ಣು ಪೂಜಾರಿ, ಗಣೇಶ್ ಪ್ರಸಾದ್ ಮತ್ತಿತರರಿದ್ದರು.

ಕುಣಿತ ಭಜನಾ ಸ್ಪರ್ಧೆಯ ವಿಜೇತರು

ಕುಂದಾಪುರ : ಗುಜ್ಜಾಡಿ ಗ್ರಾಮದ ನಾಯಕವಾಡಿಯ ಬಿಲ್ಲವರ ಸಮಾಜ ಸೇವಾ ಸಂಘ ಶ್ರೀರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣಗುರು ಮಂದಿರ ಇದರ 50ರ ಸಂಭ್ರಮಾಚರಣೆ 'ಸುವರ್ಣ ಸಂಭ್ರಮ' ಹಾಗೂ ಸೀತಾರಾಮಚಂದ್ರ ಕಲ್ಯಾಣೋತ್ಸವದ ಅಂಗವಾಗಿ ಶುಕ್ರವಾರ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಆಹ್ವಾನಿತ ತಂಡಗಳ ಕುಣಿತ ಭಜನಾ ಸ್ಪರ್ಧೆಯಲ್ಲಿ ಸೇವಾ ಭಾರತಿ ಭಜನಾ ಮಂಡಳಿ ಕಾರ್ಕಳ ತಂಡ ಪ್ರಥಮ ಸ್ಥಾನ ಪಡೆದುಕೊಂಡಿದೆ. ಮಾಣಿ ಸಿದ್ಧಲಿಂಗೇಶ್ವರ ಭಜನಾ ಮಂಡಳಿ ದ್ವಿತೀಯ ಮತ್ತು ಶ್ರೀದೇವಿ ಭಜನಾ ಮಂಡಳಿ ನೀರೆಬೈಲೂರು ಕಾರ್ಕಳ ತೃತೀಯ ಸ್ಥಾನವನ್ನು ಪಡೆದುಕೊಂಡಿತು.

ವಿಜೇತರಿಗೆ ಶ್ರೀರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣಗುರು ಮಂದಿರದ ಅಧ್ಯಕ್ಷ ನಾರಾಯಣ ಟಿ.ಪೂಜಾರಿ ಬಹುಮಾನ ವಿತರಿಸಿ ಶುಭ ಹಾರೈಸಿದರು. ಬೆಣ್ಗೇರೆ ಶ್ರೀ ನಾಗ ದೇವಸ್ಥಾನದ ಅಧ್ಯಕ್ಷ ಉಮೇಶ ಎಲ್.ಮೇಸ್ತ, ಮಂದಿರದ ಕಾರ್ಯದರ್ಶಿ ಶೇಖರ ಪೂಜಾರಿ, ಪ್ರಕಾಶ ಪೂಜಾರಿ, ತಮ್ಮಯ್ಯ ದೇವಾಡಿಗ ಮತ್ತಿತರರಿದ್ದರು.

ರಕ್ತದಾನದಿಂದ ಮಾನವೀಯ ಸೇವಾ ಕಾರ್ಯಕ್ಕೆ ಪ್ರೇರಣೆ: ಪುಷ್ಪರಾಜ್ ಜೈನ್



ಮಂಗಳೂರು: ಪ್ರಾಣಾಪಾಯದಲ್ಲಿರುವ ವ್ಯಕ್ತಿಯ ಜೀವ ಉಳಿಸಲು ನೆರವಾಗುವ ರಕ್ತದಾನ ಅತ್ಯಂತ ಶ್ರೇಷ್ಠ ದಾನವಾಗಿದೆ. ವಿದ್ಯಾರ್ಥಿಗಳು ಕಾಲೇಜು ಜೀವನದಲ್ಲೇ ಸ್ವಯಂ ಪ್ರೇರಿತರಾಗಿ ರಕ್ತದಾನಕ್ಕೆ ಮುಂದಾಗಿರುವುದು ಭವಿಷ್ಯದಲ್ಲಿ ಇನ್ನಷ್ಟು ಮಾನವೀಯ ಸೇವಾ ಕಾರ್ಯಗಳಿಗೆ ಪ್ರೇರಣೆಯಾಗಲಿದೆ ಎಂದು ದ.ಕ.ಜಿಲ್ಲಾ ರೆಡ್‌ಕ್ರಾಸ್ ಸೊಸೈಟಿ ನಿರ್ದೇಶಕ ಪುಷ್ಪರಾಜ್ ಜೈನ್ ಹೇಳಿದರು.

ನಗರದ ರಥಬೀದಿಯ ಡಾ.ಪಿ.ದಯಾನಂದ ಪೈ –ಡಾ.ಪಿ.ಸತೀಶ್ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ದ.ಕ.ಜಿಲ್ಲಾ ರೆಡ್‌ಕ್ರಾಸ್ ಸೊಸೈಟಿ ಮತ್ತು ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘದ ಸಹಯೋಗದಲ್ಲಿ ಶನಿವಾರ ನಡೆದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಜಯಪ್ರಕಾಶ್ ಭಂಡಾರಿ ಮಾತನಾಡಿ, ಈ ಶೈಕ್ಷಣಿಕ ವರ್ಷದಲ್ಲಿ 2ನೇ ಬಾರಿ ರಕ್ತದಾನ ಶಿಬಿರ ಆಯೋಜಿಸಿದ್ದು, ವಿದ್ಯಾರ್ಥಿ ಗಳು ಸೇವಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದರು.

ದ.ಕ.ಜಿಲ್ಲಾ ರೆಡ್‌ಕ್ರಾಸ್ ಸೊಸೈಟಿ ನಿರ್ದೇಶಕ ಪಿ.ಬಿ.ಹರೀಶ್ ರೈ, ಕಾರ್ಯದರ್ಶಿ ಕಿಶೋರ್ ಚಂದ್ರ ಹೆಗ್ಡೆ ಅತಿಥಿಗಳಾಗಿದ್ದರು. ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯೋಜಕ ದೇವಿಪ್ರಸಾದ್, ಜ್ಯೋತಿ ಪ್ರಿಯಾ, ಯೂತ್ ರೆಡ್‌ಕ್ರಾಸ್ ಸಂಯೋಜಕ ಡಾ.ಅಶೋಕ್ ಸಿ.ಎಚ್., ಡಾ.ಜ್ಯೋತಿ ಪಿ., ಮೈತ್ರಿ ಬಿ., ವಿದ್ಯಾರ್ಥಿ ಸಂಯೋಜಕರಾದ ಕೌಶಿಕ್, ತೃಷಾ , ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ದೀಕ್ಷಿತ್ , ಮನಿಷಾ ಉಪಸ್ಥಿತರಿದ್ದರು.

ವ್ಯಕ್ತಿತ್ವ ವಿಕಸನ ರೂಪಿಸಲು ಎನ್ನೆಸ್ಸೆಸ್ ಶಿಬಿರ ಸಹಕಾರಿ: ಶಾಸಕ ಗಂಟಿಹೊಳೆ



ಕುಂದಾಪುರ: ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಸೇವಾ ಮನೋಭಾವ ತುಂಬುತ್ತದೆ. ಎನ್ನೆಸ್ಸೆಸ್ ಶಿಬಿರಗಳು ವ್ಯಕ್ತಿತ್ವ ವಿಕಸನ ರೂಪಿಸುವಲ್ಲಿ ಸಹಕಾರಿ. ವಿದ್ಯಾರ್ಥಿಗಳು ಶಿಬಿರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ವ್ಯಕ್ತಿತ್ವ ರೂಪಿಸಿಕೊಳ್ಳಿ ಎಂದು ಬೈಂದೂರು ಶಾಸಕ ಗುರುರಾಜ ಶೆಟ್ಟಿ ಗಂಟಿಹೊಳೆ ಕರೆ ನೀಡಿದರು.

ಸಿದ್ದಾಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಲಾದ ಕುಂದಾಪುರ ಭಂಡಾರ್ಕಾರ್ಸ್ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಂಡಾರ್ಕಾರ್ಸ್ ಕಾಲೇಜಿನ ಪ್ರಾಂಶುಪಾಲ ಡಾ.ಶುಭಕರಾ ಚಾರಿ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ಸತ್ಯನಾರಾಯಣ, ಸಿದ್ದಾಪುರ ಪಿಡಿಒ ನಾಗೇಂದ್ರ, ಜಿ.ಪಂ. ಮಾಜಿ ಸದಸ್ಯ ರೋಹಿತ್ ಕುಮಾರ್ ಶೆಟ್ಟಿ, ಗ್ರಾ.ಪಂ.ಮಾಜಿ ಅಧ್ಯಕ್ಷ ಶೇಖರ್ ಕುಲಾಲ್, ರಾಮದಾಸ ಪ್ರಭು ಸಿದ್ದಾಪುರ, ಹಿರಿಯ ನಾಗರಿಕೆ ವೇದಿಕೆ ಅಧ್ಯಕ್ಷ ಭೋಜ ಶೆಟ್ಟಿ, ಸಿದ್ದಾಪುರ ಸರಕಾರಿ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಚಂದ್ರ ಕುಲಾಲ್, ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ವಿಶ್ವನಾಥ ತುಂಬಿಕಲ್ಲಾಯ, ಎಸ್. ಕೆ.ವಾಸುದೇವ ಪೈ, ಎನ್ನೆಸ್ಸೆಸ್ ಯೋಜನಾಧಿಕಾರಿ ಅರುಣ್ ಎ. ಎಸ್. ಮೊದಲಾದವರು ಈ ಸಂದರ್ಭ ಉಪಸ್ಥಿತರಿದ್ದರು.

ಎನ್ನೆಸ್ಸೆಸ್ ಯೋಜನಾಧಿಕಾರಿ ರಾಮಚಂದ್ರ ಆಚಾರ್ ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿ, ವಿದ್ಯಾರ್ಥಿನಿಯರಾದ ಅಶ್ವಿನಿ ನಿರೂಪಿಸಿ. ವತ್ಸಲಾ ವಂದಿಸಿದರು.

ನಾಪೋಕ್ಲುವಿನ ಪೊನ್ನು ಮುತ್ತಪ್ಪ ದೇವರ ವಾರ್ಷಿಕ ಉತ್ಸವ ಸಂಪನ್ನ



ನಾಪೋಕ್ಲು: ಕೊಡಗಿನ ಪ್ರಪ್ರಥಮ ಪೊನ್ನು ಮುತ್ತಪ್ಪ ದೇವಸ್ಥಾನ, ಎರಡನೇ ಪರಶಿನಿ ಎಂದು ಪ್ರಖ್ಯಾತವಾಗಿರುವ ನಾಪೋಕ್ಲುವಿನ ಶ್ರೀ ಪೊನ್ನು ಮುತ್ತಪ್ಪ ದೇವರ ವಾರ್ಷಿಕ ಉತ್ಸವ ಭಾನುವಾರ ಸಂಪನ್ನಗೊಂಡಿತು.

ಶನಿವಾರ ಮಧ್ಯಾಹ್ನ ಪೈಂಗುತ್ತಿ ಹಾಗೂ ಸಂಜೆ ಶ್ರೀ ಮುತ್ತಪ್ಪ ದೇವರ ಕಳಸ ನಡೆಯಿತು. ಪವಿತ್ರ ಕಾವೇರಿ ನದಿಯಲ್ಲಿ ಸ್ನಾನದ ನಂತರ ಪ್ರಖ್ಯಾತ ಕೇರಳ ಚಂಡೆಗಳೊಂದಿಗೆ ನಾಪೋಕ್ಲು ಪೇಟೆಯ ಮುಖ್ಯಬೀದಿಯಲ್ಲಿ ಸನ್ನಿಧಾನಕ್ಕೆ ಮೆರವಣಿಗೆ ಮೂಲಕ ಆಗಮನವಾಯಿತು. ಈ ಸಂದರ್ಭ ಸಿಡಿಮದ್ದು ಪ್ರದರ್ಶನ,ಕೇರಳದ ನೃತ್ಯ , ವಿದ್ಯುತ್ ದೀಪಗಳಿಂದ ಅಲಂಕರಿಸಿದ ಮಂಟಪ ಮತ್ತಿತರ ಮನರಂಜನಾ ಕಾರ್ಯಕ್ರಮಗಳು ನಡೆದು ಜನಮನ ಆಕರ್ಷಿಸಿದವು, ರಾತ್ರಿ ವೆಳ್ಳಾಟಂ ಬಳಿಕ ಕುಟ್ಟಿಚಾತ ಮತ್ತು ಗುಳಿಗ ದೇವರ ವೆಳ್ಳಾಟಂ ನಡೆದವು.

ಈ ಸಂದರ್ಭ ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ಎ.ಕೆ ಚಂದ್ರನ್ ,ಉಪಾಧ್ಯಕ್ಷರಾದ ಎಂ.ಕೆ ತಂಗ, ಕಾರ್ಯದರ್ಶಿ ಅನಿಲ್ ಪಿ.ಕೆ ,ಉಪ ಕಾರ್ಯದರ್ಶಿ ಸುಕುಮಾರ್ ಟಿ.ಕೆ, ಖಜಾಂಚಿಮಹೇಶ್ ಮೆನೋನ್. ದೇವಾಲಯದ ಪೂಜಾರಿ ಹರಿದಾಸ್ ಮತ್ತು ಆಡಳಿತ ಮಂಡಳಿ ಸದಸ್ಯರು ಊರ ಹಾಗೂ ಪರ ಊರಿನ ಭಕ್ತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಪುತ್ತೂರು ವಿವೇಕಾನಂದ ಪದವಿಪೂರ್ವ ಕಾಲೇಜಿನಲ್ಲಿ 'ಯುರೇಕಾ-2026'

ಎಸೆಸೆಲ್ಸಿ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ವ್ಯಕ್ತಿತ್ವ ವಿಕಸನ ಶಿಬಿರ

ಪುತ್ತೂರು: ನೆಹರುನಗರದಲ್ಲಿರುವ ವಿವೇಕಾನಂದ ಪದವಿಪೂರ್ವ ಕಾಲೇಜಿನಲ್ಲಿ ಏ.6ರಿಂದ 11ರ ತನಕ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ವ್ಯಕ್ತಿತ್ವ ವಿಕಸನ ಶಿಬಿರ 'ಯುರೇಕಾ–2026' ನಡೆಯಲಿದೆ. ಆರು ದಿನಗಳ ಕಾಲ ನಡೆಯುವ ಈ ಶಿಬಿರದಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಸಂಪನ್ಮೂಲ ವ್ಯಕ್ತಿಗಳು ಅವಧಿಗಳನ್ನು ನಡೆಸಿ ಕೊಡಲಿದ್ದಾರೆ.

ಉದ್ಘಾಟನಾ ಕಾರ್ಯಕ್ರಮ

ಏ.6ರಂದು ವಿವೇಕಾನಂದ ಕೇಂದ್ರೀಯ ವಿದ್ಯಾಲಯದ ಸಂಚಾಲಕ ಭರತ್ ಪೈ ಶಿಬಿರವನ್ನು ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ರವೀಂದ್ರ ಪಿ. ವಹಿಸಲಿದ್ದಾರೆ. ವಿವೇಕಾನಂದ ಪ.ಪೂ. ಕಾಲೇಜಿನ ಪ್ರಾಂಶುಪಾಲ ದೇವಿಚರಣ್ ರೈ



ಎಂ. ಉಪಸ್ಥಿತರಿರಲಿದ್ದಾರೆ.

ಸಂಪನ್ಮೂಲ ವ್ಯಕ್ತಿಗಳು

ಶಿಬಿರದಲ್ಲಿ ಬೆಂಗಳೂರಿನ ಶೈಕ್ಷಣಿಕ ಸಲಹೆಗಾರರು ಹಾಗೂ ಸೃಜನಶೀಲ ಪ್ರಯೋಗಗಳ ಮೂಲಕ ಹೆಸರುವಾಸಿಯಾದ ರಾಜೇಶ್ ಭಟ್, ಹಲವಾರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಗಾಳಿಪಟೋತ್ಸವಗಳಲ್ಲಿ ಭಾಗವಹಿಸಿದ ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದ, ಪರಿಸರ ತಜ್ಞ ದಿನೇಶ್ ಹೊಳ್ಳ ಸೇರಿದಂತೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಲಿದ್ದಾರೆ ಹಾಗೂ ವಿದ್ಯಾರ್ಥಿಗಳಿಗೆ ವಿಶೇಷ ಅವಧಿಗಳನ್ನು ನಡೆಸಿಕೊಡಲಿದ್ದಾರೆ.

> **ಹೆಸರು ನೋಂದಾಯಿಸಿ**
>
> ಶಿಬಿರದಲ್ಲಿ ಭಾಗವಹಿಸಲು ಆಸಕ್ತ ವಿದ್ಯಾರ್ಥಿಗಳು www.vivekanandapuc.com/eureka ಲಿಂಕ್ ಮೂಲಕ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಲಾಗುವುದು. ಮಾಹಿತಿಗೆ ದೂ.ಸಂ. 8095525692, 9961314385, 9972635348 ಸಂಪರ್ಕಿಸಬಹುದೆಂದು ಪ್ರಕಟನೆ ತಿಳಿಸಿದೆ.

ಆರು ದಿನಗಳ ಕಾಲ ನಡೆಯುವ ಶಿಬಿರದಲ್ಲಿ ಏ.6ರಿಂದ ಆರಂಭಗೊಂಡು ಪ್ರತಿದಿನ ಬೆಳಗ್ಗೆ 9ರಿಂದ ಸಂಜೆ 3.30ರವರೆಗೆ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ, ಜೀವನ ಕೌಶಲ್ಯ, ತಂತ್ರಜ್ಞಾನ, ಕಲೆ, ವಾಣಿಜ್ಯ, ವಿಜ್ಞಾನ ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ವಿವಿಧ ಅವಧಿಗಳು ಹಾಗೂ ಚಟುವಟಿಕೆಗಳು ನಡೆಯಲಿವೆ. ದಕ್ಷಿಣ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಗಳನ್ನೊಳಗೊಂಡಂತೆ ರಾಜ್ಯದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಆಗಮಿಸುವ ನಿರೀಕ್ಷೆಯಿದ್ದು, ದೂರದೂರುಗಳಿಂದಆಗಮಿಸುವಶಿಬಿರಾರ್ಥಿಗಳಿಗೆ ಕಾಲೇಜಿನಿಂದ ವಸತಿ ವ್ಯವಸ್ಥೆ ಆಯೋಜಿಸಲಾಗಿದೆ. ಬೆಟ್ಟಂಪಾಡಿ, ಪೆರ್ಲ , ಉಪ್ಪಿನಂಗಡಿಯಿಂದ ಕಾಲೇಜು ಬಸ್ ವ್ಯವಸ್ಥೆ ಇರಲಿದೆ.

ಮುಲ್ಕಾಡು ಶ್ರೀರಾಮ ದೇವರ ಬಾಲಾಲಯ ಪ್ರತಿಷ್ಠೆ

ಮಂಗಳೂರು: ಕಾವೂರು, ಮುಲ್ಲಕಾಡು, 4ನೇ ಮೈಲು ಶ್ರೀ ರಾಮ ಭಜನಾ ಮಂದಿರದ ಜೀರ್ಣೋದ್ಧಾರ ಹಿನ್ನೆಲೆಯಲ್ಲಿ ಬಾಲಾಲಯ ಪ್ರತಿಷ್ಠೆ ಭಾನುವಾರ ವೇದ ಮೂರ್ತಿ ದೇರೆಬೈಲ್ ವಿಠಲದಾಸ ತಂತ್ರಿ ಅವರ ಮಾರ್ಗದರ್ಶನದಲ್ಲಿ ಜರುಗಿತು.

ಈ ಸಂದರ್ಭದಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯರಾದ ದೀಪಕ್ ಪೂಜಾರಿ, ಸುಚೇತನ್ ಪೂಜಾರಿ, ಗಾಯತ್ರಿ ರಾವ್, ಶ್ರೀರಾಮ ಭಜನಾ ಮಂದಿರದ ಗೌರವಾಧ್ಯಕ್ಷ ಕೆ. ಪೂವಪ್ಪ ಬಂಗೇರ, ಅಧ್ಯಕ್ಷರಾದ ಶಂಕರ ಮೇಸ್ತ್ರಿ ಕಾರ್ಯದರ್ಶಿ ಜಗನ್ನಾಥ ಕರ್ಕೇರ, ಕೋಶಾಧಿಕಾರಿ ವಿಶು ಕುಮಾರ್, ಪ್ರಧಾನ ಅರ್ಚಕರಾದ ದೇವದಾಸ್ ಕೋಟ್ಯಾನ್, ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷರಾದ ಕೃಷ್ಣ ಕುಲಾಲ್, ಅಧ್ಯಕ್ಷರಾದ ಪ್ರತೀಕ್ ಯು. ಪೂಜಾರಿ, ಕಾರ್ಯದರ್ಶಿ ಚಂದ್ರಶೇಖರ್ ಕುಲಾಲ್, ಕೋಶಾಧಿಕಾರಿ ಮಂಜುನಾಥ ಪ್ರಭು ಹಾಗೂ ಸಮಿತಿ ಸದಸ್ಯರು ಮೊದಲಾದವರು ಉಪಸ್ಥಿತರಿದ್ದರು.



68 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ

ಶ್ರೀ ರಾಮ ಭಜನಾ ಮಂದಿರದ ಸಂಪೂರ್ಣ ಪುನರ್ನಿರ್ಮಾಣ ಕಾರ್ಯಕ್ಕೆ ಮುಂದಾಗಿದ್ದು, ಅದಕ್ಕಾಗಿ ಈಗಾಗಲೆ ನೂತನ ಜೀರ್ಣೋದ್ಧಾರ ಸಮಿತಿ ರಚಿಸಲಾಗಿದೆ. ಅಂದಾಜು 68 ಲಕ್ಷ ರೂ. ವೆಚ್ಚದಲ್ಲಿ ನೂತನ ಮಂದಿರದ ನಿರ್ಮಾಣವಾಗಲಿದ್ದು, ಭಕ್ತರ ಸಂಪೂರ್ಣ ಸಹಕಾರದಿಂದ ಅತ್ಯಂತ ಶೀಘ್ರದಲ್ಲಿ ನೂತನ ಮಂದಿರ ನಿರ್ಮಾಣವಾಗಲಿದೆ ಎಂದು ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ.

ಸುತ್ತಮುತ್ತ

ಬಪ್ಪನಾಡು: ಶ್ರೀದೇವರ ಪೇಟೆ ಸವಾರಿ, ಕಟ್ಟೆ ಪೂಜೆ

ಮುಲ್ಕಿ: ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ರಾತ್ರಿ ಶ್ರೀ ದೇವರ ಉತ್ಸವ ಬಲಿ, ಸಣ್ಣ ರಥೋತ್ಸವ, ಪಲ್ಲಕ್ಕಿ ಉತ್ಸವ , ಶ್ರೀ ದೇವರಪೇಟೆ ಸವಾರಿ ಕ್ಷೇತ್ರದ ತಂತ್ರಿ ಶಿಬರೂರು ಗೋಪಾಲಕೃಷ್ಣ



ತಂತ್ರಿ, ಅರ್ಚಕ ನರಸಿಂಹ ಭಟ್, ಶ್ರೀಪತಿ ಉಪಾಧ್ಯಾಯ ಪೌರೋಹಿತ್ಯದಲ್ಲಿ ನಡೆಯಿತು. ಈ ಸಂದರ್ಭ ಶ್ರೀದೇವರು ಪಂಚಮಹಲ್ ಶ್ರೀ ಸದಾಶಿವ ದೇವಸ್ಥಾನ ಹಾಗೂ ಮಹಾಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಿ ಎರಡು ದೇವರುಗಳಿಗೆ ಏಕಕಾಲದಲ್ಲಿ ಪೂಜೆ ನಡೆಯಿತು. ಈ ಸಂದರ್ಭ ದೇವಸ್ಥಾನದ ಆನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಅಭಿವೃದ್ಧಿ ಸಮಿತಿಯ ಡಾ. ಹರಿಕೃಷ್ಣ ಪುನರೂರು, ಅತುಲ್ ಕುಡ್ವ, ಸತೀಶ್ ಭಂಡಾರಿ,ಉದ್ಯಮಿ ಶರತ್ ಸಾಲ್ಯಾನ್ ಬೆಂಗಳೂರು, ಸುನಿಲ್ ಆಳ್ವ, ಗೋಪಾಲಕೃಷ್ಣ ಭಟ್, ಶ್ರೀನಾಥ್ ಭಟ್, ಸತೀಶ್ ಅಂಚನ್, ಕಿರಣ್ ಶೆಟ್ಟಿ ಕೋಲ್ನಾಡು ಗುತ್ತು, ಸತೀಶ್ ಶೆಟ್ಟಿ ಪೇಟೆಮನೆ, ಡಾ. ಹರಿಶ್ಚಂದ್ರ ಪಿ ಸಾಲ್ಯಾನ್, ಅಶ್ವಿನ್ ಆಳ್ವ ಕುಬೆವೂರು ಚಂದ್ರಶೇಖರ್ ಸುವರ್ಣ,ನಾಗಸ್ವರ ವಾದಕ ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್ ವರ್ಮ, ಕಾರ್ತಿಕ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದರು . ಜಾತ್ರಾ ಮಹೋತ್ಸವದ ಪ್ರಯುಕ್ತ ಏ.7ರಂದು ಹಗಲು ರಥೋತ್ಸವ, ರಾತ್ರಿ ಶಯನೋತ್ಸವ, ಏ.8ರಂದು ಬೆಳಿಗ್ಗೆ ಕವಾಟೋದ್ಘಾಟನೆ, ರಾತ್ರಿ ಮಹಾರಥೋತ್ಸವ ನಡೆಯಲಿದೆ.

ನಂದನಹಿತ್ಲು ದೈವಸ್ಥಾನದಲ್ಲಿ ನೇಮ

ಬಂಟ್ವಾಳ: ಇಲ್ಲಿನ ಪೇಟೆಯಲ್ಲಿರುವ ನಂದನಹಿತ್ಲು ಶ್ರೀ ವೈದ್ಯನಾಥ, ಅರಸು, ಜುಮಾದಿ ಬಂಟ ದೈವಸ್ಥಾನದಲ್ಲಿ ಶ್ರೀ ವೈದ್ಯನಾಥ ದೈವದ ನೇಮವು



ಶುಕ್ರವಾರ ರಾತ್ರಿ ಸಂಪನ್ನಗೊಂಡಿತು.

ಸಂಜೆಯಿಂದ ರಾತ್ರಿ 9 ಗಂಟೆಯವರೆಗೆ ವಿವಿಧ ಭಜನಾ ತಂಡಗಳಿಂದ ಭಜನಾ ಸಂಕೀರ್ತನೆ ನಡೆಯಿತು. ಬಳಿಕ ಇಲ್ಲಿನ ಪ್ರಮುಖ ದೈವ ಶ್ರೀ ವೈದ್ಯನಾಥನಿಗೆ ನರ್ತನ ಸೇವೆ ನಡೆಯಿತು. ಪೊಳಲಿ ಗಿರಿಪ್ರಕಾಶ್ ತಂತ್ರಿಯವರು, ದೈವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ, ನಾಲ್ಕು ಮನೆತನದವ ವಿಶ್ವನಾಥ ಪೊಣ್ಣಂಗಿಲಗುತ್ತು, ಲೋಕೇಶ್ ಬಂಗೇರ ಗಾಣದ ಪಡ್ಪು, ಲೋಕನಾಥ ಬಡಕೊಟ್ಟು, ಸಂಜೀವ ಪೆಲತ್ತಿಮಾರು, ಬಾಳಿಗಾ ಮನೆತನದ ಸುಧೀರ್ ಬಾಳಿಗಾ, ಶಶಿಕಿರಣ್ ತುಂಬೆ, ಮಹಾಬಲ ಬಂಗೇರ ಹಾಗೂ ಸ್ಥಳೀಯ ಪ್ರಮುಖರು ಉಪಸ್ಥಿತರಿದ್ದರು. ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್, ಮಾಜಿ ಸಚಿವ ಬಿ.ರಮಾನಾಥ ರೈ, ಕುದ್ರೋಳಿ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್ ಪೂಜಾರಿ,ಶಿಲ್ಪಿ ಸದಾಶಿವ ಶೆಣೈ ಸಹಿತ ಹಲವಾರು ಗಣ್ಯರು ಆಗಮಿಸಿ ದೈವದ ಗಂಧ ಪ್ರಸಾದ ಸ್ವೀಕರಿಸಿದರು. ನಡುರಾತ್ರಿ ಮಕ್ಕಳ ಕಂಚಿಲ ಸೇವೆ,ಶನಿವಾರ ಮುಂಜಾನೆ ಬಂಡಿ ಸಹಿತ ವೈದ್ಯನಾಥ ದೈವದ ಪೇಟೆ ಸವಾರಿ ಉತ್ಸವ ನಡೆಯಿತು. ನೂರಾರು ಸಂಖ್ಯೆಯಲ್ಲಿ ಭಕ್ತರು ಬಂಡಿ ಸಹಿತ ವೈದ್ಯನಾಥ ದೈವದ ಪೇಟೆ ಸವಾರಿ ಉತ್ಸವವನ್ನು ಕಣ್ತುಂಬಿಕೊಂಡರು. ಈಬಾರಿ ದೈವಸ್ಥಾನದಲ್ಲಿ ಪುನರ್ ಕಲಶಾಭಿಷೇಕ ಬಳಿಕ ಮೊದಲ ದಿನ ಶ್ರೀ ಅರಸು, 2ನೇ ದಿನ ಜುಮಾದಿ ಬಂಟ ದೈವಗಳಿಗೆ ನೇಮ ನಡೆದಿತ್ತು.

ಏ.7ರಂದು ವಿದ್ಯುತ್ ವ್ಯತ್ಯಯ

ಕಾರ್ಕಳ: ಹೆಬ್ರಿ ತಾಲೂಕಿನ ಹೆಬ್ರಿ, ಮುದ್ರಾಡಿ, ಮುನಿಯಾಲು, ವರಂಗ, ಬಚ್ಚಾಪ್ಪು, ಕಬ್ಬಿನಾಲೆ, ಮುಂಡಾಡಿಜೆಡ್ಡು, ಕಳ್ತೂರು, ಸಂತೆಕಟ್ಟೆ, ಕರ್ಜೆ, ಕುರ್ಪಾಡಿ, ಬೆಳೆಂಜೆ, ಮಡಾಮಕ್ಕಿ, ಕಾಸನಮಕ್ಕಿ, ಶಿವಪುರ, ಕೆರೆಬೆಟ್ಟು, ಕನ್ಯಾನ, ಚಾರ, ಹೊಸೂರು, ಹುತ್ತುರ್ಕೆ ವಾಟರ್ ಸಪ್ಲೈ, ಕಲ್ಲಿಲ್ಲು ವಾಟರ್ ಸಪ್ಲೈ, ಸೀತಾನದಿ, ಸೋಮೇಶ್ವರ, ನಾಡ್ಪಾಲು, ಅಂಡಾರು, ಶಿರ್ಲಾಲು, ಮುಂಡ್ಲಿ, ರೋಡ್, ಕಾಡುಹೊಳೆ, ಮುನಿಯಾಲು, ಅಜೆಕಾರು, ಹೆರ್ಮುಂಡೆ, ಎಣ್ಣೆಹೊಳೆ, ಕಡ್ತಲ, ಕುಕ್ಕುಜೆ, ಎಳ್ಳಾರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.7ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

'ಬೇತ್ರಿ ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆ'ಗೆ ಚಾಲನೆ | ಕೊಡವ ಕುಟುಂಬಗಳ ನಡುವೆ ಹಣಾಹಣಿ

ದೇಶದ 10 ಕ್ರೀಡಾ ಜಿಲ್ಲೆಗಳ ಪೈಕಿ ಕೊಡಗಿಗೆ ಸ್ಥಾನ: ಅರುಣ್

ಮಡಿಕೇರಿ: ಕೊಡವ ಕುಟುಂಬಗಳ ನಡುವೆ ಆಯೋಜಿತ 24ನೇ ವರ್ಷದ 'ಬೇತ್ರಿ ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆ'ಗೆ ಚಾಲನೆ ದೊರೆತಿದೆ.

ಮೂರ್ನಾಡುವಿನ ಬಾಚೆಟ್ಟಿರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ, ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕ್ರೀಡಾಕೂಟದ ಅಧ್ಯಕ್ಷ ಮುಕ್ಕಾಟಿರ ಸುರೇಶ್ ಪೆಮ್ಮಯ್ಯ ಮತ್ತಿತರ ಗಣ್ಯರು ಕೊಡವ ಕ್ರಿಕೆಟ್ ಅಸೋಷಿಯೇಷನ್‌ನ ಧ್ವಜಾರೋಹಣ ನೆರವೇರಿಸಿದರು. ಅಸೋಸಿಯೇಷನ್ ಅಧ್ಯಕ್ಷ ಕೀತಿಯಂಡ ಕಾರ್ಸನ್ ಕಾರ್ಯಪ್ಪ ಬೆಳ್ಳಿಯ ಬ್ಯಾಟ್‌ನಿಂದ ಬಾಲ್ ಅನ್ನು ಹೊಡೆಯುವ ಮೂಲಕ ಪ್ರತಿಷ್ಠಿತ ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆಗೆ ಚಾಲನೆ ನೀಡಿದರು.

ಬಳಿಕ ಅರುಣ್ ಮಾಚಯ್ಯ ಮಾತನಾಡಿ, ಕೇಂದ್ರ ಸರಕಾರ ಗುರುತು ಮಾಡಿರುವ ದೇಶದ 10 ಕ್ರೀಡಾ ಜಿಲ್ಲೆಗಳ ಪೈಕಿ ಕೊಡಗು ಜಿಲ್ಲೆಯೂ ಸ್ಥಾನ ಪಡೆದಿದೆ. ದಕ್ಷಿಣ ಭಾರತದ ಪ್ರಥಮ ಕ್ರೀಡಾ ಜಿಲ್ಲೆ ಎಂಬ ಹೆಗ್ಗಳಿಕೆ



ಕೊಡಗು ಜಿಲ್ಲೆಗೆ ಸಲ್ಲುತ್ತದೆ. ಕೊಡಗು ಜಿಲ್ಲೆಯಲ್ಲಿ ನಿರಂತರವಾಗಿ ನಡೆಯುವ ಕ್ರೀಡಾ ಕೂಟಗಳೇ ಇದಕ್ಕೆ ಕಾರಣವಾಗಿದೆ ಎಂದರು.

ಕೊಡಗು ಜಿಲ್ಲೆಯಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಮೂಲ ಸೌಕರ್ಯ ಕೊರತೆ ಇದೆ. ಜಿಲ್ಲೆಯ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಮಡಿಕೇರಿಯ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣಕ್ಕೆ 8 ಕೋಟಿ ಮಂಜೂರಾಗಿದ್ದು ಕಾಮಗಾರಿ ಆರಂಭವಾಗಲಿದೆ. ಮಹಿಳಾ ಕ್ರೀಡಾ ವಸತಿ ನಿಲಯಕ್ಕೆ 2 ಕೋಟಿ, ಪೊನ್ನಂಪೇಟೆಯಲ್ಲಿ 2 ಕೋಟಿ ರೂ ವೆಚ್ಚದ ಕ್ರೀಡಾ ಹಾಸ್ಟೇಲ್ ಕೂಡ ನಿರ್ಮಾಣ ಆಗಲಿದೆ. ಕ್ರೀಡಾ ಸಂಕೀರ್ಣಕ್ಕಾಗಿ ಬಾಳುಗೋಡು ಬಳಿ 11 ಎಕರೆ ಪ್ರದೇಶವನ್ನು ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರು ಗುರುತಿಸಿ ಕಾಯ್ದಿರಿಸಿದ್ದು, ಇದರ ನಿರ್ಮಾಣಕ್ಕೆ 30 ಕೋಟಿ ರೂ. ಅನುದಾನ ಲಭ್ಯವಿದೆ. ಯುವ ಜನ ಸೇವೆ ಮತ್ತು ಕ್ರೀಡಾ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಮೈದಾನಗಳು, ವಸತಿ ನಿಲಯಗಳ ಅಭಿವೃದ್ಧಿಗೂ ಕ್ರಮ ಕೈಗೊಳ್ಳಲಾಗುತ್ತದೆ. ಮುಂದಿನ ಒಲಂಪಿಕ್ ಕ್ರೀಡೆಯನ್ನು ಗುರಿಯಾಗಿಸಿಕೊಂಡು ತರಬೇತಿಯಲ್ಲಿ ತೊಡಗಿಸಿಕೊಂಡಿರುವ ಉನ್ನತಿ ಅಯ್ಯಪ್ಪ, ಸಿಂಚನ ಕಾವೇರಮ್ಮ, ಚಂದೂರ ಪೂವಣ್ಣ ಎಸ್.ವಿ ಸುನೀಲ್, ತೆಕ್ಕಡ ಭವಾನಿ ಅವರಗಳ ಉನ್ನತ ತರಬೇತಿಗಾಗಿ ಸರಕಾರ ಪ್ರತಿ ತಿಂಗಳು 80 ಸಾವಿರ ರೂ. ಅನುದಾನವನ್ನು ಒದಗಿಸುತ್ತಿದೆ ಎಂದು ಅರುಣ್ ಮಾಚಯ್ಯ ತಿಳಿಸಿದರು.

> ರಾಜ್ಯದ 17 ಮಂದಿ ಕ್ರೀಡಾಪಟುಗಳು ಅರ್ಜುನ ಪ್ರಶಸ್ತಿಗೆ ಭಾಜನರಾಗಿದ್ದರೆ, ಈ ಪೈಕಿ 9 ಮಂದಿ ಕೊಡಗಿನ ಕ್ರೀಡಾ ಸಾಧಕರಾಗಿದ್ದಾರೆ. ಸಮುದಾಯಗಳಲ್ಲಿ ಸಂಘಟನೆ ಇದ್ದಾಗ ಮಾತ್ರವೇ ಕ್ರೀಡಾ ಕ್ಷೇತ್ರ ಬೆಳವಣಿಗೆ ಕಾಣಲು ಸಾಧ್ಯ.. ವಿವಿಧ ಕ್ರೀಡಾ ಸಂಸ್ಥೆಗಳು ಸರಕಾರದ ಮಾನ್ಯತೆ ಪಡೆದಾಗ ಮಾತ್ರವೇ ಸೌಲಭ್ಯಗಳು ದೊರೆಯುತ್ತದೆ.
> ● ಅರುಣ್ ಮಾಚಯ್ಯ

ಹಿರಿಯರ ಪ್ರೋತ್ಸಾಹ ಸ್ಮರಣೀಯ

ಅರಮೇರಿ ಕಳಂಚೇರಿ ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಿದರು. ಹಿರಿಯ ಹಾಕಿ ಕ್ರೀಡಾಪಟು ಬಾಳೆಯಡ ಕರುಣ ಕಾಳಪ್ಪ ಮಾತನಾಡಿ, ಹಿಂದಿನ ಕಾಲದಲ್ಲಿ ಕ್ರೀಡೆಗೆ ಬೇಕಾದ ಸೌಲಭ್ಯ ಇರಲಿಲ್ಲ ಅಂದು ಬಡತನದ ನಡುವೆಯೇ ಹತ್ತಾರು ಕ್ರೀಡಾಪಟುಗಳು ರಾಜ್ಯ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯ ಎಂದರು.

ಮುಕ್ಕಾಟಿರ ಕಪ್ ಕ್ರಿಕೆಟ್ ಕ್ರೀಡಾಕೂಟದ ಅಧ್ಯಕ್ಷ ಮುಕ್ಕಾಟಿರ ಸುರೇಶ್ ಪೆಮ್ಮಯ್ಯ ಮಾತನಾಡಿದರು.

ಕೊಡವ ಕ್ರಿಕೆಟ್ ಅಸೋಸಿಯೇಷನ್ ಸಹಯೋಗದೊಂದಿಗೆ ಕಳೆದ 23 ವರ್ಷಗಳಿಂದ ನಿರಂತರವಾಗಿ ಕೊಡವ ಕ್ರಿಕೆಟ್ ನಮ್ಮೆ ಆಯೋಜಿಸಿಕೊಂಡು ಬಂದ 23 ಕುಟುಂಬಗಳನ್ನು ಗೌರವಿಸಲಾಯಿತು. ಮೂರ್ನಾಡು ಕೊಡವ ಸಮಾಜದ ಪೊಮ್ಮಕ್ಕಡ ಕೂಟದ ವತಿಯಿಂದ ಉಮ್ಮತ್ತಾಟ್ ಪ್ರದರ್ಶನ ನೋಡುಗರ ಗಮನ ಸೆಳೆಯಿತು. ಉದ್ಯಮಿ ಮಾಚೆಟ್ಟಿರ ಜನಿತ್ ಅಯ್ಯಪ್ಪ, ಮಣವಟ್ಟಿರ ಮಧು ಬೋಪಣ್ಣ,ಪೊಲೀಸ್ ಅಧಿಕಾರಿ ಪಟ್ರಪಂಡ ಪೊನ್ನಪ್ಪ, ಮೂರ್ನಾಡು ವಿದ್ಯಾ ಸಂಸ್ಥೆಯ ಪೆಮ್ಮುಡಿಯಂಡ ವೇಣು ಮತ್ತಿತ್ತರರು ಉಪಸ್ಥಿತರಿದ್ದರು.

ಖೋ-ಖೋ: ಅಖಿಲ ಭಾರತ ಅಂತರ್ ವಿವಿ ಮಟ್ಟಕ್ಕೆ ಮಂಗಳೂರು ವಿವಿ ಅರ್ಹತೆ



ಮೂಡುಬಿದಿರೆ: ದಾವಣಗೆರೆ ವಿವಿಯಲ್ಲಿ ನಡೆದ ದಕ್ಷಿಣ ವಲಯ ಅಂತರ್ ವಿಶ್ವ ವಿದ್ಯಾನಿಲಯಗಳ ಮಹಿಳೆಯರ ಖೋ-ಖೋ ಪಂದ್ಯಾವಳಿಯಲ್ಲಿ ಆಳ್ವಾಸ್ ವಿದ್ಯಾರ್ಥಿಗಳನ್ನು ಒಳಗೊಂಡ ಮಂಗಳೂರು ವಿವಿಯು ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ಖೋ- ಖೋ ಪಂದ್ಯಾಟಕ್ಕೆ ಅರ್ಹತೆ ಪಡೆದು ಕೊಂಡಿದೆ.

ಇದರ ಜೊತೆಯಲ್ಲಿ ಮಂಡ್ಯ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಕ್ಯಾಲಿಕಟ್ ವಿಶ್ವವಿದ್ಯಾನಿಲಯ ತಂಡಗಳು ಅರ್ಹತೆ ಪಡೆದಿವೆ. ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾನಿಲಯಗಳ ಈ ನಾಲ್ಕು ತಂಡಗಳ ನಡುವೆ ನಡೆದಂತಹ ಲೀಗ್ ಮಾದರಿಯ ಪಂದ್ಯಾಟದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ತಂಡವು ಕ್ಯಾಲಿಕಟ್ ತಂಡದ ವಿರುದ್ಧ 04 ಅಂಕಗಳಿಂದ ಜಯಶಾಲಿಯಾದರೆ, ಎರಡನೇ ಲೀಗ್ ಪಂದ್ಯಾಟದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ತಂಡವು ಮೈಸೂರ್ ವಿಶ್ವವಿದ್ಯಾನಿಲಯದ ತಂಡದ ವಿರುದ್ಧ 06 ಅಂಕಗಳಿಂದ ಜಯಶಾಲಿಯಾಗಿದೆ.

ಮಂಗಳೂರು ವಿವಿತಂಡ ದಲ್ಲಿ ಒಟ್ಟು 15 ಆಟಗಾರರಲ್ಲಿ 12 ಜನ ಆಟಗಾರರು ಆಳ್ವಾಸ್ ಸಂಸ್ಥೆಯ ವಿದ್ಯಾರ್ಥಿಗಳು. ಆಳ್ವಾಸ್‌ನ ಪ್ರೇಕ್ಷ ಇವರಿಗೆ ಬೆಸ್ಟ್ ಆಲ್ ರೌಂಡರ್ ಪ್ರಶಸ್ತಿ ಲಭಿಸಿದೆ. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಅವರು ಮುಂದಿನ ಹಂತದ ಪಂದ್ಯಕ್ಕೆ ಅರ್ಹತೆ ಪಡೆದ ತಂಡದ ಸದಸ್ಯರನ್ನು ಅಭಿನಂದಿಸಿದ್ದಾರೆ.

ಹಂಪನಕಟ್ಟೆಯಲ್ಲಿ ಫರ್ಮ್ ಲೈನ್ ಆರ್ಕಿಟೆಕ್ಟ್ಸ್ ನೂತನ ಕಚೇರಿ ಶುಭಾರಂಭ



ಮಂಗಳೂರು: ನಗರದ ಹಂಪನಕಟ್ಟೆ ಪಿಎಂ ರಾವ್ ರಸ್ತೆಯಲ್ಲಿ ಫರ್ಮ್ ಲೈನ್ ಆರ್ಕಿಟೆಕ್ಟ್ಸ್ ಸಂಸ್ಥೆಯ ನೂತನ ಕಚೇರಿ ಉದ್ಘಾಟನಾ ಕಾರ್ಯಕ್ರಮ ನೆರವೇರಿತು.

ರಾಷ್ಟ್ರೀಯ ಸ್ವಯಂಸೇವಕ ಸಂಘ ಕರ್ನಾಟಕ ದಕ್ಷಿಣ ಪ್ರಾಂತ ಸಹಕಾರ್ಯವಾಹ ಪಿ.ಎಸ್. ಪ್ರಕಾಶ್ ಅವರು ದೀಪವನ್ನು ಬೆಳಗಿಸಿ ನೂತನ ಕಚೇರಿಯನ್ನು ಉದ್ಘಾಟಿಸಿ, ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಸದ ಕ್ಯಾ. ಬ್ರಿಜೇಶ್ ಚೌಟ, ಮಂಗಳೂರು ಶಾಸಕ ವೇದವ್ಯಾಸ ಕಾಮತ್, ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ, ವಿಶ್ವ ಹಿಂದು ಪರಿಷತ್ ದಕ್ಷಿಣ ಕನ್ನಡ ಅಧ್ಯಕ್ಷ ಪುರುಷೋತ್ತಮ ಎಚ್. ಕೆ., ಪ್ರಸಿದ್ಧ ಕಲಾವಿದೆ ಮತ್ತು ಲೇಖಕಿ ಪೂರ್ಣಿಮಾ ಸುರೇಶ್, ಪ್ರಮುಖರಾದ ಐತಪ್ಪ ಮವ್ವಾರು, ಕಿರಣ್ ಕುಮಾರ್ ಜೋಗಿ, ಅಶೋಕ್ ಮಂಗಳೂರು ಮತ್ತು ಇತರ ಅತಿಥಿಗಳು, ಗ್ರಾಹಕರು ಸಹಿತ ಮೊದಲಾದವರು ಉಪಸ್ಥಿತರಿದ್ದು ಶುಭಾಶಯಗಳನ್ನು ಕೋರಿದರು. ಸಂಸ್ಥೆಯ ಪ್ರಧಾನ ವಾಸ್ತುಶಿಲ್ಪಿ ಪ್ರಮೋದ್ ಕುಮಾರ್ ಸ್ವಾಗತಿಸಿದರು.

ನವೀಕರಣಗೊಂಡ ಅತ್ತೂರು ಹಿಂದೂ ರುದ್ರಭೂಮಿ ಉದ್ಘಾಟನೆ



ಕಿನ್ನಿಗೋಳಿ: ಅತ್ತೂರು ಹಿಂದೂ ರುದ್ರಭೂಮಿ ಸಮಿತಿಯ ಆಶ್ರಯದಲ್ಲಿ ಸುಮಾರು 10 ಲಕ್ಷ ರೂ ವೆಚ್ಚದಲ್ಲಿ ನವೀಕರಣ ಗೊಂಡ ಹಿಂದೂ ರುದ್ರ ಭೂಮಿಯ ಲೋಕಾರ್ಪಣೆ ಕಾರ್ಯಕ್ರಮ ನಡೆಯಿತು.

ಅತ್ತೂರು ಭಂಡಾರ ಮನೆ ಆಶಾಲತಾ ನಾರಾಯಣ ಶೆಟ್ಟಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕೆಮ್ರಾಲ್ ಗ್ರಾಮ ಪಂಚಾಯತ್ ಪಿಡಿಒ ಅರುಣ್ ಪ್ರದೀಪ್ ಡಿಸೋಜ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಗಿರೀಶ್ ಕುಮಾರ್, ಕೆಮ್ರಾಲ್ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಮಯ್ಯದ್ದಿ ಪಕ್ಷಿಕೆರೆ, ಪಂಜ- ಕೊಯಿಕುಡೆ ಶ್ರೀ ಹರಿಪಾದೆ ಜಾರಂದಾಯ ದೈವಸ್ಥಾನದ ಅನುವಂಶಿಕ ಮೊಕ್ತೇಸರ ಪ್ರಕಾಶ್ ಶೆಟ್ಟಿನಲ್ಯ ಗುತ್ತು, ಪಕ್ಷಿಕೆರೆ ಶ್ರೀ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿಯ ಅಧ್ಯಕ್ಷ ಗಣಪತಿ ಆಚಾರ್ಯ, ನವೀನ್ ಹರಿಪಾದೆ ಭಂಡಾರ ಮನೆ, ಹಳೆಯಂಗಡಿ ಪ್ರಿಯದರ್ಶಿನಿ ಸೊಸೈಟಿಯ ಮುಖ್ಯ ಕಾರ್ಯನಿರ್ವಹಾಧಿಕಾರಿ ಸುದರ್ಶನ, ಸಮಿತಿ ಅಧ್ಯಕ್ಷ ಜಯರಾಮ ಆಚಾರ್ಯ, ಸಮಿತಿಯ ಕೋಶಾಧಿಕಾರಿ ಸಂತೋಷ್ ಕುಮಾರ್ ಮತ್ತಿತರರು ಇದ್ದರು. ಇದೇ ಸಂದರ್ಭ ರುದ್ರ ಭೂಮಿ ನವೀಕರಣಕ್ಕೆ ಸಹಕಾರಿಸಿದ ದಾನಿಗಳನ್ನು ಗೌರವಿಸಲಾಯಿತು. ಕಾರ್ಯದರ್ಶಿ ಪ್ರಸನ್ನ ಎಲ್. ಶೆಟ್ಟಿ ಪ್ರಸ್ತಾವಿಸಿ ಸ್ವಾಗತಿಸಿದರು. ಸತೀಶ್ ಶೆಟ್ಟಿ ಬೈಲುಗುತ್ತು ನಿರೂಪಿಸಿದರು.

ಶಾಸಕ ನ್ಯಾಕ್‌ರಿಂದ ಅಭಿವೃದ್ಧಿಗೊಂಡ ಅಮ್ಮುಂಜೆಗುತ್ತು ಸಂಪರ್ಕ ರಸ್ತೆ ಉದ್ಘಾಟನೆ



ಬಂಟ್ವಾಳ: ಶ್ರೀ ಕ್ಷೇತ್ರ ಪೊಳಲಿಯ ಆಡಳಿತದ ಪ್ರಮುಖ ಮನೆತನಗಳಲ್ಲೊಂದಾದ ಅಮ್ಮುಂಜೆಗುತ್ತುವಿನ ಸಂಪರ್ಕ ರಸ್ತೆಯನ್ನು ಬಂಟ್ವಾಳ ಶಾಸಕರ ನಿಧಿ 10 ಲಕ್ಷ ರೂ. ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗಿದ್ದು ಇದರ ಲೋಕಾರ್ಪಣೆಯನ್ನು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ನೆರವೇರಿಸಿದರು.

ಅಮ್ಮುಂಜೆಗುತ್ತು ಮತ್ತು ಉಳಿಪಾಡಿಗುತ್ತು ಶ್ರೀ ಕ್ಷೇತ್ರ ಪೊಳಲಿಯ ಎರಡು ಪ್ರಮುಖ ಆಡಳಿತದ ಗುತ್ತು ಮನೆತನಗಳಾಗಿದ್ದು ಧಾರ್ಮಿಕ ಮತ್ತು ಐತಿಹಾಸಿಕವಾಗಿ ಅವಿನಾಭಾವ ಸಂಬಂಧ ಹೊಂದಿದೆ. ಈಗ ಅಮ್ಮುಂಜೆಗುತ್ತುವಿನ ಸಂಪರ್ಕ ರಸ್ತೆ ಶಾಸಕರ ಅವಧಿಯಲ್ಲಿ ನಿರ್ಮಾಣಗೊಂಡಿದ್ದು ಹೆಮ್ಮೆಯ ವಿಚಾರ ಎಂದು ರಂಗನಾಥ್ ಶೆಟ್ಟಿ ಅಮ್ಮುಂಜೆಗುತ್ತು ಹೇಳಿದರು.

ಈ ಸಂಧರ್ಭದಲ್ಲಿ ಪೊಳಲಿಯ ಆಡಳಿತ ಮೊಕ್ತೇಸರರಾದ ಡಾ. ಎ. ಮಂಜಯ್ಯ ಶೆಟ್ಟಿ ಅಮ್ಮುಂಜೆಗುತ್ತು, ಶಿವಪ್ರಸಾದ್ ಶೆಟ್ಟಿ ಅಮ್ಮುಂಜೆಗುತ್ತು, ರವಿಂದ್ರ ಶೆಟ್ಟಿ ಅಮ್ಮುಂಜೆಗುತ್ತು, ಪ್ರತಾಪ್ ಶೆಟ್ಟಿ ಅಮ್ಮುಂಜೆಗುತ್ತು, ದೇವದಾಸ್ ಹೆಗ್ಡೆ ಅಮ್ಮುಂಜೆಗುತ್ತು, ಸಂಪತ್ ಕುಮಾರ್ ಶೆಟ್ಟಿ ಅಮ್ಮುಂಜೆಗುತ್ತು, ಜೀವರಾಜ್ ಶೆಟ್ಟಿ, ಸುಕೇಶ್ ಚೌಟ ಬಡಕಬೈಲ್ , ಶೋಭಾ ಶೆಟ್ಟಿ ಅಮ್ಮುಂಜೆಗುತ್ತು ಕಾರ್ತಿಕ್ ಬಲ್ಲಾಳ್ ಅಮ್ಮುಂಜೆ, ಶಿಕ್ಷಕ ಹರೀಶ್ ರಾವ್ ಡಿ.ಎ. ಭೂತ್ ಅಧ್ಯಕ್ಷ ಹರೀಶ್ಚಂದ್ರ ಅಮುಂಜೆ ಪ್ರಧಾನ ಕಾರ್ಯದರ್ಶಿ ನವೀನ್ ಶೆಟ್ಟಿ ಅಮ್ಮುಂಜೆ ಸನತ್ ಜೆರ್ಲಾಗುಡ್ಡೆ, ಉದಯ್ ಕಣಿಯೂರ್, ಜಯಂತ್ ಅಮ್ಮುಂಜೆ ವಾಮನ ಆಚಾರ್ಯ,ಸುದರ್ಶನ ಭಂಡಾರಿ, ಪ್ರಕಾಶ್ ದಾಸೀಮಾರ್, ಯೋಗೀಶ್ ಬೆಂಜನಪದವು,ಕೃಷ್ಣ ಬಂಗೇರ ಇದ್ದರು. ಜನಾರ್ದನ ಅಮ್ಮುಂಜೆ ಸ್ವಾಗತಿಸಿ, ವಂದಿಸಿದರು.

ಸ್ವರಲಯ ಸಾಧನಾ ಫೌಂಡೇಶನ್: ತ್ಯಾಗರಾಜರ ಆರಾಧನಾ ಮಹೋತ್ಸವ



ಮಂಗಳೂರು: ಸ್ವರಲಯ ಸಾಧನಾ ಫೌಂಡೇಶನ್ ಹಾಗೂ ಕಲಾ ಶಾಲೆ ವತಿಯಿಂದ ಕರ್ನಾಟಕ ಸಂಗೀತ ಕ್ಷೇತ್ರದ ಶ್ರೇಷ್ಠ ಸಂತ ಶ್ರೀ ತ್ಯಾಗರಾಜ ಸ್ವಾಮಿಗಳ ಆರಾಧನೆ ನಗರದ ಮಣ್ಣಗುಡ್ಡೆಯ ಸ್ಕೌಟ್ಸ್ ಮತ್ತು ಗೈಡ್ ಭವನದಲ್ಲಿ ಶನಿವಾರ ನಡೆಯಿತು.

ವಿದ್ವಾನ್ ಮಧೂರು ಪಿ.ಬಾಲಸುಬ್ರಹ್ಮಣ್ಯಂ ದೀಪ ಪ್ರಜ್ವಲನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶೃಂಗೇರಿಯ ವಿ.ನೈಭಿ ಪ್ರಭಾಕರ್, ವಿ. ಯತಿರಾಜ್, ಸ್ಕೌಟ್ಸ್ ಮತ್ತು ಗೈಡ್ ಭವನದ ಕಾರ್ಯದರ್ಶಿ ಪ್ರತೀಮ್ ಕುಮಾರ್, ಸ್ವರಲಯ ಸಾಧನಾ ಫೌಂಡೇಷನ್ ಅಧ್ಯಕ್ಷ ಶ್ರೀಕೃಷ್ಣ ಎನ್., ಉಪಾಧ್ಯಕ್ಷ ರಮೇಶ್ ಕೆ.ಜಿ., ಸಂಸ್ಥೆಯ ಗುರು ವಿಶ್ವಾಸ್‌ಕೃಷ್ಣ ಉಪಸ್ಥಿತರಿದ್ದರು.

ಆರಾಧನಾ ಉತ್ಸವದ ಪ್ರಯುಕ್ತ ಪಂಚ ರತ್ನ ಗೋಷ್ಠಿ ಗಾಯನ ಕಾರ್ಯಕ್ರಮ ನಡೆಯಿತು. ವಿದ್ವಾನ್ ಮಧೂರು ಪಿ. ಬಾಲಸುಬ್ರಹ್ಮಣ್ಯಂ, ವಿದ್ವಾನ್ ತ್ರೀಚಿ ಕೆ.ಆರ್. ಕುಮಾರ್, ವಿದುಷಿ ಅರುಣಾ ಸರಸ್ವತಿ, ವಿದುಷಿ ಪ್ರತಿಭಾ ಸಾಮಗ, ವಿದ್ವಾನ್ ನೈಭಿ ಪ್ರಭಾಕರ್, ವಿದುಷಿ ಸಾವಿತ್ರಿ ಪ್ರಭಾಕರ್, ವಿದ್ವಾನ್ ಯತಿರಾಜ್, ವಿದುಷಿ ಪಾವನಿ ನಾಗಸಿಂಹ, ವಿದ್ವಾನ್ ಶ್ರೀಹರಿ ವಿಠ್ಠಲ್, ವಿದುಷಿ ಅಪೂರ್ವ, ವಿದ್ವಾನ್ ಸುಹಾಸ್ ಹೆಬ್ಬಾರ್ ಹಾಗೂ ಸ್ವರಲಯ ಸಾಧನಾ ಫೌಂಡೇಶನ್ ಹಾಗೂ ಕಲಾ ಶಾಲೆ ಗುರುಗಳಾದ ವಿಶ್ವಾಸ್‌ಕೃಷ್ಣ ಮತ್ತು ಶ್ರೇಷ್ಠ ಲಕ್ಷ್ಮೀ ಭಾಗವಹಿಸಿದ್ದರು.

ವಯೋಲಿನ್ ಕೊಡುಗೆ

ಬಡ ಸಂಗೀತ ವಿದ್ಯಾರ್ಥಿಗಳಿಗೆ ಸಂಗೀತ ಕಲಿಕೆಗೆ ಸಹಕಾರ ನೀಡುವ ಉದ್ದೇಶದಿಂದ ಸ್ವರಾಲಯ ಸಾಧನಾ ಫೌಂಡೇಶನ್ ಹಾಗೂ ಕಲಾ ಶಾಲೆ ವತಿಯಿಂದ ಆಯೋಜಿಸಿದ ಕಲಾ ನಿಧಿ ಯೋಜನೆ ಮೂಲಕ ಹೇಮಾ ಎಂಬ ಬಡ ಕುಟುಂಬದ ಬಾಲಕಿಗೆ ವಯೋಲಿನ್ ಕೊಡುಗೆಯಾಗಿ ನೀಡಲಾಯಿತು. ಆರಂಭದಲ್ಲಿ ವಿದುಷಿ ಸಾವಿತ್ರಿ ಪ್ರಭಾಕರ್ ಹಾಗೂ ವಿದುಷಿ ಪಾವನಿ ನಾಗಸಿಂಹ ಅವರಿಂದ ಕಲಾಶಾಲೆ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳು ನಡೆಯಿತು. ಕೊನೆಗೆ ವಿಷ್ಣುಸಹಸ್ರ ನಾಮ ಪಠಣ, ಶ್ರೀರಾಮ ದೇವರಿಗೆ ಮಹಾಪೂಜೆ ನಡೆಯಿತು. ಸ್ವರಲಯ ಸಾಧನಾ ಫೌಂಡೇಶನ್ ಕಾರ್ಯದರ್ಶಿ ಆರ್.ಸಿ.ಭಟ್ ಕಾರ್ಯಕ್ರಮ ನಿರೂಪಿಸಿದರು.



ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಆಡಳಿತ ಕಚೇರಿಯ ಹಣಕಾಸು ವಿಭಾಗದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಸದಾನಂದ ಪೂಜಾರಿ ಅವರನ್ನು ಕಾಲೇಜಿನ ಕಚೇರಿ ವಿಭಾಗದ ವತಿಯಿಂದ ಇತ್ತೀಚೆಗೆ ಸನ್ಮಾನಿಸಿ, ಬೀಳ್ಕೊಡುಗೆ ನೀಡಲಾಯಿತು. ಈ ಸಂದರ್ಭದಲ್ಲಿ ಕೆಎಂಸಿಯ ಅಸೋಸಿಯೇಟ್ ಡೀನ್‌ಗಳಾದ ಡಾ. ಶ್ರೀಕಲಾ ಬಾಳಿಗ, ಡಾ. ಶೀತಲ್ ಉಳ್ಳಾಲ್, ಹಣಕಾಸು ವಿಭಾಗದ ಮುಖ್ಯಸ್ಥೆ ದೃಶ್ಯಾ ಕಾಮತ್, ಕಚೇರಿಯ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಕೋಟ ವ್ಯಾಪ್ತಿಯ ಸಾಲಿಗ್ರಾಮದ ಶ್ರೀ ಗುರು ನರಸಿಂಹ ದೇವಸ್ಥಾನದ ಆಡಳಿತ ಮಂಡಳಿಯ ನೂತನ ಅಧ್ಯಕ್ಷ ಬಂಟ್ವಾಳ ನರಿಕೊಂಬು ಪ್ರಕಾಶ ಕಾರಂತರಿಗೆ ಮಂಗಳವಾರ ಸಂಜೆ ಶ್ರೀ ದೇವರ ಕಿರಿ ರಂಗಪೂಜೆಯ ನಂತರ ನಿರ್ಗಮನ ಅಧ್ಯಕ್ಷ ಡಾ.ಕೆ.ಎಸ್.ಕಾರಂತರು ಸೇವಾ ದೀಕ್ಷೆಯನ್ನು ಹಸ್ತಾಂತರಿಸಿದರು. ಈ ಸಂದರ್ಭ ನೂತನ ಉಪಾಧ್ಯಕ್ಷ ಚಂದ್ರಶೇಖರ ಉಪಾಧ್ಯ, ಕಾರ್ಯದರ್ಶಿ ಪರಶುರಾಮ ಭಟ್ಟ, ನಿರ್ಗಮನ ಕಾರ್ಯದರ್ಶಿ ಪಿ.ಲಕ್ಷ್ಮೀನಾರಾಯಣ ತುಂಗ, ಸದಸ್ಯ ಪಿ.ಸದಾಶಿವ ಐತಾಳ, ಬೆಂಗಳೂರಿನ ದ.ಕ.ಕೂಟ ಬ್ರಾಹ್ಮಣ ಮಿತ್ರ ಮಂಡಳಿಯ ಅಧ್ಯಕ್ಷ ಡಾ.ವಿಷ್ಣುಮೂರ್ತಿ ಐತಾಳ ಮತ್ತಿತರರಿದ್ದರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶ ಸಂಭ್ರಮ | ಧಾರ್ಮಿಕ ಸಭಾ ಕಾರ್ಯಕ್ರಮ

ದೇವಳದ ಅಷ್ಟಬಂಧ ಬ್ರಹ್ಮಕಲಶೋತ್ಸವವೆಂದರೆ ನಂಬಿಕೆಗಳ ಪುನರುತ್ಥಾನ: ನ್ಯಾ. ಶ್ರೀಶಾನಂದ

ವಿಟ್ಲ: ಅಭಿವೃದ್ಧಿ ಹೊಂದಬೇಕಾದರೆ, ಶಾಂತಿ ಮತ್ತು ಸುವ್ಯವಸ್ಥೆಯ ಪಾಲನೆಯಾದ ಧರ್ಮ ಪಾಲನೆ ಆಗಬೇಕು ಎಂದು ಹೈಕೋರ್ಟ್ ನ್ಯಾಯಾಧೀಶ ವೇದವ್ಯಾಸ್ ಆಚಾರ್ ಶ್ರೀಶಾನಂದ ಹೇಳಿದರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯುತ್ತಿರುವ ಬ್ರಹ್ಮಕಲಶೋತ್ಸವ ಕಾರ್ಯಕ್ರಮ ಹಿನ್ನೆಲೆ ಶನಿವಾರ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಧಾರ್ಮಿಕ ಉಪನ್ಯಾಸ ಮಾಡಿದರು.

ದೇವಸ್ಥಾನ ಜ್ಞಾನಶಾಲೆ, ಉದ್ಯೋಗಕ್ಕೆ ಅವಕಾಶ, ದಾನಶಾಲೆಯಾಗಿತ್ತು. ಆತ್ಮ ಸಾಕ್ಷಾತ್ಕಾರವಾಗಲು ದೇವಸ್ಥಾನ ಪ್ರೇರಣೆ ಎಂದರು.

ನಂಬಿಕೆಗಳ ಪುನರುತ್ಥಾನ ಮಾಡಿಕೊಳ್ಳಬೇಕು. ಅಷ್ಟಬಂಧ ಬ್ರಹ್ಮಕಲಶೋತ್ಸವ ಎಂಬುದು ಅದರ ಒಂದು ಭಾಗ. ಸರಳತೆಯನ್ನು ಸಾಧ್ಯ ಮಾಡುವ ರಚನಾತ್ಮಕ ಸನ್ನಿವೇಶ ದೇವಾಲಯಗಳಲ್ಲಿ ಇದೆ.



ರಾಮಕೃಷ್ಣ ಮಠದ ಅಧ್ಯಕ್ಷ ಶ್ರೀ ಜಿತಕಾಮಾನಂದಜೀ ಮಹಾರಾಜ್ ಮಾತನಾಡಿದರು.

ಇದೇ ವೇಳೆ ಭಾರತದಲ್ಲಿ ಸಾಮಾಜಿಕ ಮೌಲ್ಯ ಕುಸಿಯುತ್ತಿರುವುದಕ್ಕೆ ಖೇದ ವ್ಯಕ್ತಪಡಿಸಿದ ಅವರು, ಭಗವಂತನ ಕೈಂಕರ್ಯ ಮಾಡುವ ದೇಶ ಇದ್ದರೆ ಅದು ಹೆಮ್ಮೆಯ ಭಾರತ ಎಂದರು.

ಧರ್ಮ ಎಂಬ ಪದಕ್ಕೆ ಸಂಸ್ಕೃತ ಹೊರತುಪಡಿಸಿದರೆ ಬೇರೆ ಯಾವುದೇ ಸಮಾನಾರ್ಥಕ ಪದ ಇಲ್ಲ, 'ಧಾರಯೇತ್ ಇತಿ ಧರ್ಮ'. ನಾನು ಎಷ್ಟೇ ದೊಡ್ಡವನಾದರೂ ಭಗವಂತ ನೀಡಿದ್ದು ಎಂದರು.

ದೇವರ ಮೇಲೆ ನಂಬಿಕೆಯಿರಲಿ

ಮಂಗಳೂರು ರಾಮಕೃಷ್ಣ ಮಠ ಅಧ್ಯಕ್ಷ ಶ್ರೀ ಜಿತಕಾಮಾನಂದಜೀ ಮಹಾರಾಜ್ ಮಾತನಾಡಿ, ಬೀಜಾಕ್ಷರಗಳನ್ನು ರೇಖಾಗಣಿತ ಮೂಲಕ ಹಿಡಿದಿಟ್ಟು ಅದನ್ನು ಫೋಕಸ್ ಮಾಡುವುದನ್ನು ಶ್ರೀಚಕ್ರದಲ್ಲಿ ಕಂಡಿದ್ದೇವೆ. ಅದರ ದರ್ಶನ ಭಾಗ್ಯದಿಂದ ಫಲಪ್ರಾಪ್ತಿಯಾಗಿದೆ. ಲಲಿತಾದೇವಿ ಅನುಗ್ರಹ ಪ್ರಾಪ್ತಿಯಾಗಬೇಕಿದ್ದರೆ ಶ್ರೀ ಚಕ್ರದರ್ಶನದಿಂದ ಸಾಧ್ಯ ಎಂದರು.

ಪುರಾಣದ ಯುಗದಿಂದಲೂ ದುಷ್ಟಶಕ್ತಿಗಳನ್ನು ನಾವು ನೋಡುತ್ತೇವೆ. ಶ್ರೀಚಕ್ರದಿಂದ ದುಷ್ಟಶಕ್ತಿಗಳ ನಿವಾರಣೆ ಆಗುತ್ತದೆ. ಮಾನಸಿಕ ಅಶಾಂತಿ, ಕ್ಲೇಷ ಕಲಹ ಉಂಟಾದರೆ ಆಗುತ್ತದೆ. ಪದ್ಯಾಣದಲ್ಲಿರುವ ಸುಂದರ ಪರಿಸರದಲ್ಲಿ ಮಹಾಲಿಂಗೇಶ್ವರ ಮತ್ತು ಶ್ರೀಚಕ್ರವಿದೆ ಎಂದರು.

ಭಗವಂತ ನಮ್ಮನ್ನು ಕಾಯುತ್ತಿದ್ದಾನೆ ಎಂಬ ಭಾವನೆ ನಾವು ದೇವಸ್ಥಾನದೊಳಗೆ ಹೋಗುವ ವೇಳೆ ಇರಬೇಕು ಎಂದರು.

ಕಟೀಲು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದ ಆನುವಂಶಿಕ ಅರ್ಚಕ ಹರಿನಾರಾಯಣದಾಸ ಆಸ್ರಣ್ಣ ಸಭಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಉದ್ಯಮಿ ಶಶಿಧರ ಶೆಟ್ಟಿ ಬರೋಡಾ ಅಧ್ಯಕ್ಷತೆ ವಹಿಸಿ ಮಾತನಾಡಿ ದೇವಸ್ಥಾನಕ್ಕೆ ಬರುವಾಗ ಎಲ್ಲರೂ ಹಿಂದುಗಳಾಗಿ ಬರಬೇಕು. ಎಲ್ಲರನ್ನೂ ಸಮಾನರಾಗಿ ಕಾಣಬೇಕು ಎಂದರು.

ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮದರ್ಶಿ ರಾಮನಾರಾಯಣ ಜೋಷಿ ಮೂಡುಬಿದಿರೆ ಧನಲಕ್ಷ್ಮೀ ಕ್ಯಾಶೂ ಮಾಲೀಕ ಶ್ರೀಪತಿ ಭಟ್, ಮಂಜೇಶ್ವರ ಶ್ರೀ ಅರಸು ಸಂಕಲ ದೈವಕ್ಷೇತ್ರದ ಅಧ್ಯಕ್ಷ ಡಾ.ಶ್ರೀಧರ ಭಟ್ ಮಾವೆ, ಪ್ರಮುಖರಾದ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ನ್ಯಾಯವಾದಿ ಶಂಭು ಶರ್ಮಾ, ಹಿರಣ್ಯ ಮಹಾಲಿಂಗ ಭಟ್, ಸೀತಾರಾಮ ಬಲ್ಲಾಳ್, ಪಟ್ಲ ಸತೀಶ್ ಶೆಟ್ಟಿ, ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ಎಂ.ಡಿ. ಗೋಪಾಲಕೃಷ್ಣ ಭಟ್, ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಡಾ. ಶ್ಯಾಮ ಭಟ್, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಡಾ.ಅರುಣ ಶ್ಯಾಮ್, ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಸೇರಾಜೆ ಉಪಸ್ಥಿತರಿದ್ದರು. ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಶ್ಯಾಮಸುದರ್ಶನ ಹೊಸಮೂಲೆ ಸ್ವಾಗತಿಸಿದರು. ಡಾ.ಸುಬ್ರಹ್ಮಣ್ಯ ಪದ್ಯಾಣ ವಂದಿಸಿ, ಸನತ್ ಕುಮಾರ್ ಪದ್ಯಾಣ ಪ್ರಾರ್ಥಿಸಿದರು. ಶರತ್ ಭಟ್ ಸೇರಾಜೆ ಮತ್ತು ನವ್ಯಕೃಷ್ಣ ಮಾಣಿಪ್ಪಾಡಿ ನಿರ್ವಹಿಸಿದರು.

ಸುತ್ತ ಮುತ್ತ

ಎಲ್‌ಡಿಎಫ್ ಸ್ವತಂತ್ರ ಅಭ್ಯರ್ಥಿ ಪ್ರಚಾರ

ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಎಲ್‌ಡಿಎಫ್ ಸ್ವತಂತ್ರ ಅಭ್ಯರ್ಥಿ ಶಾನವಾಸ್ ಪಾದೂರು ಅವರು ಚೆಂಗಳ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧೆಡೆಗೆ ತೆರಳಿ ಮತಯಾಚಿಸಿದರು. ಆರ್ಲಡ್ಕದಿಂದ ಆರಂಭಿಸಿ ಚಾತಪ್ಪಾಡಿ, ಬಾಲಡ್ಕ ನೆಲ್ಲಿಕಟ್ಟೆ ಆದುರ್ಗುರಿ, ಎದುತೋರ್ಡು, ಎಡನೀರು, ಪಾಡಿ, ಇಂಬ್ರವಳಪ್ಪ್, ನಾಲ್ತಡ್ಕ ಕಲ್ಲಕಟ್ಟ ಎರುರ್ದುಂಕಡವ್, ರಹ್ಮಾನಿಯಾ ನಗರ, ನಾಯನ್ಮಾರ ಮೂಲೆ, ಸಂತೋಷ್‌ನಗರ, ಚೇರೂರು, ಬೇರ್ಕ, ಸ್ಟಾರ್‌ನಗರ, ವಿ.ಕೆ.ಪಾರೆ, ಪುಲಿಕುಂಡು, ಚೆರ್ಕಳ ಪೇಟೆ ಸಹಿತ ವಿವಿಧ ಕಡೆಗಳಲ್ಲಿ ಮತಯಾಚಿಸಿದರು.

ಏ.26: ಕುಂಟಿಕಾನ ಮಠ ಶ್ರೀ ಶಂಕರನಾರಾಯಣ ದೇವಳದಲ್ಲಿ ಪ್ರತಿಷ್ಠಾ ವಾರ್ಷಿಕ

ಕಾಸರಗೋಡು: ಕುಂಟಿಕಾನ ಮಠ ಶ್ರೀ ಶಂಕರ ನಾರಾಯಣ ದೇವಸ್ಥಾನದಲ್ಲಿ ಪ್ರತಿಷ್ಠಾ ವಾರ್ಷಿಕ ಮಹೋತ್ಸವವು ಏ.26ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬೆಳಗ್ಗೆ 9.30 ರಿಂದ ಏಕಾದಶ ರುದ್ರಾಭಿಷೇಕ, 10.30ರಿಂದ ಪ್ರಜ್ಞಾನ ಪ್ರತಿಷ್ಠಾನಂ ಪುತ್ತೂರು ಇದರ ಮಹಿಳಾ ಸದಸ್ಯೆಯರಿಂದ ನಾರಾಯಣೀಯಂ ಪಾರಾಯಣ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನದಾನ ನಡೆಯಲಿದೆ ಎಂದು ಶ್ರೀ ಕ್ಷೇತ್ರದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾರಿಕ್ಕಾಡು ಶ್ರೀ ವಯನಾಟ್ಟು ದೈವಂಕಟ್ಟು ಮಹೋತ್ಸವ: ಭತ್ತ ಅಳೆಯುವ ಕಾರ್ಯಕ್ರಮ

ಕಾಸರಗೋಡು: ಪುದಿಯಪುರ ವಯನಾಟು ಹೋತ್ಸವದ ಭತ್ತ ಅಳೆದು ನೀಡುವ (ಕೂವಾಂ ಅಳಕ್ಕಲ್) ನಡೆಯಿತು. ಮದನಂತೇಶ್ವರ ಸಿದ್ಧಿ ವಿನಾಯಕ ಕ್ಷೇತ್ರ, ಅಡೂರು ಶ್ರೀ ಮಹಾತೋಭಾರ ಶ್ರೀ ಮಹಾಲಿಂಗೇಶ್ವರ ಕ್ಷೇತ್ರ, ಕುಂಡಂಗುಳಿ ಶ್ರೀ ಪಂಚಲಿಂಗೇಶ್ವರ ಕ್ಷೇತ್ರ, ತೃಕನ್ನಾಡು ಶ್ರೀ ತ್ರಯಂಬಕೇಶ್ವರ ಕ್ಷೇತ್ರ, ಕೀಯೂರು ಚಂದ್ರಗಿರಿ ಶ್ರೀ ಧರ್ಮಶಾಸ್ತಾ ಕ್ಷೇತ್ರ, ಆಡುಕ್ಕತ್ ಶ್ರೀ ಭಗವತೀ ಕ್ಷೇತ್ರ, ವೇಲಕುನ್ನು ಶ್ರೀಮಹಾಶಿವ ಕ್ಷೇತ್ರ ಸಹಿತ 17 ಕ್ಷೇತ್ರಗಳಿಗೆ ಹಾಗೂ ಪನಯಾಲ್ ಕೋಟಪ್ಪಾರ ಶ್ರೀ ವಯನಾಟ್ಟ ಕುಲವನ್ ದೈವಸ್ಥಾನಕ್ಕೆ ಭತ್ತ ಅಳೆದು ನೀಡಲಾಯಿತು. ಉತ್ಸವ ಸಮಿತಿ ಪದಾಧಿಕಾರಿಗಳಾದ ಅನಿಲ್‌ಕುಮಾರ್ ನೀರ್ಚಾಲು, ಬಿ.ಕೆ.ಕುಟ್ಟಿ, ಕಟ್ಟಾರಂ, ಸಿ.ವಿ.ಕೃಷ್ಣನ್, ಸಿ.ವಿ.ಸುರೇಶ್, ಕೃಷ್ಣನ್ ಪಳ್ಳತ್ತಡ್ಕ ಕುಮಾರನ್ ಮುಲ್ಲಂಬಾಡಿ ನೇತೃತ್ವ ನೀಡಿದರು.
ವಿವಿಧ ಕ್ಷೇತ್ರಗಳ ಆಚಾರ ಸ್ಥಾನಿಕರು, ಕ್ಷೇತ್ರ ಪದಾಧಿಕಾರಿಗಳು ಸಹಿತ ಹಲವರು ಮಂದಿ ಭಾಗವಹಿಸಿದ್ದರು. ಏಪ್ರಿಲ್ 23ರಿಂದ 26ರ ವರೆಗೆ ಶ್ರೀ ವಯನಾಟ್ಟು ಕುಲವನ್ ದೈವಂಕಟ್ಟು ಮಹೋತ್ಸವ ಜರಗಲಿದೆ. ಏ.23ರಂದು ಬೆಳಗ್ಗೆ 10 ಗಂಟೆಗೆ ಹೊರೆಕಾಣಿಕೆ ಮೆರವಣಿಗೆ ದೈವಸ್ಥಾನಕ್ಕೆ ಆಗಮಿಸಲಿದೆ. ರಾತ್ರಿ 7ಗಂಟೆಗೆ ದೈವಗಳ ತೊಡಂಲ್, ಏ.24ರಂದು ಮುಂಜಾನೆಯಿಂದ ವಿವಿಧ ದೈವಗಳ ದರ್ಶನ ಆರಂಭಗೊಳ್ಳಲಿದೆ. ಏ.25ರಂದು ರಾತ್ರಿ 8ಕ್ಕೆ ಕಂಡನಾರ್‌ಕೇಳನ್ ದೈವದ ವೆಳ್ಳಾಟ, ಬಪ್ಪಿಡಲ್ ಕಾರ್ಯಕ್ರಮ, ಏ.26ರಂದು ಸಂಜೆ 4.30ಕ್ಕೆ ಶ್ರೀ ಮುನಾಟು ಕುಲವನ್ ದೈವದ ಹೊರಡುವಿಕೆ ಹಾಗೂ ಚೂಟೊಪ್ಪಿಕಲ್ ಕಾರ್ಯಕ್ರಮ ನಡೆಯಲಿರುವುದು.

ಕಡಂಬಾರು ಶ್ರೀ ಕ್ಷೇತ್ರದ ವಾರ್ಷಿಕೋತ್ಸವ ಸಂಪನ್ನ

ಮಂಜೇಶ್ವರ: ಕಡಂಬಾರು ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನದಲ್ಲಿ ವಾರ್ಷಿಕೋತ್ಸವವು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು. ಕಾರ್ಯಕ್ರಮದ ಅಂಗವಾಗಿ ಅಂತಿಮ ದಿನದಂದು ಬೆಳಗ್ಗೆ ದರ್ಶನ ಬಲಿ, ರಾಜಾಂಗಣ ಪ್ರಸಾದ ನಡೆಯಿತು. ಮಧ್ಯಾಹ್ನ ಮಹಾಪೂಜೆ, ಅನ್ನ ಸಂತರ್ಪಣೆ, ಸಂಜೆ ಮಲರಾಯ ಬಂಟ ದೈವಗಳ ನೇಮ ಮೊದಲಾದ ಕಾರ್ಯಕ್ರಮ ಜರಗಿತು. ಉತ್ಸವದ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕುತ್ತಾಜೆ ಶ್ರೀ ಕ್ಷೇತ್ರದಲ್ಲಿ ದೈವನೇಮ

ಕಾಸರಗೋಡು: ಪೆರ್ಲ ವಾಣಿನಗರ ಕುತ್ತಾಜೆ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದಲ್ಲಿ ಧರ್ಮದೈವ ಶ್ರೀ ರಕ್ತೇಶ್ವರಿ ದೈವದ ನೇಮ ಹಾಗೂ ಬೊಟ್ಟಿ ಆಯನ ಕಾರ್ಯಕ್ರಮವು ಏ.6, 7 ಮತ್ತು 8ರಂದು ಜರಗಲಿದೆ. ಏ.6ರಂದು ಸಂಜೆ 4.40ಕ್ಕೆ ವಾಣಿನಗರ ಶ್ರೀಕೃಷ್ಣ ಭಜನಾ ಮಂದಿರದಿಂದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, ಏ.7ರಂದು ಸಂಜೆ 6.15ಕ್ಕೆ ಮಹಾಪೂಜೆ, 6.30ಕ್ಕೆ ಭಂಡಾರ ತೆಗೆಯುವುದು, ರಾತ್ರಿ 7ಕ್ಕೆ ಶ್ರೀ ರಕ್ತೇಶ್ವರಿ ದೈವದ ನೇಮ, 8ಕ್ಕೆ ಪಡ್ಪು ಧೂಮಾವತಿ ದೈವದ ನೇಮ, 8.30ಕ್ಕೆ ಮೋಂದಿಕೋಲ, 9.30ಕ್ಕೆ ಅನ್ನ ಸಂತರ್ಪಣೆ, 11.30ಕ್ಕೆ ಪೊಟ್ಟನ್ ದೈವ ಸಹಿತ ವಿವಿಧ ದೈವಗಳ ನೇಮ ಜರಗಲಿದೆ. ಏ.8ರಂದು ವಿವಿಧ ದೈವಗಳ ನೇಮದೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಗಲಿದೆ.

ಸುರಕ್ಷಾ: ಮಂಜೂರಾತಿ ಪತ್ರ ಹಸ್ತಾಂತರ

ಕಾಸರಗೋಡು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾಸರಗೋಡು ತಾಲೂಕು ಚಂದ್ರಗಿರಿ ವಲಯದ ಚೆಮ್ನಾಡು ಕಾರ್ಯಕ್ಷೇತ್ರದ ಕೊರಗಜ್ಜ ಸಂಘದ ಬಿಂದು ಅವರ ಪತಿ ಕೃಷ್ಣನ್ ಪಾರ್ಶ್ವವಾಯು ಪೀಡಿತರಾಗಿ ಅನಾರೋಗ್ಯ ದಿಂದಿದ್ದು ಈ ಹಿನ್ನೆಲೆಯಲ್ಲಿ ಯೋಜನಾಧಿಕಾರಿ ಅವರು ಮನೆ ಭೇಟಿ ನೀಡಿದರು. ಅಲ್ಲದೆ 2025– 26ನೇ ಸಾಲಿನ ಸಂಪೂರ್ಣ ಸುರಕ್ಷಾ ನೋಂದಾವಣೆ ಮಾಡಿದ್ದ ಈ ಕುಟುಂಬಕ್ಕೆ ಸಂಪೂರ್ಣ ಸುರಕ್ಷಾ ಸೌಲಭ್ಯ 1,18,000 ರೂ. ಮಂಜೂರಾಗಿದ್ದು, ಮಂಜೂರಾತಿ ಪತ್ರವನ್ನು ಯೋಜನಾಧಿಕಾರಿ ದಿನೇಶ್ ಹಾಗೂ ಜನಜಾಗೃತಿ ವೇದಿಕೆ ಸದಸ್ಯ ಚಂದ್ರನ್ ಫಲಾನುಭವಿಗೆ ಹಸ್ತಾಂತರಿಸಿದರು. ವಲಯ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು ಮತ್ತಿತರರಿದ್ದರು.

ಕಾಞಂಗಾಡು -ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರಗಳ ಸ್ವಾಗತ, ವಿತರಣಾ ಕೇಂದ್ರಗಳಿಗೆ ಡೀಸಿ ಭೇಟಿ

ಸಮಸ್ಯೆ ಪೀಡಿತ ಮತಗಟ್ಟೆಗಳಲ್ಲಿ ಕೇಂದ್ರ ಪಡೆಗಳ ನಿಯೋಜನೆ




ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಜಿಲ್ಲಾ ಚುನಾವಣಾ ಅಧಿಕಾರಿಯಾಗಿರುವ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಭಾನುವಾರ ಕಾಞಂಗಾಡು ಮತ್ತು ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರಗಳ ಸ್ವಾಗತ ಮತ್ತು ವಿತರಣಾ ಕೇಂದ್ರಗಳಿಗೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದರು.
ಅಲ್ಲದೆ ಇಲೆಕ್ಟ್ರಾನಿಕ್ ಮತಯಂತ್ರಗಳು ಮತ್ತು ವಿವಿಪ್ಯಾಟ್‌ಗಳನ್ನು ಇರಿಸಲಾಗಿರುವ ಸ್ಟ್ರಾಂಗ್ ರೂಮ್‌ಗಳಿಗೂ ಜಿಲ್ಲಾಧಿಕಾರಿ ಭೇಟಿ ನೀಡಿ ತಪಾಸಣೆ ನಡೆಸಿದರು. ಕಾಞಂಗಾಡು ಕ್ಷೇತ್ರದ ಸಮಸ್ಯಾತ್ಮಕ ಮತಗಟ್ಟೆಯಲ್ಲಿ ಸೇರಿಸಲಾದ ವೆಳ್ಳಿಕೋತ್ ಮಹಾಕವಿ ಪಿ. ಸ್ಮಾರಕ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯ ಮತದಾನ ಕೇಂದ್ರ, ತೃಕ್ಕರೀಪ್ಪುರ ಕ್ಷೇತ್ರದ ಚೆರುವತ್ತೂರು ಮಹಾಕವಿಕುಟ್ಟಂ ಸ್ಮಾರಕ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯ ಮತದಾನ ಕೇಂದ್ರಕ್ಕೂ ಜಿಲ್ಲಾಧಿಕಾರಿ ಸಂದರ್ಶನ ನೀಡಿದರು. ವಿಎಫ್‌ಸಿಗಳು ಕಾರ್ಯನಿರ್ವಹಿಸುತ್ತಿರುವ ಕಾಞಂಗಾಡು ಸ್ವಾಮಿ ನಿತ್ಯಾನಂದ ಪಾಲಿಟೆಕ್ನಿಕ್ ಕಾಲೇಜು ಮತ್ತು ತೃಕ್ಕರೀಪ್ಪುರ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿಗೂ ಸಂದರ್ಶಿಸಿದರು.
ಎಲ್ಲಾ ಮತಗಟ್ಟೆಗಳಿಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಮುಕ್ತ, ಶಾಂತಿಯುತ ಮತ್ತು ನ್ಯಾಯಯುತ ಮತದಾನವನ್ನು ಖಚಿತಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು. ವಿಧಾನಸಭಾ ಚುನಾವಣೆಯ ಭಾಗವಾಗಿ ಕಾಸರಗೋಡು ಜಿಲ್ಲೆಯಲ್ಲಿ 12 ತುಕಡಿ ಕೇಂದ್ರ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ನುಡಿದರು. ಸಮಸ್ಯೆಪೀಡಿತ ಬೂತ್‌ಗಳಲ್ಲಿ ಕೇಂದ್ರ ಪಡೆಗಳಿಂದ ಭಾರೀ ಭದ್ರತೆ ಒದಗಿಸ ಲಾಗಿದೆ. ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಬೂತ್‌ಗಳಲ್ಲಿ ಕೇಂದ್ರ ಪಡೆ ನಿಯೋಜಿಸಲಾಗುವುದು ಎಂದರು.
ಚುನಾವಣಾ ಭದ್ರತೆಗಾಗಿ ಪ್ರತಿ ತುಕಡಿಯಲ್ಲಿ 72 ಸೈನಿಕರಂತೆ ಒಟ್ಟು 864 ಸೈನಿಕರನ್ನು ನಿಯೋಜಿಸಲಾಗಿದೆ. ಬಿಗಿ ಭದ್ರತಾ ವ್ಯವಸ್ಥೆಗಳ ಅಡಿ ಯಲ್ಲಿ ಸ್ಟ್ರಾಂಗ್ ರೂಮ್‌ಗಳನ್ನು ಸ್ಥಾಪಿಸಲಾಗಿದೆ. ಕೇಂದ್ರ ಸೇನೆ ಮತ್ತು ಕೇರಳ ಪೊಲೀಸರನ್ನು ಭದ್ರತೆಗಾಗಿ ನೇಮಿಸಲಾಗಿದೆ. ಕಾಞಂಗಾಡು, ತೃಕ್ಕರೀಪ್ಪುರ ಕ್ಷೇತ್ರಗಳ ಸ್ವಾಗತ ಮತ್ತು ವಿತರಣಾ ಕೇಂದ್ರಗಳು, ಮತ ಎಣಿಕೆ ಕೇಂದ್ರಗಳನ್ನು ಕಾಞಂಗಾಡಿನ ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಸ್ಥಾಪಿಸಲಾಗಿದೆ. ಎಲ್ಲಾ ಮತಗಟ್ಟೆಗಳ ಒಳಗೆ, ಹೊರಗೆ ಕಣ್ಗಾವಲು ಕ್ಯಾಮರಾ ಅಳವಡಿಸಲಾಗಿದೆ ಎಂದು ಜಿಲ್ಲಾ ಕಲೆಕ್ಟರ್ ಮಾಹಿತಿ ನೀಡಿದರು.

ಅಂಚೆ ಮತದಾನ: ನಿಯಂತ್ರಣ ಕೊಠಡಿಗಳ ಸ್ಥಾಪನೆ

ಅಂಚೆ ಮತದಾನಕ್ಕಾಗಿ ಸೌಲಭ್ಯ ಕೇಂದ್ರಗಳನ್ನು ಮೇಲ್ವಿಚಾರಣೆ ಮಾಡಲು ನಿಯಂತ್ರಣ ಕೊಠಡಿಗಳ ತೆರೆಯಲಾಗಿದೆ. ಕಾಸರಗೋಡು ಜಿಲ್ಲೆಯಲ್ಲಿ ಅಂಚೆ ಮತದಾನಕ್ಕಾಗಿ ವ್ಯವಸ್ಥೆ ಮಾಡಲಾದ ಸೌಲಭ್ಯ ಕೇಂದ್ರಗಳ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಎಲ್ಲಾ ಕ್ಷೇತ್ರಗಳಲ್ಲಿ ವಿಶೇಷ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ.

ಕಾಞಂಗಾಡು ಕ್ಷೇತ್ರದ ಚುನಾವಣಾಧಿಕಾರಿ ಕೆ.ಆರ್. ಮನೋಜ್, ತೃಕ್ಕರೀಪ್ಪುರ ಕ್ಷೇತ್ರದ ಚುನಾವಣಾಽಕಾರಿ ಶೆರ್ಲಿ, ಸಹಾಯಕ ಚುನಾವಣಾಽಕಾರಿಗಳು, ಇತರ ಚುನಾವಣಾ ಅಽಕಾರಿಗಳು ಮುಂತಾದವರು ಜಿಲ್ಲಾಽಕಾರಿಗಳಿಗೆ ಸಿದ್ಧತೆಗಳನ್ನು ವಿವರಿಸಿದರು.
ಕಾಸರಗೋಡು ಸಿವಿಲ್ ಸ್ಟೇಷನ್ ಕಾಂಪೌಂಡ್‌ನಲ್ಲಿರುವ ಅಕ್ಷರ ಗ್ರಂಥಾಲಯದಲ್ಲಿ ಕಾರ್ಯನಿರ್ವ ಹಿಸುತ್ತಿರುವ ನಿಯೋಜಿತ ಮತದಾರರ ಸೌಲಭ್ಯ ಕೇಂದ್ರವು ಜಿಲ್ಲೆಯ ಒಳಗೆ ಮತ್ತು ಹೊರಗೆ ಮತ ಹೊಂದಿರುವ ಮತ್ತು ಕಾಸರಗೋಡು ಜಿಲ್ಲೆಯಲ್ಲಿ ಚುನಾವಣಾ ಕೆಲಸಕ್ಕಾಗಿ ನಿಯೋಜಿಸಲಾದ ಮತದಾನ ಮಾಡದ ಸಿಬ್ಬಂದಿಗೆ ಮತದಾನ ಸೇವೆ ಒದಗಿಸಲು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದೆ.
ವಿತರಣಾ ಕೇಂದ್ರಗಳ ಬಳಿ ಮತದಾರರ ಸೌಲಭ್ಯ ಕೇಂದ್ರ ಸ್ಥಾಪಿಸಲಾಗಿದ್ದು ಅಂಚೆ ಮತಪತ್ರಗಳಿಗೆ ಅರ್ಜಿ ಸಲ್ಲಿಸಿದ ಎಲ್ಲಾ ಅಧಿಕಾರಿಗಳು ಮತ ಚಲಾಯಿಸಲು ಅಗತ್ಯವಾದ ಕೌಂಟರ್‌ಗಳನ್ನು ಒದಗಿಸಲಾಗಿದೆ. ಮತಗಟ್ಟೆ ಅಧಿಕಾರಿಗಳ ತರಬೇತಿ ಕೇಂದ್ರಗಳ ಬಳಿ ಸ್ಥಾಪಿಸಲಾದ ಮತದಾರರ ಸೌಲಭ್ಯ ಕೇಂದ್ರಗಳು (ವಿಎಫ್‌ಸಿ) ಮೂಲಕ ಅಂಚೆ ಮತಪತ್ರ ಬಳಸಿಕೊಂಡು ಮತ ಚಲಾಯಿಸಲು ಎಲ್ಲಾ ಸೌಕರ್ಯ ಜಾರಿಗೊಳಿಸಲಾಗಿದೆ ಮತ್ತು ಅಂಚೆ ಮತಪತ್ರಗಳಿಗೆ ಅರ್ಜಿ ಸಲ್ಲಿಸಿದ ಅಧಿ ಕಾರಿಗಳು ವಿಎಫ್‌ಸಿ ಬಳಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು. ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲಾದ ನಿಯಂತ್ರಣ ಕೊಠಡಿಯಿಂದ ಎಲ್ಲಾ ಬೂತ್‌ಗಳಲ್ಲಿ ಸ್ಥಾಪಿಸಲಾದ ವೆಬ್ ಕಾಸ್ಟಿಂಗ್‌ನ್ನು ಮೇಲ್ವಿಚಾರಣೆ ನಡೆಸುವ ವ್ಯವಸ್ಥೆಯಿದೆ.

ವೋಟಾಯನಂ 2026: ತಲಕಳೈನಲ್ಲಿ ಜಾಗೃತಿ ಅಭಿಯಾನ, ರಸಪ್ರಶ್ನೆ ಸ್ಪರ್ಧೆ



ಕಾಸರಗೋಡು: ಕಾಸರಗೋಡು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸ್ವೀಪ್ ಕಾಸರಗೋಡು ಮತ್ತು ತಲಕಳೈ ಜ್ವಾಲಾ ಗ್ರಂಥಾಲಯ ಜಂಟಿಯಾಗಿ ಭಾನುವಾರ ಆಯೋಜಿಸಿದ್ದ ವೋಟಾಯನಂ – 2026 ವಿಧಾನಸಭಾ ಚುನಾವಣಾ ಜಾಗೃತಿ ಕಾರ್ಯಕ್ರಮ ಮತ್ತು ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆಯನ್ನು ಸ್ವೀಪ್ ನೋಡಲ್ ಅಧಿಕಾರಿಯಾಗಿರುವ ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್ ಉದ್ಘಾಟಿಸಿ, ಈ ಬಾರಿಯ ಚುನಾವಣೆಯ ಕುರಿತು ಮತದಾರರಿಗೆ ಸಮಗ್ರ ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದರು.
ನನ್ನ ಮತ ನನ್ನ ಹಕ್ಕು ಎಂಬ ಸಂದೇಶದೊಂದಿಗೆ ಹಮ್ಮಿಕೊಳ್ಳಲಾದ ಅಭಿಯಾನದಲ್ಲಿ ಕುಟುಂಬಶ್ರೀ ಸಹಾಯಕ ಜಿಲ್ಲಾ ಮಿಷನ್ ಸಂಯೋಜಕ ಕೆ.ಎಂ.ಕಿಶೋರ್ ಕುಮಾರ್ ತರಗತಿ ನಡೆಸಿಕೊಟ್ಟರು. ಸಮಾರಂಭದಲ್ಲಿ ಪಿ.ಚಾತುಕುಟ್ಟಿ ನಾಯರ್ ಅಧ್ಯಕ್ಷತೆ ವಹಿಸಿದ್ದರು. ಪಿ.ಎಸ್.ಶ್ರೀಶನ್ ಸ್ವಾಗತಿಸಿ, ಎನ್.ಬೇಬಿ ವಂದಿಸಿದರು. ಜಿಲ್ಲಾ ಗ್ರಂಥಾಲಯ ಮಂಡಳಿ ಕಾರ್ಯಕಾರಿ ಸಮಿತಿ ಸದಸ್ಯ ಕೆ.ರವೀಂದ್ರನ್ ಮಾತನಾಡಿದರು.

- **ಚುನಾವಣೆಯ ಬಗ್ಗೆ ಮತದಾರರಿಗೆ ಸಮಗ್ರ ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮ**
- **ಕಾರ್ಯಕ್ರಮದ ಪ್ರಯುಕ್ತ ಜಿಲ್ಲೆಯಲ್ಲಿ ಯುವ ಮತದಾರರ ರಸಪ್ರಶ್ನೆ-26 ಸ್ಪರ್ಧೆ ಆಯೋಜನೆ**

ಕಾರ್ಯಕ್ರಮದ ಪ್ರಯುಕ್ತ ಜಿಲ್ಲೆಯಲ್ಲಿ ಏರ್ಪಡಿಸಲಾದ ಯುವ ಮತದಾರರ ರಸಪ್ರಶ್ನೆ–26 ಸ್ಪರ್ಧೆಯಲ್ಲಿ ಅನೇಕ ಮಂದಿ ಭಾಗವಹಿಸಿದ್ದರು. ಮಾತ್ರವಲ್ಲದೆ ಕಾರ್ಯಕ್ರಮದ ಭಾಗವಾಗಿ ಮತದಾರರ ಪಟ್ಟಿಗೆ ಹೆಸರುಗಳನ್ನು ಸೇರಿಸಲು ಮತ್ತು ಮತದಾನ ಯಂತ್ರದ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ವಿಶೇಷ ಸೌಲಭ್ಯಗಳನ್ನು ಏರ್ಪಡಿಸಲಾಗಿತ್ತು.

ಮಂಜೇಶ್ವರದಲ್ಲಿ ಹೊಸ ಟ್ವಿಸ್ಟ್: ಸ್ವತಂತ್ರ ಅಭ್ಯರ್ಥಿಯಾಗಿ ಜೀನ್ ಲವೀನಾ ಎಂಟ್ರಿ



ಮಂಜೇಶ್ವರ: ಕೇರಳ ವಿಧಾನಸಭಾ ಚುನಾವಣೆ ಕಣ ರಂಗೇರುತ್ತಿರುವಂತೆಯೇ ರಾಜ್ಯದ ಹೈ ವೋಲ್ಟೇಜ್ ಕ್ಷೇತ್ರ ಎಂದೇ ಗುರುತಿಸಲ್ಪಡುವ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಹೊಸ ರಾಜಕೀಯ ಸಂಚಲನ ಸೃಷ್ಟಿಯಾಗಿದೆ. ಪ್ರಬಲ ತ್ರಿಕೋನ ಸ್ಪರ್ಧೆಯ ನಡುವೆಯೇ ಮಂಜೇಶ್ವರ ಗ್ರಾ.ಪಂ.ನ ಮಾಜಿ ಅಧ್ಯಕ್ಷೆ ಜೀನ್ ಲವಿನಾ ಮೊಂತೆರೋ ಅವರು ಅಂತಿಮ ಕ್ಷಣದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಅಖಾಡಕ್ಕಿಳಿದಿರುವುದು ವಿವಿಧ ರಾಜಕೀಯ ಪಕ್ಷಗಳ ನಿದ್ದೆಗೆಡಿಸಿದೆ.
ಕಳೆದ ಹಲವು ಚುನಾವಣೆಗಳಲ್ಲಿ ಅತ್ಯಲ್ಪ ಮತಗಳ ಅಂತರದಲ್ಲಿ ಸೋಲು ಅನುಭವಿಸುತ್ತಿರುವ ಮಂಜೇಶ್ವರ ಕ್ಷೇತ್ರವನ್ನು ಈ ಬಾರಿ ವಶಪಡಿಸಿಕೊಳ್ಳಬೇಕೆಂದು ಶ್ರಮಿಸುತ್ತಿರುವ ಬಿಜೆಪಿಗೆ ಈ ಬೆಳವಣಿಗೆ ವರದಾನವಾಗುವ ಸಾಧ್ಯತೆಯಿದೆ. ಇನ್ನೊಂದೆಡೆ ಸಾಂಪ್ರದಾಯಿಕ ಮತ ಬ್ಯಾಂಕ್‌ಗೆ ಕತ್ತರಿ ಬೀಳುವ ಭೀತಿಯಲ್ಲಿ ಯುಡಿಎಫ್ ಪಾಳಯದಲ್ಲಿ ನಡುಕ ಶುರುವಾಗಿದೆ.
ಮಂಜೇಶ್ವರ ಕ್ಷೇತ್ರದಲ್ಲಿ ಸರಿ ಸುಮಾರು 7,000 ಕ್ರಿಶ್ಚಿಯನ್ ಮತದಾರರಿದ್ದಾರೆ. ಜೀನ್ ಲವೀನಾ ಮೊಂತೆರೋ ಈ ಸಮುದಾಯದ ಪ್ರಬಲ ನಾಯಕಿಯಾಗಿರುವುದರಿಂದ ಅವರ ಸ್ಪರ್ಧೆ ಸಮುದಾಯದ ಮತಗಳನ್ನು ಯಾವ ಕಡೆಗೆ ತಿರುಗಿಸಲಿದೆ ಎಂಬುದು ಈಗ ಬಹುದೊಡ್ಡ ಪ್ರಶ್ನೆಯಾಗಿದೆ.
ಕಳೆದ 22 ವರ್ಷಗಳಿಂದ ಅದಲು ಬದಲಿಯಾಗಿ ಅಧಿಕಾರಕ್ಕೆ ಬರುತ್ತಿರುವ ಸರ್ಕಾರಗಳಾಗಲಿ ಅಥವಾ ಶಾಸಕರಾಗಲಿ ನಮ್ಮ ಸಮುದಾಯವನ್ನು ನಿರ್ಲಕ್ಷಿಸಿದ್ದಾರೆ. ಲ್ಯಾಟಿನ್ ಕ್ಯಾಥೋಲಿಕ್ ಜಾತಿ ಪ್ರಮಾಣ ಪತ್ರದಂತಹ ಮೂಲಭೂತ ಹಕ್ಕುಗಳಿಗೂ ಹೋರಾಡುವಂತಾಗಿದೆ. ಇದು ನಮ್ಮ ಮಕ್ಕಳ ಉನ್ನತ ವಿದ್ಯಾಭ್ಯಾಸ, ಉದ್ಯೋ ಗಕ್ಕೆ ಅಡ್ಡಿಯಾಗಿದೆಂಬುದು ಸ್ವತಂತ್ರ ಸ್ಪರ್ಧಾಳು ಜೀನ್ ಲವೀನಾ ಮೊಂತೆರೋ ಅಭಿಮತವಾಗಿದೆ.
ಈ ಮಧ್ಯೆ ಜೀನ್ ಲವೀನಾ ಮೊಂತೆರೋ ಅವರು ಕಣಕ್ಕಿಳಿದಿರುವುದರ ಹಿಂದೆ ಯಾವುದೇ ರಾಜಕೀಯ ಒಳ ಒಪ್ಪಂದವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಸಮುದಾಯದ ಅಭಿವೃದ್ಧಿ ಮತ್ತು ದಶಕಗಳ ನಿರ್ಲಕ್ಷ್ಯದ ವಿರುದ್ಧ ನಾನು ಸ್ವ ಇಚ್ಛೆಯಿಂದ ಕಣಕ್ಕಿಳಿದಿದ್ದೇನೆ. ಮಂಜೇಶ್ವರ ಗ್ರಾ.ಪಂ.ಅಧ್ಯಕ್ಷೆಯಾಗಿ ನಾನು ಮಾಡಿದ ಅಭಿವೃದ್ಧಿ ಕೆಲಸಗಳೇ ನನಗೆ ಶ್ರೀರಕ್ಷೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.
ಇದೇ ವೇಳೆ ಭಾನುವಾರ ಜೀನ್ ಲವಿನಾ ಮೊಂತೆರೋ ಅವರು ತಮ್ಮ ಬೆಂಬಲಿಗರೊಂದಿಗೆ ವರ್ಕಾಡಿ ಚರ್ಚ್, ಅಂಬಿತ್ತಾಡಿ ಸೇರಿದಂತೆ ಮಂಜೇಶ್ವರದ ವಿವಿಧೆಡೆ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ಮತದಾರರಿಂದ ಬೆಂಬಲ ವ್ಯಕ್ತವಾಗಿದ್ದು ಇದು ಮಂಜೇಶ್ವರ ಕ್ಷೇತ್ರದ ಇತರ ಅಭ್ಯರ್ಥಿಗಳಲ್ಲಿ ಆತಂಕ ಹೆಚ್ಚುವಂತೆ ಮಾಡಿದೆ.

ಏ.9, 10 ರಂದು ದೈವಗಳ ನೇಮ: ಗೊನೆ ಮುಹೂರ್ತ ಕಾರ್ಯಕ್ರಮ




ಪೆರ್ಲ: ಸೇರಾಜೆ ತರವಾಡು ಮನೆಯ ಧರ್ಮದೈವ ಧೂಮಾವತಿ, ರಕ್ತೇಶ್ವರಿ ಮತ್ತು ಪರಿವಾರ ದೈವಗಳ ನೇಮ ಏ.9 ಮತ್ತು 10 ರಂದು ವಿಜೃಂಭಣೆಯಿಂದ ಜರಗಲಿದೆ. ಆ ನಿಮಿತ್ತ ಗೊನೆ ಮುಹೂರ್ತ ಕಾರ್ಯಕ್ರಮ ನಡೆಸಲಾಯಿತು.
ಏ.9ರಂದು ಬೆಳಗ್ಗೆ 7ಗಂಟೆಗೆ ಗಣಪತಿ ಹೋಮ, ಮುಡಿವು ಶುದ್ಧಿ, 8ಗಂಟೆಗೆ ಶ್ರೀ ರಕೇಶ್ವರಿ ದೈವದ ನೇಮ, ಮಧ್ಯಾಹ್ನ 1ಗಂಟೆಗೆ ಪ್ರಸಾದ ವಿತರಣೆ, ಅನ್ನ ಸಂತರ್ಪಣೆ, ಅಪರಾಹ್ನ 3ಕ್ಕೆ ಕೊರತ್ತಿ, ಗುಳಿಗ ದೈವದ ನೇಮ, ಸಂಜೆ 5.30ಕ್ಕೆ ಕಲ್ಲಾಲ್ದ ಗುಳಿಗ ದೈವದ ನೇಮ. ರಾತ್ರಿ 9ಕ್ಕೆ ಅನ್ನ ಸಂತರ್ಪಣೆ, 9.30ಕ್ಕೆ ವರ್ಣಾರ ಪಂಜುರ್ಲಿ, ಕಲ್ಲುರ್ಟಿ, ಮೂಕಾಂಬಿಕಾ ಗುಳಿಗ ದೈವಗಳ ಭಂಡಾರ ತೆಗೆದು ನೇಮ ನೆರವೇರಲಿದೆ.
ಏ.10ರಂದು ಬೆಳಗ್ಗೆ 5ಕ್ಕೆ ಪ್ರಸಾದ ವಿತರಣೆ, 9 ಗಂಟೆಗೆ ಧರ್ಮದೈವ ಶ್ರೀ ಧೂಮಾವತಿ ನೇಮ, ಮಧ್ಯಾಹ್ನ 12.30ಕ್ಕೆ ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಲಿದೆ.

ಪ್ಲಾಸ್ಟಿಕ್‌ಗೆ ಕಡಿವಾಣ ಹಾಕಲು ಮುಳ್ಳೇರಿಯ ಶಾಲೆಯಲ್ಲಿ ಬಟ್ಟೆ ಚೀಲಗಳ ನಿರ್ಮಾಣ



ಕಾಸರಗೋಡು: ಪ್ಲಾಸ್ಟಿಕ್ ಉಪಯೋಗವನ್ನು ಕಡಿಮೆಗೊಳಿಸುವುದು ಮತ್ತು ವಿದ್ಯಾರ್ಥಿಗಳಲ್ಲಿ ಉದ್ಯೋಗ ನೈಪುಣ್ಯವನ್ನು ಹೆಚ್ಚಿಸುವ ಸಲುವಾಗಿ ಮುಳ್ಳೇರಿಯ ಎಯುಪಿ ಶಾಲೆಯಲ್ಲಿ ಬಟ್ಟೆ ಚೀಲ ನಿರ್ಮಾಣವನ್ನು ಆರಂಭಿಸಲಾಯಿತು.
ಮುಳ್ಳೇರಿಯ ಲಯನ್ಸ್ ಕ್ಲಬ್ ನೀಡಿದ ಹೊಲಿಗೆ ಯಂತ್ರದ ಮೂಲಕ ಈ ಯೋಜನೆಯನ್ನು ನಡೆಸಲಾಗುತ್ತಿದೆ. ಸೀಡ್ ಕ್ಲಬ್ ನೇತೃತ್ವದಲ್ಲಿ ಈಗಾಗಲೇ ಎರಡು ಸಾವಿರ ಬಟ್ಟೆ ಚೀಲಗಳನ್ನು ನಿರ್ಮಿಸಿ ಉಚಿತವಾಗಿ ವಿತರಿಸಲಾಗಿದೆ.

ವಿದ್ಯಾರ್ಥಿಗಳೇ ತಯಾರಿಸಿದ್ದಾರೆ

ಈ ವರ್ಷದ ಉಪಜಿಲ್ಲಾ ಜಿಲ್ಲಾ ಮತ್ತು ರಾಜ್ಯ ಕಲೋತ್ಸವಕ್ಕೆ ಬೇಕಾದ ಬಟ್ಟೆ ಚೀಲಗಳನ್ನು ಮುಳ್ಳೇರಿಯ ಎಯುಪಿ ಶಾಲೆ ವಿದ್ಯಾರ್ಥಿಗಳು ತಯಾರಿಸಿ ನೀಡಿರುತ್ತಾರೆ. ಈ ತನಕ ವಿದ್ಯಾರ್ಥಿಗಳ ಮನೆಗಳಲ್ಲಿ ಚೀಲಗಳನ್ನು ನಿರ್ಮಿಸಲಾಗುತ್ತಿತ್ತು. ಇನ್ನು ಮುಂದೆ ಶಾಲೆಯಲ್ಲಿಯೇ ಚೀಲ ತಯಾರಿಸಲು ಸಾಧ್ಯವಾಗಲಿದ್ದು ಶಿಕ್ಷಕರ ಸಹಾಯದೊಂದಿಗೆ ಹೆಚ್ಚು ವಿದ್ಯಾರ್ಥಿಗಳು ಇದರಲ್ಲಿ ಭಾಗಿಗಳಾಗಲು ಮತ್ತು ಉತ್ಪಾದನೆ ಹೆಚ್ಚಿಸಲು ಸಾಧ್ಯವಾಗಬಹುದು.

ಉತ್ಪಾದನೆ ಮತ್ತಷ್ಟು ವಿಸ್ತರಿಸಲು ಚಿಂತನೆ

ಪ್ಲಾಸ್ಟಿಕ್ ಚೀಲದ ಬದಲಾಗಿ ಬಟ್ಟೆ ಚೀಲ ಉಪಯೋಗಿಸಬೇಕು ಎಂಬ ಒಳ್ಳೆಯ ಸಂದೇಶವನ್ನು ಈ ಯೋಜನೆ ನೀಡುತ್ತಿದೆ. ಶಾಲೆ ಅಧಿಕೃತರ, ಶಿಕ್ಷಕರ, ಹಳೆ ವಿದ್ಯಾರ್ಥಿಗಳ, ಪೋಷಕರ ನೆರವಿನೊಂದಿಗೆ ಮುಂದಿನ ವರ್ಷ ಉತ್ಪಾದನೆ ಯನ್ನು ಮತ್ತಷ್ಟು ವಿಸ್ತರಿಸಲು ಉದ್ದೇಶಿಸಲಾಗಿದೆ. ಈ ವರ್ಷದ ಸೀಡ್ ಬಹುಮಾನವೂ ಇಲ್ಲಿನ ಸೀಡ್ ಕ್ಲಬ್‌ಗೆ ದೊರೆತಿದೆ.

ಶಾಲಾ ವ್ಯವಸ್ಥಾಪಕ ಡಾ.ವಿ.ವಿ. ರಮಣ, ಮುಖ್ಯ ಶಿಕ್ಷಕಿ ಎಂ.ಶ್ರೀಕಲಾ, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಬಿ.ಲೋಕೇಶ್, ಲಯನ್ಸ್ ಕ್ಲಬ್ ಅಧ್ಯಕ್ಷೆ ಕೆ.ರಾಜಲಕ್ಷ್ಮಿ, ಕೆ.ಪ್ರಜಿತಾ, ಹಿರಿಯ ಶಿಕ್ಷಕ ಎನ್. ಗೋಪಾಲಕೃಷ್ಣ ಸೀಡ್ ಕ್ಲಬ್ ಸಂಯೋಜಕಿ ಸಾವಿತ್ರಿ ಟೀಚರ್ ಮತ್ತಿತರರು ಉಪಸ್ಥಿತರಿದ್ದರು.

ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಅಂಚೆ ಮತದಾನ: 7462 ಅರ್ಜಿ ಸ್ವೀಕಾರ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಅಂಚೆ ಮತದಾನ ವ್ಯವಸ್ಥೆ ಸಕ್ರಿಯವಾಗಿದೆ. ಜಿಲ್ಲೆಯ ಒಳಗೆ ಮತ್ತು ಹೊರಗೆ ಮತಗಳನ್ನು ಹೊಂದಿರುವ ಕಾಸರಗೋಡು ಜಿಲ್ಲೆಯಲ್ಲಿ ಚುನಾವಣಾ



ಕೆಲಸಕ್ಕೆ ನಿಯೋಜಿಸಲಾದ ಮತದಾನ ಮಾಡದ ಸಿಬ್ಬಂದಿ ವಲಯದ ಮತದಾನ ಕ್ಕಾಗಿ ಸಿವಿಲ್ ಸ್ಟೇಷನ್ ಕಾಂಪೌಂಡ್ ನಲ್ಲಿರುವ ಅಕ್ಷರ ಗ್ರಂಥಾಲಯದಲ್ಲಿ ಕಾರ್ಯನಿರ್ವ ಹಿಸುತ್ತಿರುವ ನಿಯೋಜಿತ ಮತದಾರರ ಸೌಲಭ್ಯ ಕೇಂದ್ರದಲ್ಲಿ ಇದುವರೆಗೆ 38 ಮತಗಳನ್ನು ನೋಂದಾಯಿಸಲಾಗಿದೆ.

ಮತದಾರರ ಸೌಲಭ್ಯ ಕೇಂದ್ರಕ್ಕೆ ಡೀಸಿ ಭೇಟಿ

ಇದೇ ವೇಳೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ನಿಯೋಜಿತ ಮತದಾರರ ಸೌಲಭ್ಯ ಕೇಂದ್ರಕ್ಕೆ ಶನಿವಾರ ಖುದ್ದಾಗಿ ಭೇಟಿ ನೀಡಿ ಕೇಂದ್ರದ ಕಾರ್ಯನಿರ್ವಹಣೆಯನ್ನು ಕೂಲಂಕುಷವಾಗಿ ಅವಲೋಕಿಸಿದರು.

ಚುನಾವಣಾಧಿಕಾರಿಗೆ ಅಂಚೆ ಮತ ಹಸ್ತಾಂತರ

ಕಾಸರಗೋಡು ಜಿಲ್ಲೆಯ ಒಳಗೆ ಮತ್ತು ಹೊರಗೆ ಮತಗಳನ್ನು ಹೊಂದಿರುವ ಕಾಸರಗೋಡು ಜಿಲ್ಲೆಯಲ್ಲಿ ಚುನಾವಣಾ ಕೆಲಸಕ್ಕಾಗಿ ನಿಯೋಜಿಸಲಾದ ಮತದಾನೇತರ ಸಿಬ್ಬಂದಿಗೆ 116 ಅಂಚೆ ಮತಪತ್ರಗಳನ್ನು ಗೊತ್ತುಪಡಿಸಿದ ವಿಎಫ್‌ಸಿಯ ಉಸ್ತುವಾರಿ ಹೊಂದಿರುವ ಕಾಸರಗೋಡು ಚುನಾವಣಾಧಿಕಾರಿಗೆ ಹಸ್ತಾಂತರಿಸಲಾಯಿತು.

ಜಿಲ್ಲಾ ಸ್ಥಳೀಯಾಡಳಿತ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಮಟ್ಟದ ಮತಪತ್ರ ಕೇಂದ್ರದಲ್ಲಿ ಒಟ್ಟು 7462 ಅಂಚೆ ಮತಪತ್ರ ಅರ್ಜಿಗಳನ್ನು ಸ್ವೀಕರಿಸಲಾಗಿದೆ.
ಈ ಸಂದರ್ಭದಲ್ಲಿ ಅಂಚೆ ಮತಗಳ ನಿರ್ವಹಣಾ ಕೇಂದ್ರದ ಕಾರ್ಯಚಟುವಟಿಕೆಗಳನ್ನು ಜಿಲ್ಲಾಧಿಕಾರಿಗಳು ಶ್ಲಾಘಿಸಿ ಮಾತನಾಡಿದರು.

ಜಿಲ್ಲಾ ಲೀಗ್ ಇ ಡಿವಿಷನ್ ಕ್ರಿಕೆಟ್ ಪಂದ್ಯಾಟ: ತೆರುವತ್ ಸ್ಪೋರ್ಟಿಂಗ್ 'ಬಿ' ತಂಡಕ್ಕೆ ಪ್ರಶಸ್ತಿ



ಕಾಸರಗೋಡು: ಕಾಸರಗೋಡು ಜಿಲ್ಲಾ ಕ್ರಿಕೆಟ್ ಅಸೋಸಿಯೇಷನ್‌ನ ಆಶ್ರಯದಲ್ಲಿ ಪ್ರತಿಷ್ಠಿತ ಕೆಸಿಎ ಕ್ರೀಡಾಂಗಣದಲ್ಲಿ ನಡೆದ ಕಾಸರಗೋಡು ಜಿಲ್ಲಾ ಲೀಗ್ ಇ ಡಿವಿಷನ್ ಫೈನಲ್ ಪಂದ್ಯದಲ್ಲಿ ತೆರುವತ್ ಸ್ಪೋರ್ಟಿಂಗ್ ಬಿ ತಂಡ ತೆರುವತ್ ಸ್ಪೋರ್ಟಿಂಗ್ ಸಿ ತಂಡವನ್ನು 13 ರನ್‌ಗಳಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು.
ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಟೀಮ್ ಬಿ ತಂಡ 19.2 ಓವರ್‌ಗಳಲ್ಲಿ 130 ರನ್‌ಗಳಿಗೆ ಆಲೌಟ್ ಆಯಿತು. ತೆರುವತ್ ಸ್ಪೋರ್ಟಿಂಗ್ ಸಿ ತಂಡವು ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್‌ಗಳ ನಷ್ಟಕ್ಕೆ 117 ರನ್‌ಗಳನ್ನು ಮಾತ್ರ ಗಳಿಸಲು ಸಾಧ್ಯವಾಯಿತು. ಪಂದ್ಯಾವಳಿ ಉದ್ದಕ್ಕೂ ಉತ್ತಮ ಪ್ರದರ್ಶನ ನೀಡಿದ ಫಾಲ್ಕನ್ ಕ್ಯಾಂಪರ್ ತಂಡದ ಅಹ್ಮದ್ ಬಾಸಿತ್ ಬಿ.ಎಂ. ಅವರನ್ನು ಪಂದ್ಯಾವಳಿಯ ಆಟಗಾರ ಮತ್ತು ಅತ್ಯುತ್ತಮ ಬೌಲರ್ ಎಂದು ಆಯ್ಕೆ ಮಾಡಲಾಯಿತು. ಬ್ಯಾಟಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ತೆರುವತ್ ಸ್ಪೋರ್ಟಿಂಗ್ ಬಿ. ತಂಡದ ಮುಸ್ತಫಾ ಅವರನ್ನು ಪಂದ್ಯಾವಳಿಯ ಅತ್ಯುತ್ತಮ ಬ್ಯಾಟ್ಸ್‌ಮನ್ ಎಂದು ಹೆಸರಿಸಲಾಯಿತು. ವಿಜೇತರಿಗೆ ಟ್ರೋಫಿಗಳನ್ನು ಡಿಸಿಎ ಅಧ್ಯಕ್ಷ ಕೆ.ಎಂ.ಅಬ್ದುಲ್ ರೆಹಮಾನ್ ವಿತರಿಸಿದರು. ಸಮಾರಂಭದಲ್ಲಿ ಪಂದ್ಯಾವಳಿ ಸಮಿತಿ ಸಂಚಾಲಕ ಶಾಹಿದ್ ಸಿ.ಎಲ್. ಮತ್ತು ಅಂಪೈರ್ ರಿಯಾಜ್ ನಸ್ರುಲ್ಲಾ ಮೊದಲಾದವರು ಪಾಲ್ಗೊಂಡಿದ್ದರು.

ತೂಮಿನಾಡು ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ

ದೈವ ದೇವರ ಅನುಗ್ರಹ ನಾಡಿನ ಪ್ರಗತಿಗೆ ಪೂರಕ: ಒಡಿಯೂರು ಶ್ರೀ



ಮಂಜೇಶ್ವರ: ಕುಂಜತ್ತೂರು ತೂಮಿನಾಡು ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನದಲ್ಲಿ ಬ್ರಹ್ಮಶ್ರೀ ಮುಗೇರ ಮಹಾಕಾಳಿ ಹಾಗೂ ಪರಿವಾರ ದೈವಗಳ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಮತ್ತು ನೇಮೋತ್ಸವವು ಏ.2ರಿಂದ ಆರಂಭಗೊಂಡಿದ್ದು ಏ.6ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಸಮಾಪ್ತಿಯಾಗಲಿದೆ.
ಕಾರ್ಯಕ್ರಮದ ಅಂಗವಾಗಿ ಶುಕ್ರವಾರ ಶ್ರೀ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವವು ತಂತ್ರಿವರ್ಯರ ನೇತೃತ್ವದಲ್ಲಿ ಶ್ರದ್ಧಾಭಕ್ತಿಯಿಂದ ನೆರವೇರಿತು. ಅಲ್ಲದೆ ಧಾರ್ಮಿಕ ಸಭೆಯಲ್ಲಿ ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಪಾಲ್ಗೊಂಡು ಆಶೀರ್ವಚನ ನೀಡಿ, ದೈವ ದೇವರುಗಳ ಅನುಗ್ರಹ ಹಾಗೂ ಪ್ರೇರಣೆಯಿಂದ ನಾಡಿನ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಯುವ ಜನಾಂಗವು ಕ್ಷೇತ್ರಗಳಿಗೆ ನಿರಂತರವಾಗಿ ಸಂಪರ್ಕವಿರಿಸಿಕೊಂಡು ಹಿಂದು ಧರ್ಮದ ಆಚಾರ, ಅನುಷ್ಠಾನ ಹಾಗೂ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮುಂದುವರಿಯುವಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಹಿರಿಯರು ಮಾರ್ಗದರ್ಶಕರಾಗಬೇಕು ಎಂದು ಹಾರೈಸಿದರು.
ಕೊಡುಗೈ ದಾನಿ, ಉದ್ಯಮಿ ಡಾ.ಸದಾಶಿವ ಶೆಟ್ಟಿ ಕುಳೂರು ಕನ್ಯಾನ ದೀಪ ಬೆಳಗಿಸಿದರು. ಜೀರ್ಣೋದ್ಧಾರ ಬ್ರಹ್ಮಕಲಶ ಸಮಿತಿಯ ಅಧ್ಯಕ್ಷರಾದ ಧಾರ್ಮಿಕ ಮತ್ತು ಸಾಮಾಜಿಕ ಮುಂದಾಳು ಶ್ರೀಕೃಷ್ಣ ಶಿವಕೃಪಾ ಕುಂಜತ್ತೂರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕ್ಷೇತ್ರದ ತಂತ್ರಿವರ್ಯ ವೇದಮೂರ್ತಿ ಕೆ.ಮರಿ ಭಟ್ ಮೊದಲಾದವರು ಉಪಸ್ಥಿತರಿದ್ದರು.
ವಿವಿಧ ವಲಯಗಳ ಪ್ರಮುಖರಾದ ಲಂಚುಲಾಲ್ ಕೆ.ಎಸ್., ಶಶಿಧರ ಶೆಟ್ಟಿ ಬರೋಡ, ಜಯದೇವ ಖಂಡಿಗೆ, ರವಿ ರೈ ಕಳಸ, ಶ್ರೀಕಾಂತ್ ಶೆಟ್ಟಿ ಕಾರ್ಕಳ, ಎಸ್.ಅಂಗಾರ ಸುಳ್ಯ, ಮೋಹನ್ ಶೆಟ್ಟಿ ಕುಳೂರು ಮಜ್ಜಾರ್, ಕೃಷ್ಣ ಶೆಟ್ಟಿ ಕೆಳಗಿನಗುತ್ತು ಕೋಟೆಕ್ಕಾರು, ಮೋಹನ್ ಶೆಟ್ಟಿ ಯು., ಬಾಲಕೃಷ್ಣ ದೀಕ್ಷಾ ಮುಂತಾದವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.
ಜೀರ್ಣೋದ್ಧಾರ ಬ್ರಹ್ಮಕಲಶ ಸಮಿತಿಯ ಪ್ರಧಾನ ಸಂಚಾಲಕ ಹರೀಶ್ ಶೆಟ್ಟಿ ಮಾಡ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮಗಳಲ್ಲಿ ಅಪಾರ ಸಂಖ್ಯೆಯ ಭಕ್ತಜನರು ಪಾಲ್ಗೊಂಡಿದ್ದರು.

ಇಂದು ಕಾರ್ಯಕ್ರಮ ಸಮಾಪ್ತಿ

ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನ ದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮಕಲಶ, ನೇಮ ಏ.2ರಿಂದ ಆರಂಭಗೊಂಡಿದ್ದು ಏ.6ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಸಮಾಪ್ತಿಯಾಗಲಿದೆ.

ಸುತ್ತಮುತ್ತ

ಮಳೂರು ಬೆಳ್ಳಾರಿಕಮ್ಮ ದೇವರ ವಾರ್ಷಿಕೋತ್ಸವ

ಸುಂಟಿಕೊಪ್ಪ: ಸುಂಟಿಕೊಪ್ಪ ಪನ್ಯ ಗ್ರಾಮದಲ್ಲಿ ನೆಲೆನಿಂತಿರುವ ಗ್ರಾಮ ದೇವತೆಯಾದ ಶ್ರೀ ಮಳೂರು ಬೆಳ್ಳಾರಿಕಮ್ಮ ದೇವರ ವಾರ್ಷಿಕೋತ್ಸವದ ಅಂಗವಾಗಿ ಎತ್ತು ಪೋರಾಟ್, ಚೌರಿಕುಣಿತ, ಶ್ರೀ ದೇವರ ಉತ್ಸವ ಮೂರ್ತಿಯ ನೃತ್ಯ ಬಲಿ ಹಾಗೂ ವಿಶೇಷ ಪೂಜಾ ಕೈಂಕರ್ಯಗಳು ಭಕ್ತಾದಿಗಳ ಸಮುಖದಲ್ಲಿ ಶ್ರದ್ಧಾಭಕ್ತಿಯಿಂದ ಸಂಪನ್ನಗೊಂಡಿತು. ಉಲುಗುಲಿ ಪನ್ಯ ಗ್ರಾಮದ ಗ್ರಾಮ ದೇವತೆಯಾದ ಬೆಳ್ಳಾರಿಕಮ್ಮ ಉತ್ಸವದ ಅಂಗವಾಗಿ ಕಳೆದ 7 ದಿನಗಳ ಕಾಲ ಸುಂಟಿಕೊಪ್ಪ, ಉಲುಗುಲಿ, ಅಂಜನಗೇರಿ ಬೆಟಗೇರಿ, ಹರದೂರು ಗ್ರಾಮದ ಗ್ರಾಮಸ್ಥರು ದೇವಾಲಯದ ವ್ರತದಲ್ಲಿದ್ದು ವಾಡಿಕೆಯಂತೆ ವಾರದ ನಂತರ ದೇವಾಲಯದಲ್ಲಿ ವ್ರತಧಾರಿಗಳು ಅಂಗವಾಗಿ ವಿಶೇಷ ಆಚರಣೆಯಲ್ಲಿ ತೊಡಗಿಸಿಕೊಳ್ಳುವ ಗ್ರಾಮಗಳ ಮರುಷರು ದೇವಾಲಯದ ಆವರಣದಲ್ಲಿ ರಾತ್ರಿಯ ವೇಳೆ ತಂಗುವ ಮೂಲಕ ದೇವಾಲಯದಲ್ಲಿ ಚೌರಿಕುಣಿತ ನಡೆಸುತ್ತ ದೇವಿಗೆ ಪೂಜೆಯನ್ನು ಅರ್ಪಿಸಿದರು. ಕೊನೆಯ ದಿನ ಕೊಡವ ಮತ್ತು ಗೌಡ ಮನೆ ತನದ ಪುರುಷರು ಮತ್ತು ಯುವಕರು ಕೊಡಗಿನ ಸಾಂಪ್ರದಾಯಿಕ ಕೊಡವರ ಉಡುಪು ಕುಪ್ಪಚಾಲೆ ಮತ್ತು ಗೌಡ ಜನಾಂಗದ ಕುಪ್ಪಸ ದಟ್ಟಿ ಬಿಳಿಉಡುಪು ಧರಿಸಿ ದೇವಾಲಯದ ಭಂಡಾರವನ್ನು ಗ್ರಾಮದ ಮಂದನ ರಮೇಶ್ ಅವರ ಮನೆಯಿಂದ ಎತ್ತಿನ ಮೇಲೆ ಇರಿಸುವ ಮೂಲಕ ವಾದ್ಯಗೋಷ್ಠಿಯೊಂದಿಗೆ ದೇವಾಲಯಕ್ಕೆ ಮೆರವಣಿಗೆಯೊಂದಿಗೆ ತಂದು ದೇವಾಲಯದಲ್ಲಿ ಭಂಡಾರವನ್ನು ಸಮರ್ಪಿಸಿ, ನಂತರ ಗ್ರಾಮದ ಜನತೆಯಿಂದ ಈಡುಗಾಯಿ ಎತ್ತು ಪೋರಾಟ್, ಚೌರಿಕುಣಿತದಲ್ಲಿ ಮರುಷರು ಯುವಕರು ಪಾಲ್ಗೊಂಡರು. ದಿನದ ಪೂಜಾ ಕೈಂಕರ್ಯವನ್ನು ಮುಖ್ಯ ಅರ್ಚಕ ಮಂಜುನಾಥ ಉಡುಪ, ಗಣೇಶ್ ಶರ್ಮ, ಗಣೇಶ್ ಉಪಾಧ್ಯಾಯ, ಮಂಜುನಾಥ್ ತಂಡದವರು ನೆರವೇರಿಸಿದರು.

ಡಾ.ಬಾಬುಜಗಜೀವನ ರಾಮ್ ಜನ್ಮದಿನಾಚರಣೆ

ಕುಂದಾಪುರ: ಡಾ.ಬಾಬುಜಗಜೀವನ ರಾಮ್ ರವರ 119 ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಕುಂದಾಪುರ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಭಾನುವಾರ ಆಚರಿಸಲಾಯಿತು. ರಮೇಶ್, ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಲಾವಣ್ಯ, ಕಚೇರಿ ಅಧೀಕ್ಷಕರು, ದ್ವಿತೀಯ ದರ್ಜೆ ಸಹಾಯಕ ಗೋಪಾಲ ದೇವಾಡಿಗ, ಸಮಾಜ ಕಲ್ಯಾಣ ಇಲಾಖೆ,ಕುಂದಾಪುರ ಮೆಟ್ರಿಕ್ ನಂತರದ ಬಾಲಕರ ಬಾಲಕಿಯರ ವಸತಿ ನಿಲಯದ ಮೇಲ್ವಿಚಾರಕ ಭಾಸ್ಕರ್ ಪೂಜಾರಿ, ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳ ಮೇಲ್ವಿಚಾರಕಿ ರಾಧಿಕಾ ರಾಣಿ, ದೀಪಾ ಆರ್. ಪುತ್ರನ್, ಶ್ರೀ ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆಯ ಮುಖ್ಯ ಶಿಕ್ಷಕಿ ಪ್ರಭಾದೇವಿ, ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕಿ ಲಕ್ಷ್ಮೀ ನಾಯ್ಕ, ಸಿಬ್ಬಂದಿ ಸರಿತಾ, ದೀಪಾ, ಸಂಗೀತಾ ಹಾಗೂ ಗಣೇಶ ಉಪಸ್ಥಿತರಿದ್ದರು.

ಕಾರುಗಳ ನಡುವೆ ಅಪಘಾತ- ಚಾಲಕ ಸಹಿತ ಪ್ರಯಾಣಿಕರು ಪಾರು

ಮುಲ್ಕಿ: ಕಿನ್ನಿಗೋಳಿ ಮುಲ್ಕಿ ರಾಜ್ಯ ಹೆದ್ದಾರಿಯ ಪದ್ಮನೂರು ಶಾಲೆಯ ಬಳಿ ಕಾರುಗಳ ನಡುವೆ ಅಪಘಾತ ಸಂಭವಿಸಿದ್ದು ಎರಡು ಕಾರಿನಲ್ಲಿದ್ದ ಚಾಲಕ ಸಹಿತ ಪ್ರಯಾಣಿಕರು ಪವಾಡ ಸದೃಶ ಪಾರಾಗಿದ್ದಾರೆ. ಮುಲ್ಕಿ ಕಡೆಯಿಂದ ಕಿನ್ನಿಗೋಳಿ ಕಡೆಗೆ ಹೋಗುತ್ತಿದ್ದ ಡಿಸೈರ್ ಕಾರು ಚಾಲಕನ ನಿಯಂತ್ರಣ ತಪ್ಪಿಸಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಬಳಿಕ ಕಿನ್ನಿಗೋಳಿ ಕಡೆಯಿಂದ ಮುಲ್ಕಿ ಕಡೆಗೆ ಹೋಗುತ್ತಿದ್ದ ಇನ್ನೋವಾ ಕಾರಿಗೆ ಡಿಕ್ಕಿ ಹೊಡೆದಿದೆ. ಅಪಘಾತದಿಂದ ಎರಡು ವಾಹನಗಳು ಜಖಂಗೊಂಡಿದ್ದು ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸ್ ಭೇಟಿ ನೀಡಿ ಪರಿಶೀಲಿಸಿ ಎರಡು ವಾಹನಗಳನ್ನು ತೆರವುಗೊಳಿಸಿದ್ದಾರೆ.. ಅಪಘಾತಕ್ಕೆ ಡಿಸೈರ್ ಕಾರು ಚಾಲಕನ ಅತೀ ವೇಗ ನಿರ್ಲಕ್ಷ ಚಾಲನೆ ಎಂದು ಪೊಲೀಸರು ತಿಳಿಸಿದ್ದಾರೆ.

ವಾರಸುದಾರರ ಪತ್ತೆಗೆ ಮನವಿ

ಉಡುಪಿ: ಜಿಲ್ಲಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ 40 ವರ್ಷದ ಅಪರಿಚಿತ ವ್ಯಕ್ತಿಯು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು, ವಾರಸುದಾರರು ಯಾರಾದರೂ ಇದ್ದಲ್ಲಿ ಜಿಲ್ಲಾ ಆಸ್ಪತ್ರೆಯ ನಾಗರಿಕ ಸಹಾಯ ಕೇಂದ್ರ ದೂ.ಸಂಖ್ಯೆ: 0820–2520555, ಮೊ.ನಂ: 9449827833 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್‌ರಾಮ್ ಜಯಂತಿಯಲ್ಲಿ ಪ್ರೊ.ಎಂ.ಡಿ. ಮಂಚಿ ಬಣ್ಣನೆ

ರಾಜಕೀಯ, ಸಾಮಾಜಿಕ ಶಕ್ತಿಯಾಗಿ ಬದುಕಿದ ಜಗಜೀವನ್



ಪುತ್ತೂರು: ಡಾ.ಬಾಬು ಜಗಜೀವನ್ ರಾಮ್ ಅವರು ಕೇವಲ ವ್ಯಕ್ತಿಯಾಗಿ ಬದುಕದೆ ರಾಜಕೀಯ, ಸಾಮಾಜಿಕ ಶಕ್ತಿಯಾಗಿ ಬದುಕಿದವರು. 30 ವರ್ಷಗಳ ಕಾಲ ಕ್ಯಾಬಿನೆಟ್ ಸಚಿವರಾಗಿ ವಿವಿಧ ಖಾತೆಗಳನ್ನು ಯಶಸ್ವಿಯಾಗಿ ನಿಭಾಯಿಸಿ ದೇಶದ ಪ್ರಗತಿಗಾಗಿ ಹೇಗೆ ರಾಜಕಾರಣ ಮಾಡಬಹುದು ಎಂದು ತೋರಿಸಿಕೊಟ್ಟ ಧೀಮಂತ ನಾಯಕ ಎಂದು ಬಂಟ್ವಾಳ ಶ್ರೀ ವೆಂಕಟರಮಣ ಸ್ವಾಮಿ ಕಾಲೇಜ್ ಪ್ರಾಂಶುಪಾಲ ಪ್ರೊ.ಎಂ.ಡಿ. ಮಂಚಿ ಹೇಳಿದರು.

ಅವರು ಪುತ್ತೂರು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ತಾಲೂಕು ಕಚೇರಿ ಸಭಾಂಗಣದಲ್ಲಿ ಭಾನುವಾರ ನಡೆದ ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಂ ಅವರ 119 ನೇ ಜನ್ಮ ದಿನಾಚರಣೆಯಲ್ಲಿ ಉಪನ್ಯಾಸ ನೀಡಿದರು. ಡಾ. ಜಗಜೀವನ್ ರಾಂ ಅವರು ಅಸಮಾನತೆ, ಅಸ್ಪೃಶ್ಯತೆ, ಜಾತಿಪದ್ಧತಿ ಇದ್ದಸಂದರ್ಭದಲ್ಲಿಸಂಘಟನಾತ್ಮಕವಾಗಿ ಜಾಗೃತಿ ಮೂಡಿಸಿದವರು. ಧಮನಿತ ವರ್ಗದ ಅಭಿವೃದ್ಧಿಗಾಗಿ ಶ್ರಮಿಸಿ ಸಾಮಾಜಿಕ ಬದಲಾವಣೆಯ ಹರಿಕಾರ ಬೆಳೆದವರು ಎಂದರು.

ದೇಶದ ಭದ್ರತೆಗೆ ಅಡಿಪಾಯ

ಕೃಷಿ ಸಚಿವರಾಗಿ ಕೃಷಿ ಆವಿಷ್ಕಾರ, ತಂತ್ರಜ್ಞಾನ ಬಳಕೆ, ರೈತರ ಸಬಲೀಕರಣಕ್ಕಾಗಿ, ಕಾರ್ಮಿಕ ಸಚಿವರಾಗಿ ಕಾರ್ಮಿಕರ ಅಭ್ಯುದಯಕ್ಕಾಗಿ ಶ್ರಮಿಸಿದ ಜಗಜೀವನ್ ರಾಂ ಅವರು ರಕ್ಷಣಾ ಸಚಿವರಾಗಿ ದೇಶದ ಭದ್ರತಾ ವಿಚಾರದಲ್ಲಿ ದೃಢ ಪಂಚಾಂಗ ಹಾಕಿದವರು. ಸಮಾಜದಲ್ಲಿನ ಅಸಮಾನತೆಯನ್ನು ಹೋಗಲಾಡಿಸುವ ಮೂಲಕ ಸಮಾಜದ ಬದಲಾವಣೆಯ ಮಾಡುವ ಜತೆಗೆ ದೇಶದ ಎಲ್ಲಾ ವರ್ಗದವರೂ ಉದ್ಧಾರವಾಗಬೇಕು ಎಂಬ ಚಿಂತನೆಯನ್ನು ಹೊಂದಿದ್ದರು. ಪ್ರಸ್ತುತ ಅವರ ಕಾರ್ಯವೈಖರಿ, ಆದರ್ಶ, ಜೀವನ ಕ್ರಮವನ್ನುನಾವು ಅಳವಡಿಸಿಕೊಂಡರೆ ಸಮಾಜದಲ್ಲಿನ ಅಂಧಕಾರವನ್ನು ಹೋಗಲಾಡಿಸಬಹುದು ಎಂದು ಹೇಳಿದರು.

> **ಮಾನವ ಜನಾಂಗಕ್ಕೆ ಪ್ರೇರಣೆ**
>
> ದೀನ ದಲಿತರ ಪರ ಜೀವನದುದ್ದಕ್ಕೂ ಹೋರಾಡಿದ ಬಾಬು ಜಗಜೀವನ್ ರಾಂ ಅವರು ಮಾನವ ಜನಾಂಗಕ್ಕೆ ಪ್ರೇರಣೆ ನೀಡಿದವರು. ಅವರ ಆದರ್ಶ, ವಿಚಾರಧಾರೆಗಳು ಮೇಲ್ಪಂಕ್ತಿಯಾಗಬೇಕು. ಎಲ್ಲಾ ಸಮಾಜದ ಸಮತೋಲನಕ್ಕಾಗಿ ಶ್ರಮಿಸಿದ ಅವರ ಧ್ಯೇಯ ಪಾಲನೆಯಾಗಬೇಕು.
>
> ● ಎಸ್.ಬಿ. ಕೂಡಲಗಿ, ತಹಶೀಲ್ದಾರ್

ದೂರದೃಷ್ಟಿ ತೋರಿಸಿದರು

ಮುಖ್ಯ ಅತಿಥಿಯಾಗಿ ಭಾಗವಹಿಸಿದ ದಲಿತ ಸಂಘಟನೆಗಳ ಮುಖಂಡ ಸೇಸಪ್ಪ ನೆಕ್ಕಿಲು ಮಾತನಾಡಿ, ದಲಿತ ವರ್ಗಕ್ಕೆ ಡಾ. ಬಾಬು ಜಗಜೀವನ್ ರಾಂ ಅವರ ಸೇವೆ ಅನನ್ಯ. ಇಂದಿನ ಕಲ್ಪನೆಗಳಲ್ಲದ ರಾಜಕಾರಣದ ಮಧ್ಯೆ ರಾಜಕೀಯ ವ್ಯವಸ್ಥೆಗೆ ದೂರದೃಷ್ಟಿ ತೋರಿಸಿದವರು ಎಂದರು.

ಆದರ್ಶ ಮೇಲ್ಪಂಕ್ತಿಯಾಗಲಿ

ಪುತ್ತೂರು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷ, ತಹಶೀಲ್ದಾರ್ ಎಸ್.ಬಿ. ಕೂಡಲಗಿ ಮಾತನಾಡಿದರು. ವೇದಿಕೆಯಲ್ಲಿ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣು ಪ್ರಸಾದ್, ಸಿಡಿಪಿಒ ಹರೀಶ್ ಕುಮಾರ್, ನಗರ ಠಾಣೆ ಇನ್ಸ್‌ಪೆಕ್ಟರ್ ಜಾನ್ಸನ್ ಡಿಸೋಜಾ, ದಲಿತ ಸಂಘಟನೆಗಳ ಮುಖಂಡರಾದ ರಾಮಣ್ಣ ಪಿಲಿಂಜ, ಗಿರಿಧರ್ ನಾಯ್ಕ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಪಾಲ್ಗೊಂಡರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಸುನಿತಾ ಕುಮಾರಿ ಸ್ವಾಗತಿಸಿ, ವಾರ್ಡನ್ ಪ್ರೇಮಲತಾ ವಂದಿಸಿದರು. ವಾರ್ಡನ್ ಸವಿತಾ ಕಾರ್ಯಕ್ರಮ ನಿರ್ವಹಿಸಿದರು.

ಡಾ.ಬಾಬುಜಗಜೀವನ್‌ರಾಮ್ ದೇಶದ ಮಹಾನ್ ನಾಯಕರು



ಸುಳ್ಯ: ದೇಶದ ಮಹಾನ್ ನಾಯಕರುಗಳು ನಮ್ಮ ದೇಶದ ಸುಭದ್ರತೆಗಾಗಿ ಅನೇಕ ರೀತಿಯಲ್ಲಿ ದುಡಿದವರು ಮತ್ತು ಅಪಾರ ಕೊಡುಗೆಯನ್ನು ನೀಡಿದವರು ಇದ್ದಾರೆ. ಅಂತಹ ಮಹಾನ್ ನಾಯಕರ ಸಾಲಿನಲ್ಲಿ ಡಾ. ಬಾಬುಜಗಜೀವನ್ ರಾಮ್ ಕೂಡ ಒಬ್ಬರು. ಮಹಾನ್ ವ್ಯಕ್ತಿಗಳ ಜನ್ಮದಿನಾಚರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅವರ ಜೀವನ ಚರಿತ್ರೆಯ ಬಗ್ಗೆ ಎಲ್ಲರಿಗೂ ತಿಳಿಯುವಂತೆ ಆಗುತ್ತದೆ. ಆ ಒಂದು ಸಂದರ್ಭ ಮತ್ತು ಅವಕಾಶ ಇಂದು ಸುಳ್ಯ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ನಡೆದಿದೆ ಎಂದು ಸುಳ್ಯ ತಹಶೀಲ್ದಾರ್ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಅಧ್ಯಕ್ಷೆ ಮಂಜುಳಾ ಹೇಳಿದರು.

ಸುಳ್ಯ ತಾ.ಪಂ. ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಭಾನುವಾರ ವತಿಯಿಂದ ಆಯೋಜಿಸಿದ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಸುಳ್ಯ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ. ಮುಸ್ತಫ ಕಾರ್ಯಕ್ರಮ ಉದ್ಘಾಟಿಸಿದರು.

ಸುಳ್ಯ ತಾ.ಪಂ. ಇಒ ರಾಜಣ್ಣ, ಕರ್ನಾಟಕ ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಸುಳ್ಯ ತಾಲೂಕು ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸುಳ್ಯ ಶಿಕ್ಷಣ ಇಲಾಖೆ ಸಮೂಹ ಸಂಪನ್ಮೂಲ ವ್ಯಕ್ತಿ ಮಮತಾ ಕೆ. ಮಾತನಾಡಿದರು. ಪ್ರಮುಖರಾದ ಕರುಣಾಕರ ಪಲ್ಲತ್ತಡ್ಕ ಮಹೇಶ್ ಬೆಳ್ಳಾರ್ಕರ್, ಡಿ.ಎಂ. ಶಾರಿಕ್, ಕ್ಷೇತ್ರ ಶಿಕ್ಷಣ ಇಲಾಖೆಯ ಸಮನ್ವಯಧಿಕಾರಿ ಶೀತಲ್ ಮತ್ತಿತರರು ಭಾಗವಹಿಸಿದ್ದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕೃಷ್ಣ ಬಿ. ಸ್ವಾಗತಿಸಿದರು. ಪರಿಶಿಷ್ಟ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕ ವಿಶ್ವನಾಥ್ ವಂದಿಸಿದರು.

ಸಮಾನತೆಗೆ ಹೋರಾಡುವವರಿಗೆ ಡಾ. ಜಗಜೀವನರಾಮ್ ಪ್ರೇರಣೆ



ಬಂಟ್ವಾಳ: ದೇಶದ ಪ್ರಗತಿಯಲ್ಲಿ ನಮ್ಮ ಪ್ರಗತಿ, ಅದರ ಉದ್ಧಾರದಲ್ಲೇ ನಮ್ಮ ಉದ್ಧಾರ ಎಂದು ಹೇಳಿದ ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನ ರಾಮ್ ಅವರ ಸಂದೇಶ ಇಂದಿಗೂ ಪ್ರಸ್ತುತವಾಗಿದೆ. ಸಾಮಾಜಿಕ ನ್ಯಾಯ ಮತ್ತು ಸಮಾನತೆಗಾಗಿ ಹೋರಾಡುವವರಿಗೆ ಜಗಜೀವನ ರಾಮ್ ಪ್ರೇರಣೆಯಾಗಿದ್ದಾರೆ ಎಂದು ನಾರ್ಶಮೈದಾನ ಸರಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಗೋಪಾಲಕೃಷ್ಣ ನೇರಳೆಕಟ್ಟೆ ಹೇಳಿದರು.

ಅವರು ಬಿ.ಸಿ.ರೋಡಿನ ಎಸ್.ಜಿ.ವೈ. ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಾಗೂ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ವತಿಯಿಂದ ಭಾನುವಾರ ಏರ್ಪಡಿಸಲಾದ ಮಾಜಿ ಉಪಪ್ರಧಾನಿ ಡಾ.ಜಗಜೀವನ ರಾಂ ಅವರ 119ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಬಂಟ್ವಾಳ ತಹಶೀಲ್ದಾರ್ ಮಂಜುನಾಥ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು ಪುರಸಭೆ ಮುಖ್ಯಾಧಿಕಾರಿ ತೀರ್ಥಪ್ರಸಾದ್ ಕೆ.ಬಿ., ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಸಚಿನ್ ಕುಮಾರ್ ಜಗಜೀವನ ರಾಂ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಜಗಜೀವನ ರಾಂ ಸ್ಮರಣೆ ಮಾಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಮಾಲತಿ ಉಪಸ್ಥಿತರಿದ್ದು ಶುಭಹಾರೈಸಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ವಿನಯ ಕುಮಾರಿ ಸ್ವಾಗತಿಸಿದರು. ಮೇಲ್ವಿಚಾರಕ ಪ್ರಸಾದ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ವಸತಿ ಶಾಲೆಯ ಶಿಕ್ಷಕರು ನಾಡಗೀತೆ ಹಾಡಿದರು. ಮೊಡಂಕಾಪು ಮತ್ತು ಪಾಣೆಮಂಗಳೂರಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಹೋರಾಟದಿಂದ ಸಮಾಜದಲ್ಲಿ ಸಮಾನತೆ ಕಹಳೆ ಮೊಳಗಿಸಿದ್ದರು



ಕಡಬ: ಡಾ. ಬಾಬು ಜಗಜೀವನ್‌ರಾಮ್ ಅವರು ಪರಿಶಿಷ್ಟ ಜಾತಿಗಳಂತಹ ತುಳಿತಕ್ಕೊಳಗಾದ ವರ್ಗಗಳ ಹಕ್ಕುಗಳಿಗಾಗಿ ಹೋರಾಟ ನಡೆಸಿ ಸಮಾಜದಲ್ಲಿ ಸಮಾನತೆಯ ಕಹಳೆಯನ್ನು ಮೊಳಗಿಸಿದ್ದರು ಎಂದು ಕಡಬ ತಹಶೀಲ್ದಾರ್ ಪ್ರಭಾಕರ ಖಜೂರೆ ಅವರು ನುಡಿದರು.

ಅವರು ಕಡಬ ತಾಲೂಕು ಆಡಳಿತ ಸೌಧದ ಸಭಾಂಗಣದಲ್ಲಿ ಕಡಬ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿಯ ನೇತೃತ್ವದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ರವಿವಾರ ಜರಗಿದ ಡಾ. ಬಾಬು ಜಗ ಜೀವನ್ ರಾಮ್ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹಸಿರು ಕ್ರಾಂತಿಯ ಹರಿಕಾರ ಎಂದೇ ಕರೆಯಲ್ಪಡುವ ಡಾ. ಬಾಬು ಜಗಜೀವನ್‌ರಾಮ್ ಅವರ ಜನ್ಮದಿನವನ್ನು ದೇಶದಾದ್ಯಂತ ಸಮತಾ ದಿವಸ್ ಅಥವಾ ಸಾಮಾಜಿಕ ನ್ಯಾಯದ ದಿನವನ್ನಾಗಿ ಆಚರಿಸಲಾಗುತ್ತಿದೆ. ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಮುನ್ನಡೆಯುವುದೇ ನಾವು ಅವರಿಗೆ ಕೊಡುವ ನಿಜವಾದ ಗೌರವ ಎಂದು ಅವರು ಅಭಿಪ್ರಾಯಪಟ್ಟರು.

ಕಡಬ ತಾಲೂಕು ಶಿರಸ್ತೇದಾರ್ ಶಾಯಿದುಲ್ಲಾ ಖಾನ್, ಸಮಾಜ ಕಲ್ಯಾಣ ಇಲಾಖೆಯ ಲೋಕೇಶ್, ತಾಲೂಕು ಕಚೇರಿಯ ಸಿಬಂದಿಗಳು, ಸರ್ವೆ ಇಲಾಖೆಯ ಸಿಬಂದಿಗಳು, ಉಪ ಖಜಾನೆ ಇಲಾಖೆಯ ಸಿಬಂದಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಕಂದಾಯ ಇಲಾಖಾ ಸಿಬಂದಿ ಕೌಶಿಕ್ ಕುಳ ಅವರು ಸ್ವಾಗತಿಸಿ, ವಂದಿಸಿದರು.

ಕಟಪಾಡಿಯಲ್ಲಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವಕ್ಕೆ ಸಿದ್ಧತೆ

ವೆಬ್‌ಸೈಟ್ ಬಿಡುಗಡೆ, ಸ್ವಯಂಸೇವಕರ ಸಭೆ

ಶಿರ್ವ: ತಿರುಪತಿ ತಿರುಮಲ ದೇವಸ್ಥಾನದ ನೇತೃತ್ವದಲ್ಲಿ ಕೆ. ಕೃಷ್ಣಮೋಹನ್ ಪೈ ಯುಎಸ್‌ಎ ಅವರ ಸಂಕಲ್ಪದಂತೆ ಕಟಪಾಡಿ ವಿಜಯಾ ಪೈ, ಪುರುಷೋತ್ತಮ ಪೈ ಮತ್ತು ಕುಟುಂಬಸ್ಥರ ವತಿಯಿಂದ ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘ ಹಾಗೂ ಕಟಪಾಡಿ ಮತ್ತು ಆಸುಪಾಸಿನ ನಾಗರಿಕರು, ಗಣ್ಯರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ದೇವಸ್ಥಾನ ದೈವಸ್ಥಾನಗಳ ಆಡಳಿತ ಮಂಡಳಿಯವರ ಸಹಕಾರದೊಂದಿಗೆ ಎಸ್‌ವಿಎಸ್ ಶಾಲಾ ಕ್ರೀಡಾಂಗಣದಲ್ಲಿ ಜರುಗಲಿರುವ ಶ್ರೀನಿವಾಸ ಕಲ್ಯಾಣೋತ್ಸವದ ಪ್ರಯುಕ್ತ ವೆಬ್‌ಸೈಟ್ ಬಿಡುಗಡೆ ಮತ್ತು ಕಾರ್ಯಕ್ರಮದ ಪೂರ್ವತಯಾರಿಯ ಬಗ್ಗೆ ಸ್ವಯಂ ಸೇವಕರ ಸಭೆಯು ಎಸ್ ವಿಎಸ್ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ರವಿವಾರ ಜರಗಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಸಂಚಾಲಕ ಕೆ. ಸತ್ಯೇಂದ್ರ ಪೈ ಕಾರ್ಯಕ್ರಮದ ರೂಪುರೇಷೆಗಳ ಮಾಹಿತಿ ನೀಡಿ, ಕಟಪಾಡಿಯ ಇತಿಹಾಸದಲ್ಲಿ ಅಚ್ಚಳಿಯದೆ ಉಳಿಯುವಂತೆ ಕಾರ್ಯಕ್ರಮ ಆಯೋಜಿಸುವ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡುವ ಬಗ್ಗೆ ಸ್ಪಂದಿಸುತ್ತಿರುವುದು ಸಂತಸ ತಂದಿದೆ. ಕಾರ್ಯಕ್ರಮದ ಮಾಹಿತಿ ಸರ್ವರಿಗೂ ಸಿಗುವಂತಾಗಲು ವೆಬ್‌ಸೈಟ್ ಬಿಡುಗಡೆ ಮಾಡುತ್ತಿದ್ದೇವೆ ಎಂದರು.



> **ಯಶಸ್ವಿಯಾಗಲಿ**
>
> ನಮ್ಮ ಸಂಕಲ್ಪದಂತೆ ಹಮ್ಮಿಕೊಂಡಿರುವ ಈ ಪುಣ್ಯ ಕಾರ್ಯದಲ್ಲಿ ಕಟಪಾಡಿ ಮತ್ತು ಆಸುಪಾಸಿನ ಎಲ್ಲಾ ಸಂಘಸಂಸ್ಥೆಗಳು ಸಾರ್ವಜನಿಕರು ತಮ್ಮದೇ ಕಾರ್ಯಕ್ರಮದಂತೆ ಸಹಕರಿಸುತ್ತಿರುವುದು ಸಂತೋಷದ ವಿಚಾರ ಎಂದು ಸೇವಾಕರ್ತರ ಪರವಾಗಿ ಮಾತನಾಡಿದ ಕೆ. ಕೃಷ್ಣಮೋಹನ್ ಪೈ ಹೇಳಿದರು. ಮುಂದೆಯೂ ಎಲ್ಲರ ಪಾಲ್ಗೊಳ್ಳುವಿಕೆಯಲ್ಲಿ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಗೊಳಿಸೋಣ ಎಂದರು.

ಕಟಪಾಡಿ ಶ್ರೀ ವಿಶ್ವನಾಥ ಕ್ಷೇತ್ರದ ಅಧ್ಯಕ್ಷ ಮಹೇಶ್ ಅಂಚನ್, ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ಪ್ರೇಮ್ ಕುಮಾರ್, ಮಾಜಿ ಜಿ.ಪಂ ಸದಸ್ಯೆ ಗೀತಾಂಜಲಿ ಸುವರ್ಣ, ಕಟಪಾಡಿ ರೋಟರಿ ಅಧ್ಯಕ್ಷೆ ಆಶಾ ಅಂಚನ್ ಹಾಗೂ ತುಳಸಿ ದೇವಾಡಿಗ,ಜಗನ್ನಾಥ್ ಕೋಟೆ, ವಿದ್ಯಾವರ್ಧಕ ಸಂಘದ ಸದಸ್ಯರಾದ ಚಂದ್ರಕಾಂತ್ ಪೈ, ವೆಂಕಟರಮಣ ಭಟ್, ಕೃಷ್ಣಾನಂದ ಕಾಮತ್, ಗಣೇಶ್ ಕಿಣಿ ಆಡಳಿತಾಧಿಕಾರಿ ಸುಧಾಕರ್ ಬ್ರಹ್ಮಾವರ ಪ್ರಮುಖರಾದ ಕಾರ್ತಿಕ್ ಪಾಲನ್, ಗಣೇಶ್ ಕುಮಾರ್ ಉದ್ಯಾವರ, ಕಿಶೋರ್ ಅಂಬಾಡಿ, ಯೋಗೀಶ್ ದುಗ್ಗುಪ್ಪಾಡಿ, ರಾಜೇಶ್ ಶ್ರೀಯಾನ್, ನಾಗೇಶ್ ಕಾಮತ್, ಶಂಕರ್ ಸಾಲ್ಯಾನ್, ಜಗದೀಶ್ ಕಾಮತ್, ವಿವಿಧ ಸಂಘಸಂಸ್ಥೆಗಳು ಭಜನಾ ಮಂದಿರಗಳು, ಧರ್ಮಸ್ಥಳ ಯೋಜನೆ ಸದಸ್ಯರು ಸಲಹೆ ನೀಡಿದರು. ಪ್ರಕಾಶ್ ಸುವರ್ಣ ಕಟಪಾಡಿ ನಿರೂಪಿಸಿದರು.

ಪಡುಬಿದ್ರಿ, ದೇವಸ್ಥಾನದ ಬ್ರಹ್ಮಕಲಶೋತ್ಸವ ಪೂರ್ವಭಾವಿ ಸಭೆ

ಬೃಹತ್ ಹೊರೆಕಾಣಿಕೆ ಸಮರ್ಪಣೆಯ ಸಂಕಲ್ಪ

ಪಡುಬಿದ್ರಿ: ಇತಿಹಾಸ ಪ್ರಸಿದ್ಧ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಪ್ರಕ್ರಿಯೆಯಲ್ಲಿ ಭಾಗಿಯಾಗುವುದು ನಮ್ಮ ಸೌಭಾಗ್ಯ. ಹೊರೆ ಕಾಣಿಕೆಯ ಮೇಲೆ ಕಾರ್ಯಕ್ರಮದ ಯಶಸ್ಸು ನಿಂತಿದೆ. ದೇವ ಋಣ ತೀರಿಸುವ ಸಮಯ ಬಂದಿದೆ. ನಾವೆಲ್ಲ ಭಾಗಿಯಾಗೋಣ ಎಂದು ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ, ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಹೇಳಿದರು.

ಅವರು ಭಾನುವಾರ ಪಡುಬಿದ್ರಿ ಬಂಟರ ಸಂಘದ ಸಭಾಂಗಣದಲ್ಲಿ ವಿವಿಧ ಸಮಾಜದ ಪ್ರಮುಖರ ಉಪಸ್ಥಿತಿಯಲ್ಲಿ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಳದ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶೋತ್ಸವದ ಪ್ರಯುಕ್ತ ಏ.26ರಂದು ಜರಗಲಿರುವ ಹಸಿರು ಹೊರೆ ಕಾಣಿಕೆ ಸಲ್ಲಿಸುವ ಬಗ್ಗೆ ನಡೆದ ಸಮಿತಿಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಹೊರೆ ಕಾಣಿಕೆ ಸಮಿತಿಯ ಪ್ರಧಾನ ಸಂಚಾಲಕ ಡಾ. ದೇವಿಪ್ರಸಾದ್ ಶೆಟ್ಟಿ ಪ್ರಸ್ತಾವಿಕವಾಗಿ ಮಾತನಾಡಿ, ಏ. 26ರಂದು ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಳದ ಜೀರ್ಣೋದ್ಧಾರದ ಪೂರ್ವಭಾವಿಯಾಗಿ ಬೃಹತ್ ಹೊರೆಕಾಣಿಕೆಯ ಸಂಕಲ್ಪ ಮಾಡಲಾಗಿದೆ. ಪಡುಬಿದ್ರಿ ಒಡೆಯನ ಜೀರ್ಣೋದ್ಧಾರಕ್ಕೆ ಸೇವೆ ಮಾಡಬೇಕೆಂಬುದು ಸರ್ವರ ಇಚ್ಛೆ. ಒಂದು ಸಾವಿರಕ್ಕೂ ಅಧಿಕ ವಾಹನದ ಮೂಲಕ ದ.ಕ, ಉಡುಪಿ ಜಿಲ್ಲೆ, ಹುಬ್ಬಳ್ಳಿ, ಧಾರವಾಡ, ಬೆಂಗಳೂರು, ಪುಣೆ, ಶಿವಮೊಗ್ಗದಿಂದ ಹೊರೆ ಕಾಣಿಕೆ ಬರಲಿದೆ. ಹೊರೆ ಕಾಣಿಕೆಯ ಮೂಲಕ ಚರಿತ್ರೆ ನಿರ್ಮಾಣವಾಗಬೇಕು ಎಂದರು.

ಹೊರೆ ಕಾಣಿಕೆ ಸಮರ್ಪಣೆಯ ಕಾರ್ಯಕ್ರಮಕ್ಕಾಗಿ ಎಸ್ ಸಿ ಡಿ ಸಿ ಸಿ ಬ್ಯಾಂಕ್ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್ ವತಿಯಿಂದ ನೀಡಲ್ಪಟ್ಟ ಮೊದಲ ಚೆಕ್ ನ್ನು ಹಸ್ತಾಂತರಿಸಲಾಯಿತು.

ಈ ಸಂದರ್ಭ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇಗುಲದ ಆನುವಂಶಿಕ ಮೊಕ್ತೇಸರರಾದ ರತ್ನಾಕರ ರಾಜ್ ಅರಸ್ ಕಿನ್ಯಕ್ಕೆ ಬಲ್ಲಾಳರು ಮತ್ತು ಪಡುಬಿದ್ರಿ ಪೇಟೆಮನೆ ಭವಾನಿ ಶಂಕರ ಹೆಗ್ಡೆ ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷ ಪಿ. ರವೀಂದ್ರನಾಥ ಜಿ. ಹೆಗ್ಡೆ ಪ್ರಧಾನ ಕಾರ್ಯದರ್ಶಿ ಮುರಳೀನಾಥ ಶೆಟ್ಟಿ ದೇಗುಲದ ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ನವೀನ್ ಚಂದ್ರ ಜೆ. ಶೆಟ್ಟಿ ಪಿಕೆ ಸದಾನಂದ, ವಿಕು ಕುಮಾರ್ ಶೆಟ್ಟಿ ಬಾಲ್, ವೈ. ಸುಕುಮಾರ್, ವೈ. ಎನ್. ರಾಮಚಂದ್ರ ರಾವ್, ಲಕ್ಷಣ ಶೆಟ್ಟಿ ಬಾಲ್, ಚಂದ್ರಹಾಸ ಶೆಟ್ಟಿ, ರತ್ನಾಕರ ಶೆಟ್ಟಿ ನಡುಕೆರೆ, ಜಯ ಕೋಟ್ಯಾನ್, ರಮಾಕಾಂತ ರಾವ್, ಗೀತಾಂಜಲಿ ಸುವರ್ಣ, ಸುಗ್ಗಿ ಸುಧಾಕರ ಶೆಟ್ಟಿ, ಮಮತಾ ಶೆಟ್ಟಿ, ಸುಧಾಕರ ಸಾಲ್ಯಾನ್, ಕೃಷ್ಣ ಬಂಗೇರ, ಸೋಮಶೇಖರ್, ವಿಠಲ ಗುರಿಕಾರ, ಸುರೇಶ್, ಅಶೋಕ್ ಶೆಟ್ಟಿ, ಹರಿನಾಥ್, ಅಶೋಕ್ ಸಾಲ್ಯಾನ್, ಹರಿಯಪ್ಪ ಕೋಟ್ಯಾನ್, ಪ್ರಶಾಂತ್ ಶೆಣೈ, ಭರತ್ ದೇವಾಡಿಗ, ಪ್ರಕಾಶ್ ದೇವಾಡಿಗ, ಲಕ್ಷ್ಮಣ ಪೂಜಾರಿ, ರವೀಂದ್ರನಾಥ ಶೆಟ್ಟಿ, ಬಾಲಾಜಿ ಯೋಗೀಶ್ ಶೆಟ್ಟಿ, ಶ್ರೀನಾಥ್ ಹೆಗ್ಡೆ, ರವಿ ಶೆಟ್ಟಿ ಗುಂಡ್ಲಾಡಿ, ಪ್ರಕಾಶ್ ಶೆಟ್ಟಿ ಪಡುಹಿತ್ತು ಮತ್ತಿತರರು ಉಪಸ್ಥಿತರಿದ್ದರು.



ಹೊರೆ ಕಾಣಿಕೆ ಸಮಿತಿಯ ಪ್ರಧಾನ ಸಂಚಾಲಕ ಡಾ. ದೇವಿಪ್ರಸಾದ್ ಶೆಟ್ಟಿ ಸ್ವಾಗತಿಸಿದರು. ಜಯ ಶೆಟ್ಟಿ ಪದ್ರ ಮತ್ತು ಸತೀಶ್ ಶೆಟ್ಟಿ ಗುಡ್ಡೆಚ್ಚಿ ನಿರೂಪಿಸಿದರು.

ಚೆರಿಯಪರಂಬುವಿನಲ್ಲಿ ಕೊಡವ ಕೌಟುಂಬಿಕ ಚೇನಂಡ ಹಾಕಿ ಕಪ್‌ಗೆ ಚಾಲನೆ | ವೀರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಆಶಯ

ಕೊಡಗಿನಲ್ಲಿ ಕ್ರೀಡೆಗಳ ಅಭಿವೃದ್ಧಿಗಾಗಿ ಶಾಶ್ವತ ಕ್ರೀಡಾ ತರಬೇತಿ ಕೇಂದ್ರ, ಮೈದಾನ ಅತ್ಯಗತ್ಯ

■ ದುಗ್ಗಳ ಸದಾನಂದ

ನಾಪೋಕ್ಲು: ಕ್ರೀಡೆಗಳ ಅಭಿವೃದ್ಧಿಗಾಗಿ ಶಾಶ್ವತ ಕ್ರೀಡಾ ತರಬೇತಿ ಕೇಂದ್ರ ಹಾಗೂ ಸ್ಟೇಡಿಯಂ ಅತ್ಯಗತ್ಯವಾಗಿದೆ. ಎಂದು ಶಾಸಕ ಎ.ಎಸ್. ಪೊನ್ನಣ್ಣ ಹೇಳಿದರು.

ಇಲ್ಲಿನ ಚೆರಿಯ ಪರಂಬುವಿನ ಜನರಲ್ ಕೆ.ಎಸ್. ತಿಮ್ಮಯ್ಯ ಕ್ರೀಡಾಂಗಣದಲ್ಲಿ ಭಾನುವಾರ ಆರಂಭಗೊಂಡ ಕೊಡವ ಕೌಟುಂಬಿಕ ಚೇನಂಡ ಕಪ್ ಹಾಕಿ 26ನೇ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಗಳ ಅಭಿವೃದ್ಧಿಗಾಗಿ ಶಾಶ್ವತ ಕ್ರೀಡಾ ತರಬೇತಿ ಕೇಂದ್ರ ಹಾಗೂ ಸ್ಟೇಡಿಯಂ ಅತ್ಯಗತ್ಯವಾಗಿದೆ. ಕೊಡಗು ಜಿಲ್ಲೆ ಕ್ರೀಡೆಗೆ 18 ಒಲಂಪಿಯನ್‌ಗಳನ್ನು ನೀಡಿದೆ. ಕ್ರೀಡಾ ಕ್ಷೇತ್ರದ ಅಭಿವೃದ್ಧಿಗಾಗಿ 40 ಕೋಟಿ ರೂ. ಯೋಜನೆಗಳನ್ನು ರೂಪಿಸಿದ್ದು ಕೆಲಸ ಕಾರ್ಯಗಳು ಪ್ರಗತಿಯಲ್ಲಿವೆ. ಅಭಿವೃದ್ಧಿಗೆ ಎಲ್ಲರ ಸಹಕಾರ ಮುಖ್ಯ ಸಮುದಾಯದ ಸಹಭಾಗಿತ್ವ ದಿಂದ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.



ವಿಧಾನ ಪರಿಷತ್ ಮಾಜಿ ಸದಸ್ಯ ಕರ್ನಾಟಕ ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾದ ಚೆಪ್ಪುಡಿರ ಅರುಣ್ ಮಾಚಯ್ಯ ಮಾತನಾಡಿ, ಕೊಡಗು ಜಿಲ್ಲೆ ಕ್ರೀಡೆಗೆ 18 ಒಲಂಪಿಯನ್‌ಗಳನ್ನು ನೀಡಿದೆ. ಕ್ರೀಡಾ ಕ್ಷೇತ್ರದ ಅಭಿವೃದ್ಧಿಗಾಗಿ 40 ಕೋಟಿ ರೂ. ಯೋಜನೆಗಳನ್ನು ರೂಪಿಸಿದ್ದು ಕೆಲಸ ಕಾರ್ಯಗಳು ಪ್ರಗತಿಯಲ್ಲಿವೆ. ಅಭಿವೃದ್ಧಿಗೆ ಎಲ್ಲರ ಸಹಕಾರ ಮುಖ್ಯ. ಸಮುದಾಯದ ಸಹಭಾಗಿತ್ವ ದಿಂದ ಅಭಿವೃದ್ಧಿ ಹೊಂದಲು ಸಾಧ್ಯ. ಕ್ರೀಡಾ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿರುವುದರಿಂದ ಕ್ರೀಡಾಪಟುಗಳಾದ ಎಸ್ .ಪಿ. ಸುನಿಲ್ ಹಾಗೂ ನಿಖಿಲ್ ಅವರಿಗೆ ಉತ್ತಮ ನೌಕರಿ ಲಭಿಸಿದೆ. ಕ್ರೀಡಾಪಟುಗಳು ಉದ್ಯೋಗಾವಕಾಶಗಳನ್ನು ಗಿಟ್ಟಿಸಿಕೊಳ್ಳುವಲ್ಲಿ ಕ್ರೀಡಾಕೂಟಗಳು ಸಹಕಾರಿ ಎಂದರು.

> **ಆಕರ್ಷಕ ಮೆರವಣಿಗೆ**
>
> ಚೆಂದಂಡ ಕಪ್ –2026 ಅಂಗವಾಗಿ ಪಟ್ಟಣದಲ್ಲಿ ಆಕರ್ಷಕ ಮೆರವಣಿಗೆ ನಡೆಯಿತು. ನಾಪೋಕ್ಲು ಪಟ್ಟಣದ ಪೊನ್ನಾಡುಸೂಪರ್ ಮಾರ್ಕೆಟ್ ಬಳಿಯಿಂದ ಕ್ರೀಡಾಂಗಣದವರೆಗೆ ಆಕರ್ಷಕ ಮೆರವಣಿಗೆ ನಡೆಯಿತು. ಕ್ರೀಡಾಭಿಮಾನಿಗಳು ಕೊಡವ ಧಿರಿಸು ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಕ್ರೀಡಾಂಗಣದ ಮುಖದ್ವಾರದ ಸಮೀಪ ಹಾಕಿ ಕ್ರೀಡಾಕೂಟದ ಜನಕ ಜನಕ ಪಾಂಡಂಡ ಕುಟ್ಟಣಿ ಅವರ ಪುತ್ಥಳಿಯನ್ನು ಅನಾವರಣಗೊಳಿಸಿ ಪುಷ್ಪ ನಮನ ಸಲ್ಲಿಸಲಾಯಿತು

ಶಾಸಕ ಮಂಥರ್ ಕೂಡ ಮಾತನಾಡಿ, ಹಾಕಿ ಕ್ರೀಡೆಯು ಕುಟುಂಬಗಳನ್ನು ಬೆಸೆಯುತ್ತದೆ. ಹಾಕಿ ರಾಜ್ಯ, ದೇಶ ಬೆಸೆಯುವ ಕ್ರೀಡೆಯಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಮಂಡಪಂಡ ಸುಜಾ ಕುಶಾಲಪ್ಪ ಸಹಿತ ಇನ್ನಿತರ ಅತಿಥಿಗಳ ಮಾತನಾಡಿದರು. ಕೊಡವ ಕೌಟುಂಬಿಕ ಚೇನಂಡ ಕಪ್ ಹಾಕಿ 26ನೇ ಆವೃತ್ತಿಯ ಪಂದ್ಯಾವಳಿಗೆ ಕೊಡಗು ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕುಟ್ಟಪ್ಪ ಬೋಪಣ್ಣ ಚಾಲನೆ ನೀಡಿದರು. ವೇದಿಕೆಯಲ್ಲಿ ಕರ್ನಲ್ ವಿನಯ್, ಒಲಂಪಿಯನ್ ಚೆಪ್ಪುಡಿರ ಪೂಣಚ್ಚ, ಬ್ರಿಗೇಡ್ ಚೇನಂಡ ಚೀಯಣ್ಣ . ಬಲ್ಲಚಂಡ ಬೋಪಣ್ಣ ಚೇನಂಡ ಹಾಕಿ ಸಮಿತಿ ಅಧ್ಯಕ್ಷ ಪಿ ಕರಂಬಯ್ಯ , ಚೇನಂಡ ಕುಟುಂಬದ ಪಟ್ಟೆದಾರ ಬಿ ಪೊನ್ನಪ್ಪ ಇನ್ನಿತರ ಉಪಸ್ಥಿತರಿದ್ದರು. ವೀಕ್ಷಕ ವಿವರಣೆಯನ್ನು ಮಾಲೇಟಿರ ಶ್ರೀನಿವಾಸ್, ಅಜ್ಜೆಟ್ಟಿರ ವಿಕ್ರಂ ಮುತ್ತಪ್ಪ ಚೋಕಿರ ಅನಿತಾ ದೇವಯ್ಯ ನಿರ್ವಹಿಸಿದರು. ಟೂರ್ನಿಯಲ್ಲಿ ಭಾಗವಹಿಸಲು 383 ತಂಡಗಳು ನೋಂದಣಿಯಾಗಿದ್ದು ಮೂರು ಮೈದಾನಗಳಲ್ಲಿ ಆರಂಭಿಕ ಪಂದ್ಯಗಳು ಜರುಗಿದವು. ಪ್ರದರ್ಶನ ಪಂದ್ಯ ಯುಎಇ ಮತ್ತು ತಾಮನೆ ತಂಡಗಳ ನಡುವೆ ನಡೆಯಿತು ಯುಎಇ 4 ಗೋಲುಗಳನ್ನು ಹಾಗೂ ತಾಮನೆ ಒಂದು ಗೋಲು ಗಳಿಸಿ ಯುಎಇ ವಿಜೇತವಾಯಿತು.

ಇಂದ್ರಾಣಿ ಶ್ರೀ ಮುಖ್ಯಪ್ರಾಣ ದೇವಸ್ಥಾನದ ಬ್ರಹ್ಮಕಲಶೋತ್ಸವದಲ್ಲಿ ಪುತ್ತಿಗೆ ಶ್ರೀಗಳ ಆಶೀರ್ವಚನ

ಸಂಸ್ಕೃತಿಯಲ್ಲಿ ವಾಯುದೇವರ ಉಪಾಸನೆಗೆ ಪರಮೋಚ್ಚ ಸ್ಥಾನ





ಉಡುಪಿ: ಜಗತ್ತಿನ ಸಕಲ ಜೀವರಾಶಿಗಳ ಉಸಿರಾಟಕ್ಕೆ ಪ್ರಾಣವಾಯು ಎಷ್ಟು ಅನಿವಾರ್ಯವೋ, ನಮ್ಮ ಆಧ್ಯಾತ್ಮಿಕ ಬದುಕಿನ ಉನ್ನತಿಗೆ ವಾಯುದೇವರ ಅಥವಾ ಮುಖ್ಯಪ್ರಾಣನ ಅನುಗ್ರಹ ಅಷ್ಟೇ ಮುಖ್ಯ. ಇಂದ್ರಾಣಿಯ ಈ ಪವಿತ್ರ ಕ್ಷೇತ್ರದಲ್ಲಿ ಹನುಮಂತನ ಪುನಃ ಪ್ರತಿಷ್ಠಾಪನೆ ಮತ್ತು ಬ್ರಹ್ಮಕಲಶೋತ್ಸವ ನಡೆಯುತ್ತಿರುವುದು ಇಡೀ ನಾಡಿಗೆ ಮಂಗಳಕರ ಎಂದು ಉಡುಪಿ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಆಶೀರ್ವಚನ ನೀಡಿದರು.

ಇಂದ್ರಾಣಿ ಶ್ರೀ ಮುಖ್ಯಪ್ರಾಣ ದೇವಸ್ಥಾನದ ಬ್ರಹ್ಮಕಲಶೋತ್ಸವದ ಪ್ರಯುಕ್ತ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದ್ದ ಸಂಜೆಯ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು. ಹನುಮಂತನು ಕೇವಲ ಶಕ್ತಿಯ ಸಂಕೇತವಲ್ಲ, ಅವನು ಬುದ್ಧಿವಂತರಲ್ಲಿ ಅಗ್ರಗಣ್ಯ. ರಾಮನ ಸೇವೆಯೇ ತನ್ನ ಜೀವನದ ಪರಮ ಗುರಿ ಎಂದು ನಂಬಿದ ಹನುಮಂತನ ಆದರ್ಶಗಳು ಇಂದಿನ ಯುವ ಪೀಳಿಗೆಗೆ ಅತ್ಯಂತ ಅಗತ್ಯವಾಗಿವೆ. ಅಹಂಕಾರವಿಲ್ಲದ ಶಕ್ತಿ ಸಮಾಜಕ್ಕೆ ಹಿತಕಾರಿ ಎಂಬುವುದನ್ನು ಹನುಮಂತನ ಜೀವನ ನಮಗೆ ಕಲಿಸುತ್ತದೆ ಎಂದು ಪ್ರತಿಪಾದಿಸಿದರು.

ಆಧ್ಯಾತ್ಮಿಕ ಚೈತನ್ಯ ಹೆಚ್ಚಿಸಿದೆ

ಕೋಟಿಗೀತಾ ಲೇಖನ ಯಜ್ಞದ ಮೂಲಕ ವಿಶ್ವದಾದ್ಯಂತ ಕೃಷ್ಣ ಸಂದೇಶವನ್ನು ಸಾರುತ್ತಿರುವ ಈ ಸಂದರ್ಭದಲ್ಲಿ, ಮುಖ್ಯಪ್ರಾಣ ದೇವರ ಸನ್ನಿಧಿಯಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮವು ಆಧ್ಯಾತ್ಮಿಕ ಚೈತನ್ಯವನ್ನು ಮತ್ತಷ್ಟು ಹೆಚ್ಚಿಸಿದೆ.

ಸಭೆಯ ಅಧ್ಯಕ್ಷತೆಯನ್ನು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಜಯಕರ್ ಶೆಟ್ಟಿ ಇಂದ್ರಾಳಿ ವಹಿಸಿದ್ದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಭೂಪತಿ ಶೆಟ್ಟಿ ಇಂದ್ರಾಣಿ, ಪಂಚದುರ್ಗಾಪರಮೇಶ್ವರಿ ದೇವಳ ಆಡಳಿತ ಸಮಿತಿ ಅಧ್ಯಕ್ಷ ಕುಶಲ ಶೆಟ್ಟಿ ಕಾರ್ಯದರ್ಶಿ ರತ್ನಾಕರ್ ಇಂದ್ರಾಳಿ, ಕಾಪು ಶಾಸಕ ಗುರ್ಮೆ ಸುರೇಶ ಶೆಟ್ಟಿ, ಯುಪಿಸಿಎಲ್ ಅಧ್ಯಕ್ಷ ಕಿಶೋರ್ ಆಳ್ವ, ಉದ್ಯಮಿಗಳಾದ ಅಜಯ್ ಶೆಟ್ಟಿ ದಿವಾಕರ ಶೆಟ್ಟಿ, ಕೆ.ಎಂ. ಶೆಟ್ಟಿ ಕುತ್ಯಾರು ನವೀನ ಶೆಟ್ಟಿ ಅರ್ಚಕ ಗೋಪಾಲಕೃಷ್ಣ ಉಪಾಧ್ಯಾಯ, ಜಯಕರ ಶೆಟ್ಟಿ ಬುಡ್ನಾರು, ಶೇಖರ ಶೆಟ್ಟಿ ಬುಡ್ನಾರು, ನಾಗೇಶ ಹೆಗ್ಡೆ, ವಿಜಯ ಜತ್ತನ್, ರತ್ನಾಕರ ಶೆಟ್ಟಿ ಸಾಧು ಶೆಟ್ಟಿ ಇದ್ದರು.

ಪೇಜಾವರ ಶ್ರೀ ಆಶೀರ್ವಚನ

ಇಂದ್ರಾಣಿ ಮುಖ್ಯ ಪ್ರಾಣ ದೇವರ ಗುಡಿಯಲ್ಲಿ ಅಷ್ಟಬಂಧ ಸಹಿತ ಶ್ರೀಮುಖ್ಯಪ್ರಾಣ ದೇವರ ಪ್ರತಿಷ್ಠೆ ಸಂಪನ್ನಗೊಂಡ ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಆಶೀರ್ವಚನ ನೀಡಿದರು.

ಇದೇ ಸಂದರ್ಭ ಕನ್ನಡ ಹನುಮಾನ್ ಚಾಲೀಸವನ್ನು ಬಿಡುಗಡೆ ಮಾಡಿದ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ಸ್ವಾಗತಿಸಿದರು, ವಿದ್ವಾನ್ ದಾಮೋದರ ಶರ್ಮ ಧಾರ್ಮಿಕ ಉಪನ್ಯಾಸ ನೀಡಿದರು.

ಮುಖ್ಯ ಅತಿಥಿಗಳಾಗಿ ಕಾಪು ಮಾರಿಗುಡಿಯ ಆಡಳಿತ ಮೊಕ್ತೇಸರ ರಾಜಶೇಖರ ವಾಸುದೇವ ಶೆಟ್ಟಿ ದಾನಿಗಳಾದ ಮುಂಬೈ ಉದ್ಯಮಿ ಬುಡ್ನಾರು ಜಯಕರ ಶೆಟ್ಟಿ ಮತ್ತು ಬೆಂಗಳೂರಿನ ಉದ್ಯಮಿ ಇಂದ್ರಾಳಿಮನೆ ಕುಶಲ ಶೆಟ್ಟಿ, ಮುಖ್ಯಪ್ರಾಣ ದೇವರ ಗುಡಿಯ ವಾಸ್ತುಶಿಲ್ಪಿ ನಾಗೇಶ ಹೆಗ್ಡೆ ಇಂದ್ರಾಣಿ ಪಂಚದುರ್ಗಾ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕುಶಲ ಶೆಟ್ಟಿ ಇಂದ್ರಾಳಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಭೂಪತಿ ಶೆಟ್ಟಿ ಇಂದ್ರಾಳಿ, ಪ್ರಧಾನ ಕಾರ್ಯದರ್ಶಿ ರತ್ನಾಕರ ಇಂದ್ರಾಳಿ, ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಉದ್ಯಮಿ ಪುರುಷೋತ್ತಮ ಪಿ. ಶೆಟ್ಟಿ ಪ್ರಧಾನ ಕಾರ್ಯದರ್ಶಿ ಸೀತಾರಾಮ ನಾಯಕ್ ಉಪಸ್ಥಿತರಿದ್ದರು.

ಸುಬ್ಬಣ್ಣಕಟ್ಟೆ ಸೇವಾ ಸಂಗಮ ಶಿಶುಮಂದಿರ ರಜತಮಹೋತ್ಸವ



ಹೆಬ್ರಿ: ಮುದ್ರಾಡಿ ಸುಬ್ಬಣ್ಣಕಟ್ಟೆ ಸೇವಾ ಸಂಗಮ ಶಿಶುಮಂದಿರದ ರಜತಮಹೋತ್ಸವ ಶಿಶುಮಂದಿರ ರಂಗ ಮಂದಿರದಲ್ಲಿ ಶನಿವಾರ ನಡೆಯಿತು.

ಮಲ್ಪೆ ಸಂವೇದನ ಫೌಂಡೇಶನ್ ಅಧ್ಯಕ್ಷ ಪ್ರಕಾಶ್ ಮಲ್ಪೆ ದಿಕ್ಸೂಚಿ ಭಾಷಣ ಮಾಡಿದರು. ಅಧ್ಯಕ್ಷತೆಯನ್ನು ಸೇವಾ ಸಂಗಮ ಶಿಶು ಮಂದಿರದ ರಜತ ಮಹೋತ್ಸವ ಸಮಿತಿ ಅಧ್ಯಕ್ಷ ಶ್ರೀಧರ ಹೆಬ್ಬಾರ್ ಕಾಪೋಳಿ ವಹಿಸಿದ್ದರು. ಉದ್ಯಮಿ ಉದಯ ಹೆಗ್ಡೆ ಕೊಳಂಬೆ, ನಾರಾಯಣಗುರು ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷ ಮಂಜುನಾಥ ಪೂಜಾರಿ ಶುಭ ಹಾರೈಸಿದರು. ಹೆಬ್ರಿ ಅಮೃತ ಭಾರತಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಎಂ.ರವಿ ರಾವ್, ಆರ್‌ಎಸ್‌ಎಸ್ ಸ್ವಯಂ ಸೇವಕ ಗಣಪತಿ ಎಂ. ಶಿಶು ಮಂದಿರ ವ್ಯವಸ್ಥಾಪಕಿ ಶಿಲ್ಪಾ ಎಸ್. ನಾಯಕ್, ನಿವೃತ್ತ ಅಧ್ಯಾಪಕ ಗಣಪತಿ ಪೈ, ಮಾಜಿ ಅಧ್ಯಕ್ಷರಾದ ಗಿಲ್ಲಾಳಿ ಪದ್ಮನಾಭ ಆಚಾರ್ಯ ಇದ್ದರು. ಸುಮತಿ ವರದಿ ವಾಚಿಸಿದರು. ಶ್ರೀಧರ ನಾಯಕ್ ಪ್ರಾಸ್ತಾವಿಕ ಮಾತನಾಡಿದರು. ಶಿಶು ಮಂದಿರ ಅಧ್ಯಕ್ಷ ಅಶೋಕ ಕುಮಾರ್ ಶೆಟ್ಟಿ ಸ್ವಾಗತಿಸಿದರು. ಚಂದ್ರಶೇಖರ ಭಟ್ ಬಲ್ಲಾಡಿ, ಸುನೀತಾ ಹೆಬ್ಬಾರ್, ಶಾಂತಾ ದಿನೇಶ್ ಪೂಜಾರಿ ನಿರೂಪಿಸಿದರು. ಡಾ. ಶ್ರೇಯಸ್ ನಾಯಕ್ ವಂದಿಸಿದರು. ಮಹಾಪೋಷಕರನ್ನು ಸನ್ಮಾನಿಸಲಾಯಿತು. ಮುದ್ರಾಡಿ ಚಿಗುರು ಸಂಸ್ಥೆಯಿಂದ ಶಿಶುಮಂದಿರದ ಸ್ಥಾಪಕ ಶ್ರೀಧರ ನಾಯಕ್ ದಂಪತಿಗಳನ್ನು ಸನ್ಮಾನಿಸಲಾಯಿತು. ಆಟೋಟ, ವಿವಿಧ ಸ್ಪರ್ಧೆಗಳಲ್ಲಿ ವಿಜೇತ ಪುಟಾಣಿಗಳನ್ನು, ಬಾಲ ಗೋಕುಲದ ಮಕ್ಕಳನ್ನು ಮಾತೆಯರಿಗೆ ಬಹುಮಾನ ನೀಡಲಾಯಿತು. 25 ವರ್ಷಗಳಲ್ಲಿ ಶಿಶು ಮಂದಿರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಎನ್ ಎಚ್ 169: ಸಾಣೂರಿನ ಚಿಲಿಂಬಿಗುಡ್ಡ ಕಾಮಗಾರಿಗೆ ಅನುಮತಿ

ಕಾರ್ಕಳ: ಕಳೆದ 2 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಸಾಣೂರು ಗ್ರಾ.ಪಂ. ಮತ್ತು ಕಾಂತಾವರ ಗ್ರಾ.ಪಂ. ವ್ಯಾಪ್ತಿಯ ಸಾಣೂರಿನ ಚಿಲಿಂಬಿಗುಡ್ಡ ಕಾಮಗಾರಿಗೆ ಅನುಮತಿ ದೊರೆತಿದೆ.

698.500 ಕಿ.ಮೀ.ನಿಂದ 744.190 ಕಿ.ಮೀ.ವರಗಿನ 3.6381 ಹೆಕ್ಟರ್ ಅರಣ್ಯ ಪ್ರದೇಶದಲ್ಲಿ ಹೆದ್ದಾರಿ ಕಾಮಗಾರಿಗೆ ರಾಜ್ಯ ಸರ್ಕಾರದ ಅರಣ್ಯ, ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯಿಂದ ಅನುಮತಿ ದೊರಕಿಸಲು ಉಡುಪಿ ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಯಶಸ್ವಿಯಾಗಿದ್ದು ಒಂದು ವರ್ಷದ ಅವಧಿಯಲ್ಲಿ ಈ ಪ್ರದೇಶದಲ್ಲಿ ಬರುವ ಮರಗಳನ್ನು ಕಟಾವು ಮಾಡಿ ಕಾಮಗಾರಿ ನಡೆಸಲು ಅರಣ್ಯ ಇಲಾಖೆಯಿಂದ ಕಾರ್ಯಾದೇಶ ದೊರಕಿದೆ. ಸಾಣೂರು ಬೈಪಾಸ್ ಸರ್ಕಲ್ ನಿಂದ ಮುರತಂಗಡಿಯಲ್ಲಿರುವ ಸಾಣೂರು ಪದವಿ ಪೂರ್ವ ವಿದ್ಯಾಲಯದವರೆಗೆ ಬಹುತೇಕ ಹೆಚ್ಚಿನ ಕಾಮಗಾರಿಗಳು ಮುಗಿದಿದ್ದು ಆ ಬಳಿಕದ ಚಿಲಿಂಬಿ ಗುಡ್ಡ ಪರಿಸರದ ಹೆದ್ದಾರಿ ಕಾಮಗಾರಿಯು ಕಳೆದ 2 ವರ್ಷಗಳಿಂದ ಅರಣ್ಯ ಇಲಾಖೆಯಿಂದ ಅನುಮತಿ ದೊರಕದೆ ಹೆದ್ದಾರಿ ಯೋಜನೆಗೆ ತೀವ್ರ ತೊಡಕುಂಟಾಗಿತ್ತು.

ಕಾಮಗಾರಿ ತೊಡಕು ನಿವಾರಣೆ

ರಾಜ್ಯ ಅರಣ್ಯ ಸಚಿವರಿಗೆ ಮತ್ತು ಅರಣ್ಯ ಇಲಾಖೆಗೆ ಸಂಸದರು ಹಲವಾರು ಬಾರಿ ಪತ್ರ ಬರೆದು, ಮುಖತಃ ಭೇಟಿಯಾಗಿ ಅರಣ್ಯ ಭಾಗದ ಕಾಮಗಾರಿಗಳಿಗಿದ್ದ ತಾಂತ್ರಿಕ ತೊಡಕುಗಳನ್ನು ನಿವಾರಿಸಲು ನಿರಂತರ ಪ್ರಯತ್ನದ ಫಲವಾಗಿ ಈಗ ಹೆದ್ದಾರಿ ಇಲಾಖೆ ಶೀಘ್ರವಾಗಿ ಮರಗಳ ಕಟಾವು ನಡೆಸಿ ಒಂದು ವರ್ಷದೊಳಗೆ ಕಾಮಗಾರಿ ಪೂರ್ತಿಗೊಳಿಸಲು ದಾರಿ ಸುಗಮವಾಗಿದೆ.

ಅಧಿಕಾರಿಗಳ ಸಭೆ

ಕೋಟ ಶ್ರೀನಿವಾಸ ಪೂಜಾರಿಯವರು ಸಂಸದರಾದ ಬಳಿಕ ಸಾಣೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆಗಾಗ್ಗೆ ತಲೆದೋರಿದ ಹಲವಾರು ಸಮಸ್ಯೆಗಳ ನಿವಾರಣೆ ಮತ್ತು ಕಾಮಗಾರಿ ಪ್ರಗತಿಗಾಗಿ 3 ಬಾರಿ ಸ್ವತಃ ಭೇಟಿ ನೀಡಿ ಪರಿಶೀಲಿಸಿ ಕಾರ್ಕಳದ ಸಾಮರ್ಥ್ಯ ಸೌಧ ಮತ್ತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶಾಸಕರು ಮತ್ತು ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಗುತ್ತಿಗೆದಾರರ ಮತ್ತು ಹೆದ್ದಾರಿ ಅಧಿಕಾರಿಗಳ ಸಭೆ ನಡೆಸಿ ಹಲವಾರು ತೊಡಕುಗಳನ್ನು ನಿವಾರಿಸಿ ಹೆದ್ದಾರಿ ಕಾಮಗಾರಿ ಸರಾಗವಾಗಿ ನಡೆಯುವಂತೆ ನಿರ್ದೇಶನ ನೀಡಿದ್ದರು.

ಅಭಿನಂದನೆ ಸಲ್ಲಿಕೆ

ಈ ಬಗ್ಗೆ ಹೆದ್ದಾರಿ ಹೋರಾಟ ಸಮಿತಿಯ ಪ್ರಮುಖರಾದ ಸಾಣೂರು ನರಸಿಂಹ ಕಾಮತ್ ಹಾಗೂ ಸಾಣೂರು ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದು ವಿಶೇಷ ಅಭಿನಂದನೆ ಸಲ್ಲಿಸಿದ್ದಾರೆ.

ಬಸ್ರೂರು ದೇವಸ್ಥಾನದಲ್ಲಿ ಬೃಹತ್ ಆರೋಗ್ಯ ತಪಾಸಣೆ ಶಿಬಿರ



ಕುಂದಾಪುರ: ಆರೋಗ್ಯ ತಪಾಸಣೆ ಶಿಬಿರಗಳ ಸದುಪಯೋಗ ಪಡೆದುಕೊಂಡು ನಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಬಸ್ರೂರು ಶ್ರೀ ಮಹಾಲಸಾ ನಾರಾಯಣೀ ದೇವಸ್ಥಾನದ ಮ್ಯಾನೇಜಿಂಗ್ ಟ್ರಸ್ಟಿ ಅಧ್ಯಕ್ಷ ಟಿ.ನಾರಾಯಣ ಪೈ ಹೇಳಿದರು.

ಬಸ್ರೂರು ಶ್ರೀ ಮಹಾಲಸಾ ನಾರಾಯಣೀ ದೇವಸ್ಥಾನ ಟ್ರಸ್ಟ್ ಹಾಗೂ ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಬಸ್ರೂರು ಇವರ ಸಂಯುಕ್ತ ಆಶ್ರಯದಲ್ಲಿ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ ಇದರ ಸಹಯೋಗದೊಂದಿಗೆ ಬಸ್ರೂರು ಮಂಡಿಕೇರಿ ಶ್ರೀ ಮಹಾಲಸಾ ನಾರಾಯಣೀ ದೇವಸ್ಥಾನದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಬಸ್ರೂರು ಇದರ ಅಧ್ಯಕ್ಷ ಬಿ.ಎನ್. ಪ್ರಭು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಣಿಪಾಲ ಕೆಎಂಸಿ ಆಸ್ಪತ್ರೆ ವೈದ್ಯರಾದ ಡಾ. ಸತೀಶ ಪ್ರಭು, ಡಾ.ಸಾಕೇತ್ ರಾವ್, ಡಾ.ಸಾಯಿ ಆಶಿಶ್, ಡಾ.ಶ್ವೇತಾ, ಡಾ.ಸಂಜನಾ, ಡಾ. ಅಥರ್ವ ಮಹೇಶ್, ದೇವಸ್ಥಾನದ ಧರ್ಮದರ್ಶಿ ಮಂಡಳಿ ಸದಸ್ಯರು, ಬಸ್ರೂರು ಜಿಎಸ್‌ಬಿ ಸಮಾಜದ ಪದಾಧಿಕಾರಿಗಳು, ಸದಸ್ಯರು, ಮೊದಲಾದವರು ಉಪಸ್ಥಿತರಿದ್ದರು. ಭಾವನಾ ಕಾಮತ್ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು.

ಶಿಬಿರದಲ್ಲಿ ಚರ್ಮರೋಗ, ಮೂಳೆ ಸಂಬಂಧಿತ ತಪಾಸಣೆಗಳನ್ನು, ರಕ್ತದಲ್ಲಿನ ಸಕ್ಕರೆ ಅಂಶ ಪರೀಕ್ಷೆ, ಮಧುಮೇಹ ಪಾದ ಪರೀಕ್ಷೆ, ಶರೀರ ಸಂಯೋಜನೆ ವಿಶ್ಲೇಷಣೆ ಹಾಗೂ ಇ.ಸಿ.ಜಿ. ಸೇರಿದಂತೆ ವಿವಿಧ ಆರೋಗ್ಯ ತಪಾಸಣೆಗಳನ್ನು ನಡೆಸಲಾಯಿತು.

ಕನ್ನಾಲು ಮುಜಿಲ್ನಾಯ, ಪರಿವಾರ ದೈವಸ್ಥಾನದಲ್ಲಿ ಬ್ರಹ್ಮಕಲಶಾಭಿಷೇಕ



ಕಾರ್ಕಳ: ನೂರಾಳ್ ಬೆಟ್ಟು ಗ್ರಾಮದ ಕನ್ನಾಲು ಮುಜಿಲ್ನಾಯ ಹಾಗೂ ಪರಿವಾರ ಸಾನಿಧ್ಯಗಳ ಬ್ರಹ್ಮಕಲಶಾಭಿಷೇಕ ನಡೆಯಿತು. ದೇವತಾ ಕಾರ್ಯದಲ್ಲಿ ಸಂಸದರು ಕೋಟ ಶ್ರೀನಿವಾಸ ಪೂಜಾರಿ, ಉದಯ ಕುಮಾರ್ ಶೆಟ್ಟಿ ಮುನಿಯಾಲು, ಕುದುರೆಮುಖ ವನ್ಯಜೀವಿ ವಿಭಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸತೀಶ್ ಎನ್, ಬೆಂಗಳೂರಿನ ಸಸ್ಯ ಶಾಸ್ತ್ರಜ್ಞ ವಿಕಾಸ್ ಭಟ್, ಮಹಾವೀರ ಹೆಗ್ಡೆ ಉದಯ್ ಕೋಟ್ಯಾನ್, ಬೋಳ ಪ್ರಶಾಂತ್ ಕಾಮತ್, ಹರೀಶ್ ಅಮೀನ್ ಸೇರಿದಂತೆ ಹಲವು ಗಣ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಧಾರ್ಮಿಕ ಸಭೆ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಡೀಕಯ್ಯ ಗೌಡ ಕನ್ನಾಲು ಅಧ್ಯಕ್ಷತೆಯಲ್ಲಿ ನಡೆಯಿತು. ಐಟಿಡಿಪಿ ಯೋಜನಾ ಸಮನ್ವಯಾಧಿಕಾರಿ ನಾರಾಯಣ ಸ್ವಾಮಿ ಎಂ. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಈದು ಶ್ರೀ ಮುಜಿಲ್ನಾಯ ದೈವಸ್ಥಾನ ಆಡಳಿತ ಮೊಕ್ತೇಸರ ಅಶೋಕ್ ಕುಮಾರ್ ಜೈನ್, ಉದ್ಯಮಿ ವಸಂತ ಭಟ್, ಜಿ.ಪಂ. ಮಾಜಿ ಸದಸ್ಯೆ ದಿವ್ಯಾ ಗಿರೀಶ್ ಅಮೀನ್, ನೆಲ್ಲಿಕಾರು ವ್ಯ.ಸೇ.ಸ.ಸಂ.ನಿ ಅಧ್ಯಕ್ಷ ಮಾಪಾಲು ಜಯವರ್ಮ ಜೈನ್, ನಾರಾವಿ ಕೆನರಾ ಬ್ಯಾಂಕ್ ಮ್ಯಾನೇಜರ್ ಗೀತಾ ಕರ್ಣ ಗೌಡ, ಈದು ಗ್ರಾ.ಪಂ. ಮಾಜಿ ಅಧ್ಯಕ್ಷ ಪುರುಷೋತ್ತಮ ಗೌಡ, ಸದಾನಂದ ಪೂಜಾರಿ, ಹೊಸ್ಮಾರು ವಲಯ ಶ್ರೀ ಕ್ಷೇ.ಧ.ಗ್ರಾ. ಯೋಜನೆ ಮೇಲ್ವಿಚಾರಕ ಗಿರೀಶ್ ಕೆ.ಎಲ್., ಸುರೇಶ್ ಕುಮಾರ್ ಶೆಟ್ಟಿ ಭೋಜ ಗೌಡ ಉಪಸ್ಥಿತರಿದ್ದರು.

ವೈಷ್ಣವಿ ಪ್ರಾರ್ಥಿಸಿದರು. ಗಂಗಾಧರ ಗೌಡ ಕಾರ್ಯಕ್ರಮ ನಿರೂಪಿಸಿದರು. ಶ್ರೀಧರ್ ಗೌಡ ಈದು ಸ್ವಾಗತಿಸಿ ಪ್ರಸ್ತಾವನೆಗೈದು. ಅಶೋಕ್ ಕನ್ನಾಲು ವಂದಿಸಿದರು.

ಚಿತ್ರಪಾಡಿಯಲ್ಲಿ ಬ್ಯಾಂಕಿಂಗ್, ಹಣಕಾಸಿನ ಮಹತ್ವ ಕಾರ್ಯಾಗಾರ



ಕೋಟ: ಪಿ.ಎಂ. ಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿತ್ರಪಾಡಿಯಲ್ಲಿ ಆರ್ಥಿಕ ಸಾಕ್ಷರತಾ ಶಿಕ್ಷಣ ಕಾರ್ಯಕ್ರಮದಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸಿನ ಮಹತ್ವ ಮತ್ತು ಸಮತೋಲನ ಆಹಾರ ಮತ್ತು ಆರೋಗ್ಯ ಎನ್ನುವ ವಿಷಯದ ಮಾಹಿತಿ ಕಾರ್ಯಾಗಾರ ಇತ್ತೀಚೆಗೆ ನಡೆಯಿತು. ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೋಟ ಸಹಕಾರಿ ವ್ಯವಸಾಯಕ ಬ್ಯಾಂಕ್ ಮಾಜಿ ಅಧ್ಯಕ್ಷ ತಿಮ್ಮ ಪೂಜಾರಿ ಸಣ್ಣವರಿರುವಾಗಲೇ ಹಣಕಾಸಿನ ಮಹತ್ವ ಅರಿತು ಉಳಿತಾಯದ ಜ್ಞಾನ ಬೆಳೆಸಿ ಕೊಳ್ಳಿ ಎಂದರು.

ನಾವು ದಿನ ನಿತ್ಯ ಜೀವನ ದಲ್ಲಿ ಸಮತೋಲನ ಆಹಾರ ಸೇವಿಸಿ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಾಲಿಗ್ರಾಮ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಪಲ್ಲವಿ ಮಾಹಿತಿ ನೀಡಿದರು.

ಚಿತ್ರಪಾಡಿ ಏಳೆ ಮಹಾಲಿಂಗೇಶ್ವರ ದೇವಸ್ಥಾನ ಮುಖ್ಯಸ್ಥ ವಿಶ್ವೇಶ್ವರ ತುಂಗ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಶಂಕರ ದೇವಾಡಿಗ ವಹಿಸಿದ್ದರು. ವೇದಿಕೆಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಎಂ.ಜಿ.ಎಂ. ಕಾಲೇಜ್‌ನ ನಿವೃತ್ತ ಪ್ರಾಂಶುಪಾಲ ಲಕ್ಷ್ಮೀ ನಾರಾಯಣ ಕಾರಂತ್, ನಿವೃತ್ತ ಮುಖ್ಯೋಪಾಧ್ಯಾಯ ರಮೇಶ ನಕ್ಷತ್ರಿ, ಶಿಕ್ಷಕರಾದ, ಗಿರಿ ಫ್ರೆಂಡ್ಸ್ ಸಂಸ್ಥೆಯ ಅಧ್ಯಕ್ಷ ನಾಗೇಂದ್ರ ಆಚಾರ್, ಮತ್ತು ಹಿರಿಯ ಶಿಕ್ಷಕಿ ಸುಮತಿ ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯರಾದ ಶಾಲಿನಿ ಸ್ವಾಗತಿಸಿದರು. ಶಿಕ್ಷಕಿ ಪಾರ್ವತಿ ವಂದಿಸಿದರು. ಶಿಕ್ಷಕಿಯರಾದ ಸುಧಾ ಮತ್ತು ಕುಸುಮ ಕಾರ್ಯಕ್ರಮ ನಿರೂಪಿಸಿದರು.ಶಾಲೆಯ ಶಿಕ್ಷಕ ಶಿಕ್ಷಕಿಯರು ಸಹಕರಿಸಿದರು.

ಬ್ರಹ್ಮಶ್ರೀ ನಾರಾಯಣಗುರು ಮಂದಿರದ 'ಸುವರ್ಣ ಸಂಭ್ರಮ'



ಕುಂದಾಪುರ: ಆದರ್ಶ ಪುರುಷ ಮರ್ಯಾದಾ ಪುರುಷ ಶ್ರೀರಾಮನ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ನಡೆಸಬೇಕು ಎಂದು ಗುಜ್ಜಾಡಿ ಬೆಣ್ಗೆರೆ ಶ್ರೀ ನಾಗ ದೇವಸ್ಥಾನದ ಅಧ್ಯಕ್ಷ ಉಮೇಶ್ ಎಲ್.ಮೇಸ್ತ ಹೇಳಿದರು.

ಗುಜ್ಜಾಡಿ ಗ್ರಾಮದ ನಾಯಕವಾಡಿಯ ಬಿಲ್ಲವರ ಸಮಾಜ ಸೇವಾ ಸಂಘ ಶ್ರೀ ರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣಗುರು ಮಂದಿರ ಇದರ 50ರ ಸಂಭ್ರಮಾಚರಣೆ 'ಸುವರ್ಣ ಸಂಭ್ರಮ' ಹಾಗೂ ಸೀತಾರಾಮಚಂದ್ರ ಕಲ್ಯಾಣೋತ್ಸವದ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು.

ಶ್ರೀ ರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣಗುರು ಮಂದಿರದ ಅಧ್ಯಕ್ಷ ನಾರಾಯಣ ಟಿ. ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ದೇವಸ್ಥಾನಕ್ಕೆ ದ್ವಾರಬಾಗಿಲು ಕೊಡುಗೆ ನೀಡಿದ ಗುಜ್ಜಾಡಿಯ ಉದ್ಯಮಿ ದಯಾಕರ ಮೇಸ್ತ, ಐಶ್ವರ್ಯ ಡಿ.ಮೇಸ್ತ ಅವರನ್ನು ಗೌರವಿಸಲಾ ಯಿತು. ಶಿವಮೊಗ್ಗದ ಉದ್ಯಮಿ ವಿನೋದ ಕುಮಾರ್, ಮಂಜುನಾಥ ಪೂಜಾರಿ ಸೇನಾಪುರ, ಉದ್ಯಮಿ ಶಿವರಾಮ ಪೂಜಾರಿ, ಉದ್ಯಮಿ ಗಣಪತಿ ಮೇಸ್ತ, ಸುಭಾಶ್ ಪೂಜಾರಿ ತೋನ್ಸೆ, ಕಂಚುಗೋಡು ಶ್ರೀ ರಾಮ ಮಂದಿರ ಅಧ್ಯಕ್ಷ ನಾಗೇಶ ಖಾರ್ವಿ, ತ್ರಾಸಿ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ರಾಜೇಶ ಪೂಜಾರಿ, ಉದ್ಯಮಿ ಕೃಷ್ಣ ಪೂಜಾರಿ, ಸುವರ್ಣ ಮಹೋತ್ಸವ ಸಮಿತಿ ಕಾರ್ಯದರ್ಶಿ ಶಂಕರ ಪೂಜಾರಿ, ಖಜಾಂಚಿ ಪ್ರಕಾಶ್ ಪೂಜಾರಿ ಇದ್ದರು. ಅಣ್ಣಪ್ಪ ಪೂಜಾರಿ ಸ್ವಾಗತಿಸಿದರು. ಸುಂದರ ಜಿ. ನಿರ್ವಹಿಸಿದರು. ಅಣ್ಣಪ್ಪ ಪೂಜಾರಿ ವಂದಿಸಿದರು.

ಗ್ರಾಮ ಪಂಚಾಯತ್, ಅರಣ್ಯ ಇಲಾಖೆ, ಕೆಸಿಡಿಸಿ, ಸಂಘಟನೆಗಳ ಸಹಯೋಗ | ಮಾರ್ಗ ಬದಿ ಬಿದ್ದಿದ್ದ ರಾಶಿ ರಾಶಿ ತ್ಯಾಜ್ಯ ಸಂಗ್ರಹ

ಗುಜ್ಜಾಡಿ ಗ್ರಾಮದ ನಾಯಕವಾಡಿ-ಮುಳ್ಳಿಕಟ್ಟೆಯ ರಸ್ತೆ ತ್ಯಾಜ್ಯ ಮುಕ್ತ ಪರಿಸರ

ಕುಂದಾಪುರ: ಕುಂದಾಪುರ ತಾಲೂಕಿನ ಗುಜ್ಜಾಡಿ ಗ್ರಾಮದ ನಾಯಕವಾಡಿ-ಮುಳ್ಳಿಕಟ್ಟೆ ರಸ್ತೆ ತ್ಯಾಜ್ಯ ಮುಕ್ತ ತಾಣವಾಗಿದೆ. ನಾಯಕವಾಡಿ-ಮುಳ್ಳಿಕಟ್ಟೆ ರಸ್ತೆಯ ಅಲ್ಲಲ್ಲಿ ಸೂಚನಾ ಫಲಕ, ಬ್ಯಾನರ್ ಹಾಕಲಾಗಿದ್ದು ಪ್ರಮುಖ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವ ಮೂಲಕ ಈ ಪರಿಸರದಲ್ಲಿ ತ್ಯಾಜ್ಯದ ಹಾವಳಿಗೆ ಕಡಿವಾಣ ಹಾಕಲು ದಿಟ್ಟ ಹೆಜ್ಜೆಯನ್ನಿಟ್ಟಿದೆ.

ಗ್ರಾಮ ಪಂಚಾಯತ್ ಗುಜ್ಜಾಡಿ, ಸಂತ ನಿರಂಕಾರಿ ಮಿಷನ್ ಮತ್ತು ಸಮೃದ್ಧಿ ಸಂಜೀವಿನಿ ಸಂಘ ಒಕ್ಕೂಟ ಗುಜ್ಜಾಡಿ, ಕೆಸಿಡಿಸಿ ಹೊಸಾಡು ಹಾಗೂ ಅರಣ್ಯ ಇಲಾಖೆ ಮತ್ತು ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನಡೆಸಿದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಮುಳ್ಳಿಕಟ್ಟೆ- ನಾಯಕವಾಡಿ ಮುಖ್ಯ ರಸ್ತೆ ಬದಿ ಬಿದ್ದಿದ್ದ ಸುಮಾರು 200ಕ್ಕೂ ಮಿಕ್ಕಿ





ಚೀಲ ತ್ಯಾಜ್ಯವನ್ನು ಸಂಗ್ರಹಿಸಿ ಪರಿಸರವನ್ನು ತ್ಯಾಜ್ಯ ಮುಕ್ತ ಪರಿಸರವನ್ನಾಗಿ ಮಾಡಲಾಗಿದೆ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ನಾಯಕವಾಡಿ-ಮುಳ್ಳಿಕಟ್ಟೆ ರಸ್ತೆಯ ಇಕ್ಕೆಲಗಳಲ್ಲಿ ಹರಡಿಕೊಂಡು, ವ್ಯವಸ್ಥೆಯನ್ನೇ ನಾಚಿಸುವಂತಿದ್ದ ತ್ಯಾಜ್ಯ, ಕಸವನ್ನು ಸಂತ ನಿರಂಕಾರಿ ಮಿಷನ್ ಸದಸ್ಯರು, ಸಂಜೀವಿನಿ ಸಂಘದ ಸದಸ್ಯರು ಮತ್ತು ಗುಜ್ಜಾಡಿ ಗ್ರಾ.ಪಂ. ಸಿಬ್ಬಂದಿ, ಕೆಸಿಡಿಸಿ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ, ನಾನಾ ಸಂಘಟನೆಗಳ ಸದಸ್ಯರು, ಸ್ಥಳೀಯರು ಸೇರಿದಂತೆ ಮೂನ್ನೂರಕ್ಕೂ ಅಧಿಕ ಮಂದಿ ಸ್ವಚ್ಛತೆ ನಡೆಸಿ ವಾಹನದ ಮೂಲಕ ಮಿನಿ ಎಸ್‌ಎಲ್‌ಆರ್‌ಎಂ ಘಟಕಕ್ಕೆ ನೀಡಿದರು. ಇದರಿಂದ ನಾಯಕವಾಡಿ- ಮುಳ್ಳಿಕಟ್ಟೆ ರಸ್ತೆ ತ್ಯಾಜ್ಯಮುಕ್ತ ರಸ್ತೆಯಾಗಿ ಮಾರ್ಪಟ್ಟಿದೆ.

ಗುಜ್ಜಾಡಿ ಗ್ರಾ.ಪಂ. ಮಾಜಿ ಅಧ್ಯಕ್ಷ ತಮ್ಮಯ್ಯ ದೇವಾಡಿಗ, ಮಾಜಿ ಸದಸ್ಯೆ ಲೋಲಾಕ್ಷಿ, ಪಿಡಿಒ ಶೋಭಾ ಎಸ್., ಕಾರ್ಯದರ್ಶಿ ಶಕುಂತಳಾ, ಸಂತ ನಿರಂಕಾರಿ ಮಿಷನ್ ಉಡುಪಿ ವಲಯ ಸಂಯೋಜಕ ಲಕ್ಷ್ಮಣ್ ಕೆ. ಪೂಜಾರಿ, ಸೇವಾದಳ ಸಂಚಾಲಕ ದಾಮೋದರ ಬಿಲ್ಲವ, ರಾಮ ಪೂಜಾರಿ, ಶ್ರೀನಿವಾಸ ಪೂಜಾರಿ ಕಾಲ್ತೋಡು, ಕೆಸಿಡಿಸಿ ಗಣಪತಿ ಭಟ್, ನಾನಾ ಸಂಘ ಸಂಸ್ಥೆಗಳ ಸದಸ್ಯರು, ವಿದ್ಯಾರ್ಥಿಗಳು ಸ್ವಚ್ಛತಾ ಕಾರ್ಯದ ಸಂದರ್ಭ ಉಪಸ್ಥಿತರಿದ್ದರು.

ಕಸ ಎಸೆದರೆ ದಂಡ: ಎಚ್ಚರಿಕೆಯ ಬ್ಯಾನರ್ ಅಳವಡಿಕೆ

ರಸ್ತೆಯುದ್ದಕ್ಕೂ ಅಲ್ಲಲ್ಲಿ ಬ್ಯಾನರ್ ಮತ್ತು ಸೂಚನಾ ಫಲಕ ಹಾಕಲಾಗಿದೆ. ಕೆಲವು ಪ್ರಮುಖ ಸ್ಥಳದಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದ್ದು ಪ್ರತಿನಿತ್ಯ ಈ ಪ್ರದೇಶದ ಮೇಲೆ ನಿಗಾ ಇಡಲಾಗಿದೆ. ಇದರ ಮಧ್ಯೆ ತ್ಯಾಜ್ಯ ಎಸೆದ ಇಬ್ಬರಿಗೆ ದಂಡ ವಿಧಿಸಿದ ಘಟನೆಯೂ ನಡೆದಿದೆ. ನಾಯಕವಾಡಿ-ಮುಳ್ಳಿಕಟ್ಟೆ ರಸ್ತೆಯ ಇಕ್ಕೆಲಗಳಲ್ಲಿ ತ್ಯಾಜ್ಯ ವಿಲೇವಾರಿ ಬಗ್ಗೆ ಮಾಧ್ಯಮಗಳು ನಿರಂತರವಾಗಿ ವರದಿ ಪ್ರಕಟಿಸಿ ಎಲ್ಲರ ಗಮನ ಸೆಳೆಯುವ ಪ್ರಯತ್ನ ನಡೆಸಿತ್ತು.

ಸುತ್ತ ಮುತ್ತ

ಇಂದಿನಿಂದ ಚಾಣಕ್ಯ ನಲಿಕಲಿ ವೈವಿಧ್ಯಮಯ ಬೇಸಗೆ ಶಿಬಿರ

ಹೆಬ್ರಿ: ಹೆಬ್ರಿ ಎಸ್.ಆರ್.ಸ್ಕೂಲ್ ಬಳಿ ಇರುವ ಚಾಣಕ್ಯ ಶಿಕ್ಷಣ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದಲ್ಲಿ ಚಾಣಕ್ಯ ಸಂಸ್ಥೆಯ ಆಶ್ರಯದಲ್ಲಿ 11ನೇ ವರ್ಷದ ಚಾಣಕ್ಯ ನಲಿಕಲಿ ವೈವಿಧ್ಯಮಯ ಬೇಸಗೆ ಶಿಬಿರ ಏ.6ರಿಂದ 19ರ ವರೆಗೆ ಬೆಳಗ್ಗೆ 9.30 ರಿಂದ ಸಂಜೆ 4:30ರ ತನಕ ನಡೆಯಲಿದೆ. ಭಗವದ್ಗೀತೆಯನ್ನು 4 ಭಾಷೆಗಳಲ್ಲಿ 18 ಬಾರಿ ಬರೆದು ದಾಖಲೆ ಮಾಡಿದ ಅದ್ವೈತ್ ಅವರಿಂದ ಬೇಸಿಗೆ ಶಿಬಿರದ ಉದ್ಘಾಟನೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ವಿದ್ಯುತ್ ವ್ಯತ್ಯಯ

ಉಡುಪಿ: ಫೀಡರ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಕಟಪಾಡಿ, ಮೂಡಬೆಟ್ಟು, ಕೋಟೆ, ಮಟ್ಟು, ಏಣಗುಡ್ಡೆ, ಕೊರಂಗ್ರಪಾಡಿ, ಬೊಳ್ಜೆ, ಕೇದಾರ್, ಕೆಮ್ಮೂರು, ಮಠದಂಗಡಿ, ಅಂಕುದ್ರು, ಬೋರ್ಡ್ ಗುಡ್ಡೆ, ಗೋವಿಂದಗುಡ್ಡೆ, ಪಿತ್ರೋಡಿ, ಮುದ್ದಣಗುಡ್ಡೆ, ಪಿತ್ರೋಡಿ ಇಂಡಸ್ಟ್ರಿಯಲ್ ಏರಿಯಾ, ಬಲಾಯಿಪಾದೆ, ಕಟ್ಟೆಗುಡ್ಡೆ, ಎಸ್.ಡಿ.ಎಂ ಕಾಲೇಜು ಹತ್ತಿರ, ಗುಡ್ಡೆಯಂಗಡಿ, ಕಂಪನಬೆಟ್ಟು, ಬೈಲುಜಡ್ಡು, ಸಾಲ್ಮರ, ಕಲಾಯಿಬೈಲು, ಸಂಪಿಗೆನಗರ, ಕುತ್ಪಾಡಿ, ಆನಂತಕೃಷ್ಣನಗರ, ಕಡೆಕಾರು, ಕಿದಿಯೂರು, ಪಡುಕರೆ, ಕನ್ನರ್ಪಾಡಿ, ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.7ರಂದು ಬೆಳಗ್ಗೆ 9.30ರಿಂದ ಸಂಜೆ 5.30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಗುಂಡ್ಮಿ: ಶೌರ್ಯ ತಂಡಕ್ಕೆ ದೈವಸನ್ನಿಧಿಯಿಂದ ಸನ್ಮಾನ

ಕೋಟ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ ಸಿ ಟ್ರಸ್ಟ್ ಪಾಂಡೇಶ್ವರ ವಲಯದ ಗುಂಡ್ಮಿ ಕಾರ್ಯಕ್ಷೇತ್ರದ ಆಚಾರ್ಯ ಕುಟುಂಬಸ್ಥರ ಜಟ್ಟಿಗ ಮತ್ತು ಕೈಗುಳ್ಳಿ ದೈವಸ್ಥಾನ ಮುಂಭಾಗ ಕಳೆದ ವರ್ಷ ಬಾರಿ ಗಾಳಿ ಮಳೆಗೆ ಬೃಹತ್ ಗಾತ್ರದ ಮರ ಬಿದ್ದಿದ್ದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾ.ಯೋಜನೆಯ ಶೌರ್ಯ ಟೀಮ್ ಸದಸ್ಯರು ಗ್ರಾಮಸ್ಥರು ಸೇರಿ ಬಿದ್ದಿರುವ ಬಾರಿ ಗಾತ್ರದ ಮರವನ್ನು ತೆರವುಗೊಳಿಸಿ ದೈವಸ್ಥಾನದ ದಾರಿ ಸುಗಮಗೊಳಿಸಿದ ಹಿನ್ನೆಲೆಯಲ್ಲಿ ಸೋಮವಾರ ದೇವಸ್ಥಾನದ ಜೀರ್ಣೋದ್ಧಾರ ಪುನ ಪ್ರತಿಷ್ಠೆ ಕಾರ್ಯಕ್ರಮದಲ್ಲಿ ಶೌರ್ಯ ಟೀಮಿನ ಸದಸ್ಯರನ್ನು ಗೌರವಿಸಿ ಕೃತಜ್ಞತೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಗುಂಡ್ಮಿ ಒಕ್ಕೂಟದ ಕಾರ್ಯದರ್ಶಿ ಶೇಖರ್ ಪೂಜಾರಿ,ವಲಯದ ಮೇಲ್ವಿಚಾರಕಿ ಜಯಲಕ್ಷ್ಮಿ, ಶೌರ್ಯ ಟೀಮ್ ಅಧ್ಯಕ್ಷ ಲಕ್ಷ್ಮೀಶ ಆಚಾರ್ಯ, ಘಟಕದ ಸೇವಾ ಪ್ರತಿನಿಧಿ ಶೋಭಾ, ಸ್ಥಳೀಯ ಸೇವಾ ಪ್ರತಿನಿಧಿ ಶಶಿಕಲಾ, ಶೌರ್ಯ ಟೀಮ್‌ನ ಸದಸ್ಯರಾದ ಕಾಳಿಂಗ ಪೂಜಾರಿ, ರವಿ ಪೂಜಾರಿ, ಸತೀಶ, ರೇಣುಕಾ, ಯಶೋಧ, ವಿಜಯಶ್ರೀ, ಆಚಾರ್ಯ ಕುಟುಂಬಸ್ಥರು, ತಂಡದ ಸದಸ್ಯರು, ಉಪಸ್ಥಿತರಿದ್ದರು.

ಮೃತ ವ್ಯಕ್ತಿಯ ವಾರಸುದಾರರಿಗೆ ಸೂಚನೆ

ಕೋಟ ಪಂಚವರ್ಣದಿಂದ ಬೀಚ್ ಕ್ಲೀನಿಂಗ್ ಅಭಿಯಾನ

ಕೋಟ: ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು, ಕೋಟತಟ್ಟು ಗ್ರಾಮಪಂಚಾಯತ್, ಎಸ್‌ಎಲ್‌ಆರ್‌ಎಂ ಘಟಕ ಸಹಯೋಗದೊಂದಿಗೆ ಸತತ 297ನೇ ಭಾನುವಾರ ಪರಿಸರಸ್ನೇಹಿ ಅಭಿಯಾನ ಕೋಟತಟ್ಟು ಪಡುಕರೆ ಬೀಚ್ ಕ್ಲೀನಿಂಗ್ ಕಾರ್ಯಕ್ರಮ ಆಯೋಜಿಸಿತು. ಬೀಚ್ ತಟದಲ್ಲಿದ್ದ ಸಾಕಷ್ಟು ಪ್ರಮಾಣದ ತ್ಯಾಜ್ಯವನ್ನು ತೆರವುಗೊಳಿಸಲಾಯಿತು. ಕೋಟತಟ್ಟು ಗ್ರಾಮಪಂಚಾಯತ್ ಎಸ್‌ಎಲ್‌ಆರ್‌ಎಂ ಘಟಕದ ರಂಜಿನಿ ಮೊಗವೀರ,ಪಂಚವರ್ಣ ಯುವಕ ಮಂಡಲದ ನಿಕಟಪೂರ್ವ ಅಧ್ಯಕ್ಷ ಅಜಿತ್ ಆಚಾರ್, ಉಪಾಧ್ಯಕ್ಷ ದಿನೇಶ್ ಆಚಾರ್ , ಪಂಚವರ್ಣ ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ,ಉಪಾಧ್ಯಕ್ಷೆ ಪುಷ್ಪ ಹಂದಟ್ಟು ಉಪಸ್ಥಿತರಿದ್ದರು.

ವಲಸೆ ಕಾರ್ಮಿಕರಿಗೆ ಗ್ಯಾಸ್ ವಿತರಣೆ



ಕಾರ್ಕಳ: ಮಧ್ಯಪ್ರಾಚ್ಯ ಯುದ್ಧದಿಂದ ದೇಶದಲ್ಲಿ ಗ್ಯಾಸ್ ಅಭಾವದಿಂದ ವಲಸೆ ಕಾರ್ಮಿಕರಿಗೆ ತೊಂದರೆ ಆಗಬಾರದು ಎನ್ನುವ ಉದ್ದೇಶದಿಂದ ಕಾರ್ಕಳದಲ್ಲಿ ನೆಲೆಸಿರುವ ವಲಸೆ ಕಾರ್ಮಿಕರಿಗೆ 5 ಕೆಜಿ ಗ್ಯಾಸ್ ವಿತರಿಸುವ ಕಾರ್ಯಕ್ರಮ ಕಾರ್ಕಳದ ಮಾರುತಿ ಗ್ಯಾಸ್ ನಿಂದ ನಡೆಯಿತು.

ಕೇಂದ್ರ ಸರಕಾರದ ಪ್ರಧಾನಮಂತ್ರಿಯವರ ಆಶಯದಂತೆ ಇಲ್ಲಿ ವಾಸಿಸುವ ವಲಸೆ ಕಾರ್ಮಿಕರಿಗೆ, ಜೀವನ ಕಷ್ಟದ ಸಮಯದಲ್ಲಿ ಅಡುಗೆಗೆ ಸಂಕಟಪಡುತ್ತಿರುವ ಈ ಸಮಯದಲ್ಲಿ ಅವರು ಪುನ: ತಮ್ಮ ರಾಜ್ಯಗಳಿಗೆ ಹೋಗಬಾರದು ಎನ್ನುವ ಉದ್ದೇಶದಿಂದ ಅವರ ಸಂಕಷ್ಟವನ್ನು ಅರಿತು 5 ಕೆಜಿಯ ಗ್ಯಾಸನ್ನು 181 ಕಾರ್ಮಿಕರಿಗೆ ವಿತರಿಸಲಾಯಿತು. ಎಚ್‌ಪಿ ಗ್ಯಾಸ್ ವಿತರಕ ಎಸ್ ನಿತ್ಯಾನಂದ ಪೈ ಅವರು ಪ್ರಧಾನ ಮಂತ್ರಿ ಅವರನ್ನು ಮತ್ತು ಎಚ್‌ಪಿಯ ಡಿಜಿಎಂ ಭವ್ಯಯಾನ್ ಶಾ ಅವರನ್ನು ಅಭಿನಂದಿಸಿದರು. ಸಮಾರಂಭದಲ್ಲಿ ಪ್ರಕಾಶ್ ಮತ್ತು ಡೆಲಿವರಿ ಬಾಯ್ ಸಂತೋಷ್ ಮತ್ತು ಸಂಜಯ್ ಭಾಗವಹಿಸಿದ್ದರು ಪ್ರಕಾಶ್ ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು.







ಭಾರತವನ್ನು ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವ ನಿಟ್ಟಿನಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರಕಾರವು ದೇಶವನ್ನು ಸಮರ್ಥವಾಗಿ ಮುನ್ನಡೆಸುತ್ತಿದೆ. ಭ್ರಷ್ಟಾಚಾರ ರಹಿತ, ಪಾರದರ್ಶಕ ಮತ್ತು ಅಭಿವೃದ್ಧಿಪರ ಆಡಳಿತದ ಫಲವಾಗಿ ಇಂದು ವಿಶ್ವದ ದೇಶಗಳು ಭಾರತದ ಮೇಲೆ ಅಪಾರ ನಂಬಿಕೆ ಮತ್ತು ಸಹಕಾರ ತೋರುತ್ತಿವೆ.

ಈ ಹಿನ್ನೆಲೆಯಲ್ಲಿ ಕೇರಳದಲ್ಲಿ ಅದರಲ್ಲೂ ವಿಶೇಷವಾಗಿ ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಕೇಂದ್ರ ಸರಕಾರದ ಯೋಜನೆಗಳನ್ನು ಪರಿಮಾಮಕಾರಿಯಾಗಿ ಬಳಸಿಕೊಂಡು ಅಭಿವೃದ್ಧಿ ಮಾಡಬಲ್ಲ ಸಮರ್ಥ ಜನಪ್ರತಿನಿಧಿಯ ಅಗತ್ಯವಿದೆ. ದುರದೃಷ್ಟವಶಾತ್ ಈ ವರೆಗೆ ಇಲ್ಲಿ ಆಯ್ಕೆಯಾದ ಕೆಲವರು ಈ ಕಾರ್ಯದಲ್ಲಿ ವಿಫಲರಾಗಿದ್ದು, ಕಾಸರಗೋಡನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ನಾವು ಒಂದಾಗಬೇಕಿದೆ.

ಇಲ್ಲಿನ ಸಾಮಾನ್ಯ ಜನರು ಆರೋಗ್ಯ ಮೂಲಸೌಕರ್ಯದ ದೊಡ್ಡ ಕೊರತೆಗಳನ್ನು ಎದುರಿಸುತ್ತಿದ್ದಾರೆ. ಪ್ಲಸ್ ಟು ಮುಗಿಸಿದ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಮಂಗಳೂರು,ಬೆಂಗಳೂರಿನಂತಹ ನೆರೆಯ ರಾಜ್ಯದ ನಗರಗಳಿಗೆ ಹೋಗಬೇಕಾದ ಅನಿವಾರ್ಯತೆ ಇದೆ.ಕುಡಿಯುವ ನೀರಿನ ಸಮಸ್ಯೆಗೂ ಸಮರ್ಪಕ ಪರಿಹಾರ ಲಭಿಸಿಲ್ಲ.ಚೆರ್ಕಳದಿಂದ ಪೆರ್ಲ ವರೆಗಿನ ರಸ್ತೆ ಶೋಚನೀಯಾವಸ್ಥೆಯಲ್ಲಿದೆ. ಇಂತಹ ಮೂಲಸೌಕರ್ಯಗಳನ್ನು ಒದಗಿಸಲೂ ಇಲ್ಲಿನ ಜನಪ್ರತಿನಿಧಿಗಳಿಗೆ ಸಾಧ್ಯವಾಗಿಲ್ಲ ಎಂಬುದು ವಿಪರ್ಯಾಸ.ಇಲ್ಲಿನ ಯುವಜನತೆಯ ಭವಿಷ್ಯ ಬಗ್ಗೆ ನಿರ್ಲಕ್ಷ್ಯ ತಾಳಿದ್ದರಿಂದ ಅವರು ಉದ್ಯೋಗಕ್ಕಾಗಿ ಗಲ್ಫ್ ದೇಶಗಳಿಗೆ ವಲಸೆ ಹೋಗಬೇಕಾದಂತಹ ಪರಿಸ್ಥಿತಿ. ಇಂದು ಅಲ್ಲಿನ ಸನ್ನಿವೇಶ ಹೇಗಿದೆ ಎಂಬುದನ್ನು ನಾವೆಲ್ಲರೂ ಬಲ್ಲೆವು.ಇಲ್ಲಿನ ಸಮಗ್ರ ಅಭಿವೃದ್ಧಿ ಆಗಬೇಕಾದರೆ ಈ ಬಾರಿ ಪರಿವರ್ತನೆಯೊಂದರ ಅಗತ್ಯವಿದೆ ಎಂಬ ಮಾತು ಜನರಿಂದ ವ್ಯಕ್ತವಾಗುತ್ತಿದೆ.

ಪರಿವರ್ತನೆಯೆಡೆಗೆ ಜನರೊಲವು




ಬಿಜೆಪಿ ಬೆಂಬಲಿಸಿ

1 • **ಪ್ರ:ನಿಮ್ಮ ಪ್ರಚಾರ ಕಾರ್ಯ ಹೇಗೆ ನಡೆದಿದೆ?**

ಉ: ಉತ್ತಮ ರೀತಿಯಲ್ಲಿ ನಡೆಯುತ್ತಿದೆ. ಬೆಳಿಗ್ಗೆ 7ರಿಂದ ರಾತ್ರಿ 12ರವರೆಗೆ ಪ್ರಚಾರದಲ್ಲಿ ತೊಡಗಿದ್ದೇನೆ.ಬೆಳಿಗ್ಗೆ ಮನೆಯಿಂದ ಹೊರಟು ದೇವಸ್ಥಾನಕ್ಕೆ ತೆರಳಿ ದೇವರಿಗೆ ಪೂಜೆ, ಪ್ರಾರ್ಥನೆ ಸಲ್ಲಿಸಿ ಕಾರ್ಯಕರ್ತರ ಮನೆಯಲ್ಲಿ ಉಪಾಹಾರವಾಗಿ ಪ್ರಚಾರ ಆರಂಭಿಸುತ್ತೇವೆ. ಸಮಯ ಕಡಿಮೆ ಇರುವುದರಿಂದ ಸಮೂಹಗಳ ನೆಲೆಯಲ್ಲಿ ಮತದಾರರನ್ನು ಭೇಟಿ ಮಾಡುವುದಕ್ಕೆ ಒತ್ತು ನೀಡುತ್ತಿದ್ದೇವೆ. ಫ್ಯಾಕ್ಟರಿ, ಉದ್ಯೋಗ ಖಾತ್ರಿ, ಕುಟುಂಬಶ್ರೀ, ರಿಕ್ಷಾ ಚಾಲಕರು, ಕಾರ್ಮಿಕರು... ಹೀಗೆ ಕಡಿಮೆ ಅವಧಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಮತದಾರರನ್ನು ಸಂಪರ್ಕ ಮಾಡುವ ಪ್ರಯತ್ನ ನಮ್ಮದು.

ನಮ್ಮ ಪಕ್ಷದ ಇತರ ನಾಯಕರು ಹಾಗೂ ಕಾರ್ಯಕರ್ತರಂತೂ ಹಗಲಿರುಳೆನ್ನದೆ ಬಿಜೆಪಿಯನ್ನು ಗೆಲ್ಲಿಸಲೇಬೇಕೆಂದು ಪಣತೊಟ್ಟು ಅವಿಶ್ರಾಂತವಾಗಿ ಕೆಲಸ ಮಾಡುತ್ತಿದ್ದಾರೆ.ಬಿಜೆಪಿ ಅಭ್ಯರ್ಥಿಯಾಗಿ ನನ್ನ ಗೆಲುವಿಗಾಗಿ ಪಕ್ಷದ ಯುವ ಕಾರ್ಯಕರ್ತರು ದುಡಿಯುತ್ತಿದ್ದಾರೆ.218 ಸಂಘಟನಾ ಬೂತ್‌ಗಳ ಪೈಕಿ 178ಕ್ಕೂ ಅಧಿಕ ಬೂತ್‌ಗಳಲ್ಲಿ ತಂಡಕೆಲಸಗಳು ನಡೆಯುತ್ತಿವೆ.ನಮ್ಮ ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ದಣಿವರಿಯದ ಕೆಲಸ ಕಂಡು ಅಚ್ಚರಿ–ಅಭಿಮಾನ –ಹೆಮ್ಮೆ ಎನಿಸುತ್ತದೆ.

• **ಪ್ರ: ಜನತೆಯ ಸ್ಪಂದನ ಹೇಗಿದೆ ?**

ಉ: ಜನರ ಸ್ಪಂದನ ಅದ್ಭುತವಾಗಿದೆ. ನಾವು ನಿಮ್ಮನ್ನು ಮಾಧ್ಯಮಗಳ ಮೂಲಕ ನೋಡಿದ್ದೇವೆ, ನಿಮ್ಮ ಬಗ್ಗೆ ತಿಳಿದಿದ್ದೇವೆ ಎನ್ನುತ್ತಾ ಪ್ರೀತಿ, ವಿಶ್ವಾಸಗಳಿಂದ ಸ್ವಾಗತಿಸುತ್ತಿದ್ದಾರೆ. ಕಳೆದ ಬಾರಿಯ ಕಾಸರಗೋಡು ಲೋಕಸಭಾ ಚುನಾವಣೆಯ ಸಂದರ್ಭ ನಾನು ಸ್ಪರ್ಧಿಸಿದಾಗ ಹೊಸಬಳಾಗಿದ್ದೆ. ಆದರೂ ನನಗೆ ಹೆಚ್ಚಿನ ಮತಗಳನ್ನು ನೀಡಿ ಜನತೆ ಬೆಂಬಲಿಸಿದ್ದಾರೆ. ಈ ಬಾರಿ ಇಲ್ಲಿನ ಮತದಾರರ ಮನೆ–ಮನದಲ್ಲಿ ನನಗೆ ಸ್ಥಾನ ನೀಡಿ ಬೆಂಬಲಿಸಿದ್ದಾರೆ. ಮನೆ ಮಗಳಾಗಿ ಸ್ವೀಕಾರ ಮಾಡಿದ್ದಾರೆ. ಕಳೆದ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸೋತರೂ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಲೇ ಬಂದಿದ್ದೇನೆ.ಜಾತಿ,ಮತ ಭೇದ ಮಾಡದೆ ಎಲ್ಲರ ಪ್ರೀತಿ ವಿಶ್ವಾಸದೊಂದಿಗೆ ಪಕ್ಷವನ್ನು ಬೆಳೆಸಲು ಯತ್ನಿಸಿದ್ದೇನೆ. ನಾಯಕರು, ಕಾರ್ಯಕರ್ತರು ನನ್ನನ್ನು ಬೆಂಬಲಿಸಿದ್ದಾರೆ. ಜನರ ಪ್ರೀತಿ ವಿಶ್ವಾಸಗಳನ್ನು ಕಂಡು ಈ ಜನರಿಗಾಗಿ ನಾನು ಏನಾದರೂ ಮಾಡಬೇಕೆಂಬ ಭಾವನೆ ನನ್ನಲ್ಲಿ ಇನ್ನಷ್ಟು ಗಟ್ಟಿಯಾಗಿದೆ.

• **ಪ್ರ: ಕೇರಳದ ಬಲಿಷ್ಠ ಎಡರಂಗ ಮತ್ತು ಯುಡಿಎಫ್‌ಗಳ ಸವಾಲುಗಳನ್ನು ಹೇಗೆ ಎದುರಿಸುವಿರಿ?**



ಉ: ಕೇರಳ ಮೇಲ್ನೋಟಕ್ಕೆ ಎಲ್‌ಡಿಎಫ್ –ಯುಡಿಎಫ್‌ಗಳ ಭದ್ರಕೋಟೆ. ಕೇರಳದಲ್ಲಿ ಬಿಜೆಪಿಗೆ ಯಾವುದೇ ಸೀಟು ಇಲ್ಲದೆ ಹೋದರೂ ನರೇಂದ್ರ ಮೋದಿ ಅವರ ಬಿಜೆಪಿ ನೇತೃತ್ವದ ಸರಕಾರ ಕೇರಳಕ್ಕೆ ಅನೇಕ ಮಹತ್ವದ ಯೋಜನೆಗಳನ್ನು ನೀಡಿದೆ. ತಲಪಾಡಿಯಿಂದ ತಿರುವನಂತಪುರವರೆಗೆ ಅದ್ಭುತವಾದ ರಾಷ್ಟ್ರೀಯ ಹೆದ್ದಾರಿ ಯೋಜನೆ, 2 ವಂದೇ ಭಾರತ್ ರೈಲುಗಳು, ಅಮೃತ್ ಭಾರತ್, ಸ್ಟೇಷನ್ ಯೋಜನೆಯಡಿ ಕಾಸರಗೋಡು ಸೇರಿದಂತೆ ಕೇರಳದ ರೈಲ್ವೆ ನಿಲ್ದಾಣಗಳನ್ನು ಏರ್‌ಪೋರ್ಟ್‌ಗಳ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ.

ಹೀಗಿರುವಾಗ ಇಲ್ಲಿ ಬಿಜೆಪಿ ಎಂಎಲ್‌ಎ, ಎಂಪಿಗಳನ್ನು ಗೆಲ್ಲಿಸಿದ್ದೇ ಆದರೆ ಇನ್ನಷ್ಟು ಒಳ್ಳೆಯದಾಗಬಹುದು. ಇನ್ನಷ್ಟು ಅಭಿವೃದ್ಧಿ ಯೋಜನೆಗಳನ್ನು ಪಡೆಯಲು ಸಾಧ್ಯ ಎಂಬ ಅರಿವುಂಟಾಗಿದೆ. ಬಿಜೆಪಿ ಅಭಿವೃದ್ಧಿಪರವಾದ ಪಕ್ಷವಾಗಿದ್ದು, ಜನತೆ ಈ ಬಾರಿ ಬಿಜೆಪಿಯನ್ನು ಗೆಲ್ಲಿಸಬೇಕೆಂಬ ಸಂಕಲ್ಪ ತೊಟ್ಟಿದ್ದಾರೆ. ಆದ್ದರಿಂದ ನನ್ನನ್ನು ಕಾಸರಗೋಡು ಕ್ಷೇತ್ರದ ಜನತೆ ಈ ಬಾರಿ ಬೆಂಬಲಿಸಲಿದ್ದಾರೆ ಎಂಬ ಬಗ್ಗೆ ನನಗೆ ಪೂರ್ಣ ವಿಶ್ವಾಸವಿದೆ.

• **ಪ್ರ: ಕೇರಳದಲ್ಲಿ ಬಿಜೆಪಿಯ ಭವಿಷ್ಯ ಬಗ್ಗೆ ಏನೆನ್ನುವಿರಿ?**

ಉ: ಎಲ್‌ಡಿಎಫ್ ಮತ್ತು ಯುಡಿಎಫ್‌ಗಳನ್ನು ಜನ ನೋಡಿದ್ದಾರೆ. ಕೇವಲ ವೋಟ್‌ಬ್ಯಾಂಕ್ ರಾಜಕೀಯ ಮತ್ತು ಭ್ರಷ್ಟಾಚಾರ, ದುರಾಡಳಿತಗಳಿಂದ ಕೂಡಿದ ಈ ಎರಡೂ ರಂಗಗಳಿಂದ ಯಾವುದೇ ಅಭಿವೃದ್ಧಿ ಅಸಾಧ್ಯ ಎಂಬುದು ಜನತೆಗೆ ಮನವರಿಕೆಯಾಗಿದೆ.ಕೇರಳದಲ್ಲಿ ಅಭಿವೃದ್ಧಿಗೆ ಬೇಕಾದಷ್ಟು ಅವಕಾಶಗಳಿದ್ದರೂ ಅವುಗಳನ್ನು ಬಳಸಿಕೊಳ್ಳಲಾಗಿಲ್ಲ. ಆದ್ದರಿಂದ ಕೇರಳದ ಅಭಿವೃದ್ಧಿ ಆಗಬೇಕಾದರೆ ಬಿಜೆಪಿ ನೇತೃತ್ವದ ಎನ್‌ಡಿಎಯಿಂದ ಮಾತ್ರ ಸಾಧ್ಯ ಎಂಬುದು ಜನರಿಗೆ ಸ್ಪಷ್ಟವಾಗಿದೆ. ಅಭಿವೃದ್ಧಿಪರವಾಗಿರುವ ಬಿಜೆಪಿಯನ್ನು ಗೆಲ್ಲಿಸಬೇಕಾದ ಅಗತ್ಯವನ್ನು ಜನತೆ ಈಗ ಮನಗಂಡಿದೆ.ಆದ್ದರಿಂದಲೇ ಈ ಬಾರಿ ಉಭಯ ರಂಗಗಳ ಸತತ ಅಪಪ್ರಚಾರ, ವಿರೋಧಗಳ ನಡುವೆಯೂ ಬಿಜೆಪಿ ಕೇರಳದಲ್ಲಿ ಹೆಚ್ಚೆಚ್ಚು ಜನಬೆಂಬಲ ಪಡೆಯುವಂತಾಗಿದೆ.

ಪ್ರ: ಈ ಸಂದರ್ಭ ಮತದಾರರಿಗೆ ನೀವು ಏನು ಹೇಳಬಯಸುವಿರಿ?

ಉ: ಮತಗಟ್ಟೆಗೆ ಬರುವಾಗ ಯೋಚಿಸಿ ಬನ್ನಿ, ನಿಮ್ಮ ಮಕ್ಕಳ ಭವಿಷ್ಯವನ್ನು ಯೋಚಿಸಿ ಬನ್ನಿ, ಹಾಸಿಗೆ ಹಿಡಿದ ನಿಮ್ಮ ಬಂಧುಗಳ ಬಗ್ಗೆ ಯೋಚಿಸಿ, ಶಿಕ್ಷಣ, ಉದ್ಯೋಗಕ್ಕಾಗಿ ಪರರಾಜ್ಯಗಳಿಗೆ ಹೋಗಬೇಕಾದ ನಿಮ್ಮ ಮಕ್ಕಳ ಬಗ್ಗೆ ಯೋಚಿಸಿ. ಮತ ಹಾಕುವ ಮುನ್ನ ಸೂಕ್ತ ಪಕ್ಷ, ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳಿ. ತಾವರೆ ಚಿಹ್ನೆಗೆ ಮತ ನೀಡುವ ಮೂಲಕ ಕಾಸರಗೋಡಿನ ಅಭಿವೃದ್ಧಿಗೈಯ್ಯಲು ಬಿಜೆಪಿಯನ್ನು ಗೆಲ್ಲಿಸಬೇಕೆಂಬುದು ನನ್ನ ಕಳಕಳಿಯ ವಿನಂತಿ.

ಪ್ರವಾಸೋದ್ಯಮಕ್ಕೆ ಒತ್ತು ನೀಡುವೆ

ಇಲ್ಲಿ ಉತ್ತಮ ಪಾರ್ಕ್‌ಗಳೇ ಇಲ್ಲ. ಪ್ರವಾಸೋದ್ಯಮಕ್ಕೆ ಇಷ್ಟೊಂದು ಅವಕಾಶಗಳಿದ್ದರೂ ಅವನ್ನು ನಾವು ಬಳಸಿಕೊಳ್ಳಲಿಲ್ಲ.ಆದ್ದರಿಂದ ಇವುಗಳನ್ನು ಅಭಿವೃದ್ಧಿಪಡಿಸಿ ಜನರ ಜೀವನಮಟ್ಟವನ್ನು ಎತ್ತರಿಸಿ ಅವರಿಗೆ ಶಕ್ತಿಯಾಗಬೇಕೆಂಬ ಸಂಕಲ್ಪ ನನ್ನದಾಗಿದೆ. ಮೋದಿ ಸರಕಾರ ಬಡಜನರ ಆರೋಗ್ಯ ರಕ್ಷಣೆಗಾಗಿ ಆಯುಷ್ಮಾನ್ ಭಾರತ್ ಯೋಜನೆಯನ್ನು ಜಾರಿಗೆ ತಂದರೂ ಕೇರಳ ಸರಕಾರದಿಂದ ಹಣ ಬರದೆ ಇಲ್ಲಿ ಅದರ ಜಾರಿಯಾಗುತ್ತಿಲ್ಲ.







ಅಶ್ವಿನಿ ಎಂ.ಎಲ್.



ಅಶ್ವಿನಿ ಅವರು ಜ.27, 2025 ರಂದು ಬಿಜೆಪಿ ಕಾಸರಗೋಡು ಜಿಲ್ಲಾ ಘಟಕದ ಮೊದಲ ಮಹಿಳಾ ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡರು.

ಅಶ್ವಿನಿ ಬೆಂಗಳೂರಿನಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದರು. ಲಕ್ಷ್ಮಣ್ ಮತ್ತು ರೇವತಿ ದಂಪತಿಗಳ ಮೂವರು ಹೆಣ್ಣುಮಕ್ಕಳಲ್ಲಿ ಹಿರಿಯಾಕೆ. ಅವರು 10 ನೇ ತರಗತಿಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದರು, ನಂತರ ವಿಜ್ಞಾನದಲ್ಲಿ ಪದವಿಪೂರ್ವ ಅಧ್ಯಯನವನ್ನು ಮಾಡಿದರು, ನಂತರ ಅಕೌಂಟಿಂಗ್ ಸಾಫ್ಟ್‌ವೇರ್‌ನಲ್ಲಿ ಡಿಪ್ಲೊಮಾ ಮತ್ತು ಮಾಂಟೆಸ್ಸರಿ ಶಿಕ್ಷಣದಲ್ಲಿ ಡಿಪ್ಲೊಮಾ ಪಡೆದರು.

ಅವರು ಬೆಂಗಳೂರಿನಲ್ಲಿ ಶಾಲಾ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಮಂಜೇಶ್ವರದ ಪೊರ್ಕಾಡಿ ಮೂಲದ ಪಿ. ಶಶಿಧರ ಅವರನ್ನು ಮದುವೆಯಾದ ನಂತರ, ಸೇಂಟ್ ಮೇರಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ನರ್ಸರಿ ಬ್ಲಾಕ್‌ನಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಲೇ ಸಾರ್ವಜನಿಕ ಸೇವೆಗೆ ಪ್ರವೇಶಿಸಿದರು.

2020ರ ಸ್ಥಳೀಯ ಸರ್ಕಾರಿ ಚುನಾವಣೆಯಲ್ಲಿ, ಅವರು ಮಂಜೇಶ್ವರ ಬ್ಲಾಕ್ ಪಂಚಾಯತ್‌ನ ಕಡಂಬಾರ್ ವಿಭಾಗದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸಿ 804 ಮತಗಳ ಅಂತರದಿಂದ ಗೆದ್ದರು. ನಂತರ ಅವರು ತಮ್ಮ ಬೋಧನಾ ಕೆಲಸವನ್ನು ತೊರೆದು ಪೂರ್ಣ ಸಮಯ ಸಾರ್ವಜನಿಕ ಕೆಲಸ ಮಾಡಿದರು. ಕಡಂಬಾರ್ ವಿಭಾಗದಲ್ಲಿ ಈಗಾಗಲೇ ಸುಮಾರು 1.5 ಕೋಟಿ ರೂ. ಮೌಲ್ಯದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ಅವರು ದೇಶದ ಪ್ರಮುಖ ದೇವಾಲಯವಾದ ಸಾರಂಗಪಾಣಿ ದೇವಾಲಯದ ಮಹಿಳಾ ವಿಭಾಗದ ಮಾಜಿ ಅಧ್ಯಕ್ಷೆಯೂ ಆಗಿದ್ದರು.

2024 ರ ಲೋಕಸಭಾ ಚುನಾವಣೆಯಲ್ಲಿ, ಅವರು 2,19,558 ಮತಗಳನ್ನು ಪಡೆಯುವ ಮೂಲಕ ಕ್ಷೇತ್ರದಿಂದ ಬಿಜೆಪಿಗೆ ಅತಿ ಹೆಚ್ಚು ಮತ ಪಡೆದ ಅಭ್ಯರ್ಥಿಯಾದರು.

ಮಹಿಳಾ ಮೋರ್ಚಾ ಚಟುವಟಿಕೆಗಳ ಭಾಗವಾಗಿ ಹದಿಮೂರು ರಾಜ್ಯಗಳಲ್ಲಿ ಪ್ರವಾಸಗೈದಿದ್ದಾರೆ. ಉತ್ತರ ಪ್ರದೇಶ ಸರ್ಕಾರದ ಅಭಿವೃದ್ಧಿ ಸಾಧನೆಗಳನ್ನು ಅಧ್ಯಯನ ಮಾಡಲು ಉತ್ತರ ಪ್ರದೇಶ ಸರ್ಕಾರ ನೇಮಿಸಿದ ತಂಡದಲ್ಲಿ ಸ್ಥಾನ ಪಡೆದರು. ಗುಜರಾತ್ ಮತ್ತು ಕರ್ನಾಟಕ ವಿಧಾನಸಭಾ ಚುನಾವಣಾ ಚಟುವಟಿಕೆಗಳಲ್ಲಿ ಭಾಗವಹಿಸಿದರು. 2024 ರಲ್ಲಿ, ಅವರು ರಾಜ್ಯ ಮಹಿಳಾ ಜಂಟಿ ಸಂಯೋಜಕರಾಗಿ ಮತ್ತು ಮುಂಬೈ ನಗರದ 6 ಜಿಲ್ಲೆಗಳ ಚುನಾವಣಾ ಉಸ್ತುವಾರಿಯಾಗಿ ಕೆಲಸ ಮಾಡಿದರು ಮತ್ತು ಉತ್ತಮ ಹೆಸರು ಮಾಡಿದರು. 2025 ರ ಪಂಚಾಯತ್ ಚುನಾವಣೆಯಲ್ಲಿ, ಅಶ್ವಿನಿ ಅವರ ನೇತೃತ್ವದಲ್ಲಿ, ಅಸ್ತಿತ್ವದಲ್ಲಿರುವ 3 ಪಂಚಾಯತ್‌ಗಳಲ್ಲಿ 5 ರಲ್ಲಿ ಅಧಿಕಾರ ವಹಿಸಿಕೊಳ್ಳುವ ಮೂಲಕ ಬಿಜೆಪಿ ತನ್ನ ಶಕ್ತಿಯನ್ನು ಸಾಬೀತುಪಡಿಸಿತು.

ಕನ್ನಡ, ತುಳು, ಮಲಯಾಳಂ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅಶ್ವಿನಿ ಎಂಎಲ್ ಅವರ ಪ್ರಾವೀಣ್ಯತೆಯು ಅವರ ಹೆಗ್ಗಳಿಕೆಯಾಗಿದೆ.

ಮಂಜೇಶ್ವರದ ಕೊಡ್ಲಮೊಗರು ಎಂಬಲ್ಲಿ ಮನೆ ಇದೆ. ಇವರ ಪತಿ ಪಿ.ಶಶಿಧರ್. ಅವರ ಮಕ್ಕಳು ಜಿತಿನ್ ಎಸ್. ಮತ್ತು ಮನಸ್ವಿ ಎಸ್.





‘ವಿಕಸಿತ ಭಾರತ’ ಮಾದರಿಯಲ್ಲೇ ‘ವಿಕಸಿತ ಕೇರಳಂ’ : ಬಿಜೆಪಿಯ ಸಂಕಲ್ಪ

“ವಿಕಸಿತ ಭಾರತ”ದ ಮಾದರಿಯಲ್ಲೇ “ವಿಕಸಿತ ಕೇರಳಂ”ಬಿಜೆಪಿಯ ಸಂಕಲ್ಪವಾಗಿದ್ದು, ಈ ಬಾರಿಯ ಕೇರಳ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೇರಳದ ಸಮಗ್ರ ಅಭಿವೃದ್ಧಿಗಾಗಿ ರೂಪುರೇಷೆಯೊಂದನ್ನು ಸಿದ್ಧಪಡಿಸಿದೆ.

ಇದರಂತೆ, ಎಡರಂಗ (ಎಲ್‌ಡಿಎಫ್) ಮತ್ತು ಸಂಯುಕ್ತ ಪ್ರಜಾಸತ್ತಾತ್ಮಕ ರಂಗ (ಯುಡಿಎಫ್)ಗಳ ದುರಾಡಳಿತಕ್ಕೆ ಸಿಲುಕಿ ನಲುಗಿರುವ ಕೇರಳವನ್ನು ಒಂದು ಕೈಗಾರಿಕೀಕರಣಗೊಂಡ, ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಮತ್ತು ಕಲ್ಯಾಣ ಹೊಂದಿದ ರಾಜ್ಯವನ್ನಾಗಿ ಪರಿವರ್ತಿಸುವುದು ಬಿಜೆಪಿಯ ಗುರಿಯಾಗಿದೆ. ಈ ಗುರಿಯನ್ನು ಕೇಂದ್ರೀಕರಿಸಿ ಈ ಬಾರಿ ಬಿಜೆಪಿ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳಿಗಿಂತಲೂ ಮೊದಲೇ ತನ್ನ ಪ್ರಣಾಳಿಕೆಯನ್ನು ಕೇರಳದ ಜನತೆಯ ಮುಂದಿಟ್ಟಿದೆ.

ಈ ಪ್ರಣಾಳಿಕೆಯು ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಆರ್ಥಿಕ ಪ್ರಗತಿ, ಸಮಗ್ರ ಸಾಮಾಜಿಕ ಬೆಂಬಲದ ಸಂಪನ್ನ ಕೇರಳವನ್ನು ನಿರ್ಮಿಸುವ ಆಶಯವನ್ನು ಹೊಂದಿದೆ.

ವಿಕಸಿತ ಕೇರಳಂನ ಮುಖ್ಯಾಂಶ

ಮೂಲಸೌಕರ್ಯ ಮತ್ತು ಸಂಚಾರ ಸೌಲಭ್ಯ

ವೇಗದ ರೈಲು: ಕೇರಳದ ರಾಜಧಾನಿ ತಿರುವನಂತಪುರಂ ಮತ್ತು ಕಣ್ಣೂರು ನಡುವೆ ವೇಗದ ರೈಲ್ವೆ ಕಾರಿಡಾರೊಂದನ್ನು ನಿರ್ಮಿಸುವ ಮೂಲಕ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸುವ ಮತ್ತು ಆರ್ಥಿಕ ಚಟುವಟಿಕೆಗಳಿಗೆ ವೇಗ ನೀಡಲು ಬಿಜೆಪಿ ಉದ್ದೇಶಿಸಿದೆ.

ಕೊಚ್ಚಿ ಮೆಟ್ರೋ-ನಗರ ಸಾರಿಗೆ:

ಕೊಚ್ಚಿ ಮೆಟ್ರೋದ ಎಲ್ಲ ಹಂತಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಮತ್ತು ತಿರುವನಂತಪುರಂ ಹಾಗೂ ಕೋಜಿಕ್ಕೋಡಿಗೂ ಹೊಸ ಮೆಟ್ರೋ ಸೇವೆಗಳನ್ನು ಒದಗಿಸುವುದು ಬಿಜೆಪಿಯ ಯೋಜನೆಯಾಗಿದೆ.

ಹಾಗೆಯೇ , ಹೆಚ್ಚಿನ ದಟ್ಟಣೆ ಉಳ್ಳ ಪ್ರದೇಶಗಳಲ್ಲಿ ಬಲಿಷ್ಠ, ಉನ್ನತ ಸಾಮರ್ಥ್ಯದ ರಸ್ತೆಗಳ ನಿರ್ಮಾಣಕ್ಕೂ ಪಕ್ಷ ಯೋಜನೆ ರೂಪಿಸಿದೆ.

ಆರೋಗ್ಯ-ಶಿಕ್ಷಣ

ಕೇರಳದಲ್ಲಿ ಅಖಿಲ ಭಾರತೀಯ ವೈದ್ಯ ವಿಜ್ಞಾನಗಳ ಸಂಸ್ಥೆ (ಎಐಐಎಂಎಸ್)ಯನ್ನು ಸ್ಥಾಪಿಸುವ ಮೂಲಕ ರಾಜ್ಯಕ್ಕೆ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲು ಪಕ್ಷ ಸಂಕಲ್ಪ ತೊಟ್ಟಿದೆ.

ಇದೇ ರೀತಿ, ಶಾಲೆಗಳಲ್ಲಿ ಸ್ವಯಂಪ್ರೇರಿತ ಆಂಗ್ಲ ಮಾಧ್ಯಮ ಅನುಷ್ಠಾನ, ಕೇರಳದಲ್ಲಿ ಉತ್ತಮ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು ಬಿಜೆಪಿಯ ಯೋಜನೆಯಾಗಿದೆ.



ಸಮಗ್ರ ಆರೋಗ್ಯ ಯೋಜನೆ:ಆಯುಷ್ಮಾನ್ ಭಾರತ್ ಯೋಜನೆಯನ್ನು ಕೇರಳದ ಎಲ್ಲ ಜನರಿಗೂ ಲಭಿಸುವಂತೆ ಮಾಡಲು ಸಮಗ್ರ ಯೋಜನೆಯೊಂದನ್ನು ಬಿಜೆಪಿ ರೂಪಿಸಿದೆ.

ಉದ್ಯೋಗ ಸೃಷ್ಟಿ

ರಾಜಧಾನಿ ತಿರುವನಂತಪುರಂನ್ನು ಕೇರಳದ ತಂತ್ರಜ್ಞಾನ /ಆವಿಷ್ಕಾರಗಳ ಹಬ್ ಆಗಿ ಪರಿವರ್ತಿಸುವುದು, ಕೊಚ್ಚಿಯನ್ನು ನೌಕೆಗಳ ನಿರ್ಮಾಣದ ಕೇಂದ್ರವನ್ನಾಗಿಸುವುದು, ಕೋಜಿಕ್ಕೋಡನ್ನು ವೈದ್ಯಕೀಯ ಆವಿಷ್ಕಾರಗಳ ಹಬ್ ಆಗಿ ಅಭಿವೃದ್ಧಿಪಡಿಸುವುದು ಪಕ್ಷದ ನಿಲುವಾಗಿದೆ.ಈ ಮೂಲಕ ಕೇರಳದ ಯುವಜನತೆಗೆ ಹೆಚ್ಚಿನ ಪ್ರಮಾಣದಲ್ಲಿ ರಾಜ್ಯದಲ್ಲೇ ಉದ್ಯೋಗ ಒದಗುವಂತೆ ಮಾಡುವುದು ಬಿಜೆಪಿಯ ಧ್ಯೇಯವಾಗಿದೆ.

ಪ್ರವಾಸೋದ್ಯಮ: ಕೇರಳ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶಗಳನ್ನು ಹೊಂದಿರುವ ರಾಜ್ಯವಾಗಿದ್ದು, ಕೇರಳವನ್ನು ಜಗತ್ತಿನ ಪ್ರಮುಖ ಪ್ರವಾ ಸೋದ್ಯಮ ತಾಣವನ್ನಾಗಿ ಬೆಳೆಸಲು ಅಗತ್ಯವಿರುವ ಚಿಂತನೆ, ಯೋಜನೆಗಳನ್ನು ಬಿಜೆಪಿ ಹೊಂದಿದೆ.

ಬ್ಲೂ ಎಕಾನಮಿ:ಕೇರಳದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕತೆ ಹೊಂದಿರುವ ಬ್ಲೂ ಎಕಾನಮಿ ಕ್ಲಸ್ಟರ್ ಆಗಿ ಬೆಳೆಸುವ ಯೋಜನೆಯನ್ನು ಬಿಜೆಪಿ ಹೊಂದಿದೆ.

ಸಮಾಜ ಕಲ್ಯಾಣ-ಸಾಮಾಜಿಕ ಭದ್ರತೆ

ಕೇರಳದಲ್ಲಿ ಸಮಾಜ ಕಲ್ಯಾಣಕ್ಕೆ ಬಿಜೆಪಿ ಹಲವು ಯೋಜನೆಗಳನ್ನು ಹೊಂದಿದ್ದುಫ, ಇದೇ ವೇಳೆ ಸಾಮಾಜಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಕುಟುಂಬದ ಮುಖ್ಯಸ್ಥೆಯಾಗಿರುವ ಮಹಿಳೆಯರಿಗೆ, ವಿಧವೆಯರಿಗೆ, ಹಿರಿಯ ನಾಗರಿಕರಿಗೆ ತಿಂಗಳಿಗೆ 3000ರೂ.ಗಳನ್ನು ನೀಡಲಾಗುವುದು.

ಭಕ್ಷ್ಯ ಆರೋಗ್ಯ ಸುರಕ್ಷಾ ಕಾರ್ಡ್:

ಬಡಕುಟುಂಬಗಳಿಗಾಗಿ ತಿಂಗಳಿಗೆ 2,500ರೂ. ಮೌಲ್ಯದ ರಿಚಾರ್ಜ್ ಮಾಡುವಂತಹ ಭಕ್ಷ್ಯ ಆರೋಗ್ಯ ಸುರಕ್ಷಾ ಕಾರ್ಡನ್ನು ಒದಗಿಸುವ ಮೂಲಕ ಈ ಬಡ ಕುಟುಂಬಗಳಿಗೆ ತಿಂಗಳಿಗೆ ಅಗತ್ಯವಾಗಿರುವ ದಿನಸಿ ಮತ್ತು ಔಷಧಗಳನ್ನು ಖರೀದಿಸಲು ನೆರವಾಗುವುದಾಗಿ ಪಕ್ಷ ಭರವಸೆ ನೀಡಿದೆ.ಇದೇ ರೀತಿ ಬಡ ಕುಟುಂಬಗಳಿಗೆ ಓಣಂ ಮತ್ತು ಕ್ರಿಸ್‌ಮಸ್ ಸಮಯದಲ್ಲಿ ಪ್ರತಿವರ್ಷ 2 ಉಚಿತ ಎಲ್‌ಪಿಜಿ ಸಿಲಿಂಡರ್‌ಗಳನ್ನು ಒದಗಿಸಲೂ ಬಿಜೆಪಿ ಉದ್ದೇಶಿಸಿದೆ.ಕುಟುಂಬಕ್ಕೆ ಪ್ರತಿ ತಿಂಗಳಿಗೆ 20ಸಾವಿರ ಲೀಟರ್ ಉಚಿತ ನೀರನ್ನು ಪೂರೈಸಲಾಗುವುದು.

ಆಡಳಿತ ಮತ್ತು ನಂಬಿಕೆಯ ರಕ್ಷಣೆ

ಶಬರಿಮಲೆ ಅಭಿವೃದ್ಧಿ ಮಿಷನ್ ಒಂದನ್ನು ಸ್ಥಾಪಿಸಿ ಅಲ್ಲಿ ಯಾತ್ರಾರ್ಥಿಗಳಿಗಾಗಿ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಾಗುವುದು.

ಹಾಗೆಯೇ, ಶಬರಿಮಲೆ, ಗುರುವಾಯೂರು ಸೇರಿದಂತೆ ಕೇರಳದ ಪ್ರಮುಖ ದೇವಾಲಯಗಳ ಆಡಳಿತ ನಿರ್ವಹಣೆಯಲ್ಲಿ ಭಕ್ತರಿಗೆ ಹೆಚ್ಚಿನ ಪಾತ್ರವನ್ನು ಕಲ್ಪಿಸಲಾಗುವುದು. ಇದಕ್ಕಾಗಿ ದೇವಸ್ವಂ ಮಂಡಳಿಗಳನ್ನು ಪುನರ್‌ರಚಿಸಲಾಗುವುದು ಎಂದು ಬಿಜೆಪಿ ಭರವಸೆ ನೀಡಿದೆ. ಶಬರಿಮಲೆ ಚಿನ್ನ ಲೂಟಿ ಪ್ರಕರಣದ ತನಿಖೆಯನ್ನು ಸಿಬಿಐ ತನಿಖೆಗೊಪ್ಪಿಸಿ ಕಾಲಮಿತಿಯೊಳಗೆ ತನಿಖೆ ನಡೆಸುವಂತೆ ಮಾಡಲಾಗುವುದು ಎಂದದು ಹೇಳಿದೆ.

ದಕ್ಷ ಆಡಳಿತದ ಮೂಲಕ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಡಿ ವಿಕಸಿತ ಕೇರಳಂನ ಸಂಕಲ್ಪ ತಳೆಯಲಾಗಿದ್ದು, ಎಲ್‌ಡಿಎಫ್ ಮತ್ತು ಯುಡಿಎಫ್‌ನ ಕಳಪೆ ನಿರ್ವಹಣೆಗೆ ಪರ್ಯಾಯವಾಗಿ ಉದ್ಯೋಗ ಸೃಷ್ಟಿಫ, ಮೂಲಸೌಕರ್ಯಗಳ ಕೊರತೆ ನೀಗುವ ಮೂಲಕ ರಾಜ್ಯದಿಂದ ಯುವಜನರ ವಲಸೆಯನ್ನು ತಡೆಗಟ್ಟುವುದು ಬಿಜೆಪಿಯ ಗುರಿಯಾಗಿದೆ ಎಂದು ಈ ‘ವಿಕಸಿತ ಕೇರಳಂ’ಸಂಕಲ್ಪದಲ್ಲಿ ತಿಳಿಸಲಾಗಿದೆ.





